ಶುಕ್ರವಾರ, ಜುಲೈ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 198 | ಪುಟ 16

prajavani.net prajavani www.prajavani.net

ಪ್ರತಿಭಟನೆ
ಪಿಎಸ್ಐ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಶೀಘ್ರ ನೇಮಕಾತಿ ಆದೇಶ ನೀಡುವಂತೆ ಆಗ್ರಹಿಸಿ ಬೆಂಗಳೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 82,259 | ನಿಫ್ಟಿ 25,111 | $/₹ 86.12 | ಚಿನ್ನ (Std. 10g) ₹1.02 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.18 ಲಕ್ಷ (ಬೆಂಗಳೂರು)

ಕ್ಷಿಪಣಿ ಪರೀಕ್ಷೆ
4,500 ಮೀಟರ್ ಎತ್ತರದಲ್ಲಿ ಕಾರ್ಯನಿರ್ವಹಿಸಬಲ್ಲ 'ಆಕಾಶ್' ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆ ಲಡಾಖ್‌ನಲ್ಲಿ ನಡೆಯಿತು



ಕನಕಗಿರಿಗೆ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್

ಬೆಂಗಳೂರು: ರಾಯಚೂರು ತಾಲ್ಲೂಕಿನಲ್ಲಿ ₹24.50 ಕೋಟಿ ವೆಚ್ಚದ ನೂತನ ಜವಳಿ ಪಾರ್ಕ್, ಹಾನಗಲ್ ತಾಲ್ಲೂಕು ಯಳವಟ್ಟಿಯಲ್ಲಿ ₹35.07 ಕೋಟಿ ವೆಚ್ಚದಲ್ಲಿ ತೋಟಗಾರಿಕಾ ಬೆಳೆಗಳ ಸಂಸ್ಕರಣಾ ಘಟಕ (ಫುಡ್ ಪಾರ್ಕ್) ಮತ್ತು ಕೊಪ್ಪಳ ಜಿಲ್ಲೆ ಕನಕಗಿರಿ ತಾಲ್ಲೂಕಿನ ಸಿರಿವಾರ ಗ್ರಾಮದಲ್ಲಿ ₹83.79 ಕೋಟಿ ವೆಚ್ಚದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇನ್ನಷ್ಟು ವಿವರ 6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಎಲ್ಲರಿಗೂ 'ಎ' ಖಾತಾ ಗ್ಯಾರಂಟಿ

ನಗರದಲ್ಲಿರುವ 'ಬಿ' ಖಾತಾ, ಖಾತಾ ಹೊಂದಿರದ ಆಸ್ತಿಗಳಿಗೆ ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಾನ್ಯತೆ ಸಿಗದೆ, ಕಟ್ಟಡ ಕಟ್ಟಲು ನಕ್ಷೆ ಲಭಿಸದ 'ಬಿ ಖಾತಾ' ಹೊಂದಿರುವ ಹಾಗೂ ಖಾತಾ ಹೊಂದಿರದ ಆಸ್ತಿಗಳಿಗೆ 'ಎ' ಖಾತಾ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ನಿರ್ಣಯ ಕೈಗೊಳ್ಳಲಾಗಿದೆ. 'ಬಿ' ಖಾತಾ (ಯಾವುದೇ ಅನುಮೋದನೆ ಪಡೆಯದ ಬಡಾವಣೆಗಳಲ್ಲಿ ನಿರ್ಮಿಸಿದ ನಿವೇಶನ ಹಾಗೂ ಕಟ್ಟಡ) ಆಸ್ತಿ ಹೊಂದಿದವರು, ತಮ್ಮ ಆಸ್ತಿಯನ್ನೇ ಕಳೆದುಕೊಳ್ಳುವ ಭೀತಿಯಲ್ಲಿದ್ದರು. ಅದಕ್ಕೆ, ಪರಿಹಾರ ರೂಪಿಸಲು ಸರ್ಕಾರ ನಿರ್ಧರಿಸಿದೆ.

'ಕಾನೂನು ಬಾಹಿರವಾಗಿ ಅನಿಯಂತ್ರಿತ ಕಟ್ಟಡ ನಿರ್ಮಾಣ ಮತ್ತು ಬಡಾವಣೆಗಳ ನಿರ್ಮಾಣದಲ್ಲಿ ಶಿಸ್ತು ತರಲು, ನಗರದ ನಾಗರಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ನಿವೇಶನಗಳಿಗೆ ಕಾನೂನು ಉದ್ದೇಶಕ್ಕೆ ಅಧಿಕೃತ 'ಎ' ಖಾತಾ ನೀಡಲು ಸಚಿವ ಸಂಪುಟ ನಿರ್ಧರಿಸಿದೆ' ಎಂದು ಸಚಿವ ಎಚ್.ಕೆ. ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ನಿವೇಶನಗಳು 'ಎ' ಖಾತಾದ ಸಕಲ ಸೌಲಭ್ಯಗಳನ್ನು ಪಡೆಯಲು ಅರ್ಹವಾಗಿದ್ದು, ಅದಕ್ಕೆ ಅಗತ್ಯವಾದ ಶುಲ್ಕ, ಅಭಿವೃದ್ಧಿ ಶುಲ್ಕವನ್ನು ಬಿಬಿಎಂಪಿಗೆ ಪಾವತಿಸಬೇಕು. ಶುಲ್ಕ ಪಾವತಿ ನಂತರ, 'ಇ' ಖಾತಾ ಸೇರಿದಂತೆ ಕಟ್ಟಡ ನಕ್ಷೆಯೂ ಲಭ್ಯವಾಗಲಿದೆ. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961ರಲ್ಲಿ (ಕೆಟಿಸಿಪಿ) 'ಬಿ' ಖಾತಾ ಆಸ್ತಿಗಳು ಎಂಬ ಮಾನ್ಯತೆ ಇಲ್ಲ. ಇಂತಹ ಯೋಜಿತವಲ್ಲದ ಆಸ್ತಿಗಳಲ್ಲಿ ನಿರ್ಮಿಸಲಾಗಿರುವ ಅಕ್ರಮ ಕಟ್ಟಡಗಳು ಬೆಂಗಳೂರಿನಲ್ಲಿ ಮಳೆಗಾಲದಲ್ಲಿ ಕುಸಿದು, ಅಸುರಕ್ಷಿತ ತಾಣಗಳಾಗಿವೆ. ಆದ್ದರಿಂದ 'ಬಿ' ಖಾತಾ ಆಸ್ತಿಗಳನ್ನು ಕೆಟಿಸಿಪಿ ಕಾಯ್ದೆಯ ನಿಯಂತ್ರಣಕ್ಕೆ ತರುವುದು ಅವಶ್ಯ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 (ಜಿಬಿಜಿಎ) ಕಲಂ 3ರ 147ರಲ್ಲಿ 2024ರ ಸೆಪ್ಟೆಂಬರ್ 30ರ ನಂತರದ ಅನಧಿಕೃತ ಆಸ್ತಿಗಳಿಗೆ 'ಬಿ' ಖಾತಾ ನೀಡುವುದನ್ನು ನಿಷೇಧಿಸಲಾಗಿದೆ. ಹೀಗಾಗಿ, ಅನಧಿಕೃತ ಕಟ್ಟಡಗಳು ಮತ್ತು ಬಡಾವಣೆಗಳ ಅಭಿವೃದ್ಧಿಯನ್ನು ನಿಯಂತ್ರಿಸಲು, ತಡೆ ಗಟ್ಟಲು ಕಾನೂನು ಮತ್ತು ನಿಯಂತ್ರಿತ ಚೌಕಟ್ಟನ್ನು ಖಾತರಿಪಡಿಸಲು ಜಿಬಿಜಿಎ ಅಡಿ ರಚಿಸಲಾಗುವ ಎಲ್ಲ ನಗರ ಪಾಲಿಕೆಗಳಿಗೂ ಅನ್ವಯವಾಗುವಂತೆ ಎಲ್ಲ ನಿವೇಶನಗಳಿಗೆ 'ಎ' ಖಾತಾ ನೀಡುವ ಪ್ರಸ್ತಾವವನ್ನು ಸಚಿವ ಸಂಪುಟ ಅನುಮೋದಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ನಿವೇಶನಗಳು 'ಎ' ಖಾತಾವನ್ನು ಪಡೆಯಬಹುದು. ನಿವೇಶನಗಳ ಮುಂದಿರುವ ಖಾಸಗಿ ರಸ್ತೆಯನ್ನು 'ಸಾರ್ವಜನಿಕ ರಸ್ತೆ' ಎಂದು ಘೋಷಿಸಲಾಗುತ್ತದೆ. ಭೂ ಪರಿವರ್ತನೆಯಾಗಿರುವ ಅಥವಾ ಭೂ ಪರಿವರ್ತನೆಯಾಗದ ನಿವೇಶನಗಳಿಗೆ ಮಾರ್ಗಸೂಚಿ ದರದಂತೆ ಶೇ 5ರಷ್ಟು ದರವನ್ನು ಶುಲ್ಕವನ್ನಾಗಿ ಪಾವತಿಸಬೇಕು.

3B

ಮುಖ್ಯಾಂಶಗಳು

- 2024ರ ಸೆ.30ರೊಳಗೆ ನೋಂದಣಿ: 'ಬಿ' ಖಾತಾದ ನಿವೇಶನಗಳಿಗೆ ಅನ್ವಯ
- ಮಾರ್ಗಸೂಚಿ ದರದಂತೆ ಶೇ 5ರಷ್ಟು ಶುಲ್ಕ
- ಪ್ರತಿ ಚದರ ಮೀಟರ್‌ಗೆ ₹250 ಅಭಿವೃದ್ಧಿ ಶುಲ್ಕ



30 ಅಡಿx40 ಅಡಿ ನಿವೇಶನಕ್ಕೆ ₹2.07 ಲಕ್ಷ

ಬಿಬಿಎಂಪಿ ವ್ಯಾಪ್ತಿಯಲ್ಲಿ ನಿವೇಶನವಿರುವ ಪ್ರದೇಶದಲ್ಲಿ ಮಾರ್ಗಸೂಚಿ ದರ ಪ್ರತಿ ಚದರಡಿಗೆ ₹3,000 ಇದ್ದರೆ, ₹1.80 ಲಕ್ಷ ಶುಲ್ಕ ಪಾವತಿಸಬೇಕಾಗುತ್ತದೆ. ಇದರ ಜೊತೆಗೆ, ಪ್ರತಿ ಚದರ ಮೀಟರ್‌ಗೆ ₹250ರಂತೆ ₹27,870 ಅಭಿವೃದ್ಧಿ ಶುಲ್ಕವಿರುತ್ತದೆ.

ಯಾರ್‍ಯಾರಿಗೆಲ್ಲ ಅನುಕೂಲ?

- ಬಿಬಿಎಂಪಿಯಿಂದ 'ಬಿ' ಖಾತಾ ಪಡೆದಿರುವ ನಿವೇಶನದಾರರು
- ಅನಧಿಕೃತ ನಿವೇಶನ/ ಬಡಾವಣೆಯಲ್ಲಿ 'ಬಿ' ಖಾತಾ ಹೊಂದಿದ್ದ ಅಥವಾ ಹೊಂದಿರದ ಕಟ್ಟಡಗಳು
- ಏಕ ನಿವೇಶನದಲ್ಲಿ ಬಿಬಿಎಂಪಿ ಖಾತಾ ಹೊಂದದೆ ನಿರ್ಮಾಣವಾಗಿರುವ ಅಪಾರ್ಟ್‌ಮೆಂಟ್
- ಜಿಲ್ಲಾಧಿಕಾರಿಯಿಂದ ಭೂ ಪರಿವರ್ತನೆಯಾಗಿ, ಕೆಟಿಸಿಪಿ ಕಾಯ್ದೆಯಂತೆ ಅನುಮೋದನೆ ಪಡೆಯದ ಖಾಲಿ ನಿವೇಶನ
- ಭೂ ಪರಿವರ್ತನೆಯಾಗಿ, ನೋಂದಣಿ ಪತ್ರದ ಮೂಲಕ ವಿಭಾಗಗೊಂಡಿರುವ ಖಾಲಿ ನಿವೇಶನಗಳು
- ಭೂ ಪರಿವರ್ತನೆಯಾಗದೆ ವಿಭಾಗವಾಗದ ಸರ್ವೆ ಸಂಖ್ಯೆ/ ಹಿಸ್ಸಾ ಸಂಖ್ಯೆ ಖಾಲಿ ನಿವೇಶನ
- ಭೂ ಪರಿವರ್ತನೆಯಾಗದೆ ಸರ್ವೆ ಸಂಖ್ಯೆ/ ಹಿಸ್ಸಾ ಸಂಖ್ಯೆಯಲ್ಲಿ ಅನಧಿಕೃತವಾಗಿ ಭಾಗವಾಗಿ 2024ರ ಸೆಪ್ಟೆಂಬರ್ 30ರೊಳಗೆ ನೋಂದಣಿ ಪತ್ರದ ಮೂಲಕ ದಾಖಲೆ ಹೊಂದಿರುವ ನಿವೇಶನ

5 ನಗರ ಪಾಲಿಕೆಗಳಿಗೆ ಒಪ್ಪಿಗೆ

ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಐದು ಪಾಲಿಕೆಗಳನ್ನು ರಚಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಮೇ 15ರಿಂದ ಜಾರಿಗೆ ಬಂದಿರುವ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024ಯಂತೆ ನಗರ ಪಾಲಿಕೆಗಳನ್ನು ರಚಿಸಲು ಸಚಿವ ಸಂಪುಟದ ಉಪ ಸಮಿತಿ ವರದಿ ನೀಡಿತ್ತು. ಅದನ್ನು ಆಧರಿಸಿ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಶೀಘ್ರವೇ ಅಧಿಸೂಚನೆ ಹೊರಬೀಳಲಿದೆ.

ನಟ ದರ್ಶನ್ ಜಾಮೀನು ಆದೇಶಕ್ಕೆ 'ಸುಪ್ರೀಂ' ಆಕ್ಷೇಪ

ಪ್ರಜಾವಾಣಿ ವಾರ್ತೆ



ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ ದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವ ಹೈಕೋರ್ಟ್ ಆದೇಶದ ಬಗ್ಗೆ ಸುಪ್ರೀಂ ಕೋರ್ಟ್ ಗುರುವಾರ ಆಕ್ಷೇಪ ವ್ಯಕ್ತಪಡಿಸಿದೆ.

ಜಾಮೀನು ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು, 'ಹೈಕೋರ್ಟ್ ತನ್ನ ವಿವೇಚನೆ ಚಲಾಯಿಸಿದ ರೀತಿ ಮನದಟ್ಟಾಗಿಲ್ಲ' ಎಂದು ಹೇಳಿತು.

ಜಾಮೀನು ಆದೇಶದಲ್ಲಿ ಪೀಠವು ಮಧ್ಯಪ್ರವೇಶ ಮಾಡಬಾರದು ಎಂಬುದಕ್ಕೆ ಬಲವಾದ ಕಾರಣಗಳನ್ನು ನೀಡುವಂತೆ ನಟನ ಪರವಾಗಿ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಅವರನ್ನು ನ್ಯಾಯಪೀಠವು ಕೇಳಿತು. ಬಳಿಕ ವಿಚಾರಣೆಯನ್ನು ಜುಲೈ 22ಕ್ಕೆ ಮುಂದೂಡಿತು.

7

ವಾದ್ರಾ ವಿರುದ್ಧ ಆರೋಪಪಟ್ಟಿ

ನವದೆಹಲಿ (ಪಿಟಿಐ): ಹರಿಯಾಣದ ಶಿಕೋಹಪುರದ ಭೂ ವ್ಯವಹಾರದಲ್ಲಿನ ಹಣ ಅಕ್ರಮ ವರ್ಗಾವಣೆ ಪ್ರಕರಣ ದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಉದ್ಯಮಿ ರಾಬರ್ಟ್ ವಾದ್ರಾ (56) ವಿರುದ್ಧ ಗುರುವಾರ ಆರೋಪ ಪಟ್ಟಿ ಸಲ್ಲಿಸಿದೆ.



ರಾಬರ್ಟ್ ವಾದ್ರಾ

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಇಲ್ಲಿನ ರೌಸ್ ಅವೆನ್ಯೂ ನ್ಯಾಯಾಲಯದಲ್ಲಿ ಇ.ಡಿ ಆರೋಪಪಟ್ಟಿ ಸಲ್ಲಿಕೆ ಮಾಡಿದೆ. ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿಯೂ ಆಗಿರುವ ವಾದ್ರಾ ಅವರನ್ನು ಕ್ರಿಮಿನಲ್ ಪ್ರಕರಣದಲ್ಲಿ ಹೆಸರಿಸಿ ತನಿಖಾ ಸಂಸ್ಥೆಯೊಂದು ಪ್ರಾಸಿಕ್ಯೂಷನ್ ದೂರು ದಾಖಲಿಸಿರುವುದು ಇದೇ ಮೊದಲು.

ವಾದ್ರಾ ಮತ್ತು ಅವರಿಗೆ ಸಂಬಂಧಿಸಿದ ಸಂಸ್ಥೆ 'ಸ್ಕೈಲೈಟ್ ಹಾಸ್ಪಿಟಾಲಿಟಿ ಲಿಮಿಟೆಡ್' ಮತ್ತು ಇತರ ಸಂಸ್ಥೆಗಳಿಗೆ ಸೇರಿದ ₹37.64 ಕೋಟಿ ಮೌಲ್ಯದ 43 ಸ್ಥಿರ ಆಸ್ತಿಗಳನ್ನೂ ಇ.ಡಿ ಮುಟ್ಟುಗೋಲು ಹಾಕಿಕೊಂಡಿದೆ. ಈ ಸಂಬಂಧ ಪಿಎಂಎಲ್‌ಎ ಅಡಿಯಲ್ಲಿ ಬುಧವಾರ ತಾತ್ಕಾಲಿಕ ಜಪ್ತಿ ಆದೇಶವನ್ನು ಇ.ಡಿ ಹೊರಡಿಸಿದೆ ಎಂದು ಮೂಲಗಳು ಹೇಳಿವೆ.

11

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಘನತ್ಯಾಜ್ಯ ನಿರ್ವಹಣೆಗೆ ಪಿಪಿಪಿ ಮಾದರಿ

2030ರ ವೇಳೆಗೆ 1.79 ಕೋಟಿ ಜನಸಂಖ್ಯೆ • ನಿತ್ಯ ಎಂಟು ಸಾವಿರ ಟನ್ ಕಸ ಉತ್ಪಾದನೆ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿ ಸೇರಿದಂತೆ ನಗರ ಜಿಲ್ಲೆಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆ ಮಾಡಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ನಿರ್ಧರಿಸಿದೆ.

ನಗರ ಜಿಲ್ಲೆಯನ್ನು ಎರಡು ಪ್ಯಾಕೇಜ್‌ಗಳಾಗಿ ವಿಂಗಡಿಸಿ, ತ್ಯಾಜ್ಯ ಸಂಗ್ರಹ, ಸಾಗಣೆ, ವಿಲೇವಾರಿ, ಸಂಸ್ಕರಣೆಯವರೆಗೆ ಎಲ್ಲ ಕಾರ್ಯವನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲಾಗುತ್ತದೆ. ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಒಟಿ) ಮಾದರಿಯಲ್ಲಿ ಗುತ್ತಿಗೆ ಪಡೆದ ಸಂಸ್ಥೆ ಕಾರ್ಯನಿರ್ವಹಿಸಬೇಕಿದೆ.

ಸಮಗ್ರ ಘನತ್ಯಾಜ್ಯ ನಿರ್ವಹಣೆಗಾಗಿ ಈ ಹಿಂದೆ ನಾಲ್ಕು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲಾಗಿತ್ತು. ಅದನ್ನು ಬದಲಿಸಿ ಎರಡು ಪ್ಯಾಕೇಜ್‌ಗಳಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಒಂದು ಬಾರಿ ಬಂಡವಾಳ ಹೂಡಿಕೆಯ ಅಂದಾಜು ಮೊತ್ತ ನಿರ್ಧರಿಸಿ, ಟಿಪ್ಪಿಂಗ್ ಆಧಾರದಲ್ಲಿ ವಿಲೇವಾರಿ– ಸಂಸ್ಕರಣೆ ಮಾಡಲು ಟೆಂಡರ್ ಆಹ್ವಾನಿಸಿದ್ದು, ಆಗಸ್ಟ್ 14ರವರೆಗೆ ಬಿಡ್ ಸಲ್ಲಿಸಲು ಅವಕಾಶ ನೀಡಲಾಗಿದೆ.

ಸಮಗ್ರ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಪ್ರಕ್ರಿಯೆ ಈಗಿನ ಅಂದಾಜಿನಂತೆಯೇ ಪ್ರಾರಂಭವಾದರೆ, 2028ರ ವೇಳೆಗೆ ಮೂಲಸೌಕರ್ಯ ಅಭಿವೃದ್ಧಿಯಾಗುತ್ತದೆ. ನಂತರ ಘನತ್ಯಾಜ್ಯ ವಿಲೇವಾರಿ, ಸಂಸ್ಕರಣೆ ಕಾರ್ಯ ಆರಂಭವಾಗಲಿದೆ ಎಂದು ನಿರೀಕ್ಷಿಸಲಾಗಿದ್ದು, 2030ರ ವೇಳೆಗೆ ಜನಸಂಖ್ಯೆಯನ್ನು ಅಂದಾಜಿಸಿ, ಘನತ್ಯಾಜ್ಯ ಉತ್ಪಾದನೆಯನ್ನು ಲೆಕ್ಕಾಚಾರ ಮಾಡಲಾಗಿದೆ.

ತ್ಯಾಜ್ಯದಿಂದ ಇಂಧನ, ಜೈವಿಕ ಇಂಧನ, ಗೊಬ್ಬರ, ಮರುಬಳಕೆಯ ವಸ್ತುಗಳು, ಉಪ–ಉತ್ಪನ್ನಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡಿಕೊಳ್ಳಲು ಸಂಸ್ಥೆಗಳಿಗೆ ಅನುವು ಮಾಡಿಕೊಡಲಾಗಿದೆ.

ಉತ್ತರ ಪ್ಯಾಕೇಜ್‌ನಲ್ಲಿ ಒಟ್ಟಾರೆ ಉತ್ಪಾದನೆಯಾಗುವ ತ್ಯಾಜ್ಯದಲ್ಲಿ ಈಗಿರುವ ಸಂಸ್ಕರಣೆ ಘಟಕಗಳು ನಿತ್ಯ 976 ಟನ್ ಅನ್ನು ಸಂಸ್ಕರಿಸುತ್ತಿವೆ. ಉಳಿದ 3,822 ಟನ್ ಅನ್ನು ನಿತ್ಯವೂ ಸಂಸ್ಕರಿಸಲು ಕ್ರಮ ಕೈಗೊಳ್ಳಬೇಕು. ದಕ್ಷಿಣ ಪ್ಯಾಕೇಜ್‌ನಲ್ಲಿ 1,113 ಟನ್ ನಿತ್ಯ ಸಂಸ್ಕರಣೆಯಾಗುತ್ತಿದ್ದು, ಉಳಿದ 3,900 ಟನ್ ಸಂಸ್ಕರಣೆಗೆ ಮೂಲಸೌಕರ್ಯ ನಿರ್ಮಾಣ ಹಾಗೂ ಕಾರ್ಯನಿರ್ವಹಣೆಯಾಗಬೇಕು ಎಂದು ಟೆಂಡರ್‌ನಲ್ಲಿ ವಿವರಿಸಲಾಗಿದೆ.



ಉತ್ತರ ಪ್ಯಾಕೇಜ್		ದಕ್ಷಿಣ ಪ್ಯಾಕೇಜ್
ವ್ಯಾಪ್ತಿ: ಬಿಬಿಎಂಪಿಯ ಯಲಹಂಕ, ದಾಸರಹಳ್ಳಿ, ಪೂರ್ವ, ಪಶ್ಚಿಮ ವಲಯ ಮತ್ತು ಆ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆಯ ಪ್ರದೇಶ		ವ್ಯಾಪ್ತಿ: ಬಿಬಿಎಂಪಿಯ ಆರ್.ಆರ್. ನಗರ, ಮಹದೇವಪುರ, ದಕ್ಷಿಣ, ಬೊಮ್ಮನಹಳ್ಳಿ ವಲಯ ಮತ್ತು ಆ ಭಾಗದ ಬೆಂಗಳೂರು ನಗರ ಜಿಲ್ಲೆಯ ಪ್ರದೇಶ
4,047 ಟನ್: ಒಟ್ಟು ಉತ್ಪಾದನೆಯಾಗುವ ತ್ಯಾಜ್ಯ		4,113 ಟನ್: ಒಟ್ಟು ಉತ್ಪಾದನೆಯಾಗುವ ತ್ಯಾಜ್ಯ
₹788 ಕೋಟಿ	ಎರಡನೇ ಹಂತ ಸಾಗಣೆಯ ಮೂಲ ಸೌಕರ್ಯಕ್ಕೆ ವೆಚ್ಚ	₹802 ಕೋಟಿ
3,822 ಟನ್	ಎರಡನೇ ಹಂತ ಸಾಗಣೆಯಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ ಅಂದಾಜು ತ್ಯಾಜ್ಯ	3,000 ಟನ್
₹1,124 ಕೋಟಿ	ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಮೂಲಸೌಕರ್ಯಕ್ಕೆ ಆಗುವ ವೆಚ್ಚ	₹1,010 ಕೋಟಿ
3,073 ಟನ್	ಪ್ರತಿನಿತ್ಯ ಸಂಸ್ಕರಣೆ ಮತ್ತು ವಿಲೇವಾರಿಯಾಗುವ ತ್ಯಾಜ್ಯ	2,999 ಟನ್
95,15,142	ಪ್ಯಾಕೇಜ್ ಒಳಗೊಳ್ಳುವ ಒಟ್ಟು ಜನಸಂಖ್ಯೆ	96,62,193

2030ಕ್ಕೆ ತ್ಯಾಜ್ಯ ಉತ್ಪಾದನೆ ಅಂದಾಜು

ಪ್ರದೇಶ	ಜನಸಂಖ್ಯೆ	ಪ್ರತಿ ವ್ಯಕ್ತಿಗೆ ತ್ಯಾಜ್ಯ ಉತ್ಪಾದನೆ	ಪ್ರತಿ ನಿತ್ಯ ತ್ಯಾಜ್ಯ ಉತ್ಪಾದನೆ
ಬಿಬಿಎಂಪಿ	1.72 ಕೋಟಿ	400 ಗ್ರಾಂ	6,872 ಟನ್
ನಗರ ಜಿಲ್ಲೆ	7 ಲಕ್ಷ	400 ಗ್ರಾಂ	291 ಟನ್
ಬಂದುಹೋಗುವ ಜನ (ಫ್ಲೋಟಿಂಗ್)	13 ಲಕ್ಷ	100 ಗ್ರಾಂ	127 ಟನ್
ರಸ್ತೆ ತ್ಯಾಜ್ಯ	–	–	870 ಟನ್
ಒಟ್ಟು	–	–	8,160 ಟನ್

ಈಗಿರುವ ಘಟಕಗಳಿಂದ ಸಂಸ್ಕರಣೆ ವಿವರ

ತ್ಯಾಜ್ಯದ ವರ್ಗ	ವಿಕೇಂದ್ರೀಕೃತ	ಕೇಂದ್ರೀಕೃತ	ಒಟ್ಟು ಸಾಮರ್ಥ್ಯ
	(ಪ್ರತಿನಿತ್ಯ)		
ಸ್ಯಾನಿಟರಿ ತ್ಯಾಜ್ಯ	25 ಟನ್	0	25 ಟನ್
ಪ್ರಾಣಿ ತ್ಯಾಜ್ಯ	8 ಟನ್	0	8 ಟನ್
ಹಸಿ ತ್ಯಾಜ್ಯ	105 ಟನ್	1050 ಟನ್	1155 ಟನ್
ಒಣ ತ್ಯಾಜ್ಯ	300 ಟನ್	600 ಟನ್	900 ಟನ್
ಒಟ್ಟು	438 ಟನ್	1,650 ಟನ್	2,088 ಟನ್

ಪ್ರತಿ ವ್ಯಕ್ತಿಯಿಂದ 400 ಗ್ರಾಂ ತ್ಯಾಜ್ಯ



ಸಮಗ್ರ ಘನತ್ಯಾಜ್ಯ ನಿರ್ವಹಣೆ ಯೋಜನೆಯ 2,160 ಚದರ ಕಿ.ಮೀ ವ್ಯಾಪ್ತಿಯಲ್ಲಿ 2030ರ ವೇಳೆಗೆ ನಗರದಲ್ಲಿರುವ ಪ್ರತಿ ವ್ಯಕ್ತಿಯಿಂದ ನಿತ್ಯ 400 ಗ್ರಾಂ ತ್ಯಾಜ್ಯ ಉತ್ಪಾದನೆಯಾಗುತ್ತದೆ. ಫ್ಲೋಟಿಂಗ್ ಜನಸಂಖ್ಯೆಯಲ್ಲಿ ಪ್ರತಿ ವ್ಯಕ್ತಿಗೆ 100 ಗ್ರಾಂ ತ್ಯಾಜ್ಯ ನಿತ್ಯ ಉತ್ಪಾದನೆಯಾಗುತ್ತದೆ ಎಂದು ಅಂದಾಜಿಸಲಾಗಿದೆ. ಬಲ್ಕ್ ತ್ಯಾಜ್ಯವನ್ನು ಹೊರತುಪಡಿಸಿ, ಸುಮಾರು 7,290 ಟನ್ ತ್ಯಾಜ್ಯ ಪ್ರತಿನಿತ್ಯ ಉತ್ಪಾದನೆಯಾಗುತ್ತದೆ ಎಂದು ಲೆಕ್ಕಾಚಾರ ಮಾಡಲಾಗಿದೆ.

‘ಜೈವಿಕ ಇಂಧನ ಸಂಶೋಧನೆಗೆ ಒತ್ತು ನೀಡಿ’


ಬೆಂಗಳೂರು: ನೂತನವಾಗಿ ರೂಪಿಸಲು ಹೊರಟಿರುವ ಜೈವಿಕ ಇಂಧನ ನೀತಿಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ, ಪ್ರಾಯೋಗಿಕ ಯೋಜನೆಗಳಿಗೆ ಹೆಚ್ಚು ಒತ್ತು ನೀಡಿ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಸೂಚಿಸಿದರು.

ಮಂಡಳಿಯ 10ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಸಭೆ ವಿಧಾನಸೌಧದಲ್ಲಿ ಬುಧವಾರ ನಡೆದಿದ್ದು, ನೂತನ ಜೈವಿಕ ಇಂಧನ ನೀತಿಯ ಬಗ್ಗೆ ಚರ್ಚಿಸಲಾಯಿತು.

‘ಜೈವಿಕ ಇಂಧನ ಕ್ಷೇತ್ರದಲ್ಲಿ ಹೂಡಿಕೆಗೆ ಹಲವು ಉದ್ಯಮಗಳು ಮುಂದೆ ಬರುತ್ತಿದ್ದು, ಮೂಲಸೌಕರ್ಯ ಮತ್ತು ಅಗತ್ಯ ಅನುಮತಿಗಳನ್ನು ಒದಗಿಸುವ ಕೆಲಸ ಮಾಡಬೇಕು. ಈ ಮೂಲಕ ಲಕ್ಷ ಕೋಟಿಗೂ ಹೆಚ್ಚು ಬಂಡವಾಳವನ್ನು ಆಕರ್ಷಿಸಬಹುದು’ ಎಂದು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಎಲ್. ಅವರು ಸಭೆಗೆ ವಿವರಿಸಿದರು.

ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ, ಕಾರ್ಯಕಾರಿ ಸಮಿತಿ ಸದಸ್ಯ ಬಾಲಕೃಷ್ಣ ಗೌಡ, ಅಧಿಕಾರಿಗಳು ಇದ್ದರು

ಟಿಕೆಟ್ ದರ: ಅಧಿಸೂಚನೆ ಆದೇಶವಾಗಲಿದೆ



ನರಸಿಂಹಲು

ಬೆಂಗಳೂರು: ‘ಮಲ್ಟಿಪ್ಲೆಕ್ಸ್ ಸೇರಿದಂತೆ ರಾಜ್ಯದ ಎಲ್ಲಾ ಚಿತ್ರಮಂದಿರಗಳಲ್ಲಿ ಟಿಕೆಟ್ ದರಕ್ಕೆ ಗರಿಷ್ಠ ₹200 ಮಿತಿ ಹೇರಿ ರಾಜ್ಯ ಗೃಹ ಇಲಾಖೆ ಹೊರಡಿಸಿರುವ ಕರಡು ಅಧಿಸೂಚನೆ ಖಂಡಿತವಾಗಿಯೂ ಆದೇಶ ರೂಪ ಪಡೆಯಲಿದೆ’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಳೆದ ಬಾರಿ ವಾರ್ತಾ ಇಲಾಖೆಯಿಂದ ಈ ಅಧಿಸೂಚನೆ ಬಂದಿತ್ತು. ಹೀಗಾಗಿ ಅದಕ್ಕೆ ಕೋರ್ಟ್‌ನಲ್ಲಿ ತಡೆ ಬಂದಿತ್ತು. ಈ ಬಾರಿ ಗೃಹ ಇಲಾಖೆಯೇ ನಿಯಮದ ಪ್ರಕಾರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಗೆ ನಮ್ಮ ನಿರ್ಮಾಪಕರ ಒಪ್ಪಿಗೆ ಇದೆ. ಕೆಲವರ ಆಕ್ಷೇಪವಿರಬಹುದು. ಕನ್ನಡ ನಿರ್ಮಾಪಕರ ದೊಡ್ಡ ಬಜೆಟ್‌ನ ಸಿನಿಮಾಗಳು ಬಂದ ಸಂದರ್ಭದಲ್ಲಿ ಟಿಕೆಟ್ ದರ ನಿಗದಿ ಬಗ್ಗೆ ಅವರ ಮನವಿಯ ಪರವಾಗಿ ವಾಣಿಜ್ಯ ಮಂಡಳಿ ನಿಲ್ಲಲಿದೆ. ಈ ಕುರಿತ ಸಲಹೆಯನ್ನು ಸರ್ಕಾರಕ್ಕೆ ನೀಡಲಾಗುವುದು’ ಎಂದರು.

‘ದೊಡ್ಡ ನಿರ್ಮಾಪಕರು, ಮಲ್ಟಿಪ್ಲೆಕ್ಸ್‌ನವರು ಸದ್ಯ ಆಕ್ಷೇಪ ಮಾಡಿದರೂ ಮುಂದೆ ಅವರಿಗೂ ಈ ಆದೇಶದ ಪರಿಣಾಮ ತಿಳಿಯಲಿದೆ. ಸಾವಿರ ಜನರ ಬದಲಾಗಿ ಹತ್ತು ಸಾವಿರ ಜನ ಸಿನಿಮಾ ನೋಡುತ್ತಾರೆ’ ಎಂದರು. ಮಂಡಳಿಯ ಪದಾಧಿಕಾರಿಗಳು, ನಿರ್ಮಾಪಕ ಸಾ.ರಾ. ಗೋವಿಂದು ಇದ್ದರು.

ಕೆಇಎ: ಎಬಿವಿಪಿ ಕಾರ್ಯಕರ್ತರ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ನರ್ಸಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಕಾಲೇಜು ಮತ್ತು ಕೋರ್ಸ್‌ಗಳ ಆಯ್ಕೆ (ಆಪ್ಷನ್) ಸಮಯದಲ್ಲೇ ವಿದ್ಯಾರ್ಥಿಗಳಿಗೆ ₹750 ಶುಲ್ಕ ವಿಧಿಸಿರುವುದನ್ನು ವಿರೋಧಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಗೆ ಗುರುವಾರ ಮುತ್ತಿಗೆ ಹಾಕಿದ ವಿದ್ಯಾರ್ಥಿಗಳು ಹಾಗೂ ಎಬಿವಿಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಳಿಕ ಬಿಡುಗಡೆ ಮಾಡಿದರು.

ಸಿಇಟಿ ಅರ್ಜಿ ಶುಲ್ಕ ಪಾವತಿಸಿದ ಬಳಿಕ ಮತ್ತೆ ಆಯ್ಕೆ ಶುಲ್ಕ ನಿಗದಿಪಡಿಸಿರುವ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಸರ್ಕಾರಿ ಸೀಟುಗಳಿಗೂ ಹೆಚ್ಚುವರಿ ಹಣ ವಸೂಲಿ ಮಾಡುವುದನ್ನು ನಿಲ್ಲಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಮೊದಲ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಕೃಷಿ ಕಾಲೇಜು, ವಿಶ್ವವಿದ್ಯಾಲಯ, ಬಿ.ಎಸ್ಸಿ ನರ್ಸಿಂಗ್, ಬಿ ಫಾರ್ಮಾ, ಆರ್ಕಿಟೆಕ್ಚರ್ ಕೋರ್ಸ್‌ಗಳನ್ನು ಆಯ್ಕೆ ನಮೂದಿನಲ್ಲಿ ತೋರಿಸಿಲ್ಲ. ಹಲವು ಕೋರ್ಸ್‌ಗಳನ್ನು ಎರಡು ಅಥವಾ ಮೂರನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಪ್ರಕಟ ಮಾಡಲಾಗಿದೆ. ಆದರೆ, ಈ ಕುರಿತು ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟವಾಗದಿರುವ ಕಾರಣ ಮೊದಲ ಸುತ್ತಿನ ಆಯ್ಕೆಯಲ್ಲಿ ಕಾಲೇಜು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಹೊಸ ಕೋರ್ಸ್ ಅಥವಾ ಕಾಲೇಜುಗಳ ಬಗ್ಗೆ ಮಾಹಿತಿ ಇಲ್ಲದಂತಾಗಿದೆ ಎಂದು ಆರೋಪಿಸಿದರು. ಬೆಂಗಳೂರು ದಕ್ಷಿಣ ವಿಭಾಗದ ಸಂಚಾಲಕ ಅಭಿನಂದನ್ ಮಾತನಾಡಿದರು.



ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿ ಎದುರು ಎಬಿವಿಪಿ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು

ಹಲವು ವರ್ಷಗಳಿಂದ ಇದೆ: ಕೆಇಎ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಲವು ವರ್ಷಗಳಿಂದ ಸಿಇಟಿ ಪ್ರಕ್ರಿಯೆ ಶುಲ್ಕ ₹750 ಸಂಗ್ರಹಿಸುತ್ತಿದೆ. ಇದು ಮೊದಲ ಬಾರಿ ವಿಧಿಸಿದ ಶುಲ್ಕವಲ್ಲ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಪ್ರತಿಕ್ರಿಯಿಸಿದರು.

‘ಸಿಇಟಿ ಪ್ರಕ್ರಿಯೆ ಶುಲ್ಕವನ್ನೂ ಒಳಗೊಂಡು ಅಭ್ಯರ್ಥಿಗಳು ಕಾಲೇಜು ಶುಲ್ಕ ಪಾವತಿಸುತ್ತಿದ್ದರು. ಈಗ ಕೋರ್ಸ್, ಕಾಲೇಜುಗಳ ಆಯ್ಕೆ ನಮೂದಿಸುವ ವೇಳೆ ಸಂಗ್ರಹಿಸಲಾಗುತ್ತಿದೆ. ಸೀಟ್‌ಬ್ಲಾಕಿಂಗ್ ದಂಧೆಗೆ ಕಡಿವಾಣ ಹಾಕಲು ತೆಗೆದುಕೊಂಡ ನಿರ್ಧಾರಗಳಲ್ಲಿ ಇದೂ ಒಂದು ನಿರ್ಧಾರ’ ಎಂದು ಹೇಳಿದರು.

ನಗರದಲ್ಲಿ ಇಂದು

ಅನ್ವೇಷಾ 2.0 ರಸಪ್ರಶ್ನೆ ಸ್ಪರ್ಧೆ: ಅತಿಥಿ: ಮನೋಜ್ ಜೈನ್, ಆಯೋಜನೆ: ಕೇಂದ್ರ ಸಾಂಖ್ಯಿಕ ಸಚಿವಾಲಯ, ಸ್ಥಳ: ಸೃಷ್ಟಿ ಸಭಾಂಗಣ, ಆರನೇ ಮಹಡಿ, ಬಿ–ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಳಿಗ್ಗೆ 10

‘ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಆಪ್ತ ಸಲಹೆ ಮತ್ತು ಮಾರ್ಗದರ್ಶನ’: ಉದ್ಘಾಟನೆ: ಅಮುಲ್ ರಾಜ್, ಅಧ್ಯಕ್ಷತೆ: ಈ. ಬಸವರಾಜ್, ಉಪನ್ಯಾಸ: ಎಚ್.ಎಸ್. ಗಣೇಶ್ ಭಟ್ಟ, ಅತಿಥಿ: ಶಮಾ ಪರ್ವಿನ್, ಪ್ರಶಸ್ತಿ ವಿತರಣೆ: ನಾ. ಶ್ರೀಧರ್, ಪ್ರಾಸ್ತಾವಿಕ: ಎಂ. ಶಿವಕುಮಾರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸೇಂಟ್ ಫಿಲೋಮಿನ ಪ್ರೌಢ ಶಾಲೆ, ಎಂ.ಜಿ. ರೈಲ್ವೆ ಕಾಲೊನಿ, ಓಕಳಿಪುರ, ಮಧ್ಯಾಹ್ನ 1.30

‘ಷೇಕ್ಸ್‌ಪಿಯರ್ ಭಾಷಾಂತರ ಸೃಜನಶೀಲ ಸವಾಲುಗಳು’ ತಿಂಗಳ ಉಪನ್ಯಾಸ: ನಟರಾಜ್ ಹುಳಿಯಾರ್, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕಚೇರಿಯ ಆವರಣ, ಮಲ್ಲತ್ತಹಳ್ಳಿ, ಕಲಾಗ್ರಾಮ, ಸಂಜೆ 5

‘ಅಮರ ಗೀತೆಗಳ ಗಾಯನ ಸಂಜೆ ಮತ್ತು ಪ್ರಶಸ್ತಿ ಪ್ರದಾನ’ ಸಮಾರಂಭ: ಉದ್ಘಾಟನೆ: ನಾಗರಾಜ್ ಕೋಟೆ, ಪ್ರಶಸ್ತಿ ಪ್ರದಾನ: ಪಾನ್ಯಂ ನಟರಾಜ್, ಅಧ್ಯಕ್ಷತೆ: ಕೆ.ಸಿ. ಮೂರ್ತಿ, ಅತಿಥಿಗಳು: ಕೆ. ರಾಮಸಿಂಗ್, ಡಿ.ಎನ್. ರಾಮಪ್ರಸಾದ್, ಬಿ.ಟಿ. ಚಿಕ್ಕಪುಟ್ಟೇಗೌಡ, ಎನ್. ಕರಿಯಪ್ಪ, ಎಸ್.ಎ. ಮಾರುತಿ, ಪ್ರಾಸ್ತಾವಿಕ ನುಡಿ: ರಾ.ಬಿ. ನಾಗರಾಜ್, ಆಯೋಜನೆ: ಸಂಸ್ಕೃತಿ ಸೌರಭ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಹರಿನಾಮ ಸಂಕೀರ್ತನೆ: ಗಾಯನ: ಭವಾನಿ ಎಂ. ರಾವ್ ಮತ್ತು ತಂಡ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಅಲಸೂರಮ್ಮ ಸೇವಾಟ್ರಸ್ಟ್, ರಾಘವೇಂದ್ರ ಸ್ವಾಮಿ ಮಠ, ಆರನೇ ಮುಖ್ಯರಸ್ತೆ, ಬಿಇಎಲ್ ಬಡಾವಣೆ ಮೂರನೇ ಬ್ಲಾಕ್, ವಿದ್ಯಾರಣ್ಯಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಉದ್ಯಾನದಲ್ಲಿ ಮಾರ್ಗದರ್ಶಿ ಪ್ರವಾಸ

ಅಂಕಿ ಅಂಶಗಳು

- **197 ಎಕರೆ 30 ಗುಂಟೆ** ಕಬ್ಬನ್ ಉದ್ಯಾನದ ವಿಸ್ತೀರ್ಣ
- **8,837** ಉದ್ಯಾನದಲ್ಲಿರುವ ಒಟ್ಟು ಮರಗಳು
- **197** ಪಾರಂಪರಿಕ ಪ್ರಭೇದದ ಮರಗಳು
- **240 ಎಕರೆ** ಲಾಲ್‌ಬಾಗ್ ಉದ್ಯಾನದ ವಿಸ್ತೀರ್ಣ
- **2,350** ಲಾಲ್‌ಬಾಗ್‌ನಲ್ಲಿರುವ ವಿವಿಧ ದೇಶ–ವಿದೇಶಗಳ ಸಸ್ಯಪ್ರಭೇದಗಳು
- **6 ಸಾವಿರಕ್ಕೂ ಹೆಚ್ಚು** ಲಾಲ್‌ಬಾಗ್‌ನಲ್ಲಿರುವ ಒಟ್ಟು ಮರಗಳ ಸಂಖ್ಯೆ

ಕಬ್ಬನ್ ಉದ್ಯಾನದಲ್ಲಿ ಇದೇ 27ರಂದು ಪ್ರವಾಸಿ ನಡಿಗೆಗೆ ಅಧಿಕೃತ ಚಾಲನೆ

• ಖಲೀಲಅಹ್ಮದ ಶೇಖ

ಬೆಂಗಳೂರು: 'ಸಿಲಿಕಾನ್ ಸಿಟಿ'ಯ ವಾಯುವಿಹಾರಿಗಳು ಮತ್ತು ಪ್ರೇಮಿಗಳ ಸ್ವರ್ಗ ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್‌ನಲ್ಲಿರುವ ಸಸ್ಯ ಪ್ರಭೇದಗಳು, ಜೀವವೈವಿಧ್ಯಗಳು ಹಾಗೂ ಐತಿಹಾಸಿಕ ಸ್ಥಳಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ 'ಕಬ್ಬನ್ ವಾಕ್ಸ್', ಲಾಲ್‌ಬಾಗ್ ವಾಕ್ಸ್' ಎಂಬ ಮಾರ್ಗದರ್ಶಿ ನಡಿಗೆ ಪ್ರವಾಸ ಪ್ರಾರಂಭಿಸಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ.

ನಗರದ ಶ್ವಾಸಕೋಶದಂತಿರುವ ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್‌ನಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ಸಾವಿರಾರು ಸಸ್ಯ ಪ್ರಭೇದಗಳ ಮೂಲ ಹೆಸರು, ಉಗಮ ಸ್ಥಾನ, ದೇಶ, ಬೆಳವಣಿಗೆ, ಬೆಳೆಯುವ ಹವಾಗುಣ, ಹೂ–ಹಣ್ಣು ಮತ್ತು ಎಲೆಗಳು ಬಿಡುವ ಕಾಲ, ಅದರ ವೈಜ್ಞಾನಿಕ ಹೆಸರು ಸಹಿತ ಎಲ್ಲ ಮಾಹಿತಿಗಳನ್ನು ಮಾರ್ಗದರ್ಶಿ ನಡಿಗೆ ಪ್ರವಾಸದಲ್ಲಿ ನೀಡಲಾಗುತ್ತದೆ. ಇದು ಸಸ್ಯವಿಜ್ಞಾನ ವಿದ್ಯಾರ್ಥಿಗಳಿಗೆ, ಗಿಡ–ಮರಗಳ ಬಗ್ಗೆ ಕುತೂಹಲ ಇರುವವರಿಗೆ, ಜೀವ ವೈವಿಧ್ಯ ಅಧ್ಯಯನಕಾರರು ಸೇರಿದಂತೆ ಸಾರ್ವಜನಿಕರಿಗೆ ಸಹಾಯಕವಾಗಲಿದೆ.

'ಕಬ್ಬನ್ ಉದ್ಯಾನದಲ್ಲಿ ಇದೇ 27ರಂದು ಪ್ರವಾಸಿ ನಡಿಗೆಗೆ ಅಧಿಕೃತವಾಗಿ ಚಾಲನೆ ನೀಡಲಾಗುತ್ತದೆ. ಪ್ರತಿ ಶನಿವಾರ ಮತ್ತು ಭಾನುವಾರ ಕಬ್ಬನ್ ವಾಕ್ಸ್ ಮತ್ತು ಲಾಲ್‌ಬಾಗ್ ವಾಕ್ಸ್ ನಡೆಯಲಿದೆ. ಇದಕ್ಕಾಗಿ 10 ಮಂದಿ ಪರಿಸರ ತಜ್ಞರನ್ನು ಮಾರ್ಗದರ್ಶಕರನ್ನಾಗಿ ನೇಮಿಸಲಾಗಿದೆ. ಮಾರ್ಗದರ್ಶಕರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾಹಿತಿಗಳನ್ನು ಹಂಚಿಕೊಳ್ಳಲಿದ್ದಾರೆ. 30 ಜನರನ್ನು ಒಳಗೊಂಡ ಒಂದು ತಂಡಕ್ಕೆ ಒಬ್ಬ ಮಾರ್ಗದರ್ಶಕರನ್ನು ನಿಯೋಜಿಸಲಾಗುವುದು. ವಯಸ್ಕರಿಗೆ ₹200, ಮಕ್ಕಳಿಗೆ ₹50 ದರ ನಿಗದಿಪಡಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕವೇ ನೋಂದಣಿ ಮಾಡಿಕೊಂಡು ಬರಬೇಕು' ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.


ಕಬ್ಬನ್ ಉದ್ಯಾನ ಸಾಂದರ್ಭಿಕ ಚಿತ್ರ

'ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್‌ನ ಸಸ್ಯ ಮತ್ತು ಜೀವ ವೈವಿಧ್ಯವನ್ನು ಒಂದು ಪ್ರವಾಸಿ ನಡಿಗೆಯಲ್ಲಿ ತಿಳಿದುಕೊಳ್ಳುವುದು ಕಷ್ಟ. ಆದ್ದರಿಂದ ಇದನ್ನು 7–8 ವಿಭಾಗಗಳಲ್ಲಿ ವಿಂಗಡಿಸುವ ಕುರಿತು ಚಿಂತನೆ ನಡೆಯುತ್ತಿದೆ. ಇಲ್ಲಿರುವ ಗಿಡ ಮರಗಳು, ಪ್ರಾಣಿ–ಪಕ್ಷಿಗಳು ಹಾಗೂ ಸಂದರ್ಶಕರು ಕೇಳುವ ಪ್ರಶ್ನೆಗೆ ಮಾರ್ಗದರ್ಶಕರು ಉತ್ತರ ನೀಡಲಿದ್ದಾರೆ. ಇದರಿಂದ ಬರುವ ಆದಾಯದಲ್ಲಿ ಮಾರ್ಗದರ್ಶಕರಿಗೆ ಗೌರವಧನ ನೀಡಲಾಗುತ್ತದೆ. ಉಳಿದ ಮೊತ್ತ ಇಲಾಖೆಗೆ ಸೇರಲಿದೆ. ಮೊದಲ ಹಂತದಲ್ಲಿ ಕಬ್ಬನ್ ಉದ್ಯಾನದಲ್ಲಿ ಪ್ರವಾಸಿ ನಡಿಗೆಗೆ ಚಾಲನೆ ನೀಡಲಾಗುತ್ತದೆ. ಫಲಪುಷ್ಪ ಪ್ರದರ್ಶನ ಮುಗಿದ ನಂತರ ಲಾಲ್‌ಬಾಗ್‌ನಲ್ಲಿ ಪ್ರಾರಂಭಿಸಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರವಾಸಿ ನಡಿಗೆಯ ಪ್ರತ್ಯೇಕ ವೆಬ್‌ಸೈಟ್ ರಚಿಸುವುದು ಸೇರಿದಂತೆ ಪೂರಕ ವೆಚ್ಚಗಳಿಗೆ ಒಟ್ಟು ₹1.20 ಲಕ್ಷ ವಿನಿಯೋಗಿಸಲಾಗಿದೆ' ಎಂದು ಮಾಹಿತಿ ನೀಡಿದರು.

> **ಆದಾಯ ಗಳಿಸುವುದು ಇಲಾಖೆಯ ಉದ್ದೇಶವಲ್ಲ. ಸಾರ್ವಜನಿಕರಿಗೆ ಗಿಡ–ಮರಗಳು, ಜೀವವೈವಿಧ್ಯಗಳನ್ನು ಸಂರಕ್ಷಿಸುವುದರ ಜೊತೆಗೆ ಪರಿಸರದ ಕುರಿತು ಜಾಗೃತಿ ಮೂಡಿಸುವುದು**
> **ಎಂ. ಜಗದೀಶ್**
> ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

> **ಕಬ್ಬನ್ ಉದ್ಯಾನದಲ್ಲಿ ಖಾಸಗಿಯವರು ಪ್ರವಾಸಿ ನಡಿಗೆಗಳನ್ನು ಆಯೋಜಿಸುತ್ತಿದ್ದರು. ಈಗ ಇಲಾಖೆಯಿಂದ ಪ್ರವಾಸಿ ನಡಿಗೆಗೆ ಚಾಲನೆ ನೀಡಲಾಗುತ್ತಿದೆ.**
> **ಜಿ. ಕುಸುಮಾ,** ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ (ಕಬ್ಬನ್ ಉದ್ಯಾನ)


ಬಂಜಾರ ಕಸೂತಿ ಸಂಸ್ಥೆಗೆ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳು ಭೇಟಿ ನೀಡಿ, ತರಬೇತಿ ಪಡೆದರು

ಬಂಜಾರ ಕಸೂತಿ ಸಂಸ್ಥೆಗೆ ವಿದ್ಯಾರ್ಥಿನಿಯರ ಭೇಟಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಲ್ಲಿನ ಬಂಜಾರ ಕಸೂತಿ ಸಂಸ್ಥೆಗೆ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ (ಎನ್.ಐ.ಎಫ್.ಟಿ) ಸಂಸ್ಥೆಯ ವಿದ್ಯಾರ್ಥಿಗಳು ಕ್ಷೇತ್ರಾಧ್ಯಯನಕ್ಕಾಗಿ ಭೇಟಿ ನೀಡಿದರು.

ಸಂಸ್ಥೆಯ ಸಂಸ್ಥಾಪಕಿ ಆಶಾ ಎಂ. ಪಾಟೀಲ, 'ಜಿಲ್ಲೆಯಲ್ಲಿ ಮೊದಲಿನಿಂದಲೂ ಲಂಬಾಣಿ ಕಲೆ, ಕಸೂತಿ ಇತ್ಯಾದಿಗಳು ಬೇರೂರಿಕೊಂಡು ಬಂದಿದ್ದವು. ಈ ಸಾಂಪ್ರದಾಯಿಕ ಕೌಶಲವನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಬಂಜಾರ ಕಸೂತಿ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ' ಎಂದರು.

'ಏಳೆಂಟು ವರ್ಷಗಳಿಂದ ಬಂಜಾರ ತಾಂಡಾಗಳಲ್ಲಿರುವ ಮಹಿಳೆಯರನ್ನು ಸಂಪರ್ಕಿಸಿ, ಈ ಕಲೆಗೆ ಸಮಕಾಲೀನ ಸ್ಪರ್ಶ ನೀಡಲಾಗುತ್ತಿದೆ. ಇದಕ್ಕೆ ಮಾರುಕಟ್ಟೆಯನ್ನೂ ಸೃಷ್ಟಿಸಲಾಗಿದೆ' ಎಂದು ತಿಳಿಸಿದರು.

'ಸದ್ಯಕ್ಕೆ ಬೆಂಗಳೂರಿನ ಎನ್.ಐ.ಎಫ್.ಟಿ. ಸಂಸ್ಥೆಯ ನಿಟ್-ವೇರ್ ವಿಭಾಗದ 38 ವಿದ್ಯಾರ್ಥಿನಿಯರು ಕ್ಷೇತ್ರಾಧ್ಯಯನಕ್ಕೆ ಬಂದಿದ್ದಾರೆ. ಇವರು ಸಂಸ್ಥೆಯ ಸಿಬ್ಬಂದಿ ಅಗತ್ಯ ಮಾರ್ಗದರ್ಶನ ನೀಡುತ್ತಿದ್ದು, ಬಂಜಾರ ಜೀವನಶೈಲಿ, ಕಸೂತಿಯ ಸೂಕ್ಷ್ಮತೆ ಚಿತ್ರೀಕರಣ ನಡೆಯುತ್ತಿದೆ' ಎಂದು ಅವರು ಹೇಳಿದರು.

ಸಂಸ್ಥೆಯ ಸಹ ಸಂಸ್ಥಾಪಕಿ ಸೀಮಾ ಕಿಶೋರ್, 'ಕೆಲ ವರ್ಷಗಳ ಹಿಂದೆ ಜನರಿಗೆ ರಾಜಾಸ್ಥಾನಿ ಮತ್ತು ಗುಜರಾತಿ ಬಂಜಾರ ಕಲೆಗಳ ಬಗ್ಗೆ ಮಾತ್ರ ಗೊತ್ತಿತ್ತು. ಈಗ ಕರ್ನಾಟಕದ ಕಸೂತಿ ಕೂಡ ಜನಪ್ರಿಯವಾಗಿದೆ. ಇಲ್ಲಿನ ಉತ್ಪನ್ನಗಳನ್ನು ಅಮೆರಿಕ, ಯುರೋಪ್‌ಗೂ ಕಳುಹಿಸಲು ವ್ಯವಸ್ಥೆ ರೂಪಿಸಲಾಗಿದೆ' ಎಂದರು.

ಚಿಟಿಕೆ ಸುದ್ದಿ

ಕೆ.ಎಂ. ಗಾಯತ್ರಿ ವಜಾಕ್ಕೆ ಆಗ್ರಹ

ಬೆಂಗಳೂರು: ಕಲಾವಿದರೊಂದಿಗೆ ಅಗೌರವದಿಂದ ನಡೆದುಕೊಳ್ಳುವುದರ ಜೊತೆಗೆ ಜಾತಿನಿಂದನೆ ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಗಾಯತ್ರಿ ಅವರನ್ನು ವಜಾಗೊಳಿಸಬೇಕು ಎಂದು ದಲಿತಪರ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕ ಅಧ್ಯಕ್ಷ ಪಿ.ಮೂರ್ತಿ, 'ಕನ್ನಡ ನಾಡು–ನುಡಿಗೆ, ಸಾಹಿತಿಗಳು, ಕಲಾವಿದರಿಗೆ ಗೌರವ ನೀಡುವವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಹುದ್ದೆಗೆ ನೇಮಕ ಮಾಡಬೇಕು. 31 ಜಿಲ್ಲೆಯ ಕಲಾವಿದರಿಗೆ ಮೂರು ವರ್ಷಗಳಿಂದ ಕಾರ್ಯಕ್ರಮ ಪ್ರದರ್ಶನದ ಹಣ ಪಾವತಿಸಬೇಕು. 2011ರಿಂದ ಇದುವರೆಗೆ ಕಲಾತಂಡಗಳ ಗೌರವ ಸಂಭಾವನೆ ಮೊತ್ತ ಪರಿಷ್ಕರಣೆ ಆಗಿಲ್ಲ. ದಿನಬಳಕೆ ವಸ್ತುಗಳು ಬೆಲೆ ಗಗನಕ್ಕೇರಿದ್ದು, ಇಂತಹ ಪರಿಸ್ಥಿತಿಯಲ್ಲಿ ಕಲಾವಿದರು ಜೀವನ ನಡೆಸುವುದೇ ದುಸ್ತರವಾಗಿದೆ. ಆದ್ದರಿಂದ ಕೂಡಲೇ ಗೌರವ ಸಂಭಾವನೆ ಮೊತ್ತ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಬಿಡಿಎ: ಒತ್ತುವರಿ ತೆರವು

ಬೆಂಗಳೂರು: ಕೆಂಗೇರಿ ಹೋಬಳಿ ಕೆಂಚನಪುರ ಗ್ರಾಮದಲ್ಲಿ ಒತ್ತುವರಿಯಾಗಿದ್ದ ₹20 ಕೋಟಿ ಮೌಲ್ಯದ ಭೂಮಿಯನ್ನು ಬಿಡಿಎ ಮರು ವಶಕ್ಕೆ ಪಡೆದುಕೊಂಡಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿರುವ ಕೆಂಗೇರಿ ಹೋಬಳಿ, ಕೆಂಚನಪುರ ಗ್ರಾಮದ ಸರ್ವೆ ನಂ. 78/1 ಮತ್ತು 78/2 ರಲ್ಲಿ 34 ಗುಂಟೆ ಪ್ರದೇಶವನ್ನು ಪ್ರಮುಖ ಮುಖ್ಯರಸ್ತೆ (ಎಂಎಆರ್) ನಿರ್ಮಾಣಕ್ಕೆ ಭೂಸ್ವಾಧೀನವಾಗಿತ್ತು. ಭೀಮನಕುಪ್ಪೆ ಗ್ರಾಮದ ಸರ್ವೆ ನಂ. 98/3ರಲ್ಲಿ 30 ಗುಂಟೆ ಪ್ರದೇಶದಲ್ಲಿ ಕೈಗಾರಿಕಾ ಶೆಡ್, ಕಾಂಪೌಂಡ್‌ಗಳನ್ನು ನಿರ್ಮಿಸಲಾಗಿತ್ತು. ಈ ನಿರ್ಮಾಣಗಳನ್ನು ತೆರವುಗೊಳಿಸಿದ ಬಿಡಿಎ ಸಿಬ್ಬಂದಿ, ಭೂಮಿಯನ್ನು ವಶಕ್ಕೆ ಪಡೆದುಕೊಂಡರು ಎಂದು ಪ್ರಕಟಣೆ ತಿಳಿಸಿದೆ.

ರೈತರ ಹುತಾತ್ಮ ದಿನಾಚರಣೆ 21ಕ್ಕೆ



ಬೆಂಗಳೂರು: ಅಖಂಡ ಕರ್ನಾಟಕ ರಾಜ್ಯ ರೈತ ಸಂಘದಿಂದ ಇದೇ 21ರಂದು ಗಾಂಧಿ ಭವನದಲ್ಲಿ ರೈತರ ಹುತಾತ್ಮ ದಿನಾಚರಣೆ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸಿದ್ದನಗೌಡ ಪಾಟೀಲ, 'ದೇಶದಾದ್ಯಂತ ಜುಲೈ 21ರಂದು ರೈತರ ಹುತಾತ್ಮ ದಿನಾಚರಣೆ ಆಯೋಜಿಸಲಾಗುತ್ತಿದೆ. ಈ ಸಂದರ್ಭದಲ್ಲಿ ನವಲಗುಂದ ಮತ್ತು ನರಗುಂದದ ರೈತ ಬಂಡಾಯದಲ್ಲಿ ಹುತ್ಮಾತರಾದ ಈರಪ್ಪ ಕಡ್ಲಿಕೊಪ್ಪ ಮತ್ತು ಬಸವಪ್ಪ ಲಕ್ಕುಂಡಿ ಅವರ ಸ್ಮರಣೆ ಮಾಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ, ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ಕಿದ್ವಾಯಿ: ಸ್ಕ್ಯಾನಿಂಗ್ ತಾತ್ಕಾಲಿಕ ಸ್ಥಗಿತ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಹಾಗೂ ಮ್ಯಾಮೋಗ್ರಾಮ್ ಯಂತ್ರ ದುರಸ್ತಿ ಕಾರ್ಯ ನಡೆಯುತ್ತಿದೆ. ಹಾಗಾಗಿ ನಿಮ್ಹಾನ್ಸ್ ಹಾಗೂ ಸಂಜಯ್‌ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಗಳಲ್ಲಿ ರೋಗಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕರು ತಿಳಿಸಿದ್ದಾರೆ.

ಹೊಸ ಯಂತ್ರ ಖರೀದಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ದುರಸ್ತಿಯಲ್ಲಿರುವ ಎಂಆರ್‌ಐ (ತಾಂತ್ರಿಕ ಸಮಸ್ಯೆ), ಮ್ಯಾಮೋಗ್ರಾಮ್ ಯಂತ್ರ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಎರಡೂ ಸ್ಕ್ಯಾನಿಂಗ್‌ಗಳು ಶೀಘ್ರದಲ್ಲಿ ಲಭ್ಯವಾಗಲಿವೆ. ಅಲ್ಲಿಯವರೆಗೆ ಎಂಆರ್‌ಐ ಸ್ಕ್ಯಾನಿಂಗ್ ಮಾಡಲು ನಿಮ್ಹಾನ್ಸ್, ಸಂಜಯ್ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

₹33 ಕೋಟಿ ಪರಿಹಾರ ಕೊಟ್ಟ ಮೆಟ್ರೊ ನಿಗಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಂದಾಯ ಇಲಾಖೆಯ ಅಧಿಕಾರಿಗಳ ಸಹಕಾರದಲ್ಲಿ ಸಹೋದರರು ಹಾಗೂ ಅವರ ಮಕ್ಕಳು ನಕಲಿ 'ವಂಶವೃಕ್ಷ' ಸೃಷ್ಟಿಸಿ ಬೆಂಗಳೂರು ಮೆಟ್ರೊ ರೈಲು ನಿಗಮದಿಂದ (ಬಿಎಂಆರ್‌ಸಿಎಲ್) ₹33 ಕೋಟಿ ಭೂ ಪರಿಹಾರ ಪಡೆದಿದ್ದಾರೆ. ಈ ಪ್ರಕರಣದ ಇಬ್ಬರು ಆರೋಪಿಗಳ ವಿರುದ್ಧ ವಿಚಾರಣೆ ಮುಂದುವರಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ಪ್ರತ್ಯೇಕ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ವಿಚಾರಣೆ ರದ್ದುಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಪ್ರಸನ್ನ ಬಿ.ವರಾಳೆ ಪೀಠವು ತೀರ್ಪು ನೀಡಿದೆ.

ಪ್ರಕರಣವೇನು ?: ಕೆ.ಜಿ.ಯಲ್ಲಪ್ಪ ರೆಡ್ಡಿ ಎಂಬವರು ದೊಡ್ಡತೇಗೂರಿನಲ್ಲಿ 19 ಗುಂಟೆಯನ್ನು 1986ರಲ್ಲಿ ಖರೀದಿಸಿದ್ದರು. ರೆಡ್ಡಿ ಅವರಿಗೆ ಸುಧನ್ವ ರೆಡ್ಡಿ,



ಗುರುವ ರೆಡ್ಡಿ ಹಾಗೂ ಉಮೇಧ ರೆಡ್ಡಿ ಎಂಬ ಮೂವರು ಗಂಡು ಮಕ್ಕಳು. ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ ಕಾತ್ಯಾಯಿನಿ ಸೇರಿ ಐವರು ಪುತ್ರಿಯರು. ಸುಧನ್ವ ರೆಡ್ಡಿಯ ಪುತ್ರರಾದ ಸಿದ್ಧಾರ್ಥ ಪಿ.ಎಸ್.ರೆಡ್ಡಿ, ವಿಕ್ರಮ್ ಪಿ.ಎಸ್.ರೆಡ್ಡಿ ಆರೋಪಿಗಳು.

ನಮ್ಮ ಮೆಟ್ರೊ ಕಾಮಗಾರಿಗಾಗಿ ಮೆಟ್ರೊ ನಿಗಮವು ಈ ಜಾಗವನ್ನು ಸ್ವಾಧೀನಪಡಿಸಿಕೊಂಡು ₹33 ಕೋಟಿ ಪರಿಹಾರ ಮೊತ್ತ ಮಂಜೂರು ಮಾಡಿತ್ತು. ಈ ಪರಿಹಾರ ಮೊತ್ತವು ಎಂಟು ಮಕ್ಕಳಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬುದು ಅರ್ಜಿದಾರರ ವಾದ.

ಆದಾಗ್ಯೂ, ಹಿರಿಯ ಸಹೋದರ ಸುಧನ್ವ ರೆಡ್ಡಿ ಮತ್ತು ಇಬ್ಬರು ಪುತ್ರರು ₹33 ಕೋಟಿಯನ್ನು ತಾವೇ ಲಪಟಾಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದರು. ಗ್ರಾಮ ಲೆಕ್ಕಿಗ ನರಸಿಂಹಯ್ಯಗೆ ಲಂಚ ನೀಡಿ 2021ರಲ್ಲಿ ನಕಲಿ ವಂಶ ವೃಕ್ಷ ಸೃಷ್ಟಿಸಿದ್ದರು. ಈ ವಂಶ ವೃಕ್ಷದ ಪ್ರಕಾರ, ಯಲ್ಲಪ್ಪ ರೆಡ್ಡಿ ಮೂವರು ಗಂಡು ಮಕ್ಕಳನ್ನಷ್ಟೇ ಹೊಂದಿದ್ದಾರೆ.

ಇದಲ್ಲದೆ, ಆರೋಪಿಗಳು 2005ರಲ್ಲೇ ಆಸ್ತಿ ವಿಭಜನೆ ಪತ್ರ ಸಿದ್ಧಪಡಿಸಿದ್ದರು. ಇದರ ಪ್ರಕಾರ, ಯಲ್ಲಪ್ಪ ರೆಡ್ಡಿ ತಮ್ಮ ಆಸ್ತಿಯನ್ನು ಸಿದ್ಧಾರ್ಥ್ ಪಿ.ಎಸ್.ರೆಡ್ಡಿ ಮತ್ತು ವಿಕ್ರಮ್ ಪಿ.ಎಸ್.ರೆಡ್ಡಿ, ಗುರುವಾ ರೆಡ್ಡಿ ಮತ್ತು ಉಮೇಧಾ ರೆಡ್ಡಿ ಅವರಿಗೆ ಸಮಾನವಾಗಿ ಹಂಚಿದ್ದರು. ಈ ದಾಖಲೆಗಳ ಆಧಾರದಲ್ಲಿ ಸಹೋದರರು ಮೆಟ್ರೊ ನಿಗಮದಿಂದ ಪರಿಹಾರ ಪಡೆದಿದ್ದರು. ಯಲ್ಲಪ್ಪ ರೆಡ್ಡಿ ಅವರಿಗೆ ಐವರು ಪುತ್ರಿಯರಿದ್ದಾರೆ ಎಂಬ ಉಲ್ಲೇಖ ಆಸ್ತಿ ವಿಭಜನೆ ಪತ್ರದಲ್ಲಿದೆ. ಆದರೆ, ಮೆಟ್ರೊ ನಿಗಮ ಸೂಕ್ತ ವಂಶವೃಕ್ಷದ ದಾಖಲೆ ಪಡೆಯದೆಯೇ ಪರಿಹಾರ ಮಂಜೂರು ಮಾಡಿತ್ತು.

ಯೂಟರ್ನ್ ಹೊಡೆದ ಅಪ್ಪ

ಈ ನಡುವೆ, ಈ ಪರಿಹಾರವನ್ನು ತನ್ನ ಮೊದಲ ಪತ್ನಿಯ ಮಕ್ಕಳೊಂದಿಗೆ (ಪ್ರಕರಣದ ಆರೋಪಿಗಳು) ಹಂಚಿಕೊಳ್ಳುವುದಾಗಿ ಸುಧನ್ವ ರೆಡ್ಡಿ ಹೇಳಿದ್ದರು. ಇದಕ್ಕೆ ಇಬ್ಬರು ಮಕ್ಕಳು ಒಪ್ಪಿರಲಿಲ್ಲ. ತನಗೂ ಸಮಾನ ಪಾಲು ನೀಡಬೇಕು ಎಂದು ಆಗ್ರಹಿಸಿ ಎರಡನೇ ಪತ್ನಿಯ ಮಗ ಪ್ರಜ್ವಲ್ ರೆಡ್ಡಿ ಪ್ರಕರಣ ದಾಖಲಿಸಿದ್ದರು. ಪರಿಹಾರ ಮೊತ್ತ ಸಿಕ್ಕದ ಕಾರಣ ಕುಪಿತಗೊಂಡ ಸುಧನ್ವ ರೆಡ್ಡಿ 2005ರಲ್ಲಿ ನಕಲಿ ಆಸ್ತಿ ವಿಭಜನೆ ಪತ್ರ ಸೃಷ್ಟಿಸಿದ್ದನ್ನು ಬಹಿರಂಗಪಡಿಸಿದ್ದರು. ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ವಿಭಜನೆ ಪತ್ರ ಮಾಡಲಾಗಿದೆ ಎಂದು ಆರೋಪಿಸಿ ಮೆಟ್ರೊ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರವನ್ನೂ ಬರೆದಿದ್ದರು. ಇದರ ಬೆನ್ನಲ್ಲೇ, ಪರಿಹಾರ ಮೊತ್ತ ಪಾವತಿಯನ್ನು ಕೆಐಎಡಿಬಿ ತಡೆ ಹಿಡಿದಿತ್ತು. ₹5.9 ಕೋಟಿಯನ್ನು ವಿಚಾರಣಾ ನ್ಯಾಯಾಲಯದಲ್ಲಿ ಠೇವಣಿ ಇಟ್ಟಿತ್ತು. ಕೆಐಎಡಿಬಿ ಈಗಾಗಲೇ ₹27 ಕೋಟಿಯನ್ನು ಸಿದ್ಧಾರ್ಥ ರೆಡ್ಡಿ, ವಿಕ್ರಮ್ ರೆಡ್ಡಿ, ಉಮೇಧ ರೆಡ್ಡಿ ಹಾಗೂ ಅಶೋಕ ರೆಡ್ಡಿ ಅವರಿಗೆ ವಿತರಿಸಿದೆ.

ಡಿನೋಟಿಫಿಕೇಷನ್: ಅಧಿಸೂಚನೆ ಹಿಂಪಡೆಯಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನ ಪಡಿಸಿಕೊಂಡಿದ್ದ ಜಮೀನುಗಳನ್ನು ಭೂಸ್ವಾಧೀನ ಕಾಯ್ದೆ 1894ರ ಕಲಂ48(1) ರಡಿ ಭೂಸ್ವಾಧೀನದಿಂದ ಕೈಬಿಟ್ಟಿರುವ 29 ಪ್ರಕರಣಗಳ ಅಧಿಸೂಚನೆಯನ್ನು ಹಿಂಪಡೆಯಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಅಲ್ಲದೇ, ಈ ಪ್ರಕರಣಗಳಲ್ಲಿ ಎಲ್ಲಾ ಬಾಧಿತ ವ್ಯಕ್ತಿಗಳಿಗೆ ನೋಟಿಸ್ ನೀಡಿ, ವಿವರಣೆ ಪಡೆದು ಇದಕ್ಕೆ ಕಾರಣಕರ್ತರಾಗಿರುವ ಅಧಿಕಾರಿ, ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಂಪುಟ ನಿರ್ಧರಿಸಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.


2009–2010 ರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕುಗಳ ವಿವಿಧ ಹೋಬಳಿಗಳಲ್ಲಿ ಭೂಸ್ವಾಧೀನ ಕೈಬಿಟ್ಟು ಅಧಿಸೂಚನೆ ಹೊರಡಿಸಲಾಗಿತ್ತು.

ಕಾಂಗ್ರೆಸ್ ಕಚೇರಿಗೆ ಜಮೀನು: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ವೀರಭದ್ರನ ಪಾಳ್ಯ ಗ್ರಾಮದ ಸರ್ವೆ ನಂಬರ್ 66 ರಲ್ಲಿ 15 ಗುಂಟೆ ಖರಾಬು ಜಮೀನನ್ನು ಕಾಂಗ್ರೆಸ್ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಗುತ್ತಿಗೆ ನೀಡಲು ಸಂಪುಟ ತೀರ್ಮಾನಿಸಿದೆ.

ಕೋಲಾರ, ಚಿಂತಾಮಣಿ: 126 ಕೆರೆಗಳಿಗೆ ನೀರು

ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಒಟ್ಟು 126 ಕರೆಗಳಿಗೆ ಬೆಂಗಳೂರು ನಗರದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ತುಂಬಿಸುವ ಯೋಜನೆಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ಯೋಜನೆಯ ಅಂದಾಜು ವೆಚ್ಚ ₹128 ಕೋಟಿ. 5 ವರ್ಷಗಳ ಪೋಷಣೆ ಮತ್ತು ನಿರ್ವಹಣೆಯ ಏತ ನೀರಾವರಿ ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.



ಸಂಕ್ಷಿಪ್ತ ಸುದ್ದಿ

ಜುಲೈ 21ರಿಂದ ಅತಿಥಿ ಉಪನ್ಯಾಸಕರ ಪ್ರತಿಭಟನೆ



ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡುವುದರ ಜೊತೆಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜುಲೈ 21ರಿಂದ ಗದಗ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಹನಮಂತಗೌಡ ಆರ್. ಕಲ್ಮನಿ, 'ವರ್ಷದ 12 ತಿಂಗಳ ವೇತನ ನೀಡಬೇಕು. ಪ್ರಸಕ್ತ ಶೈಕ್ಷಣಿಕ ಸಾಲಿಗೆ ನೇಮಕಾತಿ ಮಾಡಿಕೊಳ್ಳುವ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಕೈಬಿಡಬೇಕು. ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳ ಪ್ರಕಾರ ಅರ್ಹತೆಯ ಮಾನದಂಡ ಪರಿಗಣಿಸಬೇಕು. ಯುಜಿಸಿ ನಿಯಮಗಳಂತೆ ವೇತನ ನಿಗದಿಪಡಿಸಬೇಕು. 2024–25ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅತಿಥಿ ಉಪನ್ಯಾಸಕರನ್ನು 2025–26ನೇ ಶೈಕ್ಷಣಿಕ ಸಾಲಿಗೆ ಮುಂದುವರಿಸಬೇಕು' ಎಂದು ಆಗ್ರಹಿಸಿದರು.

ಪ್ರತಿಭಟನೆ ಇಂದು

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ಸಮುದಾಯಗಳು ಉಳುಮೆ ಮಾಡುತ್ತಿರುವ ಜಾಗವನ್ನು ಬಗರ್ ಹುಕುಂ ಅಡಿ ಮಂಜೂರು ಮಾಡುವ ಅರ್ಜಿಗಳನ್ನು ಕಾಲಮಿತಿಯೊಳಗೆ ಇತ್ಯರ್ಥಗೊಳಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಜುಲೈ 18ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, 'ರಾಜ್ಯ ಸರ್ಕಾರ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ಮಾಡಿದೆ. ಆದರೆ ಇದನ್ನು ಮಾನ್ಯ ಮಾಡದ ಕಂದಾಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಹೈಕೋರ್ಟ್‌ನಲ್ಲಿ ಪಿಟಿಸಿಎಲ್ ಪ್ರಕರಣಗಳು ವಜಾಗೊಳ್ಳುತ್ತಿವೆ. ರಾಜ್ಯ ಸರ್ಕಾರ ನುರಿತ ವಕೀಲರನ್ನು ನೇಮಿಸಿ, ಸುಪ್ರೀಂ ಕೋರ್ಟ್‌ನಲ್ಲಿ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಬೇಕು' ಎಂದು ಒತ್ತಾಯಿಸಿದರು.

'ಬೆಂಗಳೂರು ನಗರ ಜಿಲ್ಲೆ ಪೂರ್ವ ತಾಲ್ಲೂಕಿನ ಕಾಡುಗೋಡಿ ಪ್ಲಾಂಟೇಷನ್‌ನಲ್ಲಿ ಪರಿಶಿಷ್ಟ ಜಾತಿಯವರಿಗೆ ಭೂಮಿ ಮಂಜೂರಾಗಿದೆ. ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಪರಿಶಿಷ್ಟ ಜಾತಿಯವರನ್ನು ಅಲ್ಲಿಂದ ಒಕ್ಕಲೆಬ್ಬಿಸುತ್ತಿದ್ದಾರೆ. ಇದನ್ನು ಕೂಡಲೇ ನಿಲ್ಲಿಸಿ, ಒಕ್ಕಲೆಬ್ಬಿಸಿದ ಅಧಿಕಾರಿಗಳ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಬೇಕು' ಎಂದರು.

ಕೃಷಿ ಮಾಧ್ಯಮ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ಹಳೆಯ ವಿದ್ಯಾರ್ಥಿಗಳ ಸಂಘ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವತಿಯಿಂದ 'ಹೊಂಬಾಳೆ ಸಂಹಿತ ಹರಿಣಿಕುಮಾರ್ ಕೃಷಿ ಮಾಧ್ಯಮ ಪ್ರಶಸ್ತಿ-2025'ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಮುದ್ರಣ ಮತ್ತು ವಿದ್ಯುನ್ಮಾನ ಪತ್ರಕರ್ತರು, ನಿರೂಪಕರು, ಅಧಿಕಾರಿಗಳು ಮತ್ತು ವಿಸ್ತರಣಾ ಕಾರ್ಯಕರ್ತರು ಅರ್ಜಿ ಸಲ್ಲಿಸಬಹುದು.

ಪ್ರಶಸ್ತಿಯು ಪ್ರಮಾಣಪತ್ರ ಹಾಗೂ ₹10 ಸಾವಿರ ನಗದು ಬಹುಮಾನ ಒಳಗೊಂಡಿದೆ. ಅರ್ಜಿಯನ್ನು ಹಳೆಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು-560024 ಇಲ್ಲಿಗೆ ಆಗಸ್ಟ್ 14ರೊಳಗೆ ಸಲ್ಲಿಸಬೇಕು. ವಿವರಗಳಿಗೆ ದೂರವಾಣಿ ಸಂ.080-23410754, alumniuasb83@gmail.com, ಜಾಲತಾಣ: www.alumniuasb.in ಸಂಪರ್ಕಿಸಬಹುದು ಎಂದು ಕಾರ್ಯಕಾರಿಣಿ ಸದಸ್ಯ ಕೆ.ಶಿವರಾಮು ತಿಳಿಸಿದ್ದಾರೆ.

'ಸೈಬರ್ ಅಪರಾಧ ತಡೆಗೆ ತಂತ್ರಜ್ಞಾನ'

ಬೆಂಗಳೂರು: 'ಪೊಲೀಸ್ ಅಧಿಕಾರಿ ಕೊಠಡಿ ಅಥವಾ ಠಾಣೆಯಲ್ಲಿ ಕೂತು ಕೆಲಸ ಮಾಡಿದರೆ ಸಾಲದು. ಜನ ಸಾಮಾನ್ಯರ ಜೊತೆ ಬೆರೆಯಬೇಕು, ಜನಸ್ನೇಹಿ ಕೆಲಸಗಳನ್ನು ಮಾಡಿದಾಗ ಮಾತ್ರ ನಮ್ಮ ಕೆಲಸಕ್ಕೆ ಮಾನ್ಯತೆ ದೊರೆಯಲಿದೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹೇಳಿದರು.

ಗುರುವಾರ ಪ್ರೆಸ್ ಕ್ಲಬ್‌ನಲ್ಲಿ ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ಸೈಬರ್ ಅಪರಾಧ ತಡೆಯಲು ಹೊಸ ತಂತ್ರಜ್ಞಾನಗಳನ್ನು ಹಂತ ಹಂತವಾಗಿ ಅಳವಡಿಸಿಕೊಳ್ಳುವುದರ ಜತೆಗೆ ಸುಳ್ಳು ಸುದ್ದಿ ಹಬ್ಬಿಸುವ ಜಾಲತಾಣಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ. ನಗರದಲ್ಲಿ ಜನಸಾಮಾನ್ಯರ ಮಾನಹಾನಿ, ಆಸ್ತಿ ಪಾಸ್ತಿಗಳ ರಕ್ಷಣೆ ಮಾಡಲು ಉತ್ತಮ ತಂತ್ರಜ್ಞಾನ ಸೇರಿದಂತೆ 6 ಲಕ್ಷ ಸಿ.ಸಿ.ಟಿ.ವಿ. ಕ್ಯಾಮೆರಾಗಳಿಗೆ ಜಿಯೋಟ್ಯಾಗ್ ಅಳವಡಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಸಾಮಾಜಿಕ ಜಾಲತಾಣ ಹಾಗೂ ಸೈಬರ್ ಅಪರಾಧಕ್ಕೆ ನೇರ ಸಂಪರ್ಕವಿದೆ. ಸಂಚಾರ ಸಮಸ್ಯೆಗೆ ಈಗಾಗಲೇ ಬಿಬಿಎಂಪಿ ಆಯುಕ್ತರು ಸೇರಿ ಅನೇಕ ಅಧಿಕಾರಿಗಳ ಜತೆ ಚರ್ಚಿಸಿದ್ದು, ಮುಂದಿನ ದಿನಗಳಲ್ಲಿ ಪರಿಹಾರಗಳನ್ನು ಕಂಡುಕೊಳ್ಳಲಾಗುವುದು. ಬೆಂಗಳೂರು ದಿನೇ ದಿನೇ ಬೆಳೆಯುತ್ತಿದ್ದು, ಪೊಲೀಸ್ ಠಾಣೆಗಳ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಒತ್ತಡದಿಂದಾಗಿ ಪೊಲೀಸ್ ಅಧಿಕಾರಿಗಳು ಕೆಲವು ಪ್ರಮುಖ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಸೂಕ್ತ ಸಾಕ್ಷ್ಯಾಧಾರ, ದಾಖಲೆ ಸಂಗ್ರಹಿಸಿ ನ್ಯಾಯಾಲಯಕ್ಕೆ ಒಪ್ಪಿಸುವಲ್ಲಿ ವಿಫಲರಾಗುತ್ತಿದ್ದಾರೆ ಎಂದು ತಿಳಿಸಿದರು.

ವ್ಹೀಲಿ ಮಾಡುವವರ ಮೇಲೆ ನಿಗಾವಹಿಸಿದ್ದು, ವ್ಹೀಲಿಗಾಗಿ ದ್ವಿಚಕ್ರ ವಾಹನಗಳನ್ನು ವಿನ್ಯಾಸಗೊಳಿಸುವ ಗ್ಯಾರೇಜ್‌ಗಳ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ. ರೌಡಿ ಚಟುವಟಿಕೆಗಳು ನಿಯಂತ್ರಣದಲ್ಲಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರೆಸ್ ಕ್ಲಬ್ ಅಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ಶಿವಕುಮಾರ ಬೆಳ್ಳಿತಟ್ಟೆ ಇದ್ದರು.

ಐಪಿಎಸ್ ಅಧಿಕಾರಿಗಳಿಗೆ ರಾಜ್ಯ ಅಚ್ಚುಮೆಚ್ಚು

'ರಾಜ್ಯಕ್ಕೆ ಐಪಿಎಸ್, ಐಎಎಸ್ ಅಥವಾ ಕೇಂದ್ರ ಸರ್ಕಾರದಿಂದ ಆಯ್ಕೆಯಾಗಿ ಬರುವ ಯಾವುದೇ ಅಧಿಕಾರಿಗಳಿಗೆ ಮೊದಲು ಆಯಾ ರಾಜ್ಯಗಳ ಭಾಷೆ ಸಂಸ್ಕೃತಿಯ ಬಗ್ಗೆ ಗೌರವ ಇರಬೇಕು. ನನ್ನ ಜೊತೆ ಬಂದ ಅಧಿಕಾರಿಗಳು ನಿವೃತ್ತಿ ಹೊಂದಿದ್ದಾರೆ. ಆದರೆ ಅವರು ಯಾರೂ ಕರ್ನಾಟಕವನ್ನು ಬಿಟ್ಟುಹೋಗಿಲ್ಲ. ನನ್ನ ಮಗಳು 10ನೇ ತರಗತಿಯಲ್ಲಿ ಕನ್ನಡ ವಿಷಯದಲ್ಲಿ ಶೇಕಡ 99 ಅಂಕ ಪಡೆದಿದ್ದಾಳೆ' ಎಂದು ಕನ್ನಡ ಭಾಷೆಯ ಬಗ್ಗೆ ಸೀಮಂತ್ ಕುಮಾರ್ ಅವರು ಹೆಮ್ಮೆ ವ್ಯಕ್ತಪಡಿಸಿದರು.

₹110 ಕೋಟಿ ವಂಚನೆ ಆರೋಪ: ಇ.ಡಿ ದಾಳಿ

ಸಾವಿರಾರು ಠೇವಣಿದಾರರಿಗೆ ಹಣ ವಾಪಸ್ ಮಾಡದ ಶುಶ್ರುತಿ ಸೌಹಾರ್ದ ಬ್ಯಾಂಕ್

• ಜಯಸಿಂಹ ಆರ್.

ಬೆಂಗಳೂರು: ಠೇವಣಿದಾರರ ₹110 ಕೋಟಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನಗರದ ಶುಶ್ರುತಿ ಸೌಹಾರ್ದ ಬ್ಯಾಂಕ್‌ನ ವಿವಿಧ ಶಾಖೆಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ದಾಳಿ ನಡೆಸಿದ್ದಾರೆ.

ನಗರದ ವಿಲ್ಸನ್ ಗಾರ್ಡನ್, ಅಂದ್ರಹಳ್ಳಿ, ರಾಜಗೋಪಾಲನಗರ, ಚಿಕ್ಕಬಾಣಾವರದಲ್ಲಿನ ಬ್ಯಾಂಕ್‌ನ ಶಾಖೆಗಳು, ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮೈಲನಹಳ್ಳಿಯ ಶ್ರೀ ಲಕ್ಷ್ಮೀ ಸೌಹಾರ್ದ ಬ್ಯಾಂಕ್‌ಗಳ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿ, ಶೋಧ ಕಾರ್ಯ ಆರಂಭಿಸಿದ್ದಾರೆ.

ಬ್ಯಾಂಕ್‌ನ ಅಧ್ಯಕ್ಷ ಎನ್.ಶ್ರೀನಿವಾಸಮೂರ್ತಿ, ನಿರ್ದೇಶಕ ಮತ್ತು ಶ್ರೀನಿವಾಸಮೂರ್ತಿ ಅವರ ಪತ್ನಿ ಧರಣಿದೇವಿ, ಕಾರ್ಯಕಾರಿ ನಿರ್ದೇಶಕ ಮೋಕ್ಷತಾರಾ, ಲಕ್ಷ್ಮೀ ಸೌಹಾರ್ದ ಬ್ಯಾಂಕ್‌ನ ನಿರ್ದೇಶಕ ರಶ್ಮಿ ಅವರ ಮನೆಗಳೂ ಸೇರಿ ಒಟ್ಟು 14 ಕಡೆ ದಾಳಿ ನಡೆದಿದೆ. ಅಂದ್ರಹಳ್ಳಿಯಲ್ಲಿ ಇರುವ ಶುಶ್ರುತಿ ಶೈಕ್ಷಣಿಕ ಟ್ರಸ್ಟ್‌ನ ಕಚೇರಿ, ಶಾಲೆ ಮತ್ತು ನರ್ಸಿಂಗ್ ಕಾಲೇಜಿನ ಕಚೇರಿಗಳಲ್ಲೂ ಶೋಧ ನಡೆದಿದೆ.

ಕಚೇರಿಗಳಲ್ಲಿ ಇದ್ದ ಸಿಬ್ಬಂದಿ, ಶ್ರೀನಿವಾಸಮೂರ್ತಿ ಅವರ ಆಪ್ತರು, ಚಾಲಕರು ಮತ್ತು ರಶ್ಮಿ ಅವರನ್ನು ಪ್ರಶ್ನಿಸಲಾಗಿದೆ. ಹಲವು ಕಾಗದ ಪತ್ರಗಳು ಮತ್ತು ಹಾರ್ಡ್‌ಡಿಸ್ಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. 100 ಎಕರೆಗೂ ಹೆಚ್ಚು ಕೃಷಿ ಜಮೀನಿಗೆ ಸಂಬಂಧಿಸಿದ ಕಾಗದ ಪತ್ರಗಳು, ಮಾರಾಟಪತ್ರಗಳು ಪತ್ತೆಯಾಗಿವೆ ಎಂದು ಮೂಲಗಳು ಖಚಿತಪಡಿಸಿವೆ.

ಠೇವಣಿದಾರರಿಗೆ ಅತಿ ಹೆಚ್ಚಿನ ಬಡ್ಡಿಯ ಆಮಿಷ ಒಡ್ಡಿ, ₹200 ಕೋಟಿಗೂ ಹೆಚ್ಚು ಠೇವಣಿ ಸಂಗ್ರಹಿಸಲಾಗಿತ್ತು. ಆದರೆ 2021ರಿಂದ 2022ರ ಅವಧಿಯಲ್ಲಿ ಠೇವಣಿದಾರರಿಗೆ ಬಡ್ಡಿ ಪಾವತಿ ಮಾಡಿರಲಿಲ್ಲ. ಈ ಸಂಬಂಧ ಪೊಲೀಸರಲ್ಲಿ ದೂರುಗಳು ದಾಖಲಾಗಿದ್ದವು. ಠೇವಣಿದಾರರ ಹಣವನ್ನು ಬ್ಯಾಂಕ್‌ನ ಆಡಳಿತ ಮಂಡಳಿ ಸದಸ್ಯರು ಅಕ್ರಮವಾಗಿ ಬಳಸಿಕೊಂಡಿರುವುದು ತನಿಖೆಯಲ್ಲಿ ಗೊತ್ತಾಗಿತ್ತು.

ನಂತರ ಕೇಂದ್ರ ಅಪರಾಧ ದಳ ತನಿಖೆ ಆರಂಭಿಸಿತ್ತು. ಶ್ರೀನಿವಾಸ ಮೂರ್ತಿ, ಧರಣಿದೇವಿ ಮತ್ತು ಮೋಕ್ಷತಾರಾ ಅವರನ್ನು ಬಂಧಿಸಿದ್ದ ಸಿಸಿಬಿ ಪೊಲೀಸರು, ಠೇವಣಿದಾರರಿಗೆ ₹110 ಕೋಟಿ ವಂಚಿಸಿರುವುದನ್ನು ಪತ್ತೆ ಮಾಡಿದ್ದರು. 2024ರಲ್ಲಿ ಇ.ಡಿಯು ಇಸಿಐಆರ್ ದಾಖಲಿಸಿ, ತನಿಖೆ ಆರಂಭಿಸಿತ್ತು.

ಬೇರೆ ಹೆಸರಿನಲ್ಲಿ ಬ್ಯಾಂಕ್‌ಗಳು: ಶುಶ್ರುತಿ ಬ್ಯಾಂಕ್‌ನ ಠೇವಣಿದಾರರ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲು ಶ್ರೀ ಸೌಹಾರ್ದ ಬ್ಯಾಂಕ್ ಮತ್ತು ಶ್ರೀ ಲಕ್ಷ್ಮೀ ಸೌಹಾರ್ದ ಬ್ಯಾಂಕ್‌ಗಳನ್ನು ಆರೋಪಿಗಳು ಸ್ಥಾಪಿಸಿದ್ದರು. ಈ ಎರಡೂ ಬ್ಯಾಂಕ್‌ಗಳಲ್ಲಿ ತಮ್ಮ ಆಪ್ತರನ್ನು ಮುಖ್ಯಸ್ಥರು ಮತ್ತು ನಿರ್ದೇಶಕರನ್ನಾಗಿಸಿದ್ದರು ಎಂಬುದು ತನಿಖೆಯಿಂದ ಪತ್ತೆಯಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಈವರೆಗೆ ಶ್ರೀನಿವಾಸಮೂರ್ತಿ ಮತ್ತು ಅವರ ಕುಟುಂಬದವರನ್ನು ಮಾತ್ರ ವಿಚಾರಣೆಗೆ ಒಳಪಡಿಸಿದ್ದ ಇ.ಡಿ ಅಧಿಕಾರಿಗಳು, ಇದೇ ಮೊದಲ ಬಾರಿಗೆ ಶ್ರೀ ಲಕ್ಷ್ಮೀ ಸೌಹಾರ್ದ ಬ್ಯಾಂಕ್‌ನ ನಿರ್ದೇಶಕಿ ರಶ್ಮಿ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. 'ಶ್ರೀನಿವಾಸಮೂರ್ತಿ ಅವರ ಕೃಷಿ ಜಮೀನುಗಳ ಖರೀದಿ ಮತ್ತು ಮಾರಾಟ ಪ್ರಕ್ರಿಯೆಗಳನ್ನು ರಶ್ಮಿ ಅವರು ನಡೆಸಿದ್ದಾರೆ. ಕೆಲವು ಆಸ್ತಿಗಳು ಆಕೆಯ ಹೆಸರಿನಲ್ಲಿ ಇರುವುದು ಪತ್ತೆಯಾಗಿದೆ' ಎಂದು ತಿಳಿಸಿವೆ.

15,000
ವಂಚನೆಗೆ ಒಳಗಾದವರು. ಅವರಲ್ಲಿ ಬಿಇಎಲ್‌ನ ನಿವೃತ್ತ ನೌಕರರು, ಮೈಕೊ–ಬಾಷ್‌ನ ನಿವೃತ್ತ ನೌಕರರು, ಪೀಣ್ಯ ನೆಲ ಹಂತ, ರಾಜಗೋಪಾಲನಗರ, ಹೆಗ್ಗನಹಳ್ಳಿ ಸುತ್ತಮುತ್ತಲಿನ ಸಿದ್ಧಉಡುಪು ಕಾರ್ಖಾನೆಗಳ ನೌಕರರೇ ಹೆಚ್ಚು

₹110 ಕೋಟಿ
ಠೇವಣಿದಾರರಿಗೆ ವಂಚಿಸಿದ ಮೊತ್ತ

ಮುಟ್ಟುಗೋಲು ತಪ್ಪಿಸಲು ಮಾರಾಟ

'ಸಿಸಿಬಿ ಪ್ರಕರಣ ದಾಖಲಿಸಿದ ನಂತರ ಆರೋಪಿಗಳು ಹಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ. ಆಸ್ತಿಗಳ ಮುಟ್ಟುಗೋಲನ್ನು ತಪ್ಪಿಸುವ ಉದ್ದೇಶದಿಂದಲೇ ಮಾರಾಟ ಮಾಡಲಾಗಿದೆ' ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

'ಹೀಗೆ ಮಾರಾಟ ಮಾಡಿರುವ ಹಲವು ನಿವೇಶನಗಳು, ಕೃಷಿ ಜಮೀನು, ಕೈಗಾರಿಕಾ ನಿವೇಶನಗಳ ವಿವರಗಳನ್ನು ಪತ್ತೆ ಮಾಡಲಾಗಿದೆ. ಅವುಗಳು ಬೇರೆಯವರ ಹೆಸರಿನಲ್ಲಿ ಇದ್ದರೂ, ಅವುಗಳ ಕಾಗದ ಪತ್ರಗಳು ಶೃತಿ ಬ್ಯಾಂಕ್ ಮತ್ತು ಲಕ್ಷ್ಮೀ ಬ್ಯಾಂಕ್‌ಗಳಲ್ಲಿ ಪತ್ತೆಯಾಗಿವೆ. ಈ ಆಸ್ತಿ ಮಾರಾಟದಲ್ಲಿ ಪಾತ್ರ ವಹಿಸಿದ್ದ ಮಧ್ಯವರ್ತಿಗಳು, ಆ ಕಾಗದ ಪತ್ರಗಳಲ್ಲಿ ಇರುವ ವ್ಯಕ್ತಿಗಳ ವಿಚಾರಣೆಗೆ ಸಿದ್ಧತೆ ನಡೆಸಲಾಗಿದೆ' ಎಂದು ಮಾಹಿತಿ ನೀಡಿವೆ.

ವಂಚನೆಯ ಮಾರ್ಗ

- ಶುಶ್ರುತಿ ಬ್ಯಾಂಕ್ ಠೇವಣಿದಾರರಿಂದ ಸಂಗ್ರಹಿಸಿದ ಹಣವನ್ನು ಶ್ರೀನಿವಾಸಮೂರ್ತಿ ಅವರ ಆಪ್ತರಿಗೆ, ಭದ್ರತೆ ಇಲ್ಲದೆ ಸಾಲ ನೀಡಲಾಗಿದೆ
- ಆ ಸಾಲ ವಸೂಲಾಗಿಲ್ಲ ಎಂದು ಉಲ್ಲೇಖಿಸಿ, ನಷ್ಟ ತೋರಿಸಲಾಗಿದೆ. ಆಪ್ತರಿಗೆ ನೀಡಿದ ಸಾಲಕ್ಕೆ ಪ್ರತಿಯಾಗಿ ಕೃಷಿ ಜಮೀನು, ನಿವೇಶನಗಳನ್ನು ಪಡೆದುಕೊಂಡಿದ್ದಾರೆ
- ವಾಸ್ತವದಲ್ಲಿ ಕೃಷಿ ಜಮೀನು ಮತ್ತು ನಿವೇಶನಗಳನ್ನು ಶ್ರೀನಿವಾಸ ಮೂರ್ತಿ ಖರೀದಿಸಿದ್ದು, ಹಣವನ್ನು ಸಾಲದ ರೂಪದಲ್ಲಿ ಅವರ ಆಪ್ತರಿಗೆ ನೀಡಲಾಗಿದೆ. ಅನಂತರ ಮಾರಾಟಗಾರರಿಗೆ ತಲುಪಿಸಲಾಗಿದೆ
- ಶುಶ್ರುತಿ ಬ್ಯಾಂಕ್‌ನ ಹಣವನ್ನು ಹೆಚ್ಚಿನ ದರದ ಬಡ್ಡಿಯಲ್ಲಿ ಶೃತಿ ಬ್ಯಾಂಕ್ ಮತ್ತು ಲಕ್ಷ್ಮೀ ಬ್ಯಾಂಕ್‌ಗೆ ಸಾಲ ನೀಡಲಾಗಿದೆ. ಈ ಎರಡೂ ಬ್ಯಾಂಕ್‌ಗಳು ಜಮೀನು ಮತ್ತು ಮನೆ ಅಡಮಾನ ಪಡೆದು ಸಾಲ ನೀಡಿವೆ
- ಸಾಲ ವಸೂಲಾಗಿಲ್ಲ ಎಂದು ತೋರಿಸಿ, ಜಮೀನು ಮತ್ತು ಮನೆಗಳನ್ನು ಹರಾಜು ಹಾಕಿವೆ. ಆ ಸ್ವತ್ತುಗಳನ್ನು ಶ್ರೀನಿವಾಸಮೂರ್ತಿ ಅವರೇ ಖರೀದಿಸಿದ್ದಾರೆ
- ಈ ರೀತಿ ಒಟ್ಟು 22 ಸ್ವತ್ತುಗಳನ್ನು ಖರೀದಿಸಲಾಗಿದೆ. ಇವುಗಳಲ್ಲಿ ಕೆಲವು ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ರಾಜ್ಯ ಸರ್ಕಾರ 2024ರಲ್ಲೇ ಆದೇಶಿಸಿತ್ತು. ಈಚೆಗೆ 55 ಎಕರೆಯಷ್ಟು ಕೃಷಿ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು

ರೌಡಿ ಶೀಟರ್ ಕೊಲೆ: ಕಸ್ಟಡಿಗೆ ಐವರು

ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್‌ಗೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ


ಮದನ್ | ಸ್ಯಾಮ್ಯುಯೆಲ್ | ಪ್ರದೀಪ್ | ಕಿರಣ್ | ವಿಮಲ್

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಸಂಬಂಧ ಐವರು ಆರೋಪಿಗಳನ್ನು ಭಾರತಿನಗರ ಠಾಣೆಯ ಪೊಲೀಸರು ಬಂಧಿಸಿದ್ದು, ವಿಚಾರಣೆಗಾಗಿ 10 ದಿನ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಆರೋಪಿಗಳಾದ ಕಿರಣ್ (25), ಮದನ್, ಸ್ಯಾಮ್ಯುಯೆಲ್, ಪ್ರದೀಪ್, ವಿಮಲ್‌ನನ್ನು ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ ಪೊಲೀಸರು, ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕಿದ್ದು, ತಮ್ಮ ಕಸ್ಟಡಿಗೆ ನೀಡುವಂತೆ ಪೊಲೀಸರು ಮನವಿ ಮಾಡಿದರು. ನಂತರ ಪೊಲೀಸರ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದರು. ತಲೆಮರೆಸಿಕೊಂಡಿರುವ ಜಗದೀಶ್ ಅಲಿಯಾಸ್ ಜಗ್ಗ ಸೇರಿದಂತೆ ಮಾಂದ ಪತ್ತೆಗಾಗಿ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ.

ಶಾಸಕರಿಗೆ ನೋಟಿಸ್ ಜಾರಿ: ಪ್ರಕರಣ ಸಂಬಂಧ ಪೊಲೀಸರು ಶಾಸಕ ಬೈರತಿ ಬಸವರಾಜ್ ಅವರಿಗೆ ನೋಟಿಸ್ ಜಾರಿ ಮಾಡಿ, ಎರಡು ದಿನಗಳೊಳಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಖುದ್ದು ಹೆಣ್ಣೂರು ಬಳಿಯ ಬೈರತಿಯಲ್ಲಿರುವ ಬೈರತಿ ಬಸವರಾಜ್ ಮನೆಗೆ ಹೋಗಿ ನೋಟಿಸ್ ಪ್ರತಿ ತಲುಪಿಸಿದರು. ಪುಲಕೇಶಿನಗರ ಠಾಣೆ ಇನ್‌ಸ್ಪೆಕ್ಟರ್ ಗೋವಿಂದರಾಜು ಮತ್ತು ಸಿಬ್ಬಂದಿ ಬೈರತಿ ಬಸವರಾಜ್ ಪುತ್ರ ನೀರಜ್ ಅವರಿಗೆ ನೋಟಿಸ್‌ನ ಪ್ರತಿ ನೀಡಿದ್ದಾರೆ ಎಂದು ಗೊತ್ತಾಗಿದೆ.

'ಬೈರತಿ ಬಸವರಾಜ್ ಈ ಪ್ರಕರಣದಲ್ಲಿ ಐದನೇ ಆರೋಪಿ. ಈ ವಿಚಾರಣೆಗೆ ಬಂದರೆ ಕೆ.ಜೆ.ಹಳ್ಳಿ ಉಪ ವಿಭಾಗದ ಎಸಿಪಿ ಪ್ರಕಾಶ್ ರಾಥೋಡ್ ಅವರು ವಿಚಾರಣೆ ನಡೆಸಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಶಿವು, ಜಗದೀಶ್ ಆತ್ಮೀಯರಾಗಿದ್ದರು. 2023ರಲ್ಲಿ ಕಿತ್ತಗನೂರು ಬಳಿ ಶಿವು ಜಮೀನು ಖರೀದಿಸಿದ್ದರು. ನಂತರ, ಜಮೀನು ವಿಚಾರಕ್ಕೆ ಶಿವಪ್ರಕಾಶ್ ಹಾಗೂ ಜಗದೀಶ್ ಮಧ್ಯೆ ವೈಮನಸ್ಸು ಉಂಟಾಗಿತ್ತು. ಅದೇ ಕಾರಣಕ್ಕೆ ಕೊಲೆ ಮಾಡಲಾಗಿದೆ ಎಂದು ಬಂಧಿತ ಆರೋಪಿಗಳು ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಬೈರತಿ ಬಸವರಾಜ್, ಜಗದೀಶ್ ಅವರು ಕೆಲವು ಕಾರ್ಯಕ್ರಮಗಳಲ್ಲಿ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. ಕುಂಭಮೇಳದಲ್ಲೂ ಒಟ್ಟಿಗೆ ಇರುವ ಫೋಟೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ. ಆ ಫೋಟೊಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ವಿಚಾರಣೆ ವೇಳೆ ಎಲ್ಲ ಫೋಟೊಗಳನ್ನು ತೋರಿಸಿ ಪ್ರಶ್ನೆ ಕೇಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

'ಬೈರತಿ ವಿರುದ್ಧ ದೂರು ನೀಡಿಲ್ಲ'

'ಬೈರತಿ ಬಸವರಾಜ್ ವಿರುದ್ಧ ದೂರು ನೀಡಿಲ್ಲ. ಪೊಲೀಸರೇ ಹೆಸರು ಸೇರಿಸಿಕೊಂಡಿದ್ದಾರೆ. ನನ್ನ ಮಗ ಈ ಹಿಂದೆ ನೀಡಿದ್ದ ದೂರು ಆಧರಿಸಿ ಹೆಸರು ಹಾಕಿಕೊಂಡಿದ್ದಾರೆ' ಎಂದು ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ಹೇಳಿದ್ದಾರೆ.

'ಕತ್ತಿಗನೂರು ಬಳಿ ಖರೀದಿಸಿದ್ದ ಜಾಗದ ವಿಚಾರವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಬೈರತಿ ಬಸವರಾಜ್ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ' ಎಂದು ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ದೂರು ನೀಡಿದ್ದರು. ದೂರು ಆಧರಿಸಿ ಭಾರತಿನಗರ ಠಾಣೆಯ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. 'ನನಗೆ ಪ್ರಾಣ ಬೆದರಿಕೆ ಇದೆ. ಮಕ್ಕಳನ್ನು ಹೊರಗೆ ಕಳುಹಿಸುತ್ತಿಲ್ಲ. ನೀವೂ ಹೊರಗೆ ಹೋಗಬೇಡಿ. ಯಾರೇ ಬಂದು ಬಾಗಿಲು ತಟ್ಟಿದರೂ ಬಾಗಿಲು ತೆರೆಯುವುದು ಬೇಡವೆಂದು ಶಿವು ಹೇಳುತ್ತಿದ್ದ. ತನ್ನ ಹತ್ಯೆಗೆ ಚೆನ್ನೈ ಹುಡುಗರಿಗೆ ಸುಪಾರಿ ಕೊಟ್ಟಿದ್ದಾರೆ ಎಂದೂ ಮಗ ಹೇಳುತ್ತಿದ್ದ. ಪುತ್ರನ ಮೊಬೈಲ್‌ನಲ್ಲೇ ಎಲ್ಲ ಮಾಹಿತಿಯಿದೆ' ಎಂದು ಹೇಳಿದರು.

40 ಬಾರಿ ಇರಿದು ಕೊಲೆ

ಶಿವಪ್ರಕಾಶ್ ಅವರನ್ನು ಮಾರಕಾಸ್ತ್ರಗಳಿಂದ 40 ಬಾರಿ ಇರಿದು ಕೊಲೆ ಮಾಡಲಾಗಿದೆ ಎಂದು ಮರಣೋತ್ತರ ಪರೀಕ್ಷೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಎದೆಯ ಭಾಗ, ಬೆನ್ನಿನ ಭಾಗಕ್ಕೆ ಬಲವಾಗಿ ಇರಿಯಲಾಗಿದೆ. ತಲೆಯನ್ನು ಜಜ್ಜಿ ಸಾಯಿಸಲಾಗಿದೆ ಎಂದು ಪ್ರಾಥಮಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಪಿಎಸ್‌ಐ ನೇಮಕಾತಿ: ಆದೇಶ ಪತ್ರ ನೀಡಲು ಆಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳಿಗೆ ಆಯ್ಕೆಯಾಗಿರುವ 402 ಅಭ್ಯರ್ಥಿಗಳಿಗೆ ಶೀಘ್ರ ನೇಮಕಾತಿ ಆದೇಶ ನೀಡಬೇಕು ಎಂದು ಆಗ್ರಹಿಸಿ ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ವತಿಯಿಂದ ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಯಿತು.

ಡಿಸೆಂಬರ್ 26ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ಆಯ್ಕೆಯಾದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ, ದೈಹಿಕ ತಪಾಸಣೆ, ಸಿಂಧುತ್ವ ಪ್ರಮಾಣಪತ್ರ ಸೇರಿದಂತೆ ನೇಮಕಾತಿ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದೆ. ಆದರೆ, ನೇಮಕಾತಿ ಆದೇಶ ಪತ್ರ ನೀಡಲು ವಿಳಂಬ ಮಾಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಏಳು ತಿಂಗಳಿಂದ ಅಭ್ಯರ್ಥಿಗಳು ಆದೇಶ ಪ್ರತಿಗಾಗಿ ಗೃಹ ಸಚಿವರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತಲೇ ಇದ್ದಾರೆ. ಗೃಹ ಸಚಿವರು ಆಶ್ವಾಸನೆ ನೀಡುತ್ತಿದ್ದಾರೆ ಹೊರತು ಈವರೆಗೂ ಯಾವುದೇ ರೀತಿಯ ಪ್ರಕ್ರಿಯೆಗಳು ಪ್ರಾರಂಭವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ಅಧ್ಯಕ್ಷ ಕಾಂತಕುಮಾರ್ ಮಾತನಾಡಿ, 'ಕಲ್ಯಾಣ ಕರ್ನಾಟಕದ 21 ಹುದ್ದೆಗಳ ಫಲಿತಾಂಶವನ್ನು ಕೂಡಲೇ ಪ್ರಕಟಿಸಿ ಪ್ರಕ್ರಿಯೆ ಬೇಗ ಮುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಆದರೆ ಅವರು ನಿಧಾನ ಮಾಡುತ್ತಿದ್ದಾರೆ. ಸಿಂಧುತ್ವ ಪ್ರಮಾಣಪತ್ರದ ಬಳಿಕ ಅಂತಿಮ ಆಯ್ಕೆ ಪಟ್ಟಿ ಪ್ರಕಟವಾಗಲಿದೆ ಎಂದು ತಿಳಿಸಲಾಗುತ್ತಿದೆ. ಸಿಂಧುತ್ವ ಪ್ರಮಾಣಪತ್ರ ಮಾಡಿಕೊಂಡ ಅಭ್ಯರ್ಥಿಗಳಿಗೆ ಆದೇಶ ಪ್ರತಿ ನೀಡಲು ಡಿಜಿ–ಐಜಿಪಿ ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ, ಪೊಲೀಸ್ ಇಲಾಖೆಯ ನೇಮಕಾತಿ ವಿಭಾಗ ಇನ್ನೂ ಪರಿಗಣನೆಗೆ ತೆಗೆದುಕೊಂಡಿಲ್ಲ' ಎಂದು ಆರೋಪಿಸಿದರು.

ಅಭ್ಯರ್ಥಿಗಳು ಈಗಾಗಲೇ ಸಾಕಷ್ಟು ಬಾರಿ ಪ್ರತಿಭಟನೆ ಮಾಡಿದ್ದು, ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದಾರೆ. 15 ದಿನಗಳಲ್ಲಿ ಆದೇಶ ಪ್ರತಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ವೈದ್ಯಕೀಯ ಸೀಟು ಆಮಿಷ: ವಂಚನೆ

ಬೆಂಗಳೂರು: ಎನ್‌ಆರ್‌ಐ ಕೋಟಾದಡಿ ವೈದ್ಯಕೀಯ ಸೀಟು ಕೊಡಿಸುವುದಾಗಿ ನಂಬಿಸಿ ವಂಚಿಸಿದ್ದ ಆರೋಪದಡಿ ನೆಲಮಂಗಲದ ಏಜೆನ್ಸಿ ವಿರುದ್ಧ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎನ್.ಡಿ.ನರಸೇಗೌಡ ಅವರ ಪುತ್ರಿ ಎನ್.ಎನ್.ನಯನಾ ಅವರಿಗೆ ಸೀಟು ಕೊಡಿಸುವುದಾಗಿ ನಂಬಿಸಿ ಆರೋಪಿ ವಂಚಿಸಿದ್ದ. ಅಲ್ಲದೇ ₹5 ಸಾವಿರ ಹಣ ಪಡೆದುಕೊಂಡಿದ್ದ ಎಂದು ಪೊಲೀಸರು ಹೇಳಿದರು. ದಾಖಲಾತಿಗಳ ಪರಿಶೀಲನೆ ವೇಳೆ ಲಾಂಛನ, ಕಾಮೆಡ್‌ಕೆ, ಪರೀಕ್ಷಾ ಪ್ರಾಧಿಕಾರ ಹಾಗೂ ಇಂಡಿಯಾ, ಸಿದ್ದಿ ಮುದ್ರೆ ಹಾಗೂ ಅಶೋಕ ಸ್ತಂಭದ ಚಿತ್ರವನ್ನು ಕಂಪ್ಯೂಟರ್ ಗ್ರಾಫಿಕ್ಸ್‌ನಿಂದ ಸೃಷ್ಟಿಸಿ ಸಲ್ಲಿಸಿರುವುದು ಪತ್ತೆಯಾಗಿತ್ತು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ದೂರು ನೀಡಿದ್ದರು.

ಚಿಟಿಕೆ ಸುದ್ದಿ

ಶ್ರಾವಣ ಸಂಭ್ರಮ ಇಂದಿನಿಂದ

ಬೆಂಗಳೂರು: ಇದೇ 18ರಿಂದ 20ರವರೆಗೆ ಬಸವನಗುಡಿಯ ಉತ್ತರಾಧಿ ಮಠದ ಪಕ್ಕದಲ್ಲಿರುವ ಸತ್ಯ ಪ್ರಮೋದ ಕನ್ವೆನ್ಷನ್ ಹಾಲ್‌ನಲ್ಲಿ 'ಶ್ರೇಷ್ಠ ಉತ್ಪನ್ನ ಶ್ರಾವಣ ಸಂಭ್ರಮ' ಆಯೋಜಿಸಲಾಗಿದೆ. ಇಲ್ಲಿ ಶ್ರಾವಣ ಮಾಸದ ವಿಶೇಷತೆ ಮತ್ತು ವ್ರತಾಚರಣೆಯ ಬಗ್ಗೆ ವಿವರವಾದ ಮಾಹಿತಿ ನೀಡಲಾಗುತ್ತದೆ. ಹಬ್ಬಕ್ಕೆ ಬೇಕಾದ ಸಾಮಗ್ರಿಗಳ ವಸ್ತು ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳು ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 96638 36603.

ಅರ್ಜಿ ಆಹ್ವಾನ

ಬೆಂಗಳೂರು: ನವಜೀವನ ಶಾರೀರಕ ಸಾಂಸ್ಕೃತಿಕ ಸಂಸ್ಥೆ ಟ್ರಸ್ಟ್ ನಡೆಸುತ್ತಿರುವ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ವೃತ್ತಿಪರ ಸ್ನಾತಕೋತ್ತರ ಪದವಿ ಹಾಗೂ ಉನ್ನತ ಸ್ನಾತಕೋತ್ತರ ಪದವಿಗಳಲ್ಲಿ ಅಧ್ಯಯನ ಮಾಡುತ್ತಿರುವ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಆಸಕ್ತರು ಜುಲೈ 31ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 76194 54178.

ಕನ್ನಡ ಅನುವಾದದಲ್ಲಿ ಲೋಪ: ಕ್ಷಮೆ ಕೋರಿದ 'ಮೆಟಾ'

ನವದೆಹಲಿ (ಪಿಟಿಐ): ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಮೆಟಾ'ದ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಸ್ವಯಂ ಚಾಲಿತ ಕನ್ನಡ ಅನುವಾದ ವ್ಯವಸ್ಥೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಬೆನ್ನಲ್ಲೇ, ಈ ಕುರಿತು 'ಮೆಟಾ' ಗುರುವಾರ ಕ್ಷಮೆಯಾಚಿಸಿದೆ. ಅಲ್ಲದೆ ಸಮಸ್ಯೆ ಸರಿಪಡಿಸುವುದಾಗಿ ತಿಳಿಸಿದೆ.

'ಕನ್ನಡ ಅನುವಾದದಲ್ಲಿನ ಲೋಪಕ್ಕೆ ಕಾರಣವಾದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ಸರಿಪಡಿಸಲಾಗಿದೆ' ಎಂದು ಮೆಟಾದ ವಕ್ತಾರರು ತಿಳಿಸಿದ್ದಾರೆ.

ಫೇಸ್‌ಬುಕ್‌ನಂತಹ ಮೆಟಾದ ವೇದಿಕೆಗಳಲ್ಲಿ ಕನ್ನಡದ ದೋಷಯುಕ್ತ ಅನುವಾದವು ಸತ್ಯವನ್ನು ತಿರುಚುತ್ತಿದೆ ಮತ್ತು ಬಳಕೆದಾರರ ದಾರಿತಪ್ಪಿಸುತ್ತಿದೆ ಎಂದು ಸಿದ್ದರಾಮಯ್ಯ ದೂರಿದ್ದರು.

'ಸಾಮಾಜಿಕ ಮಾಧ್ಯಮ ವೇದಿಕೆಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಅಧಿಕೃತವಾಗಿ ಸಂವಹನ ನಡೆಸುವಾಗ, ವ್ಯವಹರಿಸುವಾಗ ಈ ವೇದಿಕೆಗಳಲ್ಲಿನ ಸ್ವಯಂ ಚಾಲಿತ ಅನುವಾದಗಳು ಹೆಚ್ಚಾಗಿ ತಪ್ಪಾಗಿರುತ್ತವೆ ಮತ್ತು ಅದು ಅತ್ಯಂತ ಅಪಾಯಕಾರಿಯಾಗಿರುತ್ತದೆ ಎಂಬುದನ್ನು ನಾಗರಿಕರು ತಿಳಿದಿರಬೇಕು' ಎಂದು ಸಿದ್ದರಾಮಯ್ಯ 'ಎಕ್ಸ್'ನಲ್ಲಿ ಎಚ್ಚರಿಸಿದ್ದಾರೆ.


'ಈ ಲೋಪಗಳ ಕುರಿತು ನನ್ನ ಮಾಧ್ಯಮ ಸಲಹೆಗಾರರು ಔಪಚಾರಿಕವಾಗಿ ಮೆಟಾಗೆ ಪತ್ರ ಬರೆದು ತಕ್ಷಣವೇ ಸರಿಪಡಿಸುವಂತೆ ಒತ್ತಾಯಿಸಿದ್ದಾರೆ' ಎಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಅನುವಾದದ ನಿಖರತೆಯನ್ನು ವಿಶ್ವಾಸಾರ್ಹವಾಗಿ ಸುಧಾರಿಸುವವರೆಗೆ ಕನ್ನಡ ವಿಷಯದ ಸ್ವಯಂಚಾಲಿತ ಅನುವಾದ ವೈಶಿಷ್ಟ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರ ಮೆಟಾಗೆ ತಿಳಿಸಿದೆ.

ಸಂಘಟಕರು– ಪೊಲೀಸ್ ಶಾಮೀಲು

ಮೈಕೆಲ್ ಕುನ್ಹ ನೇತೃತ್ವದ ವಿಚಾರಣಾ ಆಯೋಗದ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತದಲ್ಲಿ 11 ಮಂದಿ ಸಾವಿಗೀಡಾಗಲು, ಅನುಮತಿ ಪಡೆಯದೆ ಸಂಭ್ರಮಾಚರಣೆ ಆಯೋಜನೆ ಹಾಗೂ ಸಂಘಟಕರೊಂದಿಗೆ ಪೊಲೀಸ್ ಅಧಿಕಾರಿಗಳು ಶಾಮೀಲಾಗಿದ್ದುದೇ ಕಾರಣ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗ ಗುರುತಿಸಿದೆ.



ಮೈಕೆಲ್ ಕುನ್ಹ

ಗುರುವಾರ ನಡೆದ ಸಚಿವ ಸಂಪುಟ ಸಭೆಗೆ ಕುನ್ಹ ವರದಿಯನ್ನು ಗೃಹ ಇಲಾಖೆ ಮಂಡಿಸಿದೆ. ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

'ಕ್ರೀಡಾಂಗಣದ ಗೇಟ್‌ಗಳ ಮೂಲಕ ಜನರ ಪ್ರವೇಶವನ್ನು ನಿಯಂತ್ರಿಸಲು ಪೂರ್ವ ತಯಾರಿ ಮಾಡಿಕೊಳ್ಳದೇ ಕ್ರೀಡಾಂಗಣದ ಪ್ರವೇಶಕ್ಕೆ ಸಂಬಂಧಿಸಿದಂತೆ ಬೇಕಾಬಿಟ್ಟಿ ಘೋಷಣೆ ಮಾಡಿದ್ದರಿಂದ ಕಾಲ್ತುಳಿತ ಸಂಭವಿಸಿದೆ. ಕ್ರೀಡಾಂಗಣದ ಒಳಗೆ ಪ್ರವೇಶಿಸುವ ವಿಧಾನದ ಕುರಿತು ಸಂಘಟಕರು ಮಾಡಿದ ಗೊಂದಲದ ಘೋಷಣೆಗಳು ಕಾಲ್ತುಳಿತ ಸಂಭವಿಸಲು ಮುಖ್ಯ ಕಾರಣ. ಇದು ಅಜಾಗರೂಕತೆ, ನಿರ್ಲಕ್ಷ್ಯಕ್ಕೆ ಸಮಾನ. ಇದಕ್ಕೆ ಸಂಘಟಕರನ್ನೇ ಹೊಣೆಗಾರರನ್ನಾಗಿ ಮಾಡಬೇಕು. ಆಹ್ವಾನಿತರ ಸುರಕ್ಷತೆ ಮತ್ತು ಭದ್ರತೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಂಘಟಕರು ವಿಫಲರಾಗಿದ್ದಾರೆ' ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಪರವಾನಗಿ ಪಡೆದಿಲ್ಲ: ಸರ್ಕಾರ 2009ರ ಮಾರ್ಚ್ 4ರಂದು ಹೊರಡಿಸಿದ ಆದೇಶದ ಪ್ರಕಾರ, ಪ್ರಸ್ತಾವಿತ ಕಾರ್ಯಕ್ರಮಕ್ಕೆ ಆಯೋಜಕರು ಕನಿಷ್ಠ ಏಳು ದಿನಗಳ ಮುಂಚಿತವಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಅನುಮತಿ ಪಡೆಯುವುದು ಕಡ್ಡಾಯ. ಕಾರ್ಯಕ್ರಮದ ಸ್ಥಳ, ಹಾಜರಾಗುವವರ ನಿಖರ ಸಂಖ್ಯೆ, ನಿರೀಕ್ಷಿತ ವಾಹನ ದಟ್ಟಣೆ ಮತ್ತಿತರ ವಿವರ ಒದಗಿಸಬೇಕಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಕಾರ್ಯಕ್ರಮಕ್ಕೆ ಸಂಘಟಕರು ಪೂರ್ವಾನುಮತಿ ಪಡೆದಿರಲಿಲ್ಲ ಎಂದು ಆಯೋಗದ ವರದಿಯಲ್ಲಿದೆ.

ಅನಧಿಕೃತ ಕಾರ್ಯಕ್ರಮ ಮತ್ತು ಸೂಕ್ತ ಭದ್ರತಾ ವ್ಯವಸ್ಥೆ ಇಲ್ಲದೆ ತರಾತುರಿಯಲ್ಲಿ ಆಯೋಜಿಸಲಾಗಿದೆ ಎಂದು ಗೊತ್ತಿದ್ದರೂ ಪೊಲೀಸ್ ಕಮಿಷನರ್ ಬಿ.ದಯಾನಂದ, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್, ಎಸಿಪಿ ಸಿ. ಬಾಲಕೃಷ್ಣ, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎ.ಕೆ. ಗಿರೀಶ್ ಅವರು ಕಾರ್ಯಕ್ರಮ ನಡೆಯುವುದನ್ನು ತಡೆಯಲು ವಿಫಲರಾದರು. ದಯಾನಂದ್ ಅವರ ಆದೇಶದ ಮೇರೆಗೆ ಪೊಲೀಸ್ ಅಧಿಕಾರಿಗಳು ಬಂದೋಬಸ್ತ್ ಕೆಲಸ ಮಾಡುತ್ತಿದ್ದರು. ಸಂಘಟಕರು ಕಾರ್ಯಕ್ರಮದ ಸಿದ್ಧತೆಯಲ್ಲಿದ್ದಾಗಲೇ ಅವರ ಜೊತೆ ದಯಾನಂದ್ ಶಾಮೀಲಾಗಿದ್ದರು ಎಂದು ವರದಿಯಲ್ಲಿದೆ.

ಆರ್‌ಸಿಬಿ ತನ್ನ 'ಎಕ್ಸ್' ಖಾತೆಯಲ್ಲಿ ಬೆಳಿಗ್ಗೆ 7:01 ಮತ್ತು 8 ಗಂಟೆಗೆ ಮಾಡಿದ ಎರಡು ಪೋಸ್ಟ್‌ಗಳ ಕಾರಣಕ್ಕೆ ಸ್ಥಳದಲ್ಲಿ ಭಾರಿ ಜನಸಮೂಹ ಜಮಾಯಿಸಿತ್ತು. ಕಾರ್ಯಕ್ರಮಕ್ಕೆ ಸಾರ್ವಜನಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲಾಗಿದ್ದರೂ ಕ್ರೀಡಾಂಗಣದಲ್ಲಿ ಜನಸಂದಣಿ ಹೆಚ್ಚಿದ ನಂತರವೂ ಒಳಗೆ ಪ್ರವೇಶಿಸುವ ವಿಧಾನದ ವಿವರಗಳನ್ನು ನಿಗದಿಪಡಿಸಿರಲಿಲ್ಲ. ಭದ್ರತೆಗೆ ಅಗತ್ಯ ಸಂಖ್ಯೆಯಷ್ಟು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿರಲಿಲ್ಲ. ಹೀಗಾಗಿ, ತುರ್ತುಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗಿಲ್ಲ. ಬಂದೋಬಸ್ತ್‌ಗಾಗಿ ನಿಯೋಜಿಸಿದ್ದ 515 ಪುರುಷ ಸಿಬ್ಬಂದಿ ಮತ್ತು ಅಧಿಕಾರಿಗಳ ಪೈಕಿ ಕೇವಲ 79 ಮಂದಿಯನ್ನು ಗೇಟ್‌ಗಳ ಹೊರಗೆ ಜನಸಂದಣಿ ನಿಯಂತ್ರಿಸಲು ನಿಯೋಜಿಸಲಾಗಿತ್ತು. ಬಿಕ್ಕಟ್ಟಿನ ಸಂದರ್ಭದಲ್ಲಿ ಅವರು ಕೂಡಾ ಸ್ಥಳದಲ್ಲಿ ರಲಿಲ್ಲ ಎಂದೂ ವರದಿಯಲ್ಲಿದೆ.

ಕಾಲ್ತುಳಿತಕ್ಕೆ ಯಾರು ಕಾರಣ?

ಕಾಲ್ತುಳಿತ ಸಂಭವಿಸಲು ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ (ಆರ್‌ಸಿಎಸ್‌ಪಿಎಲ್)/ ಆರ್‌ಸಿಬಿ, ಡಿಎನ್‌ಎ ಎಂಟರ್‌ಟೇನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕಾರಣ.

ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಮಾಜಿ ಕಾರ್ಯದರ್ಶಿ ಎ. ಶಂಕರ್, ಮಾಜಿ ಖಜಾಂಚಿ ಎಫ್. ಎಸ್. ಜಯರಾಮ್, ಆರ್‌ಸಿಎಸ್‌ಪಿಎಲ್ ಉಪಾಧ್ಯಕ್ಷ ರಾಜೇಶ್ ಮೆನನ್, ಡಿಎನ್‌ಎ ಎಂಟರ್‌ಟೇನ್‌ಮೆಂಟ್ ನೆಟ್‌ವರ್ಕ್ಸ್ ವ್ಯವಸ್ಥಾಪಕ ನಿರ್ದೇಶಕ ಡಾ. ಟಿ. ವೆಂಕಟ್ ವರ್ಧನ್, ಉಪಾಧ್ಯಕ್ಷ ಸುನಿಲ್ ಮಾಥುರ್, ಪೊಲೀಸ್ ಅಧಿಕಾರಿಗಳಾದ ಬಿ.ದಯಾನಂದ, ವಿಕಾಸ್ ಕುಮಾರ್ ವಿಕಾಸ್, ಶೇಖರ್, ಸಿ. ಬಾಲಕೃಷ್ಣ, ಇನ್‌ಸ್ಪೆಕ್ಟರ್ ಎ.ಕೆ. ಗಿರೀಶ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಆಯೋಗದ ಶಿಫಾರಸುಗಳೇನು?

- ಬೃಹತ್ ಸಂಖ್ಯೆಯಲ್ಲಿ ಜನ ಸೇರಬಹುದಾದ ಕಾರ್ಯಕ್ರಮಗಳನ್ನು ಸೂಕ್ತ ಸ್ಥಳಗಳಲ್ಲಿ ಆಯೋಜಿಸಬೇಕು. ಅಂತಹ ಯಾವುದೇ ಸ್ಥಳ ಅಂತರರಾಷ್ಟ್ರೀಯ ಮಾನದಂಡಗಳಿಗೆ ಪೂರಕವಾಗಿರಬೇಕು
- ವಿಶೇಷ ಕಾರ್ಯಕ್ರಮಗಳ ಸಂದರ್ಭದಲ್ಲಿ ಸಂಭಾವ್ಯ ಜನಸಂದಣಿ ಮತ್ತು ಅಪಾಯವನ್ನು ಗಣನೆಗೆ ತೆಗೆದುಕೊಂಡು ಆಂಬುಲೆನ್ಸ್‌ಗಳನ್ನು ನಿಯೋಜಿಸಬೇಕು
- ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿ ಸಹಿತ ಸುಸಜ್ಜಿತವಾದ ಅಪಘಾತ ಚಿಕಿತ್ಸಾ ಕೇಂದ್ರ ಸ್ಥಾಪಿಸಬೇಕು
- ಆರೋಗ್ಯ ಅಧಿಕಾರಿಗಳು ಮತ್ತು ಆಸ್ಪತ್ರೆಗಳ ಜೊತೆ ಸಮನ್ವಯದೊಂದಿಗೆ ತುರ್ತು ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆ ಮಾಡಬೇಕು

ಆರ್‌ಸಿಬಿ ಸೇವಕರಂತೆ ಪೊಲೀಸರ ಕೆಲಸ: ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ, ಕರ್ತವ್ಯಲೋಪದಡಿ ಅಮಾನತುಗೊಂಡ ಅಧಿಕಾರಿಗಳು ಆರ್‌ಸಿಬಿಯ ಸೇವಕರಂತೆ ಕೆಲಸ ಮಾಡಿದ್ದಾರೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.


ಪೊಲೀಸ್ ಅಧಿಕಾರಿಗಳ ಅಮಾನತು ಆದೇಶವನ್ನು ರದ್ದುಪಡಿಸಿರುವ ಕೇಂದ್ರೀಯ ಆಡಳಿತಾತ್ಮಕ ನ್ಯಾಯ ಮಂಡಳಿ (ಸಿಎಟಿ) ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಹಾಗೂ 'ಸಿಎಟಿ ಆದೇಶದಲ್ಲಿ ದುರ್ಘಟನೆಗೆ ನಾವು ಕಾರಣ ಎಂಬ ಅಂಶಗಳನ್ನು ಅಳಿಸಿ ಹಾಕಬೇಕು' ಎಂದು ಕೋರಿ ಆರ್‌ಸಿಬಿ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಪರ ಪದಾಂಕಿತ ಹಿರಿಯ ವಕೀಲ ಪಿ.ಎಸ್. ರಾಜಗೋಪಾಲ್ ಮತ್ತು ರೊಬೆನ್ ಜಾಕೊಬ್ ವಾದ ಮಂಡಿಸಿ, 'ಪೊಲೀಸ್ ಅಧಿಕಾರಿಗಳ ನಡೆ ಸರ್ಕಾರಕ್ಕೆ ಮುಜುಗರ ಉಂಟುಮಾಡಿದೆ. ಹಾಗಾಗಿಯೇ, ಅವರನ್ನು ಅಮಾನತು ಮಾಡಲಾಗಿದೆ' ಎಂದು ಸರ್ಕಾರದ ಕ್ರಮವನ್ನು ಸಮರ್ಥಿಸಿದರು.

ಇದನ್ನು ಆಕ್ಷೇಪಿಸಿದ ಪ್ರತಿವಾದಿ ವಿಕಾಸ್ ಕುಮಾರ್ ವಿಕಾಸ್ ಪರ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, 'ದುರ್ಘಟನೆಗೆ ಯಾರನ್ನಾದರೂ ಹೊಣೆ ಮಾಡಬೇಕಿತ್ತು. ಅದಕ್ಕಾಗಿ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಹರಕೆಯ ಕುರಿಯನ್ನಾಗಿ ಮಾಡಲಾಗಿದೆ' ಎಂದು ದೂರಿದರು.

ಆರ್‌ಸಿಬಿ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಪ್ರಕರಣದಲ್ಲಿ ಆರ್‌ಸಿಬಿ ಪಕ್ಷಕಾರ ಅಲ್ಲದೇ ಇದ್ದರೂ ಆಕ್ಷೇಪಾರ್ಹ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಇದು ತನಿಖೆಯ ಮೇಲೆ ಪರಿಣಾಮ ಉಂಟು ಮಾಡಲಿದೆ. ಹೀಗಾಗಿ, ಆಕ್ಷೇಪಾರ್ಹ ಅಂಶಗಳನ್ನು ಅಳಿಸಿ ಹಾಕಬೇಕು' ಎಂದು ಕೋರಿದರು.

ವಾದ-ಪ್ರತಿವಾದ ಆಲಿಸಿದ ಪೀಠವು ವಿಚಾರಣೆಯನ್ನು ಶುಕ್ರವಾರಕ್ಕೆ (ಜುಲೈ 18) ಮುಂದೂಡಿತು.



ಕಸಾಪ ಅರ್ಜಿ ವಿಚಾರಣೆ 21ಕ್ಕೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) 2023-24ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ ರದ್ದುಪಡಿಸಿರುವ, ಪದಾಧಿಕಾರಿಗಳ ಕಾರ್ಯವೈಖರಿ, ಅನುದಾನ ಮತ್ತು ಖರ್ಚು-ವೆಚ್ಚಗಳ ಕುರಿತು ವಿಚಾರಣೆ ನಡೆಸುವ ಸಹಕಾರ ಸಂಘಗಳ ಉಪ ನಿಬಂಧಕರ ಕ್ರಮವನ್ನು ಪ್ರಶ್ನಿಸಿ ಕನ್ನಡ ಸಾಹಿತ್ಯ ಪರಿಷತ್ತು ಸಲ್ಲಿಸಿರುವ ಅರ್ಜಿಯನ್ನು ಹೈಕೋರ್ಟ್ ಇದೇ 21ಕ್ಕೆ ವಿಚಾರಣೆ ನಡೆಸಲಿದೆ.

ಈ ಸಂಬಂಧ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ ಸಲ್ಲಿಸಿರುವ ರಿಟ್ ಅರ್ಜಿಯು ಗುರುವಾರ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಮೂರನೇ ಬಾರಿಗೆ ದಿನದ ಕಲಾಪ ಪಟ್ಟಿಯಲ್ಲಿ ವಿಚಾರಣೆಗೆ ನಿಗದಿಯಾಗಿತ್ತು.

ಆದರೆ, ಗುರುವಾರ ಕಲಾಪ ಮುಕ್ತಾಯದ ವೇಳೆಯಾದರೂ ಅರ್ಜಿ ವಿಚಾರಣೆ ಹಂತಕ್ಕೆ ತಲುಪಲಿಲ್ಲ. ಹೀಗಾಗಿ, ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ನ್ಯಾಯಪೀಠಕ್ಕೆ ತುರ್ತು ನಿವೇದನೆ ಮಾಡಿ, 'ಸ್ವಾಯತ್ತ ಮತ್ತು ಕನ್ನಡದ ಪ್ರಾತಿನಿಧಿಕ ಸಂಸ್ಥೆಯೊಂದರ ವಿರುದ್ಧ ಸಹಕಾರ ಸಂಘಗಳ ಉಪ ನಿಬಂಧಕರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಕ್ರಮ ಕೈಗೊಂಡಿದ್ದಾರೆ. ಅರ್ಜಿಯ ತುರ್ತು ವಿಚಾರಣೆ ಅಗತ್ಯವಿದೆ' ಎಂದು ನ್ಯಾಯ ಪೀಠಕ್ಕೆ ವಿವರಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿಯನ್ನು ಇದೇ 21ಕ್ಕೆ ವಿಚಾರಣೆಗೆ ನಿಗದಿಗೊಳಿಸಿತು.

'ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿ 2ನೇ ವಲಯ ಬೆಂಗಳೂರು ನಗರ ಜಿಲ್ಲಾ ಇವರು 2025ರ ಜೂನ್ 26 ಹಾಗೂ 30ರಂದು ಹೊರಡಿಸಿರುವ ಆದೇಶಗಳನ್ನು ರದ್ದುಪಡಿಸಬೇಕು' ಎಂದು ಕೋರಿ ಅರ್ಜಿದಾರರು ಕೋರಿದ್ದಾರೆ.

ವಂಚನೆ ಆರೋಪ

'ದುಬೈನಲ್ಲಿ ಚಿನ್ನದ ಮೇಲೆ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ದೊರೆಯುತ್ತದೆ ಎಂದು ಮಹಿಳೆಯೊಬ್ಬರನ್ನು ನಂಬಿಸಿ ₹95 ಲಕ್ಷ ಪಡೆದು ವಂಚಿಸಿದ ಆರೋಪದಡಿ ಜಿ.ಸವಿತಾ ಅವರನ್ನು ಬಂಧನ ಅಕ್ರಮ' ಎಂದು ಹೈಕೋರ್ಟ್ ಘೋಷಿಸಿದೆ.

'ನನ್ನ ವಿರುದ್ಧ ಬಸವೇಶ್ವರ ನಗರ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು. ಬಂಧನವನ್ನು ಕ್ರಮವನ್ನು ಅಕ್ರಮ ಎಂದು ಘೋಷಿಸಬೇಕು' ಎಂದು ಕೋರಿ ಪ್ರಕರಣದ 1ನೇ ಆರೋಪಿ ಜಿ.ಸವಿತಾ ಮತ್ತು 7ನೇ ಆರೋಪಿ ವಿ.ಶ್ರೀಧರ ಮೂರ್ತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಭಾಗಶಃ ಪುರಸ್ಕರಿಸಿದ್ದಾರೆ. ಆರೋಪಿಗಳು ವಿಚಾರಣೆಗೆ ಹಾಜರಾಗಲು ಅಗತ್ಯ ಸಮಯ ಸಹ ನೀಡಿಲ್ಲ. ನೋಟಿಸ್ ನೀಡಿದ ಆರು ಗಂಟೆಯಲ್ಲೇ ಸವಿತಾ ಅವರನ್ನು ಬಂಧಿಸಲಾಗಿದೆ. ಇದು ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 35(3)(4)(5) ಮತ್ತು (6)ಕ್ಕೆ ವಿರುದ್ಧವಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ಪೊಲೀಸರು ಒಂದು ವಾರ ಕಾಲ ಅರ್ಜಿದಾರರನ್ನು ಬಂಧಿಸಬಾರದು ಅಥವಾ ಅವರ ವಿರುದ್ಧ ಬಲವಂತದ ಕ್ರಮ ಜರುಗಿಸಬಾರದು. ಅರ್ಜಿದಾರರು ತನಿಖೆಗೆ ಸಹಕರಿಸಬೇಕು. ಯಾವುದೇ ತುರ್ತು ಸಂದರ್ಭ ಎದುರಾದರೆ ಪರಿಹಾರ ಕೋರಿ ಹೈಕೋರ್ಟ್‌ಗೆ ಹೊಸದಾಗಿ ಅರ್ಜಿ ಸಲ್ಲಿಸಲು ಅರ್ಜಿದಾರರು ಸ್ವತಂತ್ರರಿದ್ದಾರೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಸಂದರ್ಶನ ಪ್ರಾಧ್ಯಾಪಕರಾಗಿ ನೇಮಕ



ಪಿ.ಪ್ರಸನ್ನ ಕುಮಾರ್



ಶ್ಯಾಮಸುಂದರ್

ಬೆಂಗಳೂರು ವಿಶ್ವವಿದ್ಯಾಲಯದ, ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗದ ವಿಶೇಷ ಸಂದರ್ಶನ ಪ್ರಾಧ್ಯಾಪಕರನ್ನಾಗಿ, ಸಿಬಿಐ–ಎನ್‌ಐಎ ವಿಶೇಷ ಪ್ರಾಸಿಕ್ಯೂಟರ್, ಪಿ.ಪ್ರಸನ್ನ ಕುಮಾರ್ ಮತ್ತು ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಎಂ.ಎಸ್.ಶ್ಯಾಮ್‌ಸುಂದರ್ ಅವರನ್ನು ಎರಡು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ.

'ಯಾವುದೇ ಸಂಭಾವನೆ, ಪ್ರಯಾಣ ಭತ್ಯೆ (ಟಿಎ) ಮತ್ತು ದಿನಭತ್ಯೆಯ (ಡಿಎ) ಫಲಾಪೇಕ್ಷೆ ಇಲ್ಲದೆ ಇಬ್ಬರೂ ವಕೀಲರು 2025-26 ಮತ್ತು 2026-27ನೇ ಶೈಕ್ಷಣಿಕ ಸಾಲಿನಲ್ಲಿ ಬೋಧನೆ ಮಾಡಲು ಸಮ್ಮತಿಸಿದ್ದಾರೆ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಉಭಯ ವಕೀಲರು ಸುಪ್ರೀಂ ಕೋರ್ಟ್, ಕರ್ನಾಟಕ, ಬಾಂಬೆ, ಮದ್ರಾಸ್ ಹೈಕೋರ್ಟ್‌ಗಳು, ವಿಚಾರಣಾ ನ್ಯಾಯಾಲಯಗಳು, ಸೆಷನ್ಸ್ ಮತ್ತು ವಿಶೇಷ ಕೋರ್ಟ್‌ಗಳು, ಕೇಂದ್ರ ಹಾಗೂ ರಾಜ್ಯದ ನ್ಯಾಯಮಂಡಳಿಗಳಲ್ಲಿ ಮೂರು ದಶಕಗಳಿಗೂ ಹೆಚ್ಚಿನ ಕಾಲ ವಾದಿಗಳು, ಆರೋಪಿಗಳು ಮತ್ತು ಪ್ರತಿವಾದಿಗಳ ಪರ ಎರಡೂ ಧ್ರುವಗಳಲ್ಲಿ ನಿಂತು ವಕೀಲಿಕೆ ನಡೆಸಿರುವ ಅನುಭವ ಹೊಂದಿದ್ದಾರೆ.

ಇಡೀ ದೇಶಕ್ಕೆ ನಾವು ಮಾದರಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದೆ. ನಮ್ಮ ಮಾದರಿಯನ್ನು ಇಡೀ ದೇಶ ಪಾಲಿಸುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ನಮ್ಮ ಸರ್ಕಾರ ಬಡವರ ಬದುಕಿಗಾಗಿ ಗೃಹಲಕ್ಷ್ಮಿ ಯೋಜನೆ ಜಾರಿ ಮಾಡಿದೆ. ಬಡವರಿಗಾಗಿ ಜಮೀನು, ನಿವೇಶನ, ಪಿಂಚಣಿ, ಮಕ್ಕಳಿಗೆ ಬಿಸಿಯೂಟ ಸೇರಿದಂತೆ ಅನೇಕ ಕಾರ್ಯಕ್ರಮ ಕೊಟ್ಟಿದೆ. ಅದೇ ರೀತಿ ನಾವು ಗ್ಯಾರಂಟಿ ಯೋಜನೆ ನೀಡಿದೆವು. ನಮ್ಮ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ಸೇರಿದಂತೆ ಬಿಜೆಪಿಯ ಎಲ್ಲ ನಾಯಕರು ಟೀಕೆ ಮಾಡಿದರು' ಎಂದರು.

'ಕರ್ನಾಟಕದಲ್ಲಿ ಯೋಜನೆ ಜಾರಿಯಾದ ನಂತರ ಬಿಜೆಪಿಯವರೇ ಮಧ್ಯಪ್ರದೇಶ, ಮಹಾರಾಷ್ಟ್ರ, ದೆಹಲಿ, ಹರಿಯಾಣ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದರು. ಈಗ ಬಿಹಾರದಲ್ಲಿ ಘೋಷಣೆ ಮಾಡಿದ್ದಾರೆ. ಕರ್ನಾಟಕ ಕಾಂಗ್ರೆಸ್ ಸರ್ಕಾರ ಸದಾ ದೇಶಕ್ಕೆ ಮಾದರಿ' ಎಂದರು.



ದಯಾನಂದ ಸಾಗರ್ ಅಕಾಡೆಮಿ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್ (ಡಿಎಸ್‌ಎಟಿಎಂ) ಆಯೋಜಿಸಿದ್ದ 'ಯುವ ಉತ್ಸವ–ಮ್ಯಾನೇಜ್‌ಮೆಂಟ್ ಫೆಸ್ಟ್–2025' ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರನ್ನು ಸನ್ಮಾನಿಸಲಾಯಿತು. ಮೋದಿ ಗ್ರೂಪ್ಸ್‌ನ ನಿರ್ದೇಶಕಿ ಪ್ರಿಯದರ್ಶಿನಿ ಮೋದಿ, ವಕೀಲ ರಾಕೇಶ್ ಎಸ್.ಎನ್.,ಡಿಎಸ್‌ಎಟಿಎಂನ ಪ್ರಾಂಶುಪಾಲ ಎಂ. ರವಿಶಂಕರ್, ಉಪ ಪ್ರಾಂಶುಪಾಲರಾದ ಸಿ. ನಂದಿನಿ, ಅಕಾಡೆಮಿಕ್ ಡೀನ್ ಸುಮಿತ್ರಾ ದೇವಿ ಕೆ.ಎ., ಎಂಬಿಎ ವಿಭಾಗದ ಮುಖ್ಯಸ್ಥೆ ಅಮೃತಾ ಎನ್ ಉಪಸ್ಥಿತರಿದ್ದರು

ಎಲ್ಲರಿಗೂ 'ಎ' ಖಾತಾ ಗ್ಯಾರಂಟಿ

ಒಂದನೇ ಪುಟದಿಂದ...

ಅಭಿವೃದ್ಧಿ ಶುಲ್ಕವನ್ನೂ ಪಾವತಿಸಬೇಕಾಗುತ್ತದೆ. ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಿದರೆ, ಬಿಬಿಎಂಪಿ ಎಲ್ಲ ನಿವೇಶವಗಳನ್ನೂ ಆನ್‌ಲೈನ್ ಮೂಲಕ ಕಂದಾಯ ಇಲಾಖೆಯ ದಾಖಲೆಗಳೊಂದಿಗೆ ಕಾನೂನಾತ್ಮಕಗೊಳಿಸುತ್ತದೆ. 'ಇ' ಖಾತಾವನ್ನು ನೀಡುತ್ತದೆ. ನಂತರ ಕಟ್ಟಡ ನಕ್ಷೆ ಸೇರಿದಂತೆ ಬಿಬಿಎಂಪಿಯಿಂದ ಎಲ್ಲ ಸೌಲಭ್ಯವನ್ನೂ ಪಡೆಯಬಹುದಾಗಿದೆ. 'ಬಿ' ಖಾತಾ ಹೊಂದಿರುವ ಅಥವಾ ಹೊಂದಿರದ ನಿವೇಶನಗಳಲ್ಲಿ ಕಟ್ಟಡಗಳು ಬಿಬಿಎಂಪಿ ನಿಯಮದಂತೆಯೇ ನಿರ್ಮಾಣವಾಗಿದ್ದರೆ ಅವುಗಳಿಗೆ ಕಟ್ಟಡ ನಕ್ಷೆಯನ್ನೂ ಮಂಜೂರು ಮಾಡಿಕೊಡಲಾಗುತ್ತದೆ. ನಿಯ ಉಲ್ಲಂಘಿಸಿ ಕಟ್ಟಡಗಳನ್ನು ಕಟ್ಟಿದ್ದರೆ 'ಅಕ್ರಮ ನಿರ್ಮಾಣ' ಎಂದು ದಾಖಲಿಸಲಾಗುತ್ತದೆ.

ಉದ್ಯಾನಕ್ಕೆ ಜಾಗವಿಲ್ಲದಿದ್ದರೆ ಶುಲ್ಕ

ಉದ್ಯಾನಕ್ಕೆ ಜಾಗ ಬಿಡಲು ಅವಕಾಶವಿಲ್ಲದ 55 ಚದರ ಮೀಟರ್‌ನಿಂದ ಎರಡು ಸಾವಿರ ಚದರ ಮೀಟರ್‌ವರೆಗಿನ ನಿವೇಶನಗಳಲ್ಲಿರುವ ಕಟ್ಟಡಗಳು ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕವನ್ನು 'ಪಾರ್ಕ್ ಫೀ' ಎಂದು ಪಾವತಿಸುವುದು ಕಡ್ಡಾಯವಾಗಿದೆ. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ಸೆಕ್ಷನ್ 13–ಇಗೆ ತಿದ್ದುಪಡಿ ತಂದು, ಪರಿಷ್ಕೃತ ಮಾಸ್ಟರ್ ಪ್ಲಾನ್–2015ರ ವಲಯ ನಿಯಮಗಳನ್ನು ಬದಲಾಯಿಸಿ ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿದೆ.

ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ಎರಡು ಸಾವಿರ ಚದರ ಮೀಟರ್‌ನಿಂದ 10 ಸಾವಿರ ಚದರ ಮೀಟರ್‌ವರೆಗಿನ ವ್ಯಾಪ್ತಿಯಲ್ಲಿ ನಿರ್ಮಾಣವಾಗುವ ಅಪಾರ್ಟ್‌ಮೆಂಟ್‌ಗಳು ಶೇ 15ರಷ್ಟು ಭೂಮಿಯನ್ನು ಉದ್ಯಾನವನ್ನಾಗಿ ಅಭಿವೃದ್ಧಿಪಡಿಸುವುದು ಕಡ್ಡಾಯವಾಗಿದೆ.

ಶೇ 15ರಷ್ಟು ಭೂಮಿಯಲ್ಲಿ ಉದ್ಯಾನದ ಜೊತೆಗೆ, ಸೆಟ್‌ಬ್ಯಾಕ್ ಅನ್ನು 6 ಮೀಟರ್‌ಗೆ ಹೆಚ್ಚಿಸಲಾಗಿದೆ. ಇದರಿಂದ ಅಪಾರ್ಟ್‌ಮೆಂಟ್‌ಗಳ ಸುತ್ತಲೂ ಸ್ಥಳೀಯ ಜಾತಿಯ ಗಿಡ–ಮರಗಳನ್ನು ಬೆಳೆಸಲು ಸ್ಥಳ ಮೀಸಲಿರಲಿದೆ. ನಗರದಲ್ಲಿ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವ ಹಾಗೂ ರಾಜಕಾಲುವೆಗಳಲ್ಲಿ ಪ್ರವಾಹದ ಸಂದರ್ಭವನ್ನು ನಿಯಂತ್ರಿಸುವ ಸಲುವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಸತಿಯೇತರ, ಮಿಶ್ರ ಬಳಕೆ ಅಪಾರ್ಟ್‌ಮೆಂಟ್‌ಗಳಾದರೆ ಅಲ್ಲಿ ಉದ್ಯಾನದ ಪ್ರದೇಶವನ್ನು ಶೇ 10 ಹಾಗೂ ವಾಹನ ನಿಲುಗಡೆಯನ್ನು ಪ್ರದೇಶವನ್ನು ಶೇ 5 ಎಂದು ನಿಗದಿಪಡಿಸಲಾಗಿದೆ. ಎಲ್ಲ ರೀತಿಯ ಶುಲ್ಕವನ್ನು ಸ್ವೀಕರಿಸಲು ಪ್ರತ್ಯೇಕ ಎಸ್ಕ್ರೊ ಖಾತೆಯನ್ನು ಯೋಜನಾ ಪ್ರಾಧಿಕಾರ ನಿರ್ವಹಿಸಬೇಕು ಎಂದು ಅಧಿಸೂಚಿಸಲಾಗಿದೆ.

ನಾಲಾ ಅಥವಾ ರಾಜಕಾಲುವೆಗಳ ಬಫರ್ ಝೋನ್‌ನಲ್ಲಿ ರಸ್ತೆ ನಿರ್ಮಿಸಲು ಅನುವಾಗುವಂತೆಯೂ ಅಧಿಸೂಚನೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಎಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ

ಕೆಜಿಎಫ್: ನಗರದ ಡಾ.ಟಿ.ತಿಮ್ಮಯ್ಯ ಎಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್ ಕೋಣೆಯೊಳಗೆ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಯೊಬ್ಬ ಗುರುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೃತನನ್ನು ಬಳ್ಳಾರಿ ಮೂಲದ ಗಣೇಶ್ (19) ಎಂದು ಗುರುತಿಸಲಾಗಿದೆ. ತಿಮ್ಮಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಥಮ ವರ್ಷದ ಮೈನಿಂಗ್ ಕೋರ್ಸ್ ಮಾಡುತ್ತಿದ್ದ. ಕೊಠಡಿಯಲ್ಲಿ ಸಹಪಾಠಿಗಳು ಇಲ್ಲದ ಸಂದರ್ಭದಲ್ಲಿ ನೇಣು ಹಾಕಿಕೊಂಡಿದ್ದಾನೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ.

ನಗರದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಮಧ್ಯಾಹ್ನದಿಂದ ಆರಂಭವಾದ ಮಳೆ ಮಧ್ಯರಾತ್ರಿವರೆಗೂ ಹಲವೆಡೆ ಉತ್ತಮವಾಗಿ ಸುರಿಯಿತು.

ಗುರುವಾರ ಬೆಳಿಗ್ಗೆಯಿಂದ ಬಿಸಿಲಿನ ವಾತಾವರಣವಿತ್ತು. ಮಧ್ಯಾಹ್ನದ ನಂತರ ಹಲವು ಪ್ರದೇಶಗಳಲ್ಲಿ ಮಳೆ ಸುರಿಯಿತು. ಸಂಜೆ ಹಾಗೂ ರಾತ್ರಿ ಹಲವೆಡೆ ಮಳೆ ಅಬ್ಬರ ಹೆಚ್ಚಾಯಿತು. ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು.



ಗುರುವಾರ ಸುರಿಯುವ ಮಳೆಯ ನಡುವೆ ಮಹಿಳೆಯರು ಮತ್ತು ಮಕ್ಕಳು ಒದ್ದೆಯಾಗುತ್ತಲೇ ಹೆಜ್ಜೆ ಹಾಕುತ್ತಿರುವುದು ಬೆಂಗಳೂರಿನ ಮಿನ್ಸ್ಕ್ ಸ್ಕ್ವೇರ್ ಬಳಿ ಕಂಡುಬಂತು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ತಡರಾತ್ರಿಯವರೆಗೂ ಕೆಲವು ಪ್ರದೇಶಗಳಲ್ಲಿ ಮಳೆಯಾಯಿತು. ಮೈಸೂರು ರಸ್ತೆ, ಬಳ್ಳಾರಿ ರಸ್ತೆ, ಹಳೆ ಮದ್ರಾಸ್ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ದೊಡ್ಡಕನ್ನಲ್ಲಿಯಿಂದ ಇಬ್ಲೂರು, ರೂಪೇನ ಅಗ್ರಹಾರದಿಂದ ಬೊಮ್ಮನಹಳ್ಳಿ, ಹೆಬ್ಬಾಳ ಜಂಕ್ಷನ್, ಎಂಪಿಎಸ್‌ನಿಂದ ಎಸ್‌ಪಿ ರಸ್ತೆ, ಕ್ವೀನ್ಸ್ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತ, ಕಾಡುಗೋಡಿಯಿಂದ ಬೆಳತ್ತೂರುವರೆಗಿನ ರಸ್ತೆಗಳಲ್ಲಿ ನೀರು ತುಂಬಿಕೊಂಡು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ಪುಣೆ ರೇಸ್

ಸ್ನೋಫಾಲ್ ಗೆಲ್ಲುವ ನಿರೀಕ್ಷೆ

ಗೇಮ್ ಫಾರ್ ಲವ್ ಟ್ರೋಫಿ ಶುಕ್ರವಾರದಿಂದ ಪ್ರಾರಂಭವಾಗಲಿರುವ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ನೋಫಾಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಲಾರ್ಡ್ ಎಪಿಕ್ 1, ವಿನ್‌ಬೋರ್ನ್ 2, ಅಡೊನಿಸ್ 3
2ನೇ ರೇಸ್: ಸ್ಯಾಮ್ಸನ್ 5, ವಿ ಸ್ಟಿಲ್ ಬಿಲೀವ್ 4, ಪರ್ಪ್ಲ್ ಮಾರ್ಟಿನಿ 1
3ನೇ ರೇಸ್: ಫೇಬಲ್ 1, ಬಿಯಾಂಡ್ ಸ್ಟಾರ್ಸ್ 3, ನಾರ್ಥ್‌ಬೌಂಡ್ 6
4ನೇ ರೇಸ್: ಚೆಲ್ಸಿಯಾ 8, ಡಿಲಿಜೆನ್ಸ್ 4, ಬೀ ಮ್ಯಾಜಿಕಲ್ 3
5ನೇ ರೇಸ್: ಟಾಬಿರ್ 2, ಪ್ರೀಸಿಯೊಸೊ 4, ಜಿಪ್ ಅಲಾಂಗ್ 7
6ನೇ ರೇಸ್: ಮರ್ಲೆಟ್ 8, ಟಚ್ ಆಫ್ ಮಿಸ್ಟಿಕ್ 10, ಡಾರ್ಸಿ 7
7ನೇ ರೇಸ್: ಸ್ನೋಫಾಲ್ 1, ಕ್ರಿಸ್ಟೊಫಾನಿ 6, ಇಟ್ಸ್ ಮೈ ಟೈಮ್ 3
8ನೇ ರೇಸ್: ಚಾಲೆಂಜ್ ಅಕ್ಸೆಪ್ಟೆಡ್ 1, ಎಂಡ್ಯೂರೆನ್ಸ್ 2, ಪ್ಯೂರ್ 7
9ನೇ ರೇಸ್: ಫೋರ್ತ್‌ವಿಂಗ್ 7, ಟೈಮ್‌ಲೆಸ್ ವಿಷನ್ 1, ಗಿರಾರ್ಡೆಲ್ಲಿ 5

ಉತ್ತಮ ಬೆಟ್: ಚಾಲೆಂಜ್ ಅಕ್ಸೆಪ್ಟೆಡ್

1ನೇ ಜಾಕ್‌ಪಾಟ್‌ಗೆ 2,3,4,5,6 | 2ನೇ ಜಾಕ್‌ಪಾಟ್‌ಗೆ 5,6,7,8,9

1ನೇ ಟ್ರಿಬಲ್ 3,4,5 | 2ನೇ ಟ್ರಿಬಲ್ 6,7,8 | 3ನೇ ಟ್ರಿಬಲ್ 7,8,9



‘ಅಪ್ಪು ದಾರಿಯಲ್ಲಿ ಸಾಗುತ್ತೇನೆ’

ಯುವ ರಾಜ್‌ಕುಮಾರ್ ನಟನೆಯ ಬಹುನಿರೀಕ್ಷಿತ ‘ಎಕ್ಕ’ ಸಿನಿಮಾ ಇಂದು (ಜು.18) ತೆರೆ ಕಾಣುತ್ತಿದೆ. ‘ಬ್ಯಾಂಗಲ್ ಬಂಗಾರಿ’ ಹಾಡು ಈಗಾಗಲೇ ಜನಪ್ರಿಯವಾಗಿದ್ದು, ಚಿತ್ರ ಹಾಗೂ ತಮ್ಮ ಪಾತ್ರ ಕುರಿತು ಅವರು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

• ಚಿತ್ರದಲ್ಲಿ ನಿಮ್ಮ ಪಾತ್ರ?

ಪಾತ್ರದ ಹೆಸರು ಮುತ್ತು. ತಿಂದುಂಡು, ಆರಾಮವಾಗಿ ನಿದ್ದೆ ಮಾಡಿಕೊಂಡಿರುವ ಹಳ್ಳಿ ಹುಡುಗ. ತಾಯಿ ಜತೆ ನೆಮ್ಮದಿಯಿಂದ ಜೀವನ ನಡೆಸುತ್ತ ಇರುತ್ತಾನೆ. ಬದುಕಿನಲ್ಲಾದ ಒಂದು ಸಮಸ್ಯೆಯಿಂದ ಪೇಟೆಗೆ ಬರುತ್ತಾನೆ. ‘ನಿನ್ನೊಳಗೆ ಮಗುವೂ ಇದೆ ಮೃಗವೂ ಇದೆ’ ಅಂತ ತಾಯಿ ಯಾವಾಗಲೂ ಹೇಳುತ್ತಿರುತ್ತಾರೆ. ಹೀಗಿರುವ ಹುಡುಗನಿಗೆ ರೌಡಿಸಂ ಪ್ರಪಂಚದ ಪರಿಚಯವಾಗುತ್ತದೆ. ಒಂದಷ್ಟು ಸನ್ನಿವೇಶಗಳು ಅವನನ್ನು ರೌಡಿಸಂಗೆ ಎಳೆಯುತ್ತ ಇರುತ್ತವೆ. ಆತ ಮಗುವಾಗಿಯೇ ಉಳಿಯುತ್ತಾನಾ ಅಥವಾ ಮೃಗವಾಗುತ್ತಾನಾ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು.

• ಸಂಪೂರ್ಣ ಮಾಸ್ ಆ್ಯಕ್ಷನ್ ಚಿತ್ರವೇ?

ಚಿತ್ರದಲ್ಲಿ ತುಂಬ ವಿಷಯಗಳಿವೆ. ತಾಯಿ ಸೆಂಟಿಮೆಂಟ್ ಇದೆ. ಲವ್ ಸ್ಟೋರಿ ಇದೆ. ಆ್ಯಕ್ಷನ್, ಮಾಸ್ ಕೂಡ ಇದೆ. ಹೀಗಾಗಿ ಸಿನಿಮಾವನ್ನು ಒಂದೇ ಜಾನರ್‌ನಲ್ಲಿ ಇಡಲು ಸಾಧ್ಯವಿಲ್ಲ. ಒಟ್ಟಾರೆಯಾಗಿ ಮನರಂಜನೆ ನೀಡುವ ಕಥೆ.

• ಉತ್ತರ ಕರ್ನಾಟಕ ಭಾಗದ ಕಥೆಯಾ?

ಹಳ್ಳಿ ಮತ್ತು ಪಟ್ಟಣದಲ್ಲಿ ನಡೆಯುವ ಕಥೆ. ಯಾವ ಕಡೆಯ ಹಳ್ಳಿ ಅಂತ ಎಲ್ಲಿಯೂ ತೋರಿಸಿಲ್ಲ. ಒಂದು ಪ್ರದೇಶಕ್ಕೆ ಸೀಮಿತವಾದ ಭಾಷೆಯನ್ನು ಎಲ್ಲಿಯೂ ಬಳಸಿಲ್ಲ. ಹಳ್ಳಿ ಭಾಗವನ್ನು ಶ್ರೀರಂಗಪಟ್ಟಣ, ರಾಮನಗರ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ಪೇಟೆ ಭಾಗವನ್ನು ಬೆಂಗಳೂರಿನಲ್ಲಿ ಚಿತ್ರೀಕರಿಸಿದ್ದೇವೆ.

• ರಾಜ್ ಕುಟುಂಬದಿಂದ ನೀವು ಪುನೀತ್ ರಾಜ್‌ಕುಮಾರ್ ಸ್ಥಾನ ತುಂಬುತ್ತೀರಿ ಎಂಬಂತೆ ನಿಮ್ಮನ್ನು ಬಿಂಬಿಸಲಾಗುತ್ತಿದೆಯಾ?

ಅಪ್ಪು ಜಾಗದಲ್ಲಿ ನಾನು ಬರಲು ಸಾಧ್ಯವೇ ಇಲ್ಲ. ಅವರ ಜಾಗವನ್ನು ಯಾರೂ ತುಂಬೋಕೆ ಸಾಧ್ಯವಿಲ್ಲ ಎಂದು ನಾನು ಈ ಹಿಂದೆಯೇ ಹೇಳಿದ್ದೆ. ಅವರು ನಮ್ಮ ಕುಟುಂಬದ ಬ್ಯಾನರ್‌ನಿಂದ ವರ್ಷಕ್ಕೆ ಎರಡು ಸಿನಿಮಾ ಮಾಡುತ್ತಿದ್ದರು. ಒಂದಷ್ಟು ಜನಕ್ಕೆ ಕೆಲಸ ನೀಡುತ್ತಿದ್ದರು. ಅದನ್ನು ನಾನು ಮುಂದುವರಿಸಿಕೊಂಡು ಹೋಗುತ್ತೇನೆ ಎನ್ನಬಹುದು. ಅವರು ಹಾಕಿಕೊಟ್ಟು ಹೋದ ಮಾರ್ಗದಲ್ಲಿ ಸಾಗಬಹುದಷ್ಟೆ. ಅವರ ‘ಜಾಕಿ’ ಸಿನಿಮಾ ನನಗೆ ತುಂಬ ಇಷ್ಟ. ಅದರ ಸೊಗಡು ಈ ಚಿತ್ರದಲ್ಲಿಯೂ ಕಾಣುತ್ತದೆ.

• ಹಿಂದಿನ ಸಿನಿಮಾದಿಂದ ಏನೆಲ್ಲ ಕಲಿಯಲು ಸಾಧ್ಯವಾಯ್ತು?

ನನ್ನ ಮೊದಲನೆ ಚಿತ್ರ ‘ಯುವ’ದಿಂದ ಸಾಕಷ್ಟು ಕಲಿತೆ. ಈ ಚಿತ್ರದ ಪ್ರಕ್ರಿಯೆಯಲ್ಲಿಯೂ ಕಲಿತಿದ್ದೇನೆ. ಆ ಚಿತ್ರಕ್ಕಿಂತ ಭಿನ್ನವಾದ ಕಥೆಯಿದು. ಪಾತ್ರ ಪೋಷಣೆ ಬೇರೆ ರೀತಿಯಿದೆ. ಕೇವಲ ಆ್ಯಕ್ಷನ್ ಮಾತ್ರವಲ್ಲ, ಪಾತ್ರ ಬಹಳ ಗಟ್ಟಿಯಾಗಿದೆ. ನನಗೆ ಉತ್ತಮ ಕಂಟೆಂಟ್ ಜತೆಗಿನ ಮಾಸ್ ಸಿನಿಮಾಗಳು ಹೆಚ್ಚು ಇಷ್ಟ. ಒಟ್ಟಾರೆಯಾಗಿ ಸಿನಿಮಾ ಮನರಂಜನೀಯವಾಗಿರಬೇಕು. ಆ ನಿಟ್ಟಿನಲ್ಲಿ ಯತ್ನ ಮಾಡಿದ್ದೇವೆ. ಒಂದೊಳ್ಳೆ ತಂಡ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತವಿದೆ. ತಂಡದಲ್ಲಿ ಎಲ್ಲರೂ ಅನುಭವ ಹೊಂದಿದವರು. ಇಂಥ ಒಂದು ತಂಡದ ಜತೆ ಕೆಲಸ ಮಾಡಿರುವುದು ಖುಷಿ ಕೊಟ್ಟಿದೆ.

• ನಿಮ್ಮ ಮುಂದಿನ ಸಿನಿ ಪಯಣ...

ಇದಾದ ಬಳಿಕ ಸೂರಿ ಅವರ ಜತೆ ಸಿನಿಮಾ ಪ್ರಾರಂಭವಾಗುತ್ತದೆ. ಅದರ ಸ್ಕ್ರಿಪ್ಟ್ ಕೆಲಸ ಮುಗಿದಿದೆ. ಸದ್ಯಕ್ಕೆ ಅದೊಂದೇ ಸಿನಿಮಾ ಒಪ್ಪಿಕೊಂಡಿರುವುದು.



• ಟ್ರೇಲರ್‌ನಲ್ಲಿ ಕಥೆಯನ್ನು ಬಿಟ್ಟುಕೊಟ್ಟಿದ್ದೀರಲ್ಲ?

ಹೌದು, ಉದ್ದೇಶಪೂರ್ವಕವಾಗಿಯೇ ಟ್ರೇಲರ್‌ನಲ್ಲಿ ಕಥೆ ಹೀಗಿದೆ ಅಂತ ನೇರವಾಗಿ ಹೇಳಿದ್ದೇವೆ. ನಿರ್ದೇಶಕ ರೋಹಿತ್ ಪದಕಿ ತಮ್ಮ ಹಿಂದಿನ ‘ರತ್ನನ್ ಪ್ರಪಂಚ’ ಚಿತ್ರದಲ್ಲಿಯೂ ಇದೇ ರೀತಿ ಟ್ರೇಲರ್ ಬಿಟ್ಟಿದ್ದರು. ಈ ಸಿನಿಮಾದಲ್ಲಿ ನಾಯಕನಿಗೆ ಈ ರೀತಿ ಸಮಸ್ಯೆ ಇದೆ ಎಂಬುದನ್ನು ಹೇಳಿದ್ದೇವೆ. ಆದರೆ ಏನು ಸಮಸ್ಯೆ ಅಂತ ಹೇಳಿಲ್ಲ. ಸಿನಿಮಾ ನೋಡಿದಾಗ ಮಾತ್ರ ಅದೇನು ಎಂದು ಗೊತ್ತಾಗುತ್ತದೆ. ರೋಹಿತ್ ಪದಕಿ ತುಂಬ ಪ್ರತಿಭಾವಂತ ನಿರ್ದೇಶಕ. ‘ರತ್ನನ್ ಪ್ರಪಂಚ’ದಲ್ಲಿ ಒಂದು ಹುಡುಕಾಟ ಇತ್ತು. ಇಲ್ಲಿಯೂ ಒಂದು ಹುಡುಕಾಟ ಇದೆ. ಅವರು ಸಿನಿಮಾವನ್ನು ಬಹಳ ನೈಜವಾಗಿ ಚಿತ್ರೀಕರಿಸುತ್ತಾರೆ. ಚಿತ್ರೀಕರಣದ ಸ್ಥಳದಲ್ಲಿರುವ ಸ್ಥಳೀಯರನ್ನೆಲ್ಲ ಬಳಸಿಕೊಳ್ಳುತ್ತಾರೆ. ಅವರ ಜತೆ ಕೆಲಸ ಮಾಡುವುದು ಒಂದು ಭಿನ್ನ ಅನುಭವ.



ಯುವ ರಾಜ್‌ಕುಮಾರ್

ನಿಮ್ಮ ಮನೆಯಲ್ಲಿ ರಂಗು ರಂಗಿನ ಸಿನಿ ಸಮ್ಮಾನ



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದ ಮೂರನೇ ಆವೃತ್ತಿಯ ಕಾರ್ಯಕ್ರಮದಲ್ಲಿ ರವಿಚಂದ್ರನ್ ಹಾಗೂ ಮಾಲಾಶ್ರೀ ನೃತ್ಯ

ಪ್ರಣಯರಾಜ ಶ್ರೀನಾಥ್ ಅವರ ಭಾವುಕ ಮಾತು, ವಿ.ರವಿಚಂದ್ರನ್ ಸಖತ್ ಡಾನ್ಸ್, ಸಾಯಿಕುಮಾರ್ ಖಡಕ್ ಸಂಭಾಷಣೆ, ಶಿವರಾಜ್‌ಕುಮಾರ್ ಚುರುಕು ಉತ್ತರಗಳಿಗೆ ಸಾಕ್ಷಿಯಾಗಿದ್ದು ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ–2025’ ಮೂರನೆಯ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭ.

ಚಂದನವನದ ಬಹುತೇಕ ತಾರೆಯರೆಲ್ಲ ಕಾರ್ಯಕ್ರಮದಲ್ಲಿದ್ದರು. ಒಂದಷ್ಟು ಜನರಿಗೆ ಪ್ರಶಸ್ತಿ ಪಡೆದ ಖುಷಿ, ಮತ್ತೊಂದಷ್ಟು ಗಣ್ಯರಿಗೆ ಪ್ರಶಸ್ತಿ ನೀಡಿದ ಸಾರ್ಥಕತೆ. ಚಂದನವನದ ತಾರೆಯರ ನೃತ್ಯ, ‘ಕಾಮಿಡಿ ಕಿಲಾಡಿ’ಗಳ ಪ್ರಹಸನ ಎಲ್ಲಕ್ಕೂ ಈ ವೇದಿಕೆ ಸಾಕ್ಷಿಯಾಗಿತ್ತು.

‘ಪ್ರಜಾವಾಣಿ’ ಕನ್ನಡ ಸಿನಿ ಸಮ್ಮಾನದ ಮೂರನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಜೀವಮಾನದ ಸಾಧನೆ ಪ್ರಶಸ್ತಿಯನ್ನು ‘ಪ್ರಣಯರಾಜ’ ಶ್ರೀನಾಥ್ ಅವರಿಗೆ ನೀಡಿ ಗೌರವಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಪುರಸ್ಕೃತರಾದ ಶ್ರೀನಾಥ್, ‘ಎಂಜಿನಿಯರ್, ವೈದ್ಯ, ವಕೀಲ ಆಗಬೇಕು ಎಂಬ ಅನೇಕ ಯೋಚನೆಗಳು ಬಾಲ್ಯದಲ್ಲಿ ಬಂದಿದ್ದವು. ಆದರೆ, ನಟನಾಗಬೇಕು ಎಂಬುದು ಅದಮ್ಯ ಬಯಕೆಯಾಗಿತ್ತು. ಸಿನಿಮಾದಲ್ಲಿ ನಟಿಸಬೇಕಿದ್ದರೆ ಮೊದಲು ನಾಟಕದಲ್ಲಿ ಪಾತ್ರ ಮಾಡಬೇಕಿತ್ತು. ನಾನು ಏಳನೇ ವರ್ಷದಲ್ಲಿ ಕಲಾವಿದನಾದೆ. ಮುಂದೆ ನಾಟಕದಿಂದ ಚಲನಚಿತ್ರ ರಂಗಕ್ಕೆ ಕಾಲಿಟ್ಟೆ. 1969ರಿಂದ ಇಲ್ಲಿಯವರೆಗೆ ನಟಿಸುತ್ತಲೇ ಇದ್ದೇನೆ’ ಎಂದು ನೆನಪಿನ ಬುತ್ತಿ ಬಿಚ್ಚಿದರು.

ವಿ.ರವಿಚಂದ್ರನ್ ‘ಕನ್ನಡ ಸಿನಿ ಧ್ರುವತಾರೆ’ ಪ್ರಶಸ್ತಿ ಪಡೆದರೆ, ಧ್ರುವ ಸರ್ಜಾ ‘ವರ್ಷದ ಅತ್ಯುತ್ತಮ ಸಾಧನೆ’ ಗೌರವಕ್ಕೆ ಪಾತ್ರರಾದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಚಿವರಾದ ರಾಮಲಿಂಗಾ ರೆಡ್ಡಿ, ಮಧು ಬಂಗಾರಪ್ಪ, ಶಿವರಾಜ್ ತಂಗಡಗಿ ಸೇರಿದಂತೆ ಅನೇಕ ಗಣ್ಯರು ಸಮಾರಂಭದಲ್ಲಿ ಭಾಗಿಯಾದರು.



ರಾಧಿಕಾ ನಾರಾಯಣ್ ತಂಡದಿಂದ ನೃತ್ಯ

ಜೀ ಕನ್ನಡದಲ್ಲಿ ಪ್ರಸಾರ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ–2025’ ಮೂರನೆಯ ಆವೃತ್ತಿ ಕನ್ನಡದ ನಂಬರ್ ಒನ್ ಮನರಂಜನಾ ವಾಹಿನಿಯಾಗಿರುವ ಜೀ ಕನ್ನಡದಲ್ಲಿ ಇದೇ ಭಾನುವಾರ (ಜು.20) ಸಂಜೆ 4 ಗಂಟೆಯಿಂದ ಪ್ರಸಾರಗೊಳ್ಳಲಿದೆ. ಜುಲೈ 27 ರಂದು ಬೆಳಿಗ್ಗೆ 11 ಗಂಟೆಯಿಂದ ಕಾರ್ಯಕ್ರಮ ಮರುಪ್ರಸಾರವಾಗಲಿದೆ.

ಗದಾಧಾರಿ ಹನುಮಾನ್ ಟೀಸರ್



ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಸಿದ್ಧಗೊಳ್ಳುತ್ತಿರುವ ‘ಗದಾಧಾರಿ ಹನುಮಾನ್’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಕಾಲ್ಪನಿಕ ಕಥೆಯನ್ನು ಹೊಂದಿರುವ ಚಿತ್ರಕ್ಕೆ ರೋಹಿತ್ ಕೊಲ್ಲಿ ನಿರ್ದೇಶನವಿದೆ.

‘ಸಾಹಸಮಯ, ಹಾರರ್, ಥ್ರಿಲ್ಲರ್ ಜಾನರ್‌ನ ಚಿತ್ರವಿದು. ದೇವರು ಮತ್ತು ರಾಕ್ಷಸರ ನಡುವಿನ ಸಮರವನ್ನು ವಿಎಫ್‌ಎಕ್ಸ್, ಗ್ರಾಫಿಕ್ಸ್‌ಗಳ ಮೂಲಕ ಸೃಷ್ಟಿಸಲಾಗಿದೆ. ಚಿತ್ರದ ಶೀರ್ಷಿಕೆಯೇ ಹೇಳುವಂತೆ ಹನುಮಂತನ ಸಾಹಸಗಳೇ ಚಿತ್ರದ ಪ್ರಮುಖ ಕಥೆ. ಚಿತ್ರೀಕರಣ ಪೂರ್ಣಗೊಂಡಿದ್ದು, ನಂತರದ ಕೆಲಸಗಳು ನಡೆಯುತ್ತಿವೆ. ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ. ಬೆಂಗಳೂರು, ಹಂಪಿ, ಗಂಗಾವತಿ, ಅಂಜನಾದ್ರಿ, ಕಿತ್ತೂರು, ಹೊನ್ನಾಪುರ ಮುಂತಾದೆಡೆ ಚಿತ್ರೀಕರಣ ನಡೆಸಿದ್ದೇವೆ’ ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಕಿರಣ್ ಈ ಚಿತ್ರದ ನಾಯಕ. ಹೊಸ ಪ್ರತಿಭೆ ಹರ್ಷಿತಾ ನಾಯಕಿ. ವಿರಾಬ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಬಸವರಾಜ್ ಹುರಕಡ್ಲಿ ಮತ್ತು ರೇಣುಕ ಪ್ರಸಾದ್.ಕೆ.ಆರ್ ಜತೆಯಾಗಿ ಈ ಚಿತ್ರವನ್ನ ನಿರ್ಮಾಣ ಮಾಡಿದ್ದಾರೆ. ಕಲ್ಯಾಣ್ ಕೃಷ್ಣ, ರಮೇಶ್ ಪಂಡಿತ್, ಸುನಂದ ಕಲ್ಬುರ್ಗಿ, ನಾಗೇಶ್ ಮಯ್ಯ ಮುಂತಾದವರು ಚಿತ್ರದಲ್ಲಿದ್ದಾರೆ. ಜ್ಯೂಡಾ ಸ್ಯಾಂಡಿ ಸಂಗೀತ, ಅರುಣ್ ಗೌಡ ಛಾಯಾಚಿತ್ರಗ್ರಹಣ, ಸಿ.ಎನ್ ಕಿಶೋರ್ ಸಂಕಲನ ಚಿತ್ರಕ್ಕಿದೆ.

ಎರಡು ಸಿನಿಮಾಗಳು ತೆರೆಗೆ

ಚಿತ್ರಮಂದಿರಗಳಲ್ಲಿ ಯಾವ ಭಾಷೆಯ ದೊಡ್ಡ ಸ್ಟಾರ್‌ಗಳ ಸಿನಿಮಾಗಳೂ ಇಲ್ಲ. ಆದಾಗ್ಯೂ ಈ ವಾರ ಎರಡು ಸಿನಿಮಾಗಳು ಮಾತ್ರ ತೆರೆ ಕಾಣುತ್ತಿವೆ.

ಎಕ್ಕ

ಯುವ ರಾಜ್‌ಕುಮಾರ್, ಸಂಜನಾ ಆನಂದ್ ಜೋಡಿಯಾಗಿ ನಟಿಸಿರುವ ಸಿನಿಮಾ ಹಲವು ಕಾರಣಗಳಿಂದ ನಿರೀಕ್ಷೆ ಹುಟ್ಟಿಸಿದೆ. ಚಿತ್ರದ ‘ಬ್ಯಾಂಗಲ್ ಬಂಗಾರಿ’ ಹಾಡು ಟ್ರೆಂಡ್ ಆಗಿದೆ.

ರೋಹಿತ್ ಪದಕಿ ನಿರ್ದೇಶನದ ಚಿತ್ರವಿದು. ‘ಡೆಡ್ಲಿ ಸೋಮ’ ಖ್ಯಾತಿಯ ನಟ ಆದಿತ್ಯ, ಬಾಲಿವುಡ್‌ನ ಅತುಲ್ ಕುಲಕರ್ಣಿ ಕೂಡ ಅಭಿನಯಿಸಿದ್ದಾರೆ. ಚರಣ್ ರಾಜ್ ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಅಶ್ವಿನಿ ಪುನೀತ್ ರಾಜ್‌ಕುಮಾರ್, ಜಯಣ್ಣ, ಕಾರ್ತಿಕ್ ಗೌಡ ಒಟ್ಟಿಗೆ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.



ಸಂಜನಾ ಆನಂದ್

ಜೂನಿಯರ್



ಶಾಸಕ ಜನಾರ್ದನ ರೆಡ್ಡಿ ಪುತ್ರ ಕಿರೀಟಿ ಹಾಗೂ ಶ್ರೀಲೀಲಾ ನಟನೆಯ ಸಿನಿಮಾವಿದು. ರಾಧಾಕೃಷ್ಣ ರೆಡ್ಡಿ ನಿರ್ದೇಶನವಿದೆ.

‘ಜೋಗಿ’ ಸಿನಿಮಾದ ‘ಹೊಡಿ ಮಗ’ ನಾನು ಮೊದಲು ಡಾನ್ಸ್ ಮಾಡಿದ ಹಾಡು. ನನಗೆ ಅಪ್ಪು ಅವರ ‘ಜಾಕಿ’ ಸಿನಿಮಾ ನಟನಾಗಲು ಸ್ಫೂರ್ತಿ ಕೊಟ್ಟಿತು. 13 ವರ್ಷಗಳ ಬಳಿಕ ಕನ್ನಡಕ್ಕೆ ಜೆನಿಲಿಯಾ ಮರಳಿದ್ದಾರೆ. ರವಿಚಂದ್ರನ್, ಗಿರಿಜಾ ಲೋಕೇಶ್ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ’ ಎಂದಿದ್ದಾರೆ ಕಿರೀಟಿ.

‘ಅಷ್ಟು ಸಿಂಪಲ್ ಆಗಿ ನಿರ್ಮಾಣಗೊಂಡ ಸಿನಿಮಾವಲ್ಲ. ಪ್ರತಿ ಕುಟುಂಬದ ಎಮೋಷನ್, ನೋವು ಇದರಲ್ಲಿದೆ. ಈ ಚಿತ್ರ ನೋಡಿದಾಗ ‘ಮಾಣಿಕ್ಯ’ ನೆನಪಾಯ್ತು. ನಾನು ಈ ಚಿತ್ರದಲ್ಲಿ ತಂದೆ ಪಾತ್ರ ಮಾಡಿದ್ದೇನೆ. ತಂದೆ–ಮಗನ ಎಮೋಷನ್ ಈ ಚಿತ್ರದ ಮೂಲಕ ಜನರಿಗೆ ತಲುಪುತ್ತದೆ’ ಎಂದು ರವಿಚಂದ್ರನ್ ಹೇಳಿದ್ದಾರೆ.

‘ನಾನು ಮೊದಲ ವರ್ಷ ಎಂಬಿಬಿಎಸ್ ವಿದ್ಯಾರ್ಥಿಯಾಗಿದ್ದಾಗ ಶುರುವಾದ ಸಿನಿಮಾ. ವೈದ್ಯೆಯಾದ ಮೇಲೆ ಬಿಡುಗಡೆಯಾಗುತ್ತಿದೆ’ ಎಂದು ಶ್ರೀಲೀಲಾ ಹೇಳಿದ್ದಾರೆ

ತೆಲುಗಿನ ಜನಪ್ರಿಯ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಗೀತ ನೀಡಿದ್ದಾರೆ. ‘ಬಾಹುಬಲಿ’, ‘ಆರ್‌ಆರ್‌ಆರ್’ ಸಿನಿಮಾಗಳಲ್ಲಿ ಕೆಲಸ ಮಾಡಿರುವ ಕೆ.ಕೆ. ಸೆಂಥಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ. ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಚಿತ್ರ ತೆರೆಗೆ ಬರುತ್ತಿದೆ.

ಮತ್ತೆ ಒಂದಾದ ಅನಂತನಾಗ್-ಲಕ್ಷ್ಮಿ



ಅನಂತ್ ನಾಗ್



ಲಕ್ಷ್ಮಿ

ದೀರ್ಘಕಾಲದ ಬಳಿಕ ಅನಂತನಾಗ್ ಮತ್ತು ಲಕ್ಷ್ಮಿ ತೆರೆಯ ಮೇಲೆ ಒಂದಾಗಿದ್ದಾರೆ. ‘ರಾಜದ್ರೋಹಿ’ ಚಿತ್ರದಲ್ಲಿ ಅವರು ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. ಸಮರ್ಥರಾಜ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಧನುಷ್ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಮಹದೇವಯ್ಯ ನಿರ್ಮಾಣ ಮಾಡಿದ್ದಾರೆ.

‘ಅಪ್ಪ-ಅಮ್ಮ ಕಣ್ಣಿನ ಮುಂದೆ ಇದ್ದರೂ ಗುರುತಿಸಲಾಗದಂಥ ಮಕ್ಕಳ ಸ್ಥಿತಿ ಒಂದೆಡೆ, ಅದೇ ರೀತಿ ತಂದೆ-ತಾಯಿಗೆ ಇವರೇ ತಮ್ಮ ಮಕ್ಕಳೆಂದು ತಿಳಿದಿರುವುದಿಲ್ಲ. ಇಂಥ ಸಂದರ್ಭವನ್ನು ಒಂದು ಕುಟುಂಬ ಹೇಗೆ ಎದುರಿಸುತ್ತದೆ ಎಂಬುದೇ ಚಿತ್ರಕಥೆ. ಇದೇ ರೀತಿ ಬೇರೆ ಬೇರೆ ಅವಘಡಗಳು ಸಂಭವಿಸಿದಾಗ ಚಿತ್ರ ಹೇಗೆಲ್ಲ ತಿರುವುಗಳು ಪಡೆದುಕೊಳ್ಳುತ್ತದೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು’ ಎನ್ನುತ್ತಾರೆ ನಿರ್ದೇಶಕರು.

ಅಭಿಜಿತ್, ಒರಟ ಪ್ರಶಾಂತ್, ನೀನಾಸಂ ಅಶ್ವಥ್, ಅಚ್ಯುತಕುಮಾರ್, ಕುರಿಬಾಂಡ್ ಸುನಿಲ್, ಬ್ಯಾಂಕ್ ಜನಾರ್ದನ್ ಮುಂತಾದವರು ನಟಿಸಿದ್ದಾರೆ. ರಘು ತುಮಕೂರು ಸಂಗೀತ, ಸತೀಶ್ ಮನೋಹರ್-ವೀನಸ್‌ಮೂರ್ತಿ-ನಾಗರಾಜ್ ಛಾಯಾಚಿತ್ರಗ್ರಹಣ, ಕುಮಾರ್ ಕೊಟಿಕೊಪ್ಪ ಸಂಕಲನ ಚಿತ್ರಕ್ಕಿದೆ.



‘ನೋ ಕೊಕೇನ್’ ಎಂದ ಪ್ರಥಮ್

ನಟ ಪ್ರಥಮ್ ನಾಯಕನಾಗಿರುವ ‘ನೋ ಕೊಕೇನ್’ ಚಿತ್ರದ ಚಿತ್ರೀಕರಣ ಅಂತಿಮ ಹಂತ ತಲುಪಿದೆ. ಕೌರವ ವೆಂಕಟೇಶ್ ನಿರ್ದೇಶನದ ಚೊಚ್ಚಲ ಚಿತ್ರವಿದು.

‘ಕೊಕೇನ್ ದುಷ್ಪರಿಣಾಮಗಳ ಕುರಿತಾದ ಕಥೆಯಿದು. ಚಿತ್ರದಲ್ಲಿ ಕೇಂದ್ರ ರಕ್ಷಣಾ ಸಚಿವರಾದ ಸಿದ್ಲಿಂಗು ಶ್ರೀಧರ್, ಗೃಹ ಸಚಿವ, ಪೊಲೀಸ್ ಆಯುಕ್ತರೊಂದಿಗೆ ಕೊಕೇನ್ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಿರುವಾಗ ನಾಯಕನ ಆಗಮನವಾಗುತ್ತದೆ. ಭದ್ರತೆಯನ್ನು ಉಲ್ಲಂಘಿಸಿ ಆತ ಬಂದಿರುವುದರಿಂದ ನಮ್ಮ ಮೇಲೆ ಆಕ್ರಮಣ ಮಾಡಲು ಬಂದಿದ್ದಾನೆಂದು ಅನುಮಾನಿಸಿ ನಾಯಕನ ಮೇಲೆ ಫೈರಿಂಗ್ ಆಗುತ್ತದೆ. ಆತ ಏತಕ್ಕೆ ಬಂದ? ಹೇಳುವುದಾದರೂ ಏನಿತ್ತು? ಇದಕ್ಕೆಲ್ಲಾ ಉತ್ತರ ಚಿತ್ರ ನೋಡಿದರೆ ತಿಳಿಯುತ್ತದೆ. ಬಹುಭಾಗ ಬೆಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. ಕ್ಲೈಮ್ಯಾಕ್ಸ್ ಅನ್ನು ಮಂಗಳೂರಿನಲ್ಲಿ ಚಿತ್ರೀಕರಿಸುತ್ತೇವೆ. ಒಂದು ಹಾಡಿಗಾಗಿ ವಿದೇಶಕ್ಕೆ ಹೋಗುವ ಇರಾದೆ ಇದೆ’ ಎಂದರು ನಿರ್ದೇಶಕರು.

ಅಯೋಧ್ಯರಾಮ್ ಪ್ರೊಡಕ್ಷನ್ಸ್ ಅಡಿಯಲ್ಲಿ ಪುನೀತ್ ನಿರ್ಮಾಣ ಮಾಡುತ್ತಿದ್ದಾರೆ. ಆರನ ಮೂಳೇರ್ ನಾಯಕಿ. ಶೋಭರಾಜ್, ಸಿದ್ಲಿಂಗು ಶ್ರೀಧರ್, ಜಗದೀಶ್ ಕೊಪ್ಪ ಮತ್ತು ತೆಲುಗು ಚಿತ್ರರಂಗದ ಖ್ಯಾತ ನಟ ಸೂರ್ಯಭಗವಾನ್ ದಾಸ್, ರಚಿತಾ, ಮಿಮಿಕ್ರಿ ಗೋಪಿ, ರವಿ ಕಾಳೆ ಮುಂತಾದವರು ಅಭಿನಯಿಸಿದ್ದಾರೆ. ಯೋಗರಾಜ್ ಭಟ್-ಭರ್ಜರಿ ಚೇತನ್ ಸಾಹಿತ್ಯದ ಗೀತೆಗಳಿಗೆ ಡಿ.ಆರ್.ಕಲ್ಕಿ ಅಭಿಷೇಕ್ ಸಂಗೀತ ಸಂಯೋಜಿಸುತ್ತಿದ್ದಾರೆ. ಸಾಮ್ರಾಟ್ ಛಾಯಾಚಿತ್ರಗ್ರಹಣ, ರಘು ಸಂಕಲನ ಚಿತ್ರಕ್ಕಿದೆ.

‘ಬಲರಾಮನ ದಿನಗಳು’ ಚಿತ್ರೀಕರಣ ಪೂರ್ಣ



ವಿನೋದ್ ಪ್ರಭಾಕರ್ ಅಭಿನಯದ ‘ಬಲರಾಮನ ದಿನಗಳು’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ‘ಆ ದಿನಗಳು’ ಖ್ಯಾತಿಯ ಕೆ.ಎಂ.ಚೈತನ್ಯ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಪದ್ಮಾವತಿ ಫಿಲ್ಮ್ಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಬಂಡವಾಳ ಹೂಡಿದ್ದಾರೆ.

‘ಬೆಂಗಳೂರು, ಮೈಸೂರು, ಶಿವಮೊಗ್ಗ, ಸಕಲೇಶಪುರ ಮುಂತಾದ ಕಡೆ 80 ದಿನಗಳ ಚಿತ್ರೀಕರಣ ನಡೆದಿದೆ. ಸದ್ಯದಲ್ಲೇ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಲಿವೆ. 1980ರ ಕಾಲಘಟ್ಟದಲ್ಲಿ ನಡೆಯುವ ಕಥಾಹಂದರ ಹೊಂದಿರುವ ಚಿತ್ರವಿದು. ಈ ವರ್ಷವೇ ತೆರೆಗೆ ತರುವ ಯೋಚನೆಯಿದೆ’ ಎಂದು ಚಿತ್ರತಂಡ ಹೇಳಿದೆ.

ವಿನೋದ್ ಪ್ರಭಾಕರ್ ಅವರಿಗೆ ನಾಯಕಿಯಾಗಿ ಪ್ರಿಯಾ ಆನಂದ್ ಅಭಿನಯಿಸಿದ್ದಾರೆ. ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ, ‘ಬಿಗ್ ಬಾಸ್’ ಖ್ಯಾತಿಯ ವಿನಯ್ ಗೌಡ ಸೇರಿದಂತೆ ಹಲವು ಕಲಾವಿದರು ತಾರಾಗಣದಲ್ಲಿದ್ದಾರೆ.

ಸಂತೋಷ್ ನಾರಾಯಣನ್ ಸಂಗೀತ ನೀಡುತ್ತಿದ್ದಾರೆ. ಇದು ಸಂತೋಷ್ ನಾರಾಯಣನ್ ಸಂಗೀತ ನೀಡುತ್ತಿರುವ ಮೊದಲ ಕನ್ನಡ ಚಿತ್ರವಾಗಿದೆ. ವೇಣು ಛಾಯಾಚಿತ್ರಗ್ರಹಣವಿದೆ.

ರಾತ್ರಿ ವೇಳೆ ಗಲಭೆ ನಿಯಂತ್ರಣಕ್ಕೆ ಒತ್ತು, ತರಬೇತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಇತ್ತೀಚಿನ ದಿನಗಳಲ್ಲಿ ರಾತ್ರಿ ವೇಳೆಯಲ್ಲೂ ಕಾನೂನು ಸುವ್ಯವಸ್ಥೆ ರಕ್ಷಣೆ ಸಮಸ್ಯೆ ಆಗುತ್ತಿದೆ. ರಾತ್ರಿಯಲ್ಲಿ ನಡೆಯುವ ಗಲಭೆಗಳ ನಿಯಂತ್ರಿಸಲು ಸಿಬ್ಬಂದಿ ಸಜ್ಜುಗೊಳಿಸಲಾಗುತ್ತಿದೆ' ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ತರಬೇತಿ) ಅಲೋಕ್ ಕುಮಾರ್ ಗುರುವಾರ ತಿಳಿಸಿದರು.



ಅಲೋಕ್ ಕುಮಾರ್

ಮಾಧ್ಯಮಗಳ ಜೊತೆ ಮಾತನಾಡಿ, ಪ್ರಶಿಕ್ಷಣಾರ್ಥಿಗಳಿಗೆ ಸಾಮಾನ್ಯವಾಗಿ ಹಗಲಿನಲ್ಲಿ ತರಬೇತಿ ನೀಡಲಾಗುತ್ತದೆ ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ, ಮಂಡ್ಯದ ನಾಗಮಂಗಲ, ಮೈಸೂರಿನ ಉದಯಗಿರಿಯಲ್ಲಿ ರಾತ್ರಿ ವೇಳೆ ಗಲಭೆ ನಡೆದಿದ್ದವು. ಇಂಥ ಗಲಭೆಗಳ ನಿಯಂತ್ರಣವೇ ತರಬೇತಿಯ ಉದ್ದೇಶವಾಗಿದೆ ಎಂದರು.

'ಪ್ರತಿ ತಿಂಗಳ ಒಂದು ರಾತ್ರಿ 12ರಿಂದ 1ಗಂಟೆಯ ನಡುವೆ ಎಚ್ಚರಿಕೆ ಗಂಟೆ ಬಾರಿಸಲಾಗುತ್ತದೆ. ಮಲಗಿರುವ ಪ್ರಶಿಕ್ಷಣಾರ್ಥಿಗಳು ಎದ್ದು, ಸಿದ್ಧರಾಗಿ ತರಬೇತಿ ಸ್ಥಳಕ್ಕೆ ಬರುತ್ತಾರೆ. ಫೈರಿಂಗ್, ಲಾಠಿ ಚಾರ್ಜ್, ಗಲಭೆ ಕೋರರ ನಿಯಂತ್ರಣ ಕುರಿತು ಮೂರು ಗಂಟೆ ತರಬೇತಿ ಇರಲಿದೆ. ಪ್ರಾಯೋಗಿಕವೂ ಇರುತ್ತದೆ' ಎಂದರು.

ಗುಂಪು ಗಲಭೆಗಳ ವೇಳೆ ಉದ್ರಿಕ್ತರನ್ನು ಕೊಲ್ಲುವುದು ಉದ್ದೇಶ ಆಗಬಾರದು. ಹೀಗಾಗಿ, ಸೊಂಟದ ಮೇಲೆ ಗುರಿ ಇರಿಸಿ ಶೂಟ್ ಮಾಡುವುದನ್ನು ನಿಲ್ಲಿಸಲಾಗಿದೆ. ಸೊಂಟದ ಕೆಳಗಡೆ ಗುರಿ ಇಟ್ಟು ಶೂಟ್ ಮಾಡುವುದನ್ನು 2025ರ ಬ್ಯಾಚ್‌ನಿಂದ ಆರಂಭಿಸಲಾಗಿದೆ. ಲಾಠಿ ಚಾರ್ಜ್‌ಗೂ ಇದೇ ನಿಯಮ ಅನ್ವಯ' ಎಂದರು.

ಚಿಟಿಕೆ ಸುದ್ದಿ

ಕಾಂಗ್ರೆಸ್ ಸರ್ಕಾರ ಅಸ್ಥಿರ: ಶ್ರೀರಾಮುಲು

ಬಳ್ಳಾರಿ: 'ರಾಜ್ಯದ ಮುಖ್ಯಮಂತ್ರಿ ಯಾರು? ಸಿದ್ದರಾಮಯ್ಯ ಅಥವಾ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಎಂಬ ಬಗ್ಗೆ ಗೊಂದಲ ಮೂಡಿದೆ' ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು.



ಶ್ರೀರಾಮುಲು

'ಸಿದ್ದರಾಮಯ್ಯ ಅವರು ಸುರ್ಜೇವಾಲಾ ಎದುರು ಮಂಡಿಯೂರಿದ್ದಾರೆ. ಸರ್ಕಾರದ ಆಯಸ್ಸನ್ನು ಅವರೇ ನಿರ್ಧರಿಸುವರು. ಬಿಹಾರ ಚುನಾವಣೆ ಕಾರಣಕ್ಕೆ ಸಿದ್ದರಾಮಯ್ಯ ಅವರನ್ನು ಹಿಂದುಳಿದ ವರ್ಗದ ನಾಯಕನಾಗಿ ಬಿಂಬಿಸಲಾಗುತ್ತಿದೆ.ಚುನಾವಣೆ ಬಳಿಕ ಈ ಸರ್ಕಾರವೇ ಇರುವುದಿಲ್ಲ' ಎಂದು ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನನ್ನ ಮತ್ತು ಜನಾರ್ದನ ರೆಡ್ಡಿ ನಡುವೆ ಮನಸ್ತಾಪವಿಲ್ಲ. ಕೇಂದ್ರ ಸಚಿವ ಸೋಮಣ್ಣ ದೆಹಲಿಯಲ್ಲಿ ನಮ್ಮಿಬ್ಬರ ಸಂಧಾನ ಮಾಡುತ್ತಾರೆ ಎಂಬುದು ಸುಳ್ಳು. ನನ್ನನ್ನು ಪಕ್ಷದಲ್ಲಿ ಕಡೆಗಣಿಸಿಲ್ಲ. ನನ್ನನ್ನು ಬಿಟ್ಟು ರಾಜಕಾರಣ ಮಾಡಲು ಆಗದು' ಎಂದರು.

ಹರಪನಹಳ್ಳಿ ಶಾಸಕಿ ಕಚೇರಿಯಲ್ಲೇ ಕಳವು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಇಲ್ಲಿಯ ಕಾಶಿ ಸಂಗಮೇಶ್ವರ ಬಡಾವಣೆಯಲ್ಲಿರುವ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರ ಕಚೇರಿಯಿಂದ ಗುರುವಾರ ನಸುಕಿನಲ್ಲಿ ₹2.5 ಲಕ್ಷ ನಗದು ಮತ್ತು ₹10.80 ಲಕ್ಷ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಕಳವು ಆಗಿದೆ.

'ಶಾಸಕಿ ಬೆಂಗಳೂರಿನಲ್ಲಿದ್ದರು. ಕಚೇರಿ ಸಿಬ್ಬಂದಿ ಬುಧವಾರ ಸಂಜೆ ಬಾಗಿಲಿಗೆ ಬೀಗ ಹಾಕಿದ್ದರು. ಗುರುವಾರ ಬೆಳಿಗ್ಗೆ ಕೃತ್ಯ ನಡೆದಿರುವುದು ಗೊತ್ತಾಗಿದೆ. ಮುಖ ಮರೆಮಾಚಿಕೊಂಡಿದ್ದ ಇಬ್ಬರು, ಬಾಗಿಲ ಚಿಲಕ ಮುರಿದಿರುವುದು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೋಲ್ಕತ್ತ ಅತ್ಯಾಚಾರ ಪ್ರಕರಣ: ಲೋಕಾಪುರ ಯುವಕ ಬಂಧನ

ಬಾಗಲಕೋಟೆ: ಕೋಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಆವರಣದಲ್ಲಿ ಈಚೆಗೆ ನಡೆದ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿರುವ ಪರಮಾನಂದ ಟೋಪಣ್ಣವರ ಎಂಬ ಆರೋಪಿ ಬಾಗಲಕೋಟೆ ಜಿಲ್ಲೆಯ ಲೋಕಾಪುರದ ನಿವಾಸಿ ಎಂದು ಗೊತ್ತಾಗಿದೆ.



'ಕೋಲ್ಕತ್ತದ ಐಐಎಂ ಸಂಸ್ಥೆಯಲ್ಲಿ ಎರಡನೇ ವರ್ಷದ ವಿದ್ಯಾರ್ಥಿಯಾಗಿದ್ದ ಪರಮಾನಂದನನ್ನು ಜುಲೈ 19ರವರೆಗೆ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ವಿಷಯ ತಿಳಿದ ಕೂಡಲೇ ಅವರ ಪೋಷಕರು ಕೋಲ್ಕತ್ತಕ್ಕೆ ಹೋಗಿದ್ದಾರೆ. ಅವರ ಮನೆಗೆ ಬೀಗ ಹಾಕಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಉಜ್ವಲಾ: ಎಲ್‌ಪಿಜಿ ಮರುಪೂರಣ ಮಾಡದ 2 ಲಕ್ಷ ಮಂದಿ

ಕಲಬುರಗಿ: ಪ್ರಧಾನಮಂತ್ರಿ ಉಜ್ವಲಾ ಯೋಜನೆಯಡಿ ರಾಜ್ಯದಲ್ಲಿ ಉಚಿತ ಅಡುಗೆ ಅನಿಲ ಸಂಪರ್ಕ ಪಡೆದಿರುವ 18,32,338 ಬಳಕೆದಾರರಲ್ಲಿ, 2024-25ನೇ ಸಾಲಿನಲ್ಲಿ 2,07,344 ಬಳಕೆದಾರರು ಒಮ್ಮೆಯೂ ಸಿಲಿಂಡರ್ ಮರುಪೂರಣ ಮಾಡಿಕೊಂಡಿಲ್ಲ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಶನ್ ಹೇಳಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಆರ್‌ಟಿಐ ಕಾರ್ಯಕರ್ತ, ವಕೀಲ ಭೀಮನಗೌಡ ಪರಗೊಂಡ ಅವರು ಸಲ್ಲಿಸಿದ್ದ ಅರ್ಜಿಗೆ ಉತ್ತರಿಸಿರುವ ನಿಗಮ, 'ರಾಜ್ಯದಲ್ಲಿ 2024-25ನೇ ವರ್ಷ 16,24,994 ಫಲಾನುಭವಿಗಳಷ್ಟೇ ಸಿಲಿಂಡರ್ ಮರುಪೂರಣ ಮಾಡಿಸಿಕೊಂಡಿದ್ದಾರೆ' ಎಂದು ಮಾಹಿತಿ ನೀಡಿದೆ.

ತಿದ್ದುಪಡಿ

ಗುರುವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವ '4 ಸಾವಿರ ವರ್ಷಗಳ ಹಿಂದಿನ ಜನವಸತಿ ಕುರುಹು ಪತ್ತೆ' ವರದಿಯಲ್ಲಿ 'ಮಲ್ಲಿಕಾರ್ಜುನ ಬೆಟ್ಟ ಪ್ರದೇಶ' ಎಂಬುದು 'ಮಲ್ಲಿಕಾರ್ಜುನ ದೇವಾಲಯ ಪ್ರದೇಶ' ಎಂದಾಗಬೇಕಿತ್ತು. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಆ್ಯಂಡ್ರಿಮ್ ಬವೆರ್' ಎಂಬುದು ಆ್ಯಂಡ್ರಿವ್ ಬವೆರ್ ಎಂದಾಗಬೇಕಿತ್ತು. 'ದೆಹಲಿಯ ನೊಯಿಡಾ ವಿಶ್ವವಿದ್ಯಾಲಯ' ಎಂಬುದು 'ದೆಹಲಿ-ರಾಷ್ಟ್ರ ರಾಜಧಾನಿ ಪ್ರದೇಶದಶಿವನಾಡಾರ್ ವಿಶ್ವವಿದ್ಯಾಲಯ ಎಂದು ಆಗಬೇಕಿತ್ತು.

ಕನಕಗಿರಿಗೆ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್

ರಾಯಚೂರಿಗೆ ಜವಳಿ ಪಾರ್ಕ್, ಹಾನಗಲ್ ತಾಲ್ಲೂಕಿಗೆ ತೋಟಗಾರಿಕಾ ಬೆಳೆಗಳ ಫುಡ್ ಪಾರ್ಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಚೂರು ತಾಲ್ಲೂಕಿನಲ್ಲಿ ₹24.50 ಕೋಟಿ ವೆಚ್ಚದ ನೂತನ ಜವಳಿ ಪಾರ್ಕ್, ಹಾನಗಲ್ ತಾಲ್ಲೂಕು ಯಳವಟ್ಟಿಯಲ್ಲಿ ₹35.07 ಕೋಟಿ ವೆಚ್ಚದಲ್ಲಿ ತೋಟಗಾರಿಕಾ ಬೆಳೆಗಳ ಸಂಸ್ಕರಣಾ ಘಟಕ(ಫುಡ್ ಪಾರ್ಕ್) ಮತ್ತು ಕೊಪ್ಪಳ ಜಿಲ್ಲೆ ಕನಕಗಿರಿ ತಾಲ್ಲೂಕಿನ ಸಿರಿವಾರ ಗ್ರಾಮದಲ್ಲಿ ₹83.79 ಕೋಟಿ ವೆಚ್ಚದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ರಾಯಚೂರಿನಲ್ಲಿ ಜವಳಿ ಪಾರ್ಕ್ ಅನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು. ಯಳವಟ್ಟಿ ಗ್ರಾಮದಲ್ಲಿ 28.3 ಎಕರೆ ಪ್ರದೇಶದಲ್ಲಿ ಮಾವು ಮತ್ತು ಇತರೆ ತೋಟಗಾರಿಕೆ ಬೆಳೆಗಳ ಬಹು ಉತ್ಪನ್ನಗಳ ನಿರ್ವಹಣೆ, ಸಂಗ್ರಹಣೆ, ಸಂಸ್ಕರಣೆ ಮತ್ತು ಸಂರಕ್ಷಣಾ ಘಟಕಗಳುಳ್ಳ ಫುಡ್ ಪಾರ್ಕ್ ಅನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಸ್ಥಾಪಿಸಲಾಗುವುದು. ಸಿರಿವಾರ ಪರಂಪೋಕದ ಸರ್ಕಾರಿ ಜಮೀನಿನಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು ಎಂದು ಪಾಟೀಲ ಹೇಳಿದರು.

ಅಣು ವಿದ್ಯುತ್: ಎನ್‌ಟಿಪಿಸಿ ಸಲಹೆ ತಳ್ಳಿಹಾಕಿದ ಸಂಪುಟ



ರಾಜ್ಯದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪಿಸಲು ಎನ್‌ಟಿಪಿಸಿ ಗುರುತಿಸಿದ್ದ ರಾಯಚೂರು, ಕೊಪ್ಪಳ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಅನುಮತಿ ನೀಡಲು ಸಚಿವ ಸಂಪುಟ ಸಭೆ ನಿರಾಕರಿಸಿದೆ. 'ಬದಲಿಗೆ ರಾಜ್ಯದ ಇತರ ಯಾವುದೇ ಭಾಗದಲ್ಲಿ ಸಂಭಾವ್ಯ ಸ್ಥಳಗಳನ್ನು ಗುರುತಿಸಿ ಅಧ್ಯಯನ ಮಾಡಿ ಪ್ರಾಥಮಿಕ ವರದಿಯನ್ನು ನೀಡಬಹುದು. ರಾಜ್ಯದಲ್ಲಿ ಇನ್ನೊಂದು ಅಣು ವಿದ್ಯುತ್ ಸ್ಥಾವರ ಸ್ಥಾಪಿಸಲು ನಮ್ಮ ಒಪ್ಪಿಗೆ ಇದೆ. ಆದರೆ, ಪರ್ಯಾಯ ಜಾಗಗಳನ್ನು ಗುರುತಿಸಿಕೊಡಬೇಕು' ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.



ಪ್ರಮುಖ ತೀರ್ಮಾನಗಳು:

- ಮೈಸೂರು ವಿಶ್ವವಿದ್ಯಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ಪೀಠವನ್ನು ಸ್ಥಾಪಿಸಲು ₹10 ಕೋಟಿ ಅನುದಾನ
- ಆಯುಷ್ ಇಲಾಖೆಯ ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಅಮಲುಜಾರಿ ವಿಭಾಗ ಮತ್ತು ಪರೀಕ್ಷಾ ಪ್ರಯೋಗಾಲಯವನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಲ್ಲಿ ವಿಲೀನ
- ಚಿಕ್ಕಬಳ್ಳಾಪುರ ತಾಲ್ಲೂಕು ಯರಮಾರೇನಹಳ್ಳಿ ಗ್ರಾಮದ 5 ಎಕರೆ 23 ಗುಂಟೆ ಸರ್ಕಾರಿ ಬೀಳು ಜಮೀನನ್ನು ಅಕ್ಷಯಪಾತ್ರೆ ಅಡುಗೆ ಮನೆ ಮತ್ತು ಹಿಂದುಳಿದ ಗ್ರಾಮೀಣ ಮಕ್ಕಳ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಇಸ್ಕಾನ್‌ಗೆ ಮಂಜೂರು
- ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ವತಿಯಿಂದ ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಳವಡಿಸಲಾಗಿರುವ ಸಮರ್ಪಕ ಕಾರ್ಯನಿರ್ವಹಿಸದ 1,530 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳ ಉಪಕರಣಗಳನ್ನು ತೆಗೆದು ₹19.89 ಕೋಟಿ ವೆಚ್ಚದಲ್ಲಿ ಹೊಸದಾಗಿ ಅಳವಡಿಸಲು ಒಪ್ಪಿಗೆ
- ಅಂತರ್ಜಲ ಬಳಕೆಗೆ ನಿರಾಕ್ಷೇಪಣಾ ನೀಡುವ ಸಂಬಂಧ ಕೇಂದ್ರೀಯ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ಸೂಕ್ತ ಮಾರ್ಪಾಡಿನೊಂದಿಗೆ ರಾಜ್ಯದಲ್ಲಿ ಜಾರಿಗೊಳಿಸಲು ತೀರ್ಮಾನ
- ದ.ಕ ಜಿಲ್ಲೆ ಉಳ್ಳಾಲದಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗಾಗಿ ₹17.09 ಕೋಟಿ ವೆಚ್ಚದಲ್ಲಿ ವಸತಿ ಸಹಿತ ಪದವಿಪೂರ್ವ ಕಾಲೇಜು ನಿರ್ಮಾಣಕ್ಕೆ ಒಪ್ಪಿಗೆ
- ಕಿತ್ತೂರು ತಾಲ್ಲೂಕಿನ ಕಿತ್ತೂರು ಕೋಟೆ ಆವರಣದಲ್ಲಿ ₹30 ಕೋಟಿ ವೆಚ್ಚದಲ್ಲಿ ಥೀಮ್ ಪಾರ್ಕ್ ನಿರ್ಮಾಣ ಕಾಮಗಾರಿಗೆ ಅನುಮೋದನೆ.
- ಹಾರಂಗಿ ಜಲಾಶಯದ ಕೆಳಭಾಗ ಹುಲುಗುಂದ ಗ್ರಾಮದ ಬಳಿ ₹36.50 ಕೋಟಿ ವೆಚ್ಚದಲ್ಲಿ ಕಮಾನು ಸೇತುವೆ ನಿರ್ಮಿಸಲು ಒಪ್ಪಿಗೆ
- ಹೇಮಾವತಿ ಯೋಜನೆಯಡಿ ನಾಗಮಂಗಲ ಶಾಖಾ ನಾಲೆಯ ಸರಪಳಿಯನ್ನು 0.00 ಕಿ.ಮೀ.ನಿಂದ 78.46 ಕಿ.ಮೀ.ವರೆಗೆ ₹560 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆ

ಉತ್ತರ ಕರ್ನಾಟಕ ಪ್ರವಾಸಿ ಸರ್ಕ್ಯೂಟ್



ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮ ಪ್ರೋತ್ಸಾಹಿಸಲು ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ವಿಜಯಪುರ ಒಳಗೊಂಡ ಪ್ರವಾಸಿ ಸರ್ಕ್ಯೂಟ್ ಅಭಿವೃದ್ಧಿಪಡಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

₹166.22 ಕೋಟಿ ವೆಚ್ಚದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಡಿಬಿಎಫ್‌ಒಟಿ ಮಾದರಿಯಲ್ಲಿ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದ ಮೂಲಕ ಅಭಿವೃದ್ಧಿಪಡಿಸಲಾಗುವುದು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಜೈವಿಕವಾಗಿ ವಿಘಟನೆಯಾಗುವ ಕೈಚೀಲಕ್ಕೆ ಒಪ್ಪಿಗೆ



ಬೆಂಗಳೂರು: ಇನ್ನು ಮುಂದೆ ಪ್ಲಾಸ್ಟಿಕ್ ಕೈಚೀಲಗಳ (ಕ್ಯಾರಿ ಬ್ಯಾಗ್) ಬದಲಿಗೆ ಜೈವಿಕವಾಗಿ ವಿಘಟನೆಯಾಗುವ ಕೈಚೀಲಗಳ ತಯಾರಿಕೆ, ದಾಸ್ತಾನು ಮತ್ತು ಮಾರಾಟ ಮಾಡುವುದಕ್ಕೆ ಅವಕಾಶ ನೀಡುವ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅರಣ್ಯ ಸಚಿವ ಈಶ್ವರ ಖಂಡ್ರೆ, '2016ರ ಅಧಿಸೂಚನೆಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ವ್ಯಾಖ್ಯಾನಕ್ಕೆ ತಿದ್ದುಪಡಿ ಮಾಡಲಾಗಿದೆ. ಆ ಅಧಿಸೂಚನೆಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಭಿತ್ತಿಪತ್ರ, ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ತಟ್ಟೆ, ಲೋಟ, ಚಮಚ, ಪ್ಲಾಸ್ಟಿಕ್ ಹಾಳೆಗಳ ತಯಾರಿಕೆ, ಮಾರಾಟ, ದಾಸ್ತಾನು ನಿಷೇಧಿಸಲಾಗಿತ್ತು' ಎಂದು ತಿಳಿಸಿದರು.

'ಇತ್ತೀಚೆಗೆ ಸಸ್ಯಜನ್ಯ ಕೈಚೀಲಗಳ ಆವಿಷ್ಕಾರವಾಗಿದ್ದು, ಇವು 180 ದಿನಗಳಲ್ಲಿ ಜೈವಿಕವಾಗಿ ವಿಘಟನೆಯಾಗುತ್ತವೆ. ಹೀಗಾಗಿ ಇದರ ಮಾರಾಟಕ್ಕೆ ಅನುಕೂಲವಾಗುವಂತೆ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ' ಎಂದರು.

'ಈ ಹಿಂದೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನಡೆದ ಸಭೆಯಲ್ಲಿ 2016ರ ಅಧಿಸೂಚನೆಗೆ ತಿದ್ದುಪಡಿ ತಂದು, ಕೇಂದ್ರ ಪರಿಸರ ಇಲಾಖೆಯ 2021ರ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಪ್ರಸ್ತಾವ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದ್ದೆ. ಸಂಪುಟದ ತೀರ್ಮಾನ ಕೇಂದ್ರ ಸರ್ಕಾರದ 21ರ ಆದೇಶಕ್ಕೆ ಅನುಗುಣವಾಗಿದೆ' ಎಂದು ಹೇಳಿದರು.

ಶೆಟ್ಟಿಹಳ್ಳಿ ವನ್ಯಜೀವಿಧಾಮದ ಗಡಿ ಪರಿಷ್ಕರಣೆ

ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳ ವ್ಯಾಪ್ತಿಯಲ್ಲಿರುವ ಶೆಟ್ಟಿಹಳ್ಳಿ ವನ್ಯಜೀವಿಧಾಮದ ಗಡಿ ಪರಿಷ್ಕರಣೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ವನ್ಯಜೀವಿಧಾಮದ ವಿಸ್ತೀರ್ಣ 395.60 ಚ.ಕಿ.ಮೀ ಇದ್ದು, ಅದನ್ನು 396.165 ಚ.ಕಿ.ಮೀ.ಗೆ ವಿಸ್ತರಿಸಿ ಪರಿಷ್ಕರಣೆ ಮಾಡಲು ಸಂಪುಟ ಒಪ್ಪಿಗೆ ನೀಡಿದೆ. 1974ರಲ್ಲಿ ಶೆಟ್ಟಿಹಳ್ಳಿ ವನ್ಯ ಜೀವಿಧಾಮ ಎಂದು ಅಧಿಸೂಚನೆ ಹೊರಡಿಸಲಾಗಿತ್ತು. ಮೂಲ ಅಧಿಸೂಚನೆಯ ವಿಸ್ತೀರ್ಣಕ್ಕೆ ಚ್ಯುತಿಯಾಗದಂತೆ ವಿಸ್ತೀರ್ಣವನ್ನು ಹೆಚ್ಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.


1974 ರಲ್ಲಿ ಅಧಿಸೂಚನೆ ಹೊರಡಿಸಿದಾಗ, ಅದರಲ್ಲಿ ರಸ್ತೆ, ಬಸ್ ನಿಲ್ದಾಣ, ಜನವಸತಿ ಪ್ರದೇಶ, ಪಟ್ಟಾ ಜಮೀನು, ಶರಾವತಿ ಮುಳುಗಡೆ ಪುನರ್‌ವಸತಿಗಾಗಿ ಗುರುತಿಸಿರುವ ಪ್ರದೇಶ ಇತ್ಯಾದಿ ಸೇರ್ಪಡೆಯಾಗಿತ್ತು. ಜನರಿಗೆ ಆಗುತ್ತಿದ್ದ ಅನಾನುಕೂಲ ತಪ್ಪಿಸಲು ಗಡಿ ಪರಿಷ್ಕರಣೆ ಮಾಡಲು ಇಲಾಖೆ ತೀರ್ಮಾನಿಸಿ, ಇದಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆ ಪಡೆಯಲಾಗಿತ್ತು ಎಂದು ಅವರು ವಿವರಿಸಿದರು.

ಸುದ್ದಿ 2 ನಿಮಿಷ

ಶಾಸಕ ನಂಜೇಗೌಡರ ₹1.32 ಕೋಟಿ ಆಸ್ತಿ ವಶಕ್ಕೆ

ಬೆಂಗಳೂರು: ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘದ (ಕೋಮುಲ್) ನೇಮಕಾತಿ ಅಕ್ರಮ ಪ್ರಕರಣದಲ್ಲಿ, ಸಂಘದ ಅಧ್ಯಕ್ಷ ಮತ್ತು ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಅವರ ₹1.32 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಸರ್ಕಾರಿ ಜಮೀನು ಮಂಜೂರಾತಿ ಪ್ರಕರಣವೊಂದರ ತನಿಖೆಯ ಭಾಗವಾಗಿ ನಂಜೇಗೌಡ ಅವರ ಮನೆಯಲ್ಲಿ ಶೋಧ ನಡೆಸಿದ್ದ ಇ.ಡಿ ಅಧಿಕಾರಿಗಳು, 2023ರಲ್ಲಿ ಕೋಮುಲ್‌ನ ವಿವಿಧ ಹುದ್ದೆಗಳಿಗೆ ನಡೆಸಿದ್ದ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ದೊರೆತಿದೆ ಎಂದು ತಿಳಿಸಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದರು. ಜತೆಗೆ ಕರ್ನಾಟಕ ಲೋಕಾಯುಕ್ತಕ್ಕೂ ಪತ್ರ ಬರೆದಿದ್ದರು.



ವಿವಿಧ ಹುದ್ದೆಗಳ ನೇಮಕಾತಿಗಾಗಿ ಕೋಮುಲ್ ಲಿಖಿತ ಪರೀಕ್ಷೆ ಮತ್ತು ಸಂದರ್ಶನ ನಡೆಸಿತ್ತು. ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ತಿದ್ದಿ, ತಮ್ಮ ಶಿಫಾರಸಿನವರಿಗೆ ನೇಮಕಾತಿ ನೀಡಿ ಎಂದು ನಂಜೇಗೌಡ ಅವರು ಕೋಮುಲ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದರು. ಈ ಅಕ್ರಮದಲ್ಲಿ ಕೋಮುಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಗೋಪಾಲಮೂರ್ತಿ ಭಾಗಿಯಾಗಿದ್ದರು ಎಂದು ಇ.ಡಿ ಹೇಳಿತ್ತು. ಈ ಅಕ್ರಮದ ಮೂಲಕ ಇಬ್ಬರೂ ಅಭ್ಯರ್ಥಿಗಳಿಂದ ಒಟ್ಟು ₹1.56 ಕೋಟಿ ವಸೂಲಿ ಮಾಡಿದ್ದರು. ನಂಜೇಗೌಡ ಒಬ್ಬರೇ ₹80 ಲಕ್ಷ ಪಡೆದುಕೊಂಡಿದ್ದರು ಎಂದು ಇ.ಡಿ ಮಾಹಿತಿ ನೀಡಿತ್ತು.

ಅಸಮಾಧಾನ: ದೇವೇಗೌಡರೇ ಸರಿಪಡಿಸಲಿ– ಎಚ್.ಡಿ.ರೇವಣ್ಣ

ಮೈಸೂರು: 'ಜೆಡಿಎಸ್ ಮುಖಂಡರ ಅಸಮಾಧಾನವನ್ನು ವರಿಷ್ಠರಾದ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೇ ಸರಿಪಡಿಸಬೇಕು' ಎಂದು ಶಾಸಕ ಎಚ್.ಡಿ.ರೇವಣ್ಣ ಗುರುವಾರ ಹೇಳಿದರು.

ಚಾಮುಂಡಿ ಬೆಟ್ಟದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಯಾವ ಪಕ್ಷದಲ್ಲಿ ತಾನೇ ಅಸಮಾಧಾನ ಇಲ್ಲ' ಎಂದು ಪ್ರಶ್ನಿಸಿದರು.

'ನಿಖಿಲ್ ಕುಮಾರಸ್ವಾಮಿ ರಾಜ್ಯ ಪ್ರವಾಸ ಮಾಡುತ್ತಿರುವುದು ಸಂತೋಷದ ಸಂಗತಿ, ಯುವಕರೆಲ್ಲರೂ ಹೋರಾಟ ಮಾಡಬೇಕು. ಪಕ್ಷ ಸಂಘಟಿಸಬೇಕು' ಎಂದು ಹೇಳಿದರು.

ಚಿಟಿಕೆ ಸುದ್ದಿ

ಬಾಲಕಿ ಸಾವು

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ತೆರ್ನಮಕ್ಕಿ ಸಬಾತಿಯಲ್ಲಿ ಜೋಕಾಲಿ ಆಡುತ್ತಿದ್ದ ಬಾಲಕಿ ಪ್ರಣೀತಾ ಜಗನ್ನಾಥ ನಾಯ್ಕ (12), ಆಕಸ್ಮಿಕವಾಗಿ ಹಗ್ಗ ಕುತ್ತಿಗೆಗೆ ಸುತ್ತಿಕೊಂಡಿದ್ದರಿಂದ ಉಸಿರುಗಟ್ಟಿ ಮೃತಪಟ್ಟಿದ್ದಾಳೆ.

ಪ್ರಣೀತಾ ಇಲ್ಲಿನ ವಿದ್ಯಾಂಜಲಿ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ. ಮಳೆ ಕಾರಣ ಗುರುವಾರ ಶಾಲೆಗೆ ರಜೆ ಘೋಷಿಸಲಾಗಿತ್ತು. ಸಹೋದರಿ ಜೊತೆಗೆ ಆಡುವಾಗ ಅವಘಡ ಸಂಭವಿಸಿದೆ' ಎಂದು ಮುರುಡೇಶ್ವರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಗುಪ್ತಚರ ವಿಭಾಗಕ್ಕೆ ಚಂದ್ರಗುಪ್ತ ವರ್ಗ

ಬೆಂಗಳೂರು: ರಾಜ್ಯ ಗುಪ್ತಚರ ವಿಭಾಗದ ಎಡಿಜಿಪಿ ಹುದ್ದೆಗೆ ಚಂದ್ರಗುಪ್ತ ಅವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವರ್ಗಾವಣೆ ಮಾಡಿದೆ.

ಈಶಾನ್ಯ ವಲಯದ ಐಜಿಪಿ ಹುದ್ದೆಗೆ ಮೂರು ದಿನಗಳ ಹಿಂದಷ್ಟೇ ವರ್ಗಾವಣೆ ಮಾಡಲಾಗಿತ್ತು. ಆದೇಶ ಮಾರ್ಪಡಿಸಿ, ರಾಜ್ಯ ಗುಪ್ತಚರ ವಿಭಾಗಕ್ಕೆ ವರ್ಗಾವಣೆ ಮಾಡಿದೆ. ಅದೇ ಹುದ್ದೆಯಲ್ಲಿದ್ದ ಐಜಿಪಿ ವೈ.ಎಸ್. ರವಿಕುಮಾರ್ ಅವರನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ.

ಶಂತನು ಸಿನ್ಹಾ ಅವರನ್ನು ಸಿಐಡಿಯಿಂದ ಈಶಾನ್ಯ ವಲಯದ ಐಜಿಪಿಯಾಗಿ, ಕರಾವಳಿ ಭದ್ರತಾ ಪಡೆಯ ಎಸ್‌ಪಿ ಎಚ್.ಎನ್. ಮಿಥುನ್ ಅವರನ್ನು ಮಂಗಳೂರು ಡಿಸಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಪರಸ್ಪರ ವರ್ಗಾವಣೆಯಾಗಿದ್ದ ಮೂರು ಆದೇಶಗಳನ್ನು ರದ್ದು ಮಾಡಿ, ಸಿಮಿ ಮರಿಯಂ ಜಾರ್ಜ್ ಅವರನ್ನು ವಿಧಿವಿಜ್ಞಾನ ಪ್ರಯೋಗಾಲಯದ ಜಂಟಿ ನಿರ್ದೇಶಕರಾಗಿ, ಗೋಪಾಲ್ ಎಂ. ಬ್ಯಾಕೋಡ್ ಅವರನ್ನು ಬೆಂಗಳೂರು ದಕ್ಷಿಣ ಸಂಚಾರ ವಿಭಾಗದ ಡಿಸಿಪಿಯಾಗಿ, ಜಿತೇಂದ್ರಕುಮಾರ್ ದಯಾಮ ಅವರನ್ನು ನಕ್ಸಲ್ ನಿಗ್ರಹ ಪಡೆಯ ಎಸ್‌ಪಿ ಸ್ಥಾನದಲ್ಲೇ ಮುಂದುವರಿಸಲಾಗಿದೆ.

ಚಿನ್ನದ ಪಲ್ಲಕ್ಕಿಯಲ್ಲಿ 'ದೇವಿ' ಮೆರವಣಿಗೆ • ದರ್ಶನ ಪಡೆದ ಸಾವಿರಾರು ಭಕ್ತರು

ಚಾಮುಂಡೇಶ್ವರಿ ವರ್ಧಂತ್ಯುತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಚಾಮುಂಡಿಬೆಟ್ಟದಲ್ಲಿ ಗುರುವಾರ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ ಚಿನ್ನದ ಪಲ್ಲಕ್ಕಿಯಲ್ಲಿ ಸಂಭ್ರಮದಿಂದ ನಡೆಯಿತು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಭಕ್ತರು ಪಲ್ಲಕ್ಕಿಯಲ್ಲಿ ಹೊಳೆಯುತ್ತಿದ್ದ ದೇವಿಯನ್ನು ಕಣ್ತುಂಬಿಕೊಂಡರು.

ಉತ್ಸವ ಮೂರ್ತಿಗೆ ಗುಲಾಬಿ ಬಣ್ಣದ ಸೀರೆ ತೊಡಿಸಲಾಗಿತ್ತು. ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಹಾಗೂ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್– ತ್ರಿಷಿಕಾ ಕುಮಾರಿ ದಂಪತಿ, ಪಲ್ಲಕ್ಕಿಯನ್ನು ಎಳೆದು ಮೆರವಣಿಗೆಗೆ ಚಾಲನೆ ನೀಡಿದರು.

ಅರಮನೆ ಪೊಲೀಸ್ ಬ್ಯಾಂಡ್ ಹಾಗೂ ಮಂಗಳವಾದ್ಯ ಮೇಳ, ಛತ್ರಿ, ಚಾಮರಗಳು ಉತ್ಸವದ ಮೆರುಗು ಹೆಚ್ಚಿಸಿದ್ದವು. ಭಕ್ತರು ಹಣ್ಣು, ಕಾಯಿ ಅರ್ಪಿಸಿದರು. ದರ್ಬಾರ್ ಆರತಿಯೊಂದಿಗೆ ಉತ್ಸವಕ್ಕೆ ತೆರಬಿತ್ತು. ಮೈಸೂರು ಸಂಸ್ಥಾನದ 'ಕಾಯೌ ಶ್ರೀಗೌರಿ ಕರುಣಾ ಲಹರಿ' ಗೀತೆಯನ್ನು ಪೊಲೀಸ್ ಬ್ಯಾಂಡ್ ನುಡಿಸಿತು.

'ಚಾಮುಂಡೇಶ್ವರಿ' ಅಲಂಕಾರ: 'ಮುಂಜಾನೆ 4 ಗಂಟೆಯಿಂದಲೇ ವಿಶೇಷ ಪೂಜೆಗಳು ನಡೆದವು. 5.30ಕ್ಕೆ ಮೂರ್ತಿಗೆ ಅಭ್ಯಂಜನ ಸ್ನಾನ ಮಾಡಿಸಿ, ಸಾಂಪ್ರದಾಯಿಕ ಪೂಜೆ ಮಾಡಲಾಯಿತು. 'ಚಾಮುಂಡೇಶ್ವರಿ' ಅಲಂಕಾರ ಮಾಡಲಾಗಿತ್ತು' ಎಂದು ಮುಖ್ಯ ಅರ್ಚಕ ಶಶಿಶೇಖರ ದೀಕ್ಷಿತ್ ಹೇಳಿದರು.

ಬಸ್‌ನಲ್ಲಿ ಬೆಂಕಿ: ಬೆಟ್ಟಕ್ಕೆ ತೆರಳುತ್ತಿದ್ದ ಸಾರಿಗೆ ಸಂಸ್ಥೆಯ ಬಸ್‌ವೊಂದರ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬಳಿಕ ಮತ್ತೊಂದು ಬಸ್‌ನಲ್ಲಿ ಭಕ್ತರನ್ನು ಸುರಕ್ಷಿತವಾಗಿ ಕಳುಹಿಸಲಾಯಿತು.



ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಉತ್ಸವದಲ್ಲಿ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದರು ಚಿತ್ರ: ಅನೂಪ್ ರಾಘ.ಟಿ.

ಸಂಪ್ರದಾಯದ ಹೆಸರಲ್ಲಿ ಮತಾಂತರ: ದೂರು

ಪ್ರಜಾವಾಣಿ ವಾರ್ತೆ

ಗದಗ: 'ಮದುವೆ ನೆಪದಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿ, ಅಲ್ಲಿನ ಸಂಪ್ರದಾಯವನ್ನು ಪಾಲಿಸುವಂತೆ ಮಾನಸಿಕ ಕಿರುಕುಳ ನೀಡಲಾಗುತ್ತಿದೆ' ಎಂದು ಆರೋಪಿಸಿ ಹಿಂದೂ ಧರ್ಮದ ವಿಶಾಲ್ ಕುಮಾರ್ ಎಂಬವರು ಗದಗ ಶಹರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪರಿಶಿಷ್ಟ ಜಾತಿಯ ವಿಶಾಲ್ ಕುಮಾರ್ ಮತ್ತು ಮುಸಲ್ಮಾನರಾದ ತಹಸೀನ್ ಹೊಸಮನಿ ಮೂರು ವರ್ಷಗಳಿಂದ ಪ್ರೀತಿಸುತ್ತಿದ್ದರು. 2024ರ ನವೆಂಬರ್ 26ರಂದು ವಿಶೇಷ ವಿವಾಹ ಕಾಯ್ದೆಯಡಿ 'ರಿಜಿಸ್ಟರ್' ಮದುವೆ ಆಗಿದ್ದರು. ಬಳಿಕ ತಹಸೀನ್ ಅವರ ತಾಯಿ ಬೇಗಂಬಾನು ಹೊಸಮನಿ, ಸೋದರ ಮಾವ ಇಬ್ರಾಹಿಂಸಾಬ್ ಧಾವಲ್ ಖಾನ್ ಎಂಬುವರು 2025ರ ಏಪ್ರಿಲ್ 25ರಂದು ಗದಗ ನಗರದ ಮಸೀದಿಯಲ್ಲಿ ಮುಸ್ಲಿಂ ಸಂಪ್ರದಾಯದಂತೆ ಮದುವೆ ಮಾಡಿಸಿದ್ದರು.



ತಹಸೀನ್ ಹೊಸಮನಿ ಮತ್ತು ವಿಶಾಲ್ ಕುಮಾರ್

'ನಾನು ಹಿಂದೂ ಎಂದು ಗೊತ್ತಿದ್ದರೂ ಇಸ್ಲಾಂ ಧರ್ಮಕ್ಕೆ ಮತಾಂತರ ಆಗಲು ಒತ್ತಾಯಿಸಿದ್ದರು. ನನಗೆ ಅರಿವು ಇಲ್ಲದಂತೆ ಹೆಸರನ್ನು ವಿರಾಜ್ ಎಂದು ಬದಲಿಸಿದ್ದರು. ಪ್ರತಿದಿನ ಮಸೀದಿಗೆ ಹೋಗಿ ನಮಾಜ್ ಮಾಡಬೇಕು. ತಲೆಗೆ ಟೊಪ್ಪಿ, ಕಣ್ಣಿಗೆ ಕಾಡಿಗೆ ಹಚ್ಚಬೇಕು ಎಂದು ಮಾನಸಿಕ ಕಿರುಕುಳ ನೀಡುತ್ತಿದ್ದರು. ನಾನು ಮಸೀದಿಗೆ ಹೋಗಿ ನಮಾಜ್ ಮಾಡುವುದನ್ನು ಹುಡುಗಿಯ ಸೋದರ ಮಾವ ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಅದನ್ನು ತಹಸೀನ್‌ಗೆ ಕಳುಹಿಸುತ್ತಿದ್ದ' ಎಂದು ವಿಶಾಲ್ ಆರೋಪಿಸಿದ್ದಾರೆ.

'ಮುಸ್ಲಿಂ ಸಂಪ್ರದಾಯದಂತೆ ಮದುವೆಯಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ನಂತರ, ಮನೆಯವರಿಗೆ ವಿಷಯ ಗೊತ್ತಾಯಿತು. ಬಳಿಕ ಹಿಂದೂ ಸಂಪ್ರದಾಯದಂತೆ ಮದುವೆ ಆಗಬೇಕು ಎಂಬ ನಮ್ಮ ಪ್ರಸ್ತಾಪವನ್ನು ಅವರ ಕುಟುಂಬದವರು ನಿರಾಕರಿಸಿದರು. ನನ್ನನ್ನು ಮುಸ್ಲಿಂ ಧರ್ಮಕ್ಕೆ ಮತಾಂತರ ಮಾಡುವ ಇಚ್ಛೆ ತಹಸೀನ್ ಕುಟುಂಬಕ್ಕೆ ಇರುವುದು ಸ್ಪಷ್ಟ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

> **ಬಲವಂತದಿಂದ ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿರುವುದಾಗಿ ಆರೋಪಿಸಿ ದೂರು ಬಂದಿದ್ದು, ಮೂವರ ವಿರುದ್ಧ ಪ್ರಕರಣ ದಾಲಿಸಿದ್ದು, ವಿಚಾರಣೆ ಪ್ರಗತಿಯಲ್ಲಿದೆ.**
> **ರೋಹನ್ ಜಗದೀಶ್**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಗದಗ

18 ಕ್ಷೇತ್ರಗಳಲ್ಲಿ ಜೀವಮಾನ ಸಾಧನೆ ಮಾಡಿದವರಿಗೆ ಮುಖ್ಯಮಂತ್ರಿಯವರಿಂದ ಪ್ರಶಸ್ತಿ ಪ್ರದಾನ

ಕರ್ನಾಟಕವು ಕನ್ನಡಮಯವಾಗಬೇಕು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವು ಕನ್ನಡಮಯ ಆಗಬೇಕು ಎಂಬುದು ನನ್ನ ಆಶಯ. ಅದಕ್ಕಾಗಿ ಕನ್ನಡ ಭಾಷೆ ಪರ, ಕನ್ನಡ ಅಭಿವೃದ್ಧಿಯ ಪರ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳನ್ನು ಗುರುವಾರ ಪ್ರದಾನ ಮಾಡಿ ಅವರು ಮಾತನಾಡಿದರು.

'ನಾನು ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾಗಿದ್ದೆ. ಕನ್ನಡ ರಾಜ್ಯಭಾಷೆಯಾಗಬೇಕು. ಆಡಳಿತ ಭಾಷೆಯಾಗಬೇಕು. ಕರ್ನಾಟಕದಲ್ಲಿ ಸಾರ್ವಭೌಮ ಭಾಷೆಯಾಗಬೇಕು ಎಂದು ಆಗಲೇ ತೀರ್ಮಾನ ಮಾಡಿದ್ದೆ. ಅಂದಿನ ಕಾವಲು ಸಮಿತಿಯೇ ಇಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಗಿದೆ' ಎಂದು ತಿಳಿಸಿದರು.

ದ್ರಾವಿಡ ಭಾಷೆಗಳಲ್ಲಿಯೇ ಕನ್ನಡ ಅತ್ಯಂತ ಪ್ರಾಚೀನವಾದುದು. 2,000ಕ್ಕೂ ಅಧಿಕ ವರ್ಷಗಳ ಇತಿಹಾಸ ಇರುವ ಭಾಷೆ ಇದು. ಇಲ್ಲಿನ ವೈವಿಧ್ಯಮಯ ಸಂಸ್ಕತಿ ಮತ್ತು ಸಾಹಿತ್ಯ ಸಂಪತ್ತು ಬೇರೆ ರಾಜ್ಯಗಳಿಗೂ ಮಾದರಿ ಎಂದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ 2024–25 ಸಾಲಿನ ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳನ್ನು ಸಿದ್ದರಾಮಯ್ಯ ಪ್ರದಾನ ಮಾಡಿದರು. ಚನ್ನಪ್ಪ ಕಟ್ಟಿ, ವೆಂಕಟೇಶ್ ಎಂ.ವಿ, ಶಿವರಾಜ ಎಸ್. ತಂಗಡಗಿ, ಮಾನಸ, ಎಲ್.ಎನ್. ಮುಕುಂದರಾಜ್, ಬಸವರಾಜ ಶಿವಣ್ಣ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ವಿವಿಧ ರಂಗಗಳಲ್ಲಿ ಜೀವಮಾನ ಸಾಧನೆ ಮಾಡಿದ 23 ಮಂದಿಗೆ ಪ್ರಶಸ್ತಿ ನೀಡಲಾಗುತ್ತದೆ. ಮೂರು ರಾಷ್ಟ್ರೀಯ ಪ್ರಶಸ್ತಿಗಳಾಗಿದ್ದು, ₹10 ಲಕ್ಷ ನಗದು ಹಾಗೂ ಉಳಿದ ಪ್ರಶಸ್ತಿಗಳು ₹5 ಲಕ್ಷ ನಗದು ಹೊಂದಿವೆ. ಐದು ಪ್ರಶಸ್ತಿಗಳನ್ನು ಆಯಾ ಮಹನೀಯರ ಜಯಂತಿ ಸಂದರ್ಭದಲ್ಲಿ ನೀಡಲಾಗಿದ್ದು, ಉಳಿದ 18 ಪ್ರಶಸ್ತಿಗಳನ್ನು ಇಂದು ಪ್ರದಾನ ಮಾಡಲಾಗಿದೆ. ಅವರು ಈಗಾಗಲೇ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿ ರಾಜ್ಯದ ಸಾಂಸ್ಕೃತಿಕ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, 'ಜಗತ್ತಿನ ಇತಿಹಾಸದಲ್ಲಿ ಕನ್ನಡ ನಾಡಿನ ಚರಿತ್ರೆಗೆ ಮಹತ್ವದ ಸ್ಥಾನವಿದೆ. ವಿವಿಧ ಸಂಸ್ಕೃತಿಗಳ, ವಿವಿಧ ಉಪ ಭಾಷೆಗಳ, ವಿವಿಧ ಸಂಪ್ರದಾಯಗಳ, ವಿವಿಧ ಆಹಾರ ಕ್ರಮಗಳನ್ನು ಹೊಂದಿರುವ ವಿಶಿಷ್ಟ ನಾಡು ನಮ್ಮದು. ಪ್ರತಿ ನೂರು ಕಿಲೋಮೀಟರಿಗೆ ಭಾಷೆ, ಸಂಸ್ಕೃತಿ, ಸಂಪ್ರದಾಯಗಳು ಬದಲಾಗಿದ್ದರೂ ಎಲ್ಲರನ್ನೂ ಎಲ್ಲವನ್ನು ಒಟ್ಟಿಗೆ ಒಯ್ಯುವ ಶಕ್ತಿ ಕನ್ನಡಕ್ಕಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಎಲ್. ಹನುಮಂತಯ್ಯ ಮಾತನಾಡಿ, 'ನಮ್ಮ ರಾಜ್ಯದಲ್ಲಿ ಇರುವಷ್ಟು ಪ್ರಶಸ್ತಿಗಳು ದೇಶದ ಮತ್ಯಾವ ರಾಜ್ಯದಲ್ಲಿಯೂ ಇಲ್ಲ. ಅಲ್ಲದೇ ಪ್ರಶಸ್ತಿಗೆ ಅರ್ಹರ ಸಂಖ್ಯೆಯೂ ಇಲ್ಲಿ ಬಹಳ ದೊಡ್ಡದಿದೆ. ಸಾಹಿತಿಗಳಿಗೆ, ಕಲಾವಿದರಿಗೆ ತಮಗನ್ನಿಸಿದ್ದನ್ನು ಹೇಳುವ ಮುಕ್ತ ಸ್ವಾತಂತ್ರ್ಯ ರಾಜ್ಯದಲ್ಲಿದೆ. ಇಂಥದ್ದೇ ವಾತಾವರಣ ದೇಶದಲ್ಲಿಯೂ ಬರಬೇಕು' ಎಂದು ಆಶಿಸಿದರು.

ಪ್ರಶಸ್ತಿ ಯಾರಿಗೆ

ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ (ಮಹಾವೀರ ಶಾಂತಿ ಪ್ರಶಸ್ತಿ), ಬಸಪ್ಪ ಎಚ್. ಭಜಂತ್ರಿ (ಟಿ. ಚೌಡಯ್ಯ), ಬೇಗಂ ಪರ್ವೀನ್ ಸುಲ್ತಾನಾ (ಪಂಡಿತ್ ಪಂಚಾಕ್ಷರಿ ಗವಾಯಿ), ಕೆ. ರಾಜಕುಮಾರ್ (ಸಂಗೊಳ್ಳಿ ರಾಯಣ್ಣ), ಹೇಮಾ ಪಟ್ಟಣಶೆಟ್ಟಿ (ಅಕ್ಕಮಹಾದೇವಿ), ಸ. ರಘುನಾಥ (ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ), ವೈ.ಸಿ. ಭಾನುಮತಿ (ದಾನಚಿಂತಾಮಣಿ ಅತ್ತಿಮಬ್ಬೆ), ಜೆ. ಲೋಕೇಶ್ (ಬಿ.ವಿ. ಕಾರಂತ), ಕೆ. ನಾಗರತ್ನಮ್ಮ (ಗುಬ್ಬಿವೀರಣ್ಣ), ಎಲ್. ಹನುಮಂತಯ್ಯ (ಸಿದ್ದಲಿಂಗಯ್ಯ ಸಾಹಿತ್ಯ), ಎಂ.ಜೆ. ಕಮಲಾಕ್ಷಿ (ವರ್ಣಶಿಲ್ಪಿ ವೆಂಕಟಪ್ಪ), ಎಂ. ರಾಮಮೂರ್ತಿ (ಜಕಣಾಚಾರಿ), ನಿಂಗಪ್ಪ ಭಜಂತ್ರಿ (ಜಾನಪದಶ್ರೀ), ದೊಡ್ಡ ಗವಿಬಸಪ್ಪ (ಜಾನಪದಶ್ರೀ), ಅನಂತ ತೇರದಾಳ (ನಿಜಗುಣ–ಪುರಂದರ), ಎ.ವಿ. ಪ್ರಸನ್ನ (ಕುಮಾರವ್ಯಾಸ), ಪದ್ಮಿನಿ ರವಿ (ಶಾಂತಲಾ ನಾಟ್ಯ), ಎಸ್. ಮಲ್ಲಣ್ಣ (ಸಂತ ಶಿಶುನಾಳ ಷರೀಫ).

ರಾಜಕೀಯ ಒತ್ತಡ, ಜಾತಿ ಬಲದ ಕಾರಣಕ್ಕೆ ಕೊನೆಕ್ಷಣದಲ್ಲಿ ಸ್ಥಾನಪಲ್ಲಟ, ನಿರಾಸೆ

ಮಹಿಳಾ ಅಧಿಕಾರಿಗಳಿಗೆ 'ನಾನ್ ಎಕ್ಸಿಕ್ಯೂಟಿವ್' ಭಾಗ್ಯ


• ಆದಿತ್ಯ ಕೆ.ಎ.

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶಿಸಿದ ಬೆನ್ನಲ್ಲೇ ಮಹಿಳಾ ಅಧಿಕಾರಿಗಳು ಅಸಮಾಧಾನ ಹೊರಹಾಕಿದ್ದಾರೆ. ಎಕ್ಸಿಕ್ಯೂಟಿವ್ (ಆಡಳಿತಾತ್ಮಕ) ಹುದ್ದೆಯ ನಿರೀಕ್ಷೆಯಲ್ಲಿದ್ದ ಮಹಿಳಾ ಐಪಿಎಸ್ ಅಧಿಕಾರಿಗಳಿಗೆ ನಿರಾಸೆಯಾಗಿದೆ.

'ಪೊಲೀಸ್ ಇಲಾಖೆಯಲ್ಲಿ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವ ಹುದ್ದೆಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯ ನಮಗೂ ಇದೆ. ಸಾರ್ವಜನಿಕರ ನೋವಿಗೆ ಸ್ಪಂದಿಸಲು ಅವಕಾಶಕ್ಕಾಗಿ ಕಾಯುತ್ತಿದ್ದೇವೆ. ಆದರೆ, ಅವಕಾಶವೇ ದೊರೆಯುತ್ತಿಲ್ಲ. ನಾವೆಲ್ಲ ಅಧಿಕಾರ ವಂಚಿತ ಅಧಿಕಾರಿಣಿಯರು' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ 'ನಾನ್ ಎಕ್ಸಿಕ್ಯೂಟಿವ್' ಸ್ಥಾನದಲ್ಲಿರುವ ಮಹಿಳಾ ಅಧಿಕಾರಿಗಳು ನೋವು ತೋಡಿಕೊಂಡಿದ್ದಾರೆ.

ಕೆಪಿಎಸ್‌ಸಿ ಮೂಲಕ ಆಯ್ಕೆಯಾದ 2006ನೇ ಬ್ಯಾಚ್‌ನ ಅಧಿಕಾರಿಗಳಿಗೆ 2012ರಲ್ಲಿ ಐಪಿಎಸ್‌ಗೆ ಬಡ್ತಿ ಸಿಕ್ಕಿತ್ತು. ಆಡಳಿತಾತ್ಮಕ ಕಾರಣಕ್ಕೆ ಒಬ್ಬ ಮಹಿಳಾ ಅಧಿಕಾರಿಗೆ ಮಾತ್ರ ಬಡ್ತಿ ಸಿಗುವುದು ವಿಳಂಬವಾಗಿತ್ತು. ಆ ಬ್ಯಾಚ್‌ನ ಬಹುತೇಕ ಪುರುಷ ಅಧಿಕಾರಿಗಳಿಗೆ ಎಕ್ಸಿಕ್ಯೂಟಿವ್ ಹುದ್ದೆ ದೊರೆತ್ತಿದ್ದು, ವಿವಿಧ ಜಿಲ್ಲೆ, ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ, ಕೆಲವು ಮಹಿಳಾ ಅಧಿಕಾರಿಗಳು 'ನಾನ್ ಎಕ್ಸಿಕ್ಯೂಟಿವ್' ಸ್ಥಾನದಲ್ಲೇ ಕೆಲಸ ಮಾಡಬೇಕಾದ ಸ್ಥಿತಿಯಿದೆ. 'ಎಕ್ಸಿಕ್ಯೂಟಿವ್' ಹುದ್ದೆ ಲಭಿಸಿದರೂ ಕೆಲವೇ ತಿಂಗಳಲ್ಲಿ ವರ್ಗಾವಣೆ ಮಾಡಲಾಗುತ್ತಿದೆ ಎಂಬ ಅಸಮಾಧಾನವಿದೆ.

'ಮೂರು ದಿನಗಳ ಹಿಂದೆ ನಡೆದ ಐಪಿಎಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ಜಾತಿ ಬಲ, ಹಣ ಬಲ ಹಾಗೂ ರಾಜಕೀಯ ಒತ್ತಡ ಕೆಲಸ ಮಾಡಿದೆ. ಅದೇ ಕಾರಣದಿಂದ ಕಚೇರಿಯಲ್ಲಿ ತಮ್ಮ ಪಾಡಿಗೆ ಕೆಲಸ ಮಾಡುತ್ತಿರುವ ಮಹಿಳಾ ಅಧಿಕಾರಿಗಳಿಗೆ ವರ್ಗಾವಣೆಯ ಅವಕಾಶ ಸಿಕ್ಕಿಲ್ಲ. ಹೊರ ರಾಜ್ಯದ ಐಪಿಎಸ್ ಅಧಿಕಾರಿಗಳಿಗೆ ಹೆಚ್ಚಿನ ಅವಕಾಶ ಲಭಿಸುತ್ತಿದೆ. ರಾಜ್ಯದ ಮಹಿಳಾ ಅಧಿಕಾರಿಗಳಿಗೆ ಎಕ್ಸಿಕ್ಯೂಟಿವ್ ಸ್ಥಾನದಲ್ಲಿ ದೀರ್ಘಕಾಲ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ' ಎಂದು ಹೆಸರು ಹೇಳಲು ಬಯಸದ ಅಧಿಕಾರಿಯೊಬ್ಬರು ಹೇಳಿದರು.



'ಎಸ್.ಸವಿತಾ ಅವರು 9 ವರ್ಷಗಳಿಂದ ಸಿಐಡಿಯಲ್ಲಿ 'ನಾನ್ ಎಕ್ಸಿಕ್ಯೂಟಿವ್' ಹುದ್ದೆಯಲ್ಲೇ ಕೆಲಸ ಮಾಡುತ್ತಿದ್ದಾರೆ. ಸದ್ಯ ಅವರು ಸಿಐಡಿಯ ಮಾದಕವಸ್ತು ಹಾಗೂ ಸಂಘಟಿತ ಅಪರಾಧಗಳ ವಿಭಾಗದ ಎಸ್.ಪಿಯಾಗಿದ್ದಾರೆ. ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಹೊಸದಾಗಿ ರಚನೆಯಾದ ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಡಿಸಿಪಿಯಾಗಿ ಸವಿತಾ ಅವರನ್ನು ವರ್ಗಾವಣೆ ಮಾಡುವ ಬಗ್ಗೆ ಚರ್ಚೆ ಆಗಿತ್ತು. ಆ ಜಾಗಕ್ಕೆ ಬೇರೆ ಅಧಿಕಾರಿಗೆ ಅವಕಾಶ ನೀಡುವಂತೆ ರಾಜಕೀಯ ಒತ್ತಡ ಬಂದ ಕಾರಣ ಸವಿತಾ ಅವರ ಹೆಸರನ್ನು ಕೊನೆ ಕ್ಷಣದಲ್ಲಿ ಕೈಬಿಡಲಾಯಿತು' ಎಂದು ಮೂಲಗಳು ತಿಳಿಸಿವೆ.

'ಸಂಚಾರ (ಉತ್ತರ) ವಿಭಾಗದ ಡಿಸಿಪಿಯಾಗಿದ್ದ ಡಿ.ಆರ್.ಸಿರಿಗೌರಿ ಅವರನ್ನು ರಾಜ್ಯ ಅಪರಾಧ ದಾಖಲೆಗಳ ವಿಭಾಗದ ಎಸ್‌ಪಿಯಾಗಿ ವರ್ಗಾಯಿಸಲಾಗಿದೆ. ಇದೇ ಹುದ್ದೆಗೆ ಅವರನ್ನು ಎರಡನೇ ಬಾರಿಗೆ ವರ್ಗಾವಣೆ ಮಾಡಲಾಗಿದೆ. ಜೆ.ಕೆ.ರಶ್ಮಿ ಅವರಿಗೆ ಈವರೆಗೂ ಎಕ್ಸಿಕ್ಯೂಟಿವ್ ಹುದ್ದೆಯೇ ಸಿಕ್ಕಿಲ್ಲ. ಎಂ.ಎಲ್.ಮಧುರಾ ವೀಣಾ ಅವರೂ ಕೆಲವು ವರ್ಷಗಳಿಂದ ಸಿಐಡಿಯಲ್ಲೇ ಕೆಲಸ ಮಾಡುತ್ತಿದ್ದಾರೆ. ಸ್ಥಳ ನಿರೀಕ್ಷೆಯಲ್ಲಿದ್ದ ಕೆ.ಧರಣಿ ದೇವಿ ಮಾಲಗತ್ತಿ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿಯಾಗಿ 2023ರಲ್ಲಿ ವರ್ಗ ಮಾಡಲಾಗಿತ್ತು. ಆ ಹುದ್ದೆಯಲ್ಲಿ ಅವರಿಗೆ ದೀರ್ಘಾವಧಿವರೆಗೆ ಅವಕಾಶ ನೀಡದೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಎಸ್‌ಪಿಯಾಗಿ ಕೆಲವು ತಿಂಗಳ ಹಿಂದೆ ವರ್ಗಾವಣೆ ಮಾಡಲಾಗಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ಯಾದಗಿರಿ: ತಾಲ್ಲೂಕಿನ ಅರಕೇರಾ (ಕೆ) ಗ್ರಾಮದ ಕಸ್ತೂರಬಾ ಗಾಂಧಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛ ಮಾಡಿಸಿದ್ದಾರೆ ಎನ್ನಲಾದ ವಿಡಿಯೊ ಗುರುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ವಸತಿ ಶಾಲೆಯಲ್ಲಿ 8ರಿಂದ 10ನೇ ತರಗತಿಯವರೆಗೆ 97 ವಿದ್ಯಾರ್ಥಿನಿಯರು ಇದ್ದಾರೆ. ವಾರಕ್ಕೊಮ್ಮೆ ಪಾಳಿ ಪ್ರಕಾರ ವಿದ್ಯಾರ್ಥಿನಿಯರೇ ಸ್ವಚ್ಛ ಗೊಳಿಸುವುದಾಗಿ ಕೆಲವರು ಹೇಳಿರುವುದು ವಿಡಿಯೊದಲ್ಲಿದೆ.

'ಶೌಚಾಲಯ ಸ್ವಚ್ಛತೆಗೆ ಯಾರೂ ಸಿಗದ ಕಾರಣ ಒಮ್ಮೆ ವಿದ್ಯಾರ್ಥಿನಿಯರೇ ಸ್ವಚ್ಛ ಮಾಡಿಸಿರಬಹುದು. ಆದರೆ, ಇದನ್ನು ವಿಡಿಯೊ ಮಾಡಿದವರು ಪುರುಷರಾಗಿದ್ದಾರೆ. ಅವರಿಗೆ ಒಳಗೆ ಬರಲು ಯಾರು ಅನುಮತಿ ಕೊಟ್ಟಿದ್ದಾರೆ' ಎಂದು ವಸತಿ ಶಾಲೆಯ ಮುಖ್ಯ ಶಿಕ್ಷಕಿ ನಿವೇದಿತಾ ಪ್ರಶ್ನಿಸಿದ್ದಾರೆ. ಈ ಕುರಿತು ಮೇಲಧಿಕಾರಿಗಳಿಗೆ ದೂರು ನೀಡಲಾಗುವುದು ಎಂದು ತಿಳಿಸಿದ್ದಾರೆ.

> **ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ ವಿಷಯ ಗಮನಕ್ಕೆ ಬಂದಿದ್ದು, ಸಮಗ್ರ ವರದಿ ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು**
> **ಸಿ.ಎಸ್.ಮುಧೋಳ,** ಡಿಡಿಪಿಐ ಯಾದಗಿರಿ

> **ಘಟನೆ ಕುರಿತು ಮುಖ್ಯಶಿಕ್ಷಕಿ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ವಸತಿ ಶಾಲೆಗೆ ಭೇಟಿ ನೀಡಿ, ವಿಸ್ತೃತ ವರದಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಸೂಚಿಸಿದ್ದೇನೆ**
> **ಶಶಿಧರ ಕೋಸಂಬೆ,**
> ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ


ಧರ್ಮಸ್ಥಳದಲ್ಲಿ ಕೊಲೆ: ಎಸ್ಐಟಿಗೆ ಒತ್ತಾಯ

ಫಿರ್ಯಾದುದಾರ ಸಾಕ್ಷಿಗೆ ಅಪಾಯವಾದರೆ ಸರ್ಕಾರವೇ ಹೊಣೆ: ನ್ಯಾಯಮೂರ್ತಿ ಗೋಪಾಲಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪಾರ ಸಂಖ್ಯೆಯ ಅತ್ಯಾಚಾರ, ಕೊಲೆ ಮತ್ತು ಹೆಣಗಳನ್ನು ಹೂಳಿರುವ ಪ್ರಕರಣದಲ್ಲಿ ಫಿರ್ಯಾದುದಾರ ಸಾಕ್ಷಿಗೆ ರಾಜ್ಯ ಸರ್ಕಾರವು ತಕ್ಷಣವೇ ಭದ್ರತೆ ಒದಗಿಸಬೇಕು. ಆರೋಪಗಳ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರು ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ ನಂತರವೂ, ತನಿಖೆ ಸರಿಯಾಗಿ ಆಗುತ್ತಿಲ್ಲ. ಶವಗಳನ್ನು ಎಲ್ಲಿ ಹೂಳಲಾಗಿದೆ ಎಂಬುದನ್ನು ಖಾಲಿ ಹಾಳೆಯಲ್ಲಿ ಗುರುತು ಮಾಡಿಕೊಡು ಎಂದು ಪೊಲೀಸರು ಫಿರ್ಯಾದುದಾರ ಸಾಕ್ಷಿಯ ಮೇಲೆ ಒತ್ತಡ ಹೇರುತ್ತಿದ್ದಾರೆ. ಆತ ನೀಡಿರುವ ಹೇಳಿಕೆಗಳು ಆಯ್ದ ಮಾಧ್ಯಮಗಳಿಗೆ ಸೋರಿಕೆಯಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.



ನ್ಯಾ.ವಿ. ಗೋಪಾಲ ಗೌಡ

'ಫಿರ್ಯಾದುದಾರ ಸಾಕ್ಷಿಯು ತನ್ನ ವಕೀಲರೊಂದಿಗೆ ಒಂದು ಸ್ಥಳಕ್ಕೆ ತೆರಳಿ, ಕಳೇಬರವನ್ನು ತೆಗೆಯುವುದಾಗಿ ನ್ಯಾಯಾಲಯ ಮತ್ತು ಪೊಲೀಸರಿಗೆ ಮಾಹಿತಿ ನೀಡಿರುತ್ತಾರೆ. ಹೀಗಿದ್ದೂ ಪೊಲೀಸರು ಸ್ಥಳಕ್ಕೆ ತೆರಳಿಲ್ಲ. ಆತನ ಹೇಳಿಕೆ ದಾಖಲಿಸುವ ತನಿಖಾಧಿಕಾರಿಯು ಯಾರಿಗೋ ಕರೆ ಮಾಡಿ, ಅವರು ಸೂಚಿಸಿದ್ದಂತೆ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಹೀಗಾಗಿ ತಕ್ಷಣವೇ ತನಿಖಾ ತಂಡವನ್ನು ಬದಲಿಸಬೇಕು. ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿಯ ಮೇಲ್ವಿಚಾರಣೆಯಲ್ಲಿ ಎಸ್ಐಟಿ ರಚಿಸಬೇಕು' ಎಂದು ಒತ್ತಾಯಿಸಿದರು.

'ಸಾಕ್ಷಿ ಫಿರ್ಯಾದುದಾರ ಮತ್ತು ಆತನ ವಕೀಲರಿಗೆ ಬೆದರಿಕೆ ಇದೆ. ಅವರಿಗೆ ತಕ್ಷಣವೇ ಭದ್ರತೆ ಒದಗಿಸಬೇಕು. ಅವರಿಗೆ ಏನಾದರೂ ಆದರೆ ಗೃಹ ಸಚಿವ, ರಾಜ್ಯದ ಪೊಲೀಸ್ ಮಹಾನಿರ್ದೇಶಕ ಮತ್ತು ಸರ್ಕಾರವೇ ಅದರ ಹೊಣೆ ಹೊರಬೇಕಾಗುತ್ತದೆ' ಎಂದರು.

ವಕೀಲ ಸಿ.ಎಸ್.ದ್ವಾರಕನಾಥ್, 'ಬಿಎನ್ಎಸ್ 183ನೇ ಸೆಕ್ಷನ್ ಅಡಿಯಲ್ಲಿ ಸಾಕ್ಷಿ ಫಿರ್ಯಾದಿ ನೀಡಿದ ಹೇಳಿಕೆ ಸಾಕ್ಷ್ಯವಾಗುತ್ತದೆ. ಈ ಹೇಳಿಕೆಗಳು ಖಾಸಗಿ ವ್ಯಕ್ತಿಗಳಿಗೆ ಸೋರಿಕೆಯಾಗುತ್ತಿದೆ. ಇದನ್ನು ತಪ್ಪಿಸಿ ಎಂದು ವಕೀಲರು ಗೃಹ ಸಚಿವರಿಗೆ ಪತ್ರ ಬರೆದಿದ್ದಾರೆ. ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

'367 ಸಂತ್ರಸ್ತೆಯರು'

'ಧರ್ಮಸ್ಥಳದಲ್ಲಿ 367 ಬಾಲಕಿಯರು ಮತ್ತು ಯುವತಿಯರು ಅಪರಿಚಿತ ಶವಗಳಾಗಿ ಪತ್ತೆಯಾಗಿದ್ದಾರೆ. ಪತ್ತೆಯಾಗದ ಶವಗಳೂ ಇನ್ನೂ ಇರುವ ಶಂಕೆಯಿಂದ. ಅವರೆಲ್ಲರಿಗೂ ನ್ಯಾಯ ಸಿಗಬೇಕಾದರೆ, ತನಿಖೆ ನಡೆಯಬೇಕು' ಎಂದು ವಕೀಲ ಎಸ್. ಬಾಲನ್ ಒತ್ತಾಯಿಸಿದರು.

'ಬಾಲಕಿಯರು ಮತ್ತು ಯುವತಿಯರು ಮಾತ್ರವಲ್ಲದೆ, ಯುವಕರು ಹಾಗೂ ಪುರುಷರ ಹತ್ಯೆಗಳೂ ನಡೆದಿರುವ ಬಗ್ಗೆ ಶಂಕೆಯಿದೆ. ಸಾಮಾನ್ಯ ವ್ಯಕ್ತಿಗಳಿಂದ ಈ ಮಟ್ಟದ ಕೃತ್ಯ ಎಸಗಲು ಸಾಧ್ಯವಿಲ್ಲ. ಅತ್ಯಂತ ಪ್ರಭಾವಿಗಳು ಇದರ ಹಿಂದೆ ಇರುವ ಶಂಕೆಯಿದೆ. ಎಸ್ಐ ದರ್ಜೆಯ ಅಧಿಕಾರಿಯಿಂದ ತನಿಖೆ ಸಾಧ್ಯವಿಲ್ಲ' ಎಂದರು.

'ಕೇರಳಕ್ಕೆ ಸಾಂವಿಧಾನಿಕ ಹಕ್ಕಿದೆ'

'ಕೇರಳದ ಸಾವಿರಾರು ಭಕ್ತಾದಿಗಳು ಪ್ರತಿವರ್ಷ ಧರ್ಮಸ್ಥಳಕ್ಕೆ ಬಂದು ಹೋಗುತ್ತಾರೆ. ಆರೋಪಗಳ ಪ್ರಕಾರ ನೂರಾರು ಶವಗಳನ್ನು ಗೌಪ್ಯವಾಗಿ ಹೂತಿರುವುದು ನಿಜವೇ ಆಗಿದ್ದರೆ, ಅವುಗಳಲ್ಲಿ ಕೇರಳದ ಸಂತ್ರಸ್ತರೂ ಇರಬಹುದು. ಹೀಗಾಗಿ ಕರ್ನಾಟಕದಲ್ಲಿ ತನಿಖೆ ಸರಿಯಾಗಿ ನಡೆಯುವಂತೆ ಖಚಿತಪಡಿಸಿಕೊಳ್ಳುವ ಎಲ್ಲ ಸಾಂವಿಧಾನಿಕ ಹಕ್ಕುಗಳೂ ಕೇರಳ ಸರ್ಕಾರಕ್ಕೆ ಇದೆ' ಎಂದು ವಕೀಲ ಕೆ.ವಿ.ಧನಂಜಯ ಅವರು ಹೇಳಿದ್ದಾರೆ.

ಕೇರಳ ಸರ್ಕಾರವು ಅಲ್ಲಿನ ವಿಧಾನಸಭೆಯಲ್ಲಿ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು ಎಂದು ಧನಂಜಯ ಅವರು ಬುಧವಾರ ನೀಡಿದ್ದ ಪತ್ರಿಕಾ ಹೇಳಿಕೆಗೆ ಆಕ್ಷೇಪ ವ್ಯಕ್ತವಾಗಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಗುರುವಾರ ಮತ್ತೊಂದು ಹೇಳಿಕೆ ನೀಡಿರುವ ಅವರು, 'ಕೇರಳ ವಿಧಾನಸಭೆಯಲ್ಲಿ ಈ ವಿಚಾರ ಚರ್ಚೆಯಾಗುವುದಾದರೆ, ಕರ್ನಾಟಕದ ವಿಧಾನಸಭೆಯಲ್ಲೂ ಚರ್ಚೆಗೆ ಎತ್ತಿಕೊಳ್ಳಬಹುದು. ಇದರಿಂದ ರಾಜ್ಯದ ಸಾರ್ವಭೌಮತೆಗೆ ಧಕ್ಕೆಯಾಗುವುದಿಲ್ಲ' ಎಂದಿದ್ದಾರೆ.

ನಟ ದರ್ಶನ್ ಜಾಮೀನು ಆದೇಶಕ್ಕೆ 'ಸುಪ್ರೀಂ' ಆಕ್ಷೇಪ

ಪ್ರಜಾವಾಣಿ ವಾರ್ತೆ

ಒಂದನೇ ಪುಟದಿಂದ...

'ನಿಮ್ಮಲ್ಲಿ ಪ್ರಾಮಾಣಿಕವಾಗಿ ಹೇಳುವುದಾದರೆ ಹೈಕೋರ್ಟ್ ಯಾವ ರೀತಿ ತನ್ನ ವಿವೇಚನೆ ಬಳಸಿದೆ ಎಂಬುದು ಮನದಟ್ಟಾಗಿಲ್ಲ. ತುಂಬಾ ಪ್ರಾಮಾಣಿಕವಾಗಿ ನಾವಿದನ್ನು ಹೇಳುತ್ತೇವೆ' ಎಂದು ಪೀಠವು ಸಿಬಲ್ ಅವರಿಗೆ ತಿಳಿಸಿತು.

'ನಿಮ್ಮ ಕಕ್ಷಿದಾರರು ಜಾಮೀನು ಪಡೆದಿದ್ದಾರೆ. ಆದರೆ, ಹೈಕೋರ್ಟ್ ಯಾವ ರೀತಿ ಆದೇಶ ನೀಡಿದೆ ಎಂಬುದನ್ನು ನೀವು ನೋಡಿರಬೇಕು. ಹೀಗಾಗಿ ನಿಮ್ಮ ವಾದವನ್ನು ನಾವು ಆಲಿಸುತ್ತೇವೆ' ಎಂದು ಪೀಠ ಹೇಳಿತು.

ಪೊಲೀಸರು ಮತ್ತು ನ್ಯಾಯಾಲಯ ದಾಖಲಿಸಿದ ಪ್ರಮುಖ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸುವಂತೆ ಸಿಬಲ್ ಅವರು ಪೀಠವನ್ನು ಕೇಳಿದರು.

ಆರೋಪಿಗಳಿಗೆ ಕ್ರಿಮಿನಲ್ ಹಿನ್ನೆಲೆಗಳಿವೆಯೇ ಎಂದು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ ಅವರನ್ನು ನ್ಯಾಯಪೀಠ ಪ್ರಶ್ನಿಸಿತು. ಅಂತಹ ವಿವರಗಳನ್ನು ಮುಂದಿನ ವಿಚಾರಣೆಯಲ್ಲಿ ಪ್ರಸ್ತುತಪಡಿಸುವಂತೆ ನ್ಯಾಯಾಲಯ ಸೂಚಿಸಿತು.

'ಈ ವಿಷಯವು ಪೂರ್ವಾಪರಗಳನ್ನು ಮಾತ್ರವಲ್ಲದೆ ಜಾಮೀನು ಪಡೆದ ನಂತರದಲ್ಲಿ ಆರೋಪಿಯ ನಡವಳಿಕೆಯನ್ನೂ ಒಳಗೊಂಡಿದೆ' ಎಂದು ಲೂತ್ರಾ ತಿಳಿಸಿದರು. 'ಜಾಮೀನು ಪಡೆದ ಬಳಿಕ ದರ್ಶನ್ ಅವರು ಪ್ರಕರಣದ ಪ್ರಮುಖ ಸಾಕ್ಷಿಯೊಂದಿಗೆ ವೇದಿಕೆ ಹಂಚಿಕೊಂಡಿದ್ದರು. ಇಂತಹ ನಡವಳಿಕೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವಂತಹುದು' ಎಂದರು.

ಇದಕ್ಕೆ ಸಿಬಲ್ ಪ್ರತಿಕ್ರಿಯಿಸಿ, ಆ ವ್ಯಕ್ತಿ ಪ್ರಮುಖ ಸಾಕ್ಷಿಯಲ್ಲ ಎಂದು ಹೇಳಿದರು. 'ಅವರು ಪ್ರಮುಖ ಸಾಕ್ಷಿಯಲ್ಲ ಎಂದು ನೀವು ಹೇಳುತ್ತಿದ್ದೀರಿ. ಹಾಗಿದ್ದರೆ, ಪ್ರಮುಖ ಸಾಕ್ಷಿಯನ್ನು ಯಾವ ರೀತಿ ವ್ಯಾಖ್ಯಾನಿಸುತ್ತೀರಿ' ಎಂದು ಲೂತ್ರಾ ಪ್ರಶ್ನಿಸಿದರು.

ದರ್ಶನ್, ಪವಿತ್ರಾಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿತ್ತು. ಉಳಿದ ಹತ್ತು ಮಂದಿ ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. 2024ರ ಜೂನ್ 8ರಂದು ಚಿತ್ರದುರ್ಗದ ರೇಣುಕಸ್ವಾಮಿ ಅವರನ್ನು ಅಪಹರಿಸಿ ಕೊಲೆ ಮಾಡಿದ ಆರೋಪದಡಿ ದರ್ಶನ್, ಪವಿತ್ರಾ ಗೌಡ ಸೇರಿದಂತೆ 17 ಮಂದಿಯನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದರು.

ಮಳೆಗಾಗಿ ಪ್ರಾರ್ಥನೆ...

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ಗುರುವಾರ ಕೊಪ್ಪಳ ನಗರದ ಕವಲೂರು ಓಣಿಯಲ್ಲಿ ಮಳೆಗಾಗಿ ಪ್ರಾರ್ಥಿಸಿ ಸಾಂಪ್ರದಾಯಿಕ ಗುರ್ಜಿ ಆಚರಣೆಯಲ್ಲಿ ತೊಡಗಿದ್ದ ಹಾಲುಮತ ಸಮಾಜದ ಜನರು

ಕರಾವಳಿಯಲ್ಲಿ ಬಿರುಸಿನ ಮಳೆ

ಸುರತ್ಕಲ್‌ನಲ್ಲಿ 29 ಸೆಂ.ಮೀ ಮಳೆ ದಾಖಲು, ಗುಡ್ಡ ಕುಸಿತ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ನಾಲ್ಕೈದು ದಿನಗಳಿಂದ ಬಿರುಸಿನಿಂದ ಸುರಿಯುತ್ತಿರುವ ಮಳೆಯ ಅಬ್ಬರ ಮುಂದುವರಿದಿದೆ.

ಸುರತ್ಕಲ್‌ನಲ್ಲಿ ದಾಖಲೆ 29 ಸೆಂ.ಮೀ ಮಳೆಯಾಗಿದೆ. ಭಾರಿ ಮಳೆಯಿಂದಾಗಿ ನೇತ್ರಾವತಿ ನದಿಯಲ್ಲಿ ನೀರಿನ ಹರಿವಿನ ಮಟ್ಟ 7 ಮೀಟರ್‌ಗೆ ಏರಿಕೆಯಾಗಿದೆ.

ಮಂಗಳೂರು ನಗರದ ಸರ್ಕ್ಯೂಟ್ ಹೌಸ್ ರಸ್ತೆ ಬದಿಯ ಗುಡ್ಡ ಕುಸಿದು ಸಂಚಾರ ಬಂದ್ ಮಾಡಲಾಗಿತ್ತು. ಮೇರಿಹಿಲ್‌ನಲ್ಲಿ ಕಾಂಪೌಂಡ್ ಕುಸಿದು 15ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ.

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ನೆಲ್ಯಾಡಿ ಸಮೀಪ ಮಣ್ಣಗುಂಡಿಯಲ್ಲಿ ಬೆಳಿಗ್ಗೆ ಗುಡ್ಡ ಕುಸಿಯಿತು. ಮಣ್ಣು ತೆರವುಗೊಳಿಸಿದ್ದರಿಂದ ಮಧ್ಯಾಹ್ನದ ನಂತರ ಸಂಚಾರ ವ್ಯವಸ್ಥೆ ಸುಗಮವಾಯಿತು.

ಬೈಕಂಪಾಡಿ ಕೈಗಾರಿಕಾ ಪ್ರದೇಶ ಜಲಾವೃತಗೊಂಡು, ಕಟ್ಟಡಗಳಿಗೆ ನೀರು ನುಗ್ಗಿದೆ. ಮುದ್ರಣಾಲಯ, ಗೋದಾಮುಗಳು, ಆಟೊಮೊಬೈಲ್, ಫ್ಯಾಬ್ರಿಕೇಶನ್, ಪ್ಲೈವುಡ್ ಸೇರಿದಂತೆ 20ಕ್ಕೂ ಹೆಚ್ಚು ಉದ್ದಿಮೆಗಳಿಗೆ ಹಾನಿಯಾಗಿದೆ ಎಂದು ಕೆನರಾ ಕೈಗಾರಿಕಾ ಸಂಘದ ಖಜಾಂಚಿ ರಾಮಚಂದ್ರ ತಿಳಿಸಿದರು.



ಮಂಗಳೂರಿನ ಅದ್ಯಪಾಡಿ ಬಜಪೆ ಸಂಪರ್ಕಿಸುವ ರಸ್ತೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ವಿಟ್ಲಬೆಟ್ಟು ಎಂಬಲ್ಲಿ ಭೂಕುಸಿತ ಸಂಭವಿಸಿ ಕೆಲಹೊತ್ತು ಸಂಚಾರ ಸ್ಥಗಿತಗೊಂಡಿತ್ತು

ಬಂಟ್ವಾಳ, ಪುತ್ತೂರು, ಮಂಗಳೂರು ತಾಲ್ಲೂಕುಗಳಲ್ಲಿ ಮಳೆಯ ವಾತಾವರಣ ಇದ್ದರೆ, ಕುಕ್ಕೆ ಸುಬ್ರಹ್ಮಣ್ಯ, ಬೆಳ್ತಂಗಡಿ, ಮೂಡುಬಿದಿರೆ ಭಾಗದಲ್ಲಿ ಬಿಸಿಲಿನ ವಾತಾವರಣ ಇತ್ತು. ಉಡುಪಿ ಜಿಲ್ಲೆಯಾದ್ಯಂತ ಬುಧವಾರ ರಾತ್ರಿಯಿಂದ ಗುರುವಾರ ಬೆಳಿಗ್ಗೆವರೆಗೂ ಬಿರುಸಿನ ಮಳೆ ಆಯಿತು. ಬ್ರಹ್ಮಾವರ ವ್ಯಾಪ್ತಿಯಲ್ಲಿ ಮಡಿಸಾಲು, ಸೀತಾ ನದಿ ಉಕ್ಕಿ ಹರಿದು ಗದ್ದೆಗಳು ಜಲಾವೃತವಾಗಿದ್ದವು.

ಮೀನುಗಾರರ ಶವ ಪತ್ತೆ: ಉಡುಪಿ ಜಿಲ್ಲೆ ಗಂಗೊಳ್ಳಿ ಅಳಿವೆ ಬಾಗಿಲಿನ ಹೊರ ಭಾಗದಲ್ಲಿ ಸಂಭವಿಸಿದ್ದ ನಾಡದೋಣಿ ದುರಂತದಲ್ಲಿ ನಾಪತ್ತೆಯಾಗಿದ್ದ ಮೂವರು ಮೀನುಗಾರರ ಮೃತದೇಹಗಳು ಪತ್ತೆಯಾಗಿವೆ.

ಮಳೆ: ಎಲ್ಲಿ, ಎಷ್ಟು (ಸೆಂ.ಮೀಗಳಲ್ಲಿ)*	
ದಕ್ಷಿಣ ಕನ್ನಡ ಜಿಲ್ಲೆ	
ಸುರತ್ಕಲ್	29
ಬಾಳ, ಉಳ್ಳಾಲ	26
ಕೋಟೆಕಾರ್	21
ಕಿನ್ಯ	20
ಕೊಡಗು ಜಿಲ್ಲೆ	
ಸಂಪಾಜೆ	14
ಭಾಗಮಂಡಲ	11
ಮಡಿಕೇರಿ	6

*(ಕಳೆದ 24 ಗಂಟೆಗಳಲ್ಲಿ ಸುರಿದಿರುವ ಮಳೆ)

ಕೊಡಗು: ಇಂದು ಶಿಕ್ಷಣ ಸಂಸ್ಥೆಗಳಿಗೆ ರಜೆ

ಮಡಿಕೇರಿ: ಕೊಡಗು ಜಿಲ್ಲೆಯ ಭಾಗಮಂಡಲ, ಸಂಪಾಜೆ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಭಾರಿ ಮಳೆ ಸುರಿಯಿತು.

ಗುರುವಾರ ಆರೆಂಜ್ ಅಲರ್ಟ್ ಘೋಷಣೆ ಆಗಿದ್ದರೂ ಹೆಚ್ಚು ಮಳೆಯಾಗಲಿಲ್ಲ.

ಹವಾಮಾನ ಇಲಾಖೆಯು ಶುಕ್ರವಾರ (ಜು.18) ರೆಡ್ ಅಲರ್ಟ್ ಘೋಷಿಸಿರುವ ಕಾರಣ ಮುಂಜಾಗ್ರತೆಯಾಗಿ ಜಿಲ್ಲೆಯ ಅಂಗನವಾಡಿ, ಪ್ರಾಥಮಿಕ, ಪ್ರೌಢಶಾಲೆ, ಪಿಯು ಕಾಲೇಜುಗಳಿಗೆ ಜಿಲ್ಲಾಡಳಿತವು ರಜೆ ಘೋಷಿಸಿದೆ. ಐಟಿಐ ಪರೀಕ್ಷೆ ನಿಗದಿಯಂತೆ ನಡೆಯಲಿದೆ ಎಂದು ತಿಳಿಸಿದೆ.

ಕಬಿನಿ ಪ್ರವಾಹ

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಿದೆ. ಗುರುವಾರ ಸಂಜೆ ಹೊರಹರಿವಿನ ಪ್ರಮಾಣವು 13 ಸಾವಿರ ಕ್ಯುಸೆಕ್‌ನಿಂದ 25 ಸಾವಿರ ಕ್ಯುಸೆಕ್‌ಗೆ ಏರಿತ್ತು. ಇದರಿಂದ ಬಿದರಹಳ್ಳಿ ಸೇತುವೆಯು ಭಾಗಶಃ ಮುಳುಗಿದೆ.

ಕೇರಳ: ಭೂ ಕುಸಿತ, ಮನೆಗಳು ಜಲಾವೃತ

ತಿರುವನಂತಪುರ (ಪಿಟಿಐ): ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕೇರಳದ ಕೋಯಿಕ್ಕೋಡ್ ಜಿಲ್ಲೆಯಲ್ಲಿ ಭೂ ಕುಸಿತ ಮತ್ತು ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಕೋಯಿಕ್ಕೋಡ್ ಜಿಲ್ಲೆಯಲ್ಲಿ ತಗ್ಗುಪ್ರದೇಶಗಳಲ್ಲಿನ ಮನೆಗಳು ಜಲಾವೃತಗೊಂಡಿವೆ. ಕಾಸರಗೋಡು, ಕಣ್ಣೂರು ಮತ್ತು ವಯನಾಡ್ ಜಿಲ್ಲೆಗಳಲ್ಲಿ ನದಿ ನೀರಿನ ಮಟ್ಟ ಏರಿಕೆಯಾಗಿದ್ದು, ನದಿತಟದಲ್ಲಿರುವವರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಿಗೆ ಮುಂದಿನ ಮೂರು ದಿನ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಕೋಯಿಕ್ಕೋಡ್ ಜಿಲ್ಲೆಗೆ 19ರಂದು, ಮಲಪ್ಪುರ ಜಿಲ್ಲೆಗೆ 20ರಂದು 'ರೆಡ್ ಅಲರ್ಟ್' ಘೋಷಣೆಯಾಗಿದೆ.

ಉತ್ತರ ಕನ್ನಡ ಭಾರಿ ಮಳೆ, ಜಲಾವೃತ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಗುರುವಾರ ನಸುಕಿನ ಜಾವದವರೆಗೆ ವ್ಯಾಪಕ ಮಳೆ ಸುರಿದಿದೆ. ಹಲವೆಡೆ ಜಲಾವೃತಗೊಂಡಿದ್ದು, ನಾಗರಿಕರಿಗೆ ಸಮಸ್ಯೆ ತಲೆದೋರಿದೆ. ಕಾರವಾರ, ಭಟ್ಕಳ, ಹೊನ್ನಾವರ ಪಟ್ಟಣದಲ್ಲಿ ಉತ್ತಮ ಮಳೆಯಾಗಿದೆ. ಮುಂಜಾಗ್ರತೆಯಾಗಿ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲ್ಲೂಕುಗಳ ವ್ಯಾಪ್ತಿಯ ಅಂಗನವಾಡಿ, ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಮಲೆನಾಡು ಭಾಗದಲ್ಲೂ ಆಗಾಗ ಬಿರುಸಿನ ಮಳೆ ಸುರಿಯಿತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.09	15,735	13,527
ಹಾರಂಗಿ	2,859	2,282.43	24,381	25,000
ಕಬಿನಿ	2,284.00	2,282.43	24,381	25,000
ಹೇಮಾವತಿ	2,922	2,920.99	6413	6125
ಲಿಂಗನಮಕ್ಕಿ	1,819	1,802.15	19,423	6,507
ಸೂಪಾ (ಮೀ)	564	546.08	19,956	3,955.69
ಮಾಣಿ	595	587.52	3,622	-
ತುಂಗಭದ್ರಾ	1,633	1,626.6	38,779	38,523
ಮಲಪ್ರಭಾ	2,079.5	2,071.90	5,401	194
ಘಟಪ್ರಭಾ	2175	2,169.93	15,782	9,991
ಭದ್ರಾ *	186	177.4	11,391	3,590
ಆಲಮಟ್ಟಿ (ಮೀ)	519.6	518.06	66,196	90,000
ನಾರಾಯಣಪುರ (ಮೀ)	492.25	491.41	90,000	90,750

* ನೆಲಮಟ್ಟದಿಂದ

ಮಳೆಗೆ ಗೋಡೆ ಕುಸಿದು ಬಾಲಕಿ ಸಾವು

ಗಂಗಾವತಿ (ಕೊಪ್ಪಳ ಜಿಲ್ಲೆ): ಎರಡ್ಮೂರು ದಿನಗಳಿಂದ ಸುರಿದ ಸಾಧಾರಣ ಮಳೆಗೆ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ಮನೆಯ ಶೀಟ್ ಮತ್ತು ಗೋಡೆ ಕುಸಿದು ಒಂದೂವರೆ ವರ್ಷದ ಬಾಲಕಿ ಪ್ರಶಾಂತಿ ಬುಧವಾರ ತಡರಾತ್ರಿ ಮೃತಪಟ್ಟಿದ್ದಾಳೆ.

ಘಟನೆಯಲ್ಲಿ ಬಾಲಕಿಯ ತಾಯಿ ಹನುಮಂತಿ, ಕುಟುಂಬದ ಸದಸ್ಯರಾದ ದುರ್ಗಮ್ಮ, ಭೀಮಮ್ಮ, ಹುಸೇನಪ್ಪ, ಫಕೀರಪ್ಪ ಗಾಯಗೊಂಡಿದ್ದಾರೆ. ಮಗಳೊಂದಿಗೆ ಹನುಮಂತಿ ತವರು ಮನೆಗೆ ಬಂದಾಗ ಈ ಘಟನೆ ನಡೆದಿದೆ.

ಕಳೆದ ತಿಂಗಳು ಜಿಲ್ಲೆಯಲ್ಲಿ ಮಳೆ ಕೊರತೆಯಾಗಿತ್ತು. ಕೊಪ್ಪಳ, ಗಂಗಾವತಿ, ಕುಕನೂರು ಹಾಗೂ ಕುಷ್ಟಗಿ ಭಾಗದಲ್ಲಿ ಗುರುವಾರ ಚೆನ್ನಾಗಿ ಮಳೆ ಸುರಿದಿದೆ.

ಸೈಬರ್ ವಂಚನೆ: ಬೆಸ್ಕಾಂ ನೌಕರ ಆತ್ಮಹತ್ಯೆ

ಡಿಜಿಟಲ್ ಅರೆಸ್ಟ್: ₹11 ಲಕ್ಷ ಕಳೆದುಕೊಂಡಿದ್ದ ಸಂತ್ರಸ್ತ

ಪ್ರಜಾವಾಣಿ ವಾರ್ತೆ

ರಾಮನಗರ: ಸಿಬಿಐ ಅಧಿಕಾರಿಗಳ ಹೆಸರಲ್ಲಿ ಕರೆ ಮಾಡಿದ ವಂಚಕರ ಬಲೆಗೆ ಬಿದ್ದಿದ್ದ ಬೆಸ್ಕಾಂನ 'ಡಿ' ಗ್ರೂಪ್‌ನ ಗುತ್ತಿಗೆ ನೌಕರರೊಬ್ಬರು, ವಂಚಕರ ನಿರಂತರ ಮಾನಸಿಕ ಕಿರುಕುಳ ತಾಳದೆ ಚನ್ನಪಟ್ಟಣ ತಾಲ್ಲೂಕಿನ ಕೆಲಗೇರಿಯಲ್ಲಿ ಜುಲೈ 14ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಡಿಜಿಟಲ್ ಅರೆಸ್ಟ್ ಗುರಿಯಾಗಿದ್ದ ಅವರು ₹11 ಲಕ್ಷವನ್ನು ಕಳೆದುಕೊಂಡಿದ್ದರು. ಚನ್ನಪಟ್ಟಣ ತಾಲ್ಲೂಕಿನ ಮಳೂರು ಹೋಬಳಿಯ ಕೆಲಗೇರಿಯ ನಿವಾಸಿ ಕುಮಾರ್ ಕೆ. (48) ಮೃತರು.

ಸ್ವಗ್ರಾಮದ ತಮ್ಮ ತೋಟದಲ್ಲಿ ಮರಕ್ಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ಬೆಂಗಳೂರಿನ ಎಚ್ಎಸ್ಆರ್ ಲೇಔಟ್ ಬೆಸ್ಕಾಂ ಕಚೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು.

ಸಿಬಿಐ ಅಧಿಕಾರಿ ಹೆಸರಿನಲ್ಲಿ ಕರೆ ಮಾಡುತ್ತಿದ್ದ ವ್ಯಕ್ತಿ, ಹಣಕ್ಕಾಗಿ ನಿರಂತರ ಪೀಡಿಸುತ್ತಿದ್ದುದೇ ಆತ್ಮಹತ್ಯೆಗೆ ಕಾರಣ ಎಂದು ಪತ್ರ ಬರೆದಿಟ್ಟಿದ್ದಾರೆ. ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಬಿಎನ್ಎಸ್ ಕಲಂ 108 ಅಡಿ (ಆತ್ಮಹತ್ಯೆಗೆ ಪ್ರಚೋದನೆ) ಜುಲೈ 15ರಂದು ಪ್ರಕರಣ ದಾಖಲಾಗಿದೆ.



ಕುಮಾರ್

ಕುಮಾರ್ ಅವರ ಮೊಬೈಲ್‌ಗೆ ಇತ್ತೀಚೆಗೆ ಸಿಬಿಐ ಅಧಿಕಾರಿ ಹೆಸರಿನಲ್ಲಿ ವಿಕ್ರಂ ಗೋಸ್ವಾಮಿ ಎಂಬಾತ ಕರೆ ಮಾಡಿದ್ದ. 'ನಿಮ್ಮ ವಿರುದ್ಧ ಬಂಧನ ವಾರೆಂಟ್ ಜಾರಿಯಾಗಿದೆ. ಪ್ರಕರಣದಿಂದ ಹೆಸರು ಕೈಬಿಡಲು ₹1.95 ಲಕ್ಷ ನೀಡಬೇಕು' ಎಂದು ಹೆದರಿಸಿದ್ದ. ಅಷ್ಟು ಹಣವನ್ನು ಕುಮಾರ್ ಪಾವತಿಸಿದ್ದರು.

'ಅಷ್ಟಕ್ಕೆ ಸುಮ್ಮನಾಗದ ವಂಚಕ, ಡಿಜಿಟಲ್ ಅರೆಸ್ಟ್ ಬೆದರಿಕೆ ಒಡ್ಡಿ ಪದೇ ಪದೇ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದ. ಇದನ್ನು ಯಾರಿಗೂ ತಿಳಿಸದಂತೆ ತಾಕೀತು ಮಾಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

₹11 ಲಕ್ಷ ಕಿತ್ತ ವಂಚಕ: ಬೆದರಿದ್ದ ಕುಮಾರ್ ಸಾಲ ಮಾಡಿ ಸುಮಾರು ₹11 ಲಕ್ಷವನ್ನು ವಂಚಕ ಆನ್‌ಲೈನ್ ಮೂಲಕ ವರ್ಗಾಯಿಸಿದ್ದರು. ವಂಚಕ ಮತ್ತೆ ₹2.75 ಲಕ್ಷ ವರ್ಗಾವಣೆಗೆ ಬೆನ್ನು ಬಿದ್ದಿದ್ದ. ಇಷ್ಟಾದರೂ ಕುಮಾರ್ ಯಾರೊಂದಿಗೂ ಈ ವಿಷಯ ಹಂಚಿಕೊಂಡಿರಲಿಲ್ಲ. ಜುಲೈ 14ರಂದು ಬೆಳಗ್ಗೆ ಕಾರ್ಯನಿಮಿತ್ತ ಊರಿಗೆ ಹೋಗುವುದಾಗಿ ಪತ್ನಿಗೆ ಹೇಳಿ ಕೆಲಗೇರಿಗೆ ಬಂದಿದ್ದರು. ಅಂದು ರಾತ್ರಿ 9.30ಕ್ಕೆ ಪತ್ನಿಗೆ ಕರೆ ಮಾಡಿದ್ದು, ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ದಯಾ ನಾಯಕ್ ಹೆಸರಿನಲ್ಲಿ ವಂಚನೆ

ಚಿಕ್ಕಬಳ್ಳಾಪುರ: ಎನ್‌ಕೌಂಟರ್ ಸ್ಪೆಷಲಿಸ್ಟ್ ಮುಂಬೈ ಪೊಲೀಸ್ ಅಧಿಕಾರಿ ದಯಾ ನಾಯಕ್ ಹೆಸರು ಹೇಳಿ ತಾಲ್ಲೂಕಿನ ಸಬ್ಬೇನಹಳ್ಳಿಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿವೃತ್ತ ಹಿರಿಯ ಭೂ ವಿಜ್ಞಾನಿ ಬಿ.ಕೆ. ರಾಮಚಂದ್ರಪ್ಪ ಹಾಗೂ ಅವರ ಪತ್ನಿ ಸುಜಾತ ಅವರಿಗೆ ಸೈಬರ್ ವಂಚಕರು ₹12.65 ಲಕ್ಷ ವಂಚಿಸಿದ್ದಾರೆ.

ದಂಪತಿಗೆ ಕರೆ ಮಾಡಿದ ಸೈಬರ್ ವಂಚಕರು, 'ನಿಮ್ಮ ಬ್ಯಾಂಕ್ ಖಾತೆಗೆ ₹12.65 ಲಕ್ಷ ವರ್ಗಾವಣೆ ಮಾಡಿ. ಇಲ್ಲದಿದ್ದರೆ ನಿಮ್ಮನ್ನು ಬಂಧಿಸಬೇಕಾಗುತ್ತದೆ' ಎಂದು ಬೆದರಿಕೆ ಒಡ್ಡಿದ್ದರು.

ಹೆದರಿದ ದಂಪತಿ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿದ್ದರು.

'ರನ್ಯಾಗೆ ಜಾಮೀನು ನೀಡಬೇಡಿ'



ರನ್ಯಾ ರಾವ್

ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ನಟಿ ರನ್ಯಾ ರಾವ್ ಅವರಿಗೆ ಜಾಮೀನು ನೀಡಬೇಡಿ ಎಂದು ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ (ಕಾಫಿಪೋಸಾ) ಸಲಹಾ ಮಂಡಳಿ ಶಿಫಾರಸು ಮಾಡಿದೆ.

ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 14.2 ಕೆ.ಜಿ ಚಿನ್ನ ಕಳ್ಳಸಾಗಣೆ ಮಾಡಿದ್ದ ವಿಚಾರದಲ್ಲಿ ರೆವಿನ್ಯೂ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ಮಾರ್ಚ್‌ನಲ್ಲಿ ರನ್ಯಾ ಅವರನ್ನು ಬಂಧಿಸಿತ್ತು. ಈ ಪ್ರಕರಣದಲ್ಲಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯವು ಪ್ರತ್ಯೇಕ ತನಿಖೆ ನಡೆಸುತ್ತಿದೆ.

ರನ್ಯಾ ವಿರುದ್ಧ ಕಾಫಿಪೋಸಾ ಅಡಿ ಪ್ರಕರಣ ದಾಖಲಿಸುವಂತೆ ಕೇಂದ್ರ ಗೃಹ ಸಚಿವಾಲಯವು ಡಿಆರ್‌ಐಗೆ ಸೂಚಿಸಿದೆ. ಕಾಫಿಪೋಸಾ ಸಲಹಾ ಮಂಡಳಿಯು ಈಚೆಗೆ ಡಿಆರ್‌ಐಗೆ ಶಿಫಾರಸು ನೀಡಿದ್ದು, 'ಕಾಫಿಪೋಸಾ ಅಡಿ ಬಂಧನದಲ್ಲಿ ಇರುವವರೆಗೂ ರನ್ಯಾಗೆ ಜಾಮೀನು ನೀಡಬೇಡಿ' ಎಂದು ಸೂಚಿಸಿದೆ.

ಸಿದ್ದರಾಮಯ್ಯ–ವಿಜಯೇಂದ್ರ ಜಟಾಪಟಿ

ಬೆಂಗಳೂರು: 'ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. 'ನಮ್ಮ ಪಕ್ಷದ ಪ್ರಧಾನಿ ಅಭ್ಯರ್ಥಿ ಯಾರಾಗುತ್ತಾರೆ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯ ಬಿಜೆಪಿಯವರಿಗೆ ಇಲ್ಲ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ವಿಜಯೇಂದ್ರ, 'ದಲಿತರನ್ನು ವಂಚಿಸಿದ್ದು ಯಾರು' ಎಂದು ಪ್ರಶ್ನಿಸಿದ್ದಾರೆ.

'ಸಿ.ಎಂ ಅಭ್ಯರ್ಥಿ ಕಾರಜೋಳ ಎಂದು ಘೋಷಿಸಲಿ'

ವಿಜಯೇಂದ್ರ ಅವರೇ, ದಲಿತ ಮತ್ತು ಹಿಂದುಳಿದ ಜಾತಿಗಳ ಬಗ್ಗೆ ನಿಮಗೆ ಅಷ್ಟೊಂದು ಅಕ್ಕರೆ, ಕಾಳಜಿಗಳಿದ್ದರೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನವನ್ನು ಒಬ್ಬ ದಲಿತ ನಾಯಕನಿಗೆ ಬಿಟ್ಟುಕೊಡಿ. ದಲಿತ ನಾಯಕ ಗೋವಿಂದ ಕಾರಜೋಳ ಅವರನ್ನು ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ಮಾಡಿ, ಅವರನ್ನೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿಬಿಡಿ.

ಎಪ್ಪತ್ತೈದು ವರ್ಷ ತುಂಬಿರುವ ನರೇಂದ್ರ ಮೋದಿ ಅವರ ಪದಚ್ಯುತಿಯ ಸೂಚನೆಯನ್ನು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ನೀಡಿದ್ದಾರೆ. ದಲಿತ ಪ್ರಧಾನಿಯನ್ನು ಮಾಡಲು ಬಿಜೆಪಿಗೆ ಇದೊಂದು ಸದಾವಕಾಶ. ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಸ್ಥಾನಕ್ಕೆ ಒಬ್ಬ ದಲಿತ ನಾಯಕನನ್ನು ನೀವೇ ಸೂಚಿಸಿ. ಆ ಹೆಸರುಗಳು ಗೋವಿಂದ ಕಾರಜೋಳ ಅಥವಾ ಛಲವಾದಿ ನಾರಾಯಣಸ್ವಾಮಿ ಅವರದ್ದಾಗಿದ್ದರೆ, ಅವರನ್ನು ಅಭಿನಂದಿಸುವರಲ್ಲಿ ನಾನು ಮೊದಲಿಗನಾಗುತ್ತೇನೆ.

ಹಿಂದುಳಿದ ನಾಯಕರನ್ನು ಬಿಜೆಪಿ ಹೇಗೆ ನಡೆಸಿಕೊಳ್ಳುತ್ತಾ ಬಂದಿದೆ ಎನ್ನುವುದಕ್ಕೆ, ರಾಜ್ಯದ ಹಿಂದುಳಿದ ಜಾತಿಗಳ ನಾಯಕ ಎಸ್.ಬಂಗಾರಪ್ಪನವರೇ ಸಾಕ್ಷಿ. ಬಂಗಾರಪ್ಪನವರನ್ನು ನಿಮ್ಮ ತಂದೆ ಬಿ.ಎಸ್. ಯಡಿಯೂರಪ್ಪನವರು ಮುಗಿಸಿದರೆ, ಅವರ ಮಗ ಕುಮಾರ್ ಬಂಗಾರಪ್ಪನವರ ರಾಜಕೀಯವನ್ನು ನೀವು ಮುಗಿಸಲು ಹೊರಟಿದ್ದೀರಿ.

ಮಾತೆತ್ತಿದರೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಹೆಸರನ್ನು ಮೆರೆಸುವ ಬಿಜೆಪಿಯು, ಅವರನ್ನೇ ಪ್ರಧಾನಮಂತ್ರಿ ಯಾಕೆ ಮಾಡಿಲ್ಲ? ಛಲವಾದಿ ನಾರಾಯಣಸ್ವಾಮಿ ಅವರ ತಲೆ ಮೇಲೆ ಚಡ್ಡಿ ತುಂಬಿದ ಬುಟ್ಟಿ ಹೊರಿಸಿ ಕಳಿಸುವ ಬದಲಿಗೆ ನೀವು ಮತ್ತು ನಿಮ್ಮ ತಂದೆಯವರು ಯಾಕೆ ಅದನ್ನು ಹೊತ್ತುಕೊಂಡು ಹೋಗಿಲ್ಲ? ಇದಕ್ಕೆ ನಿಮ್ಮಲ್ಲಿ ಉತ್ತರ ಇದೆಯಾ?

ಸಿದ್ದರಾಮಯ್ಯ, ಮುಖ್ಯಮಂತ್ರಿ

'ದಲಿತರ ವಂಚಿಸಿದ್ದು ಯಾರು'

ಸಿದ್ದರಾಮಯ್ಯನವರೇ, ಸಾಮಾಜಿಕ ನ್ಯಾಯ, ಮೀಸಲಾತಿ, ಸಂವಿಧಾನದ ಬಗ್ಗೆ ನೀವು ಮತ್ತು ನಿಮ್ಮ ಕಾಂಗ್ರೆಸ್ಸಿನ ಅಸಲಿ ಮುಖವಾಡ ಏನೆಂಬುದು ರಾಜ್ಯದ ಹಾಗೂ ದೇಶದ ಜನತೆಗೆ ತಿಳಿಯಲಿ ಎಂಬ ಕಾರಣದಿಂದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿ ಎಂಬ ಸಲಹೆ ನೀಡಿದ್ದೆ.

ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಕಾಶವಿದ್ದರೂ ಅವರ ಹಿರಿತನವನ್ನು ಬದಿಗೆ ಸರಿಸಿ ಮುಖ್ಯಮಂತ್ರಿ ಸ್ಥಾನ ನೀಡದೇ ವಂಚಿಸಿದ್ದು ಕಾಂಗ್ರೆಸ್ ಅಲ್ಲವೇ? ಕರ್ನಾಟಕದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಅರ್ಹ ನಾಯಕರು ಮುಖ್ಯಮಂತ್ರಿ ಆಗುವ ಅವಕಾಶ ತಪ್ಪಿಸಿದವರು ಯಾರು?

ಗೋವಿಂದ ಕಾರಜೋಳ ಅವರು ನಮ್ಮ ಹಿರಿಯ ನಾಯಕರು ಮತ್ತು ಉಪ ಮುಖ್ಯಮಂತ್ರಿ ಆಗಿದ್ದರು. ಈಗ ಅವರು ಸಂಸದರಾಗಿದ್ದಾರೆ. ಭವಿಷ್ಯತ್ತಿನಲ್ಲಿ ಅವರು ಅತ್ಯುನ್ನತ ಸ್ಥಾನಕ್ಕೇರುವ ಎಲ್ಲಾ ಅವಕಾಶಗಳ ಬಾಗಿಲು ಅವರಿಗಾಗಿ ತೆರೆದೇ ಇದೆ. ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ಅಸಡ್ಡೆಗೊಳಗಾಗಿದ್ದ ಛಲವಾದಿ ನಾರಾಯಣಸ್ವಾಮಿ ಅವರಿಗೆ, ಬಿಜೆಪಿಯಲ್ಲಿ ಪಕ್ಷ ಸಂಘಟನೆಯ ಮಹತ್ವದ ಹುದ್ದೆ ನೀಡಿದ್ದೇವೆ. ವಿಧಾನ ಪರಿಷತ್ತಿಗೆ ಕಳುಹಿಸಿ ಸಾಂವಿಧಾನಿಕ ಹುದ್ದೆಯಾದ ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿ ಕುಳ್ಳಿರಿಸಿ ಅವರ ಅರ್ಹತೆ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ಗೌರವಿಸಿದ್ದೇವೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಚಡ್ಡಿ ಹೊರಿಸಿದ್ದು ನೀವು'

ಸಿದ್ದರಾಮಯ್ಯ ಅವರೇ, ನಾನು ಚಡ್ಡಿ ಹೊರುವಂತೆ ಮಾಡಿದ್ದು ನೀವೇ. ನಿಮ್ಮ ಹಿಂಬಾಲಕರು ಚಡ್ಡಿ ಸುಟ್ಟಾಗ, ಬಿಜೆಪಿ ಸರ್ಕಾರವನ್ನು ಟೀಕಿಸುವ ಭರದಲ್ಲಿ, 'ನಾನು ಚಡ್ಡಿ ಸುಡುತ್ತೇನೆ ಎಂದಿದ್ದಿರಿ'. ನಿಮಗೆ ತಿರುಗೇಟು ನೀಡಲು ನಮ್ಮ ಚಡ್ಡಿ ತಂದು ನಿಮಗೆ ಒಪ್ಪಿಸಿದ್ದೆ. ಚಡ್ಡಿ ಸುಡಲು ಸಹಾಯ ಮಾಡಿದ್ದೆ. ಅದನ್ನು ಮರೆಯಬೇಡಿ.

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ತ್ಯಾಗ ಮತ್ತು ಸಂಘರ್ಷವಿಲ್ಲದೆ ಸಾರ್ಥಕತೆ ಪ್ರಾಪ್ತಿಯಾಗುವುದಿಲ್ಲ.

–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

'ವಿಶೇಷ ಶಿಕ್ಷಕ'ರ ವರ್ಗಾವಣೆ ಗ್ರಾಮೀಣ ಮಕ್ಕಳಿಗೆ ವಂಚನೆ

ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರನ್ನು, 240ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ವರ್ಗಾಯಿಸುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿರ್ಧಾರ ಗ್ರಾಮೀಣ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಯನ್ನು ಗಾಳಿಗೆ ತೂರುವಂತಹದ್ದು. ಪ್ರೌಢಶಾಲೆಗಳಲ್ಲಿನ ಸ್ಥಿರ ವಿನ್ಯಾಸವನ್ನು ಪರಿಷ್ಕರಿಸಿದ್ದು, 240ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿನ ವಿಶೇಷ ಶಿಕ್ಷಕರನ್ನು 'ಹೆಚ್ಚುವರಿ' ಎಂದು ಗುರುತಿಸುವುದಾಗಿ ಇಲಾಖೆ ಹೇಳಿದೆ. ಇದರಿಂದಾಗಿ, ಕಡಿಮೆ ಮಕ್ಕಳು ಇರುವ ಗ್ರಾಮೀಣ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರು ನಗರ ಪ್ರದೇಶಗಳಿಗೆ ವರ್ಗ ಆಗಲಿದ್ದಾರೆ. ಮೂಲ ಸೌಕರ್ಯದ ಕೊರತೆಯೊಂದಿಗೆ ವಿದ್ಯಾರ್ಥಿಗಳ ದಾಖಲಾತಿಯೂ ಕಡಿಮೆಯಾಗಿ, ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳು ವರ್ಷದಿಂದ ವರ್ಷಕ್ಕೆ ದುರ್ಬಲಗೊಳ್ಳುತ್ತಿವೆ. ಈಗ ವಿಶೇಷ ಶಿಕ್ಷಕರನ್ನೂ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವರ್ಗಾಯಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಸರ್ಕಾರಿ ಶಾಲೆಗಳ ನಡುವೆ ಭೇದ ಕಲ್ಪಿಸಲು ಹೊರಟಂತಿರುವ ಇಲಾಖೆ, ಗ್ರಾಮೀಣ ಮಕ್ಕಳಿಗೆ 'ಕಲೆ' ಅಗತ್ಯವಿಲ್ಲ ಎಂದು ಭಾವಿಸಿದಂತಿದೆ. ವಿದ್ಯಾರ್ಥಿಗಳು ಕಡಿಮೆ ಇದ್ದಾರೆ ಎನ್ನುವ ಕಾರಣಕ್ಕಾಗಿ ವಿಶೇಷ ಶಿಕ್ಷಕರನ್ನು ವರ್ಗಾಯಿಸಲು ಮುಂದಾಗಿರುವ ಶಿಕ್ಷಣ ಇಲಾಖೆ, ಮಕ್ಕಳ ಹಿತಾಸಕ್ತಿಯನ್ನು ನಿರ್ಲಕ್ಷಿಸಿದೆ ಹಾಗೂ ವ್ಯಾವಹಾರಿಕ ನಿರ್ಧಾರ ಕೈಗೊಂಡಿದೆ.



ಚಿತ್ರಕಲೆ, ಸಂಗೀತ, ನಾಟಕ, ನೃತ್ಯದಂತಹ ಸೃಜನಶೀಲ ವಿಷಯಗಳನ್ನು ಕಲಿಸುವವರನ್ನು 'ವಿಶೇಷ ಶಿಕ್ಷಕ'ರೆಂದು ಶಿಕ್ಷಣ ಇಲಾಖೆ ಹೆಸರಿಸಿದೆ. ಈ ಶಿಕ್ಷಕರು, ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ; ಚಿತ್ರಕಲೆ, ಸಂಗೀತ, ನಾಟಕದಂತಹ ವಿವಿಧ ಕಲಾ ಪ್ರಕಾರಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಹೊರಹೊಮ್ಮಲು ಪ್ರೋತ್ಸಾಹಿಸುತ್ತಾರೆ. ವಿದ್ಯಾರ್ಥಿಗಳು ಕೀಳರಿಮೆಯಿಂದ ಹೊರಬಂದು, ಸ್ವಯಂ ಅಭಿವ್ಯಕ್ತಿಯ ಕೌಶಲಗಳನ್ನು ರೂಢಿಸಿಕೊಳ್ಳಲು ನೆರವಾಗುತ್ತಾರೆ. ಪಠ್ಯೇತರ ಚಟುವಟಿಕೆಗಳ ಮಹತ್ವವನ್ನು ಗುರ್ತಿಸಿ, ವಿಶೇಷ ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡಬೇಕೆಂದು 'ರಾಷ್ಟ್ರೀಯ ಶಿಕ್ಷಣ ನೀತಿ'ಯೂ ಪ್ರತಿಪಾದಿಸಿದೆ. ಆದರೆ, ಪಠ್ಯೇತರ ಚಟುವಟಿಕೆಗಳೆಂದು ಪರಿಗಣಿಸಲಾಗುವ ಕಲಾ ಪ್ರಕಾರಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನ ಪ್ರೋತ್ಸಾಹವಿಲ್ಲ. ಅಂಕ ಗಳಿಕೆಗೆ ಪ್ರಧಾನವಾದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಆಸಕ್ತಿಯುಳ್ಳ ಹೆಚ್ಚಿನ ಪಾಲಕರೂ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಉತ್ಸಾಹ ವ್ಯಕ್ತಪಡಿಸುವುದಿಲ್ಲ. ಈ ಅವಗಣನೆಯ ಸೋಂಕನ್ನು ಗ್ರಾಮೀಣ ಸರ್ಕಾರಿ ಶಾಲೆಗಳಿಗೂ ಹಬ್ಬಿಸಲು ಶಿಕ್ಷಣ ಇಲಾಖೆ ಹೊರಟಂತಿದೆ.

> ವಿದ್ಯಾರ್ಥಿ ಪ್ರತಿಭೆಗಳ ಸೃಜನಶೀಲ ಅಭಿವ್ಯಕ್ತಿಗೆ ಪೂರಕವಾಗಿ ಕಾರ್ಯ ನಿರ್ವಹಿಸುವ 'ವಿಶೇಷ ಶಿಕ್ಷಕ'ರನ್ನು 'ಹೆಚ್ಚುವರಿ' ಎಂದು ಗುರುತಿಸುವ ನಿರ್ಧಾರ ಅವೈಜ್ಞಾನಿಕ.

ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ಅಭಿರುಚಿ ಮೂಡಿಸುವ ವಿಶೇಷ ಶಿಕ್ಷಕರು ಸವಾಲುಗಳ ನಡುವೆಯೇ ಕಾರ್ಯ ನಿರ್ವಹಿಸಬೇಕಾಗಿದೆ. ವಿಶೇಷ ಶಿಕ್ಷಕರನ್ನು ಅವರು ಕಾರ್ಯ ನಿರ್ವಹಿಸುವ ಶಾಲೆಗಳಲ್ಲಿಯೇ ಎರಡನೇ ದರ್ಜೆಯ ಶಿಕ್ಷಕರಂತೆ ನಡೆಸಿಕೊಳ್ಳುವ ಉದಾಹರಣೆಗಳಿವೆ; ಪಠ್ಯ ವಿಷಯಗಳನ್ನು ಬೋಧಿಸುವ ಶಿಕ್ಷಕರಿಗೆ ದೊರೆಯುವ ಮಹತ್ವ ಅವರಿಗೆ ದೊರೆಯುವುದಿಲ್ಲ. ಪ್ರತಿಕೂಲ ಪರಿಸ್ಥಿತಿ ನಡುವೆಯೂ ಕೆಲವು ಶಿಕ್ಷಕರು, ತಾವು ಕರ್ತವ್ಯ ನಿರ್ವಹಿಸುವ ಶಾಲೆಗಳಿಗೆ ತಮ್ಮ ಸೃಜನಶೀಲತೆಯ ಮೂಲಕ ಹೊಸ ಚಹರೆ ನೀಡಿದ್ದಾರೆ; ಗ್ರಾಮೀಣ ಶಾಲೆಗಳ ಮಕ್ಕಳು ರಾಜ್ಯಮಟ್ಟದ ಚಟುವಟಿಕೆಗಳಲ್ಲಿ ನಗರ ಪ್ರದೇಶಗಳ ಮಕ್ಕಳೊಂದಿಗೆ ಸ್ಪರ್ಧಿಸಿ ಗೆಲ್ಲಲು ಕಾರಣರಾಗಿದ್ದಾರೆ. ಇಂಥ ಶಿಕ್ಷಕರನ್ನು 'ಹೆಚ್ಚುವರಿ' ಎನ್ನುವ ಹಣೆಪಟ್ಟಿಯೊಂದಿಗೆ ನಗರ ಪ್ರದೇಶದ ಶಾಲೆಗಳಿಗೆ ವರ್ಗ ಮಾಡುವುದು ವಿವೇಚನೆಯಿಂದ ಕೂಡಿದ ನಿರ್ಧಾರವಲ್ಲ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗುತ್ತಿರುವ ಶಿಕ್ಷಕರನ್ನು 'ಹೆಚ್ಚುವರಿ'ಯೆಂದು ಗುರುತಿಸುವ ಅವೈಜ್ಞಾನಿಕ ಹಾಗೂ ಅಸಾಂಸ್ಕೃತಿಕ ನಿರ್ಧಾರವನ್ನು ಶಿಕ್ಷಣ ಇಲಾಖೆ ಕೈಬಿಡಬೇಕು. ಸಾಮೂಹಿಕ ವರ್ಗಾವಣೆಯ ಜೊತೆಗೆ, ಕಲಾ ಪ್ರಕಾರಗಳಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಬಳಸಲಾಗುತ್ತಿರುವ 'ವಿಶೇಷ' ಎನ್ನುವ ಅಸೂಕ್ಷ್ಮ ಪದ ಬಳಕೆಯನ್ನೂ ಕೈಬಿಡಬೇಕು. ಈ ಮೊದಲು, ಶಿಕ್ಷಕರನ್ನು ಅವರು ಶೈಕ್ಷಣಿಕ ಪರಿಣತಿ ಹೊಂದಿದ ಸಂಗೀತ, ನಾಟಕ, ಚಿತ್ರಕಲೆಯಂತಹ ಕಲಾಪ್ರಕಾರದ ಜೊತೆಗೇ ಗುರುತಿಸಲಾಗುತ್ತಿತ್ತು. ಆ ಪದ್ಧತಿ ಮತ್ತೆ ಜಾರಿಗೆ ಬರಬೇಕು. ಭಾಷೆ, ಗಣಿತ, ವಿಜ್ಞಾನದ ಶಿಕ್ಷಕರಂತೆ ಕಲಾ ಪ್ರಕಾರಗಳಿಗೆ ಸಂಬಂಧಿಸಿದ ಕಾಯಂ ಶಿಕ್ಷಕರ ಹುದ್ದೆಯು ಶಾಲೆಗಳಲ್ಲಿರುವುದು ಅಗತ್ಯ. ಈಗ 'ವಿಶೇಷ' ಹಣೆಪಟ್ಟಿಯಲ್ಲಿ 2,400ಕ್ಕೂ ಹೆಚ್ಚು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಯಮಿತ ನೇಮಕಾತಿ ಪ್ರಕ್ರಿಯೆ ಜಾರಿಗೆ ತರುವ ಮೂಲಕ, ಎಲ್ಲ ಶಾಲೆಗಳಲ್ಲೂ ಕಲಾ ಪ್ರಕಾರಗಳ ಶಿಕ್ಷಕರು ಇರುವಂತೆ ಶಿಕ್ಷಣ ಇಲಾಖೆ ನೋಡಿಕೊಳ್ಳಬೇಕಾಗಿದೆ.

ವಿಶ್ವಾಸದಲ್ಲಿ ನಂಬಿಕೆ ಇರಲಿ



'ಭಯ' ಎನ್ನುವುದು ನಿಮ್ಮ ಕೆಟ್ಟದ್ದರಲ್ಲಿ ನಂಬಿಕೆ ಇರುವುದಾಗಿದೆ. 'ನಂಬಿಕೆ' ಎನ್ನುವುದು ಒಳಿತಿನಲ್ಲಿ ನಂಬಿಕೆ ಇರುವುದಾಗಿದೆ.

ಚಾರ್ಮಿ ಕೌರ್, ನಟಿ, ಫ್ಯಾಷನ್ ಡಿಸೈನರ್

ಕಿಡಿನುಡಿ



ಬೇರೆ ಪಕ್ಷಗಳಲ್ಲಿನ ದಲಿತ ನಾಯಕರ ಚಾರಿತ್ರ್ಯಹನನ ಮಾಡಲಷ್ಟೇ ಬಿಜೆಪಿಯು ತನ್ನ ದಲಿತ ನಾಯಕರನ್ನು ಬಳಸಿಕೊಳ್ಳುತ್ತದೆ. ಅವರಿಗೆ ಯಾವುದೇ ಗೌರವ ಮತ್ತು ಪ್ರಮುಖ ಸ್ಥಾನಮಾನ ನೀಡುವುದಿಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 18-7-2000

• ವಿಮಾನದಲ್ಲಿ ಹೆರಿಗೆ

ಅಂಕಾರ, ಜುಲೈ 17 (ಡಿಪಿಎ)- ಟರ್ಕಿಯಿಂದ ನ್ಯೂರೆಂಬರ್ಗ್‌ಗೆ ಪ್ರಯಾಣಿಸುತ್ತಿದ್ದ ಜರ್ಮನ್ ಮಹಿಳೆಯೊಬ್ಬರು ನಿನ್ನೆ ವಿಮಾನದಲ್ಲಿಯೇ ಮಗುವಿಗೆ ಜನ್ಮ ನೀಡಿದ್ದಾರೆ. ಅಂಕಾರದಿಂದ ವಿಮಾನ ಹೊರಟ ಸ್ವಲ್ಪ ಸಮಯದಲ್ಲೇ ಆಕೆಗೆ ಹೆರಿಗೆ ನೋವು ಕಾಣಿಸಿಕೊಂಡಿತು. ವಿಮಾನದಲ್ಲಿದ್ದ ವೈದ್ಯರೊಬ್ಬರು ಹೆರಿಗೆ ಮಾಡಿಸಿದರು. ನಂತರ ವಿಮಾನವನ್ನು ಇಸ್ತಾಂಬುಲ್‌ನಲ್ಲಿ ಇಳಿಸಿ ತಾಯಿ, ಮಗುವನ್ನು ಆಸ್ಪತ್ರೆಗೆ ಸೇರಿಸಲಾಯಿತು.

• ಮನೆಗಳ ಮೇಲೆ ವಿಮಾನ ಅಪ್ಪಳಿಸಿ 55 ಸಾವು

ಪಟ್ನಾ, ಜುಲೈ 17 (ಪಿಟಿಐ)- ದೆಹಲಿಗೆ ಹೊರಟಿದ್ದ ಅಲಯೆನ್ಸ್ ಏರ್ ಬೋಯಿಂಗ್– 737 ವಿಮಾನ ಇಂದು ಬೆಳಿಗ್ಗೆ ಪಟ್ನಾ ವಿಮಾನ ನಿಲ್ದಾಣದಲ್ಲಿ ಇಳಿಯುವ ಕೆಲವೇ ನಿಮಿಷಗಳ ಮೊದಲು ಅಪಘಾತಕ್ಕೀಡಾಗಿ ಮನೆಗಳ ಮೇಲೆ ಅಪ್ಪಳಿಸಿದ್ದರಿಂದ ಒಟ್ಟು 55 ಮಂದಿ ಸತ್ತಿದ್ದಾರೆ. ಇವರಲ್ಲಿ ವಿಮಾನದಲ್ಲಿದ್ದ 51 ಮಂದಿ ಹಾಗೂ ಮನೆಗಳಲ್ಲಿದ್ದ ನಾಲ್ವರು ಸೇರಿದ್ದಾರೆ. ವಿಮಾನದಲ್ಲಿ 58 ಪ್ರಯಾಣಿಕರಿದ್ದರು. ಅಪಘಾತದಲ್ಲಿ ಬದುಕಿ ಉಳಿದಿರುವ ಏಳು ಮಂದಿ ಹಾಗೂ ಗಾಯಗೊಂಡಿರುವ ನಿವಾಸಿಗಳನ್ನು ಚಿಕಿತ್ಸೆಗಾಗಿ ವಿಶೇಷ ವಿಮಾನವೊಂದರಲ್ಲಿ ದೆಹಲಿಗೆ ಕೊಂಡೊಯ್ಯಲಾಗಿದೆ. ಅವರ ಪೈಕಿ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ

ಮಂಗಳವಾರ, 18-7-1950

• ಶ್ರೀನಗರದ ದಾರಿಯಲ್ಲಿ ವಿಮಾನ ಅಪಘಾತ: 22 ಮಂದಿ ಮರಣ

ದೆಹಲಿ, ಜುಲೈ 17– ದೆಹಲಿಯಿಂದ ಶ್ರೀನಗರಕ್ಕೆ ಹಾರಾಟ ಕೈಗೊಂಡಿದ್ದ ನ್ಯಾಷನಲ್ ಏರ್‌ವೇಸ್‌ಗೆ ಸೇರಿದ ಡಕೋಟ ವಿಮಾನವೊಂದು ಶ್ರೀನಗರಕ್ಕೆ ಹೋಗುವಾಗಲೇ ಅಪಘಾತಕ್ಕೀಡಾಗಿ, ಭಾರತದಲ್ಲಿನ ಆಸ್ಟ್ರಿಯಾ ಪ್ರತಿನಿಧಿ – ವಿಶ್ವಸಂಸ್ಥೆಯ ಕಾಶ್ಮೀರ ಪರಿಶೀಲಕರು ಮತ್ತು ಪ್ರಧಾನಿ ನೆಹರೂ ಆಪ್ತ ಕಾರ್ಯದರ್ಶಿ ದ್ವಾರಕ್ಯಾಥ ಕಟ್ಟು ಅವರನ್ನೊಳಗೊಂಡು 18 ಮಂದಿ ಪ್ರಯಾಣಿಕರೂ, 4 ಮಂದಿ ವಿಮಾನ ಚಾಲಕ ಪಡೆಯವರು ಮೃತ್ಯುವಿಗೆ ಈಡಾದರು.

• ಮೈಸೂರು ಶಾಸನ ಸಭೆಗೆ ಉಪ ಚುನಾವಣೆ

ಬೆಂಗಳೂರು, ಜುಲೈ 17– ಮೈಸೂರು ಶಾಸನ ಸಭೆಯಲ್ಲಿ ಖಾಲಿ ಇರುವ ಸ್ಥಾನಗಳಲ್ಲಿ, ಎರಡು ಸ್ಥಾನಗಳಿಗೆ ಸರ್ಕಾರ ಉಪ ಚುನಾವಣೆ ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ.

ಫುಟ್‌ಬಾಲ್ ಅಂಗಳದಲ್ಲಿ ಸ್ತ್ರೀಪರ್ವ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತದ ಮಹಿಳೆಯರ ಫುಟ್‌ಬಾಲ್ ತಂಡ 23 ವರ್ಷಗಳ ನಂತರ 'ಎಎಫ್‌ಸಿ ಏಷ್ಯನ್ ಕಪ್ ಟೂರ್ನಿ'ಗೆ ಅರ್ಹತೆ ಗಳಿಸಿದೆ. 2026ರ ಏಷ್ಯನ್ ಕಪ್ ಟೂರ್ನಿಯಲ್ಲಿ ಭಾರತದ ವನಿತೆಯರು ತಮ್ಮ ಕಾಲ್ಚಳಕ ತೋರಿಸಲಿದ್ದಾರೆ.

ಮಣಿಪುರದ ಸ್ವೀಟಿ ದೇವಿ ಎನ್‌ಗಾಂಗ್‌ಬಮ್ ಅವರ ನಾಯಕತ್ವದ ತಂಡವು 'ಎಎಫ್‌ಸಿ' ಅರ್ಹತಾ ಫೈನಲ್‌ನಲ್ಲಿ ಥಾಯ್ಲೆಂಡ್ ತಂಡವನ್ನು ಅದರ ತವರಿನಲ್ಲಿಯೇ ಸೋಲಿಸಿತು. ಥಾಯ್ಲೆಂಡ್ ಎದುರು ಸಂಗೀತಾ ಬಸ್ಫೋರ್ ಅವರು ಹೊಡೆದ ಎರಡು ಗೋಲುಗಳು ಜಯಕ್ಕೆ ಕಾರಣವಾದವು. ಆಸ್ಟ್ರೇಲಿಯಾದಲ್ಲಿ (ಏಷ್ಯಾ- ಒಷಾನಿಯಾ ಸಹಭಾಗಿತ್ವ) ಮುಂದಿನ ವರ್ಷ ನಡೆಯಲಿರುವ 'ಎಎಫ್‌ಸಿ' ಟೂರ್ನಿಯಲ್ಲಿ ಭಾರತವು ಅಗ್ರ 8 ತಂಡಗಳಲ್ಲಿ ಸ್ಥಾನ ಪಡೆದರೆ, 2027ರ ಮಹಿಳಾ ಫಿಫಾ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸುವ ಸಾಧ್ಯತೆ ಇದೆ. ಸದ್ಯ, ವನಿತೆಯರ ತಂಡವು ವಿಶ್ವ ರ್‍ಯಾಂಕಿಂಗ್‌ನಲ್ಲಿ 55ನೇ ಸ್ಥಾನಕ್ಕೇರಿರುವುದು ಆಶಾದಾಯಕ ಬೆಳವಣಿಗೆ.

1975ರಿಂದ 1991ರವರೆಗಿನ ಅವಧಿಯು ಭಾರತದ ಮಹಿಳಾ ಫುಟ್‌ಬಾಲ್ ಕ್ಷೇತ್ರದ ಸುವರ್ಣ ಯುಗವೆಂದೇ ಹೇಳಲಾಗುತ್ತದೆ. ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಯಲ್ಲಿ 1980 ಮತ್ತು 1983ರಲ್ಲಿ ರನ್ನರ್ಸ್ ಅಪ್ ಆಗಿದ್ದ ತಂಡವು, 1981ರಲ್ಲಿ ಕಂಚಿನ ಪದಕ ಜಯಿಸಿತ್ತು. ಅದರ ನಂತರ ಭಾರತ ತಂಡದ ಸಾಧನೆ ಇಳಿಮುಖವಾಗಿತ್ತು. ಒಲಿಂಪಿಕ್ಸ್ ಅಥವಾ ಫಿಫಾ ವಿಶ್ವಕಪ್ ಕ್ವಾಲಿಫೈಯರ್ ಹಂತದಲ್ಲಿ ಸೆಣಸುವ ಮಟ್ಟಕ್ಕೆ ಆಟಗಾರ್ತಿಯರಿಗೆ ತರಬೇತಿ, ಸೌಲಭ್ಯಗಳು ಮತ್ತು ವಿದೇಶ ಪ್ರವಾಸಗಳನ್ನು ಒದಗಿಸುವಲ್ಲಿ 'ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್' (ಎಐಎಫ್‌ಎಫ್) ವಿಫಲವಾಯಿತು. ಹೆಚ್ಚು ಟೂರ್ನಿಗಳಲ್ಲಿ ಸಕ್ರಿಯವಾಗಿರದ ಕಾರಣಕ್ಕೆ 2009ರಲ್ಲಿ ಫಿಫಾ ತನ್ನ ಪಟ್ಟಿಯಿಂದಲೇ ಭಾರತ ತಂಡದ ಹೆಸರನ್ನು ಕೈಬಿಟ್ಟಿತ್ತು. ಈ ಚಾಟಿಯೇಟಿನಿಂದ ಎಚ್ಚೆತ್ತ 'ಎಐಎಫ್‌ಎಫ್' 2010ರಲ್ಲಿ ತಂಡವನ್ನು ಮರಳಿ ಕಟ್ಟಿತು. ಅಲ್ಲಿಂದ ಐದು ಬಾರಿ ದಕ್ಷಿಣ ಏಷ್ಯಾ ಫುಟ್‌ಬಾಲ್ (ಸ್ಯಾಫ್) ಚಾಂಪಿಯನ್ ಆಗಿ ಹೊರಹೊಮ್ಮಿದರೂ, ಎಎಫ್‌ಸಿ ಅರ್ಹತೆ ಪಡೆಯಲು ವಿಫಲವಾಗುತ್ತಿತ್ತು. ಈ ಬಾರಿ ಎಡವಲಿಲ್ಲ. ಬೇರೆ ಬೇರೆ ಕ್ಲಬ್‌ಗಳಲ್ಲಿ ಆಡಿ ಬಂದಿದ್ದ ಅನುಭವಿ ಆಟಗಾರ್ತಿಯರು ಕ್ರಿಸ್ಪಿನ್ ಚೆಟ್ರಿ ಅವರ ಮಾರ್ಗದರ್ಶನದಲ್ಲಿ ಸದ್ಯ ಈ ಮಟ್ಟಕ್ಕೆ ಬಂದು ನಿಂತಿದ್ದಾರೆ.

'ನಾನು ಸೋಲುಗಳಿಗಾಗಲೀ ಅಥವಾ ನೌಕರಿ ಕಳೆದುಕೊಳ್ಳುವುದಕ್ಕಾಗಲೀ ಭಯಪಡುವುದಿಲ್ಲ. ನನ್ನ ಎಲ್ಲ ಅನುಭವವನ್ನೂ ಧಾರೆ ಎರೆದಿರುವೆ. ಈ ಹುಡುಗಿಯರಲ್ಲಿ ಅಗಾಧ ಪ್ರತಿಭೆ ಇದೆ. ಆದರೆ, ಅವರ ಮನಸ್ಸಿನಲ್ಲಿ ಸೋಲುವ ಭಯ ಇತ್ತು. ಎಎಫ್‌ಸಿ ಅರ್ಹತಾ ಟೂರ್ನಿಗೆ ಹೋಗುವ ಮುನ್ನ ಹೆಚ್ಚು ಪಂದ್ಯಗಳನ್ನು ಆಡಿಸುವ ಮೂಲಕ ಅದನ್ನು ಹೋಗಲಾಡಿಸುವ ಪ್ರಯತ್ನ ಮಾಡಿದ್ದು ಉಪಯುಕ್ತವಾಯಿತು' ಎಂದು ಮ್ಯಾನೇಜರ್ ಕ್ರಿಸ್ಪಿನ್ ಚೆಟ್ರಿ ಹೇಳುತ್ತಾರೆ.

ಡಾರ್ಜಿಲಿಂಗ್ ಮೂಲದ ಚೆಟ್ರಿ ಅವರು ಮಹಿಳಾ ಫುಟ್‌ಬಾಲ್ ಬೆಳವಣಿಗೆಗೆ ದೀರ್ಘ ಕಾಲದ ಯೋಜನೆ ರೂಪಿಸಿದ್ದಾರೆ. 2047ರ ಫಿಫಾ ಮಹಿಳಾ ವಿಶ್ವಕಪ್‌ನಲ್ಲಿ ತಂಡ ಆಡುವಂತಾಗಬೇಕು. ವಿಶ್ವದ ಬಲಿಷ್ಠ ರಾಷ್ಟ್ರಗಳನ್ನು ಎದುರಿಸಿ ನಿಲ್ಲಲು ಭಾರತದ ವ್ಯವಸ್ಥೆಯಲ್ಲಿ ಅಷ್ಟು ಸಮಯ ಬೇಕು ಎಂಬುದು ಅವರ ಅಭಿಪ್ರಾಯ.

ಭಾರತದಲ್ಲಿ ಫುಟ್‌ಬಾಲ್ ಕ್ರೀಡೆಯು ಇನ್ನೇನು ಉತ್ತುಂಗಕ್ಕೇರುತ್ತದೆ ಎಂಬ ಭರವಸೆ ಮೂಡಿದಾಗಲೇ ಪಾತಾಳಕ್ಕಿಳಿದ ಉದಾಹರಣೆಗಳು ಸಾಕಷ್ಟಿವೆ. ಅದಕ್ಕೆ ಕಾರಣ, 'ಎಐಎಫ್‌ಎಫ್'ನಲ್ಲಿ ರಾಜಕೀಯ ಹಸ್ತಕ್ಷೇಪ, ಪದಾಧಿಕಾರಿಗಳ ಇಚ್ಛಾಶಕ್ತಿಯ ಕೊರತೆ ಮತ್ತು ಭ್ರಷ್ಟಾಚಾರಗಳು ಎಂಬುದು ಗುಟ್ಟಾಗಿ ಉಳಿದಿಲ್ಲ. ಇದೆಲ್ಲಕ್ಕಿಂತ ಮಿಗಿಲಾಗಿ, ಪ್ರತಿಭಾವಂತ ಆಟಗಾರರು ಮತ್ತು ಆಟಗಾರ್ತಿಯರನ್ನು ತಾರೆಗಳನ್ನಾಗಿ ಬೆಳೆಸಿ ಯುವ ಸಮುದಾಯವನ್ನು ಆಕರ್ಷಿಸುವಲ್ಲಿ 'ಎಐಎಫ್‌ಎಫ್' ಸಂಪೂರ್ಣ ವಿಫಲವಾಗಿದೆ. ಪ್ರಸ್ತುತ ಮಹಿಳಾ ತಂಡವು ಚಾರಿತ್ರಿಕ ಸಾಧನೆ ಮಾಡಿ ಬಂದರೂ, ಅದನ್ನು ದೊಡ್ಡಮಟ್ಟದಲ್ಲಿ ಸಂಭ್ರಮಿಸುವ ಅಥವಾ ಪ್ರಚಾರಗೊಳಿಸುವ ಯಾವುದೇ ಕ್ರಮವನ್ನೂ ಶ್ರಮವನ್ನೂ ಫೆಡರೇಷನ್ ತೆಗೆದುಕೊಂಡಿಲ್ಲ.

ಒಡಿಶಾ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಿಂದ ವಿಭಿನ್ನ ಸಾಮಾಜಿಕ, ಆರ್ಥಿಕ ಹಿನ್ನೆಲೆಗಳಿಂದ ಬಂದಿರುವ ಹುಡುಗಿಯರು ತಂಡದಲ್ಲಿದ್ದಾರೆ. ಅವರ ಉನ್ನತ ಸಾಧನೆಯ ಕನಸುಗಳಿಗೆ ರೆಕ್ಕೆ ಹಚ್ಚಿರುವ ಈ ವಿಜಯವು ಯಶೋಗಾಥೆಯಾಗಿ ಮೆರೆಯಬೇಕಿತ್ತು. ಆದರೆ, ಈ ನಿಟ್ಟಿನಲ್ಲಿ ಫೆಡರೇಷನ್ ಎಡವಿದೆ ಎಂಬುದರಲ್ಲಿ ಸಂಶಯವೇ ಇಲ್ಲ.

ನಿರ್ಲಕ್ಷ್ಯದ ಧೋರಣೆಯಿಂದಾಗಿಯೇ ಈಗ ದೇಶದ ಪುರುಷರ ಫುಟ್‌ಬಾಲ್ ತಂಡವೂ ನಲುಗುತ್ತಿದೆ. ತಂಡವು ಫಿಫಾ ರ್‍ಯಾಂಕಿಂಗ್‌ನಲ್ಲಿ 133ಕ್ಕೆ ಕುಸಿದ ಸುದ್ದಿ ಈಚೆಗಷ್ಟೇ ಹೊರಬಿದ್ದಿದೆ. ಮೂರು ವರ್ಷಗಳ ಹಿಂದಷ್ಟೇ 99ನೇ ಸ್ಥಾನಕ್ಕೇರಿದ್ದ ತಂಡವು, ಈಗ ಮತ್ತೆ ತಳಕಚ್ಚಿರುವುದು ದುರದೃಷ್ಟಕರ.

ಚುನಿ ಗೋಸ್ವಾಮಿ, ಪಿ.ಕೆ. ಬ್ಯಾನರ್ಜಿ, ಎಂ. ವಿಜಯನ್, ಬೈಚುಂಗ್ ಭುಟಿಯಾ ಮತ್ತು ಸುನಿಲ್ ಚೆಟ್ರಿ ಅವರಂತಹ ಬೆರಳೆಣಿಕೆಯಷ್ಟು ತಾರೆಗಳನ್ನು ಭಾರತದಲ್ಲಿ ನೋಡಬಹುದು. ಖಾಸಗಿ ಕ್ಲಬ್‌ಗಳು ಬಹಳಷ್ಟಿದ್ದರೂ ಸ್ಟಾರ್ ಆಟಗಾರರನ್ನು ಸಿದ್ಧಪಡಿಸುವಲ್ಲಿ ಹಿನ್ನಡೆ ಆಗುತ್ತಿದೆ. ಅದಕ್ಕಾಗಿಯೇ ಸುನಿಲ್ ಚೆಟ್ರಿ ಅವರು ತಾವು ನಿವೃತ್ತಿ ಪಡೆದ ಒಂದು ವರ್ಷದ ನಂತರ ಮತ್ತೆ ತಂಡಕ್ಕೆ ಮರಳಿದ್ದಾರೆ. 40 ವರ್ಷದ ಚೆಟ್ರಿ ಭಾರತ ತಂಡಕ್ಕೆ ಆಡುತ್ತಿದ್ದಾರೆ. ತಮ್ಮ ನೆಚ್ಚಿನ ಆಟಗಾರ ಮರಳಿ ಬಂದರು ಎಂಬ ಸಂತೋಷವು ಅವರ ಅಭಿಮಾನಿಗಳಲ್ಲಿ ಮೂಡಿದ್ದು ಸಹಜ. ಆದರೆ, ಚೆಟ್ರಿ ಜಾಗವನ್ನು ತುಂಬಬಲ್ಲ ಯುವ ಆಟಗಾರರ ಕೊರತೆಯನ್ನೂ ಈ ಬೆಳವಣಿಗೆ ಎತ್ತಿ ತೋರಿಸಿತ್ತಲ್ಲವೇ?

> ದೇಶದ ಫುಟ್‌ಬಾಲ್ ಅಂಗಳ ಗೊಂದಲದ ಗೂಡಾಗಿದೆ. ಮೂಲ ಸೌಕರ್ಯದ ಕೊರತೆ ಹಾಗೂ ನಿರುತ್ಸಾಹದ ಪರಿಸರದಲ್ಲಿ ಆಟಗಾರರ ಪ್ರತಿಭಾ ಪ್ರದರ್ಶನದ ಸಾಧ್ಯತೆಗಳು ಕಡಿಮೆಯಾಗಿವೆ. ಕಾರ್ಮೋಡಗಳ ನಡುವಿನ ಬೆಳ್ಳಿಗೆರೆಯಂತೆ, 2026ರ ಏಷ್ಯನ್ ಕಪ್ ಟೂರ್ನಿಗೆ ಭಾರತದ ಮಹಿಳಾ ತಂಡ ಅವಕಾಶ ಪಡೆದಿದೆ.

ಇಷ್ಟೆಲ್ಲ ಸಾಲದೆಂಬಂತೆ, ಈಗ 'ಇಂಡಿಯನ್ ಸೂಪರ್ ಲೀಗ್' (ಐಎಸ್‌ಎಲ್) ಟೂರ್ನಿಗೂ ಗ್ರಹಣ ಹಿಡಿಯುವ ಆತಂಕ ಮೂಡಿದೆ. 'ಐಎಸ್‌ಎಲ್' ಟೂರ್ನಿಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಐಎಸ್‌ಎಲ್ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ಮತ್ತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ನಡುವಣ ಮೂಲ ಹಕ್ಕುಗಳ ಒಪ್ಪಂದ (ಎಂಆರ್‌ಎ) ನವೀಕರಣಕ್ಕೆ ಸಂಬಂಧಿಸಿದಂತೆ ಅನಿಶ್ಚಿತತೆ ಮನೆ ಮಾಡಿದ್ದು, ಟೂರ್ನಿಯನ್ನು ಮುಂದಕ್ಕೆ ಹಾಕಲಾಗಿದೆ. ಈಗಿನ ಒಪ್ಪಂದ ಇದೇ ಡಿಸೆಂಬರ್ 8ಕ್ಕೆ ಕೊನೆಗೊಳ್ಳಲಿದೆ. ಟೂರ್ನಿಯ ಮೊದಲ ಹಂತ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಆರಂಭವಾಗಬೇಕಿತ್ತು.

2013ರಲ್ಲಿ ಆರಂಭವಾದ 'ಐಎಸ್‌ಎಲ್' ನಿಂದಾಗಿ ದೇಶದ ಹಲವು ಯುವ ಆಟಗಾರರಿಗೆ ತಮ್ಮ ಪ್ರತಿಭೆ ತೋರಲು ವೇದಿಕೆಯೊಂದು ಲಭಿಸಿತ್ತು. ವಿದೇಶಿ ಆಟಗಾರರೂ ಇದರಲ್ಲಿ ಆಡುತ್ತಿದ್ದಾರೆ. ಸುನಿಲ್ ಚೆಟ್ರಿ, ಸಂದೇಶ್ ಜಿಂಗಾನ್, ರಾಹುಲ್ ಭೆಕೆ, ಗುರುಪ್ರೀತ್ ಸಿಂಗ್ ಸಂಧು ಸೇರಿದಂತೆ ಹಲವು ಖ್ಯಾತನಾಮರು ಈ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಇದರಿಂದಾಗಿ, ಭಾರತದ ಯುವ ಪ್ರತಿಭಾವಂತ ಆಟಗಾರರಿಗೆ ಉತ್ತಮ ಅನುಭವ ಲಭಿಸುತ್ತಿತ್ತು. ಬೆಂಗಳೂರು, ಕೋಲ್ಕತ್ತ, ಕೊಚ್ಚಿ, ಚೆನ್ನೈ, ಗುವಾಹಟಿ, ಮಡಗಾಂವ್ ಸೇರಿದಂತೆ ಪ್ರಮುಖ ನಗರಗಳಲ್ಲಿ ಪಂದ್ಯಗಳು ನಡೆಯುತ್ತಿದ್ದವು. ಈ ಪಂದ್ಯಾವಳಿ ಜನರನ್ನು ಮೈದಾನದತ್ತ ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯುತ್ತಿದೆ. ಮಾಧ್ಯಮಗಳ ಮೂಲಕ ಪ್ರಚಾರವೂ ಲಭಿಸುತ್ತಿದೆ. ಇದೆಲ್ಲದರಿಂದಾಗಿ ಆಟಗಾರರು ಮತ್ತು ಆಡಳಿತಗಳಿಗೆ ಹಣ ಹರಿದುಬರುತ್ತಿದೆ.

ದೇಶದ ಎಲ್ಲ ರಾಜ್ಯಗಳಿಗೂ ಸ್ಪರ್ಧಿಸುವ ವೇದಿಕೆಯಾಗಿದ್ದ 'ಸಂತೋಷ್ ಟ್ರೋಫಿ' ಟೂರ್ನಿ ಇತ್ತೀಚಿನ ವರ್ಷಗಳಲ್ಲಿ ಮಂಕಾಗಿದೆ ಎಂಬುದನ್ನು ಫೆಡರೇಷನ್‌ನಲ್ಲಿರುವ ಕೆಲವು ಪದಾಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ 'ಐಎಸ್‌ಎಲ್' ಕೂಡ ನಿಂತು ಹೋದರೆ ದೇಶದ ಫುಟ್‌ಬಾಲ್ ಕ್ರೀಡೆಯು ಮತ್ತಷ್ಟು ಕುಸಿಯುವುದರಲ್ಲಿ ಸಂಶಯವೇ ಇಲ್ಲ. ಇವತ್ತಿನ ಕಾಲಘಟ್ಟದಲ್ಲಿ ಫ್ರಾಂಚೈಸಿ ಲೀಗ್‌ಗಳು ಯಾವುದೇ ಕ್ರೀಡೆಯ ಬೆಳವಣಿಗೆಗೆ ನೀಡುತ್ತಿರುವ ಕೊಡುಗೆಯನ್ನು ನಿರ್ಲಕ್ಷಿಸುವಂತೆಯೇ ಇಲ್ಲ.

ಗೊಂದಲದ ವಾತಾವರಣದಲ್ಲಿಯೂ ಮಹಿಳಾ ತಂಡವು ಮಹತ್ವದ ಸಾಧನೆ ಮಾಡಿರುವುದರ ಹಿಂದೆ 'ಇಂಡಿಯನ್ ವಿಮೆನ್ಸ್ ಲೀಗ್' (ಐಡಬ್ಲ್ಯುಎಲ್) ಎಂಬ ಫ್ರಾಂಚೈಸಿ ಲೀಗ್ ಕೂಡ ಇದೆ. ಕಳೆದ ಎಂಟು ವರ್ಷಗಳಿಂದ ಈ ಟೂರ್ನಿ ನಡೆಯುತ್ತಿದೆ. ಇದರಲ್ಲಿ ಈಸ್ಟ್ ಬೆಂಗಾಲ್, ಗೋಕುಲಂ ಕೇರಳ, ಹಾಪ್ಸ್, ಕಿಕ್‌ಸ್ಟಾರ್ಟ್, ನೀತಾ, ಒಡಿಶಾ, ಸೇತು ಮತ್ತು ಶ್ರೀಭೂಮಿ ತಂಡಗಳು ಆಡುತ್ತವೆ. ಈ ಕ್ಲಬ್‌ಗಳಲ್ಲಿ ಆಡಿದ ಅನುಭವಿ ಆಟಗಾರ್ತಿಯರೇ ಭಾರತ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಅವರೇ ಇವತ್ತು ತಂಡವನ್ನು ಎಎಫ್‌ಸಿ ಹಂತಕ್ಕೆ ತಲುಪಿಸಿದ್ದಾರೆ.

'ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆಯೇ ಇಲ್ಲ. ಪ್ರತಿ ಹಳ್ಳಿಯಲ್ಲಿಯೂ ಫುಟ್‌ಬಾಲ್ ಆಡುವವರು ಸಿಗುತ್ತಾರೆ. ಅವರ ಆಸಕ್ತಿಗೆ ತಕ್ಕಂತೆ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಆಧುನಿಕ ತಂತ್ರಜ್ಞಾನ ಆಧಾರಿತ ತರಬೇತಿ ಸೌಲಭ್ಯ ಇರಬೇಕು. ಮುಖ್ಯವಾಗಿ ಪರಿಣತ ಕೋಚ್‌ಗಳು ಮತ್ತು ನೆರವು ಸಿಬ್ಬಂದಿಯನ್ನು ಸಿದ್ಧಗೊಳಿಸುವುದು ಮುಖ್ಯ. ಕೋಚ್‌ಗಳ ತರಬೇತಿಗಾಗಿಯೇ ವಿಶೇಷ ಕಾರ್ಯಕ್ರಮಗಳು ಬೇಕು. ತಾಂತ್ರಿಕ ಕೌಶಲಗಳನ್ನು ಕಲಿಸುವವರೇ ಇಲ್ಲದಿದ್ದರೆ ಆಟಗಾರರಿಗೆ ತಮ್ಮ ಸಾಮರ್ಥ್ಯವನ್ನು ವಿನಿಯೋಗಿಸುವ ದಾರಿ ತಿಳಿಯುವುದು ಕಷ್ಟ' ಎಂದು ಕ್ರಿಸ್ಪಿನ್ ಚೆಟ್ರಿ ಪ್ರತಿಪಾದಿಸುತ್ತಾರೆ.

ಭಾರತದಲ್ಲಿ ಫುಟ್‌ಬಾಲ್ ಕ್ರೀಡೆಯನ್ನು ಅಪಾರವಾಗಿ ಪ್ರೀತಿಸುವ ಊರುಗಳಲ್ಲಿ ಬೆಂಗಳೂರು ಕೂಡ ಒಂದು. ಅಂತರರಾಷ್ಟ್ರೀಯ ಆಟಗಾರರನ್ನು ಕೊಡುಗೆಯಾಗಿ ನೀಡಿದ ಹೆಗ್ಗಳಿಕೆ ಬೆಂಗಳೂರಿಗಿದೆ. ಸುನಿಲ್ ಚೆಟ್ರಿ ಅವರಂತಹ ತಾರೆಯೂ ಇಲ್ಲಿಯೇ ನೆಲೆಸಿ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವನ್ನು ಮುನ್ನಡೆಸುತ್ತಿದ್ದಾರೆ. ಆದರೆ, ಇವತ್ತಿಗೂ ಇಲ್ಲಿ ಸುಸಜ್ಜಿತ ಫುಟ್‌ಬಾಲ್ ಕ್ರೀಡಾಂಗಣದ ಬೇಡಿಕೆ ಈಡೇರಿಲ್ಲ. 2017–18ರ ಸಂದರ್ಭದಲ್ಲಿ 17 ವರ್ಷದೊಳಗಿನವರ ಫಿಫಾ ಪುರುಷರ ವಿಶ್ವಕಪ್ ಪಂದ್ಯಗಳ ಆಯೋಜನೆಯ ಅವಕಾಶ ಬೆಂಗಳೂರಿಗೆ ಸಿಕ್ಕಿತ್ತು. ಕ್ರೀಡಾಂಗಣ ಸಜ್ಜಾಗಿರದ ಕಾರಣಕ್ಕೆ ಪಂದ್ಯಗಳನ್ನು ಸ್ಥಳಾಂತರಿಸಲಾಗಿತ್ತು. ಆ ಟೂರ್ನಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಬೆಂಗಳೂರಿನ ಸಂಜೀವ್ ಸ್ಟಾಲಿನ್ ಮತ್ತು ಹೆನ್ರಿ ಅಂಥೋನಿ ಅವರ ಆಟವನ್ನು ಕಣ್ತುಂಬಿಕೊಳ್ಳುವ ಅವಕಾಶವೂ ಸ್ಥಳೀಯ ಅಭಿಮಾನಿಗಳಿಗೆ ಇಲ್ಲವಾಗಿತ್ತು. ಈಗಲೂ 'ಐಎಸ್‌ಎಲ್' ಪಂದ್ಯಗಳನ್ನು ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಲಾಗುತ್ತಿದೆ. ಮೂಲಸೌಲಭ್ಯ, ಪ್ರತಿಭಾ ಶೋಧ ಮತ್ತು ಸ್ಥಳೀಯ ಆಟಗಾರರನ್ನು ಪ್ರೋತ್ಸಾಹಿಸುವ ಕಾರ್ಯದಲ್ಲಿ ಮೇಲುಗೈ ಸಾಧಿಸದಿದ್ದರೆ ಆಟ ಬೆಳೆಯುವುದು ಹೇಗೆ?

ಅಂದಹಾಗೆ, ಬೆಂಗಳೂರಿನ ಪ್ರಕಾಶ್ ಪಡುಕೋಣೆ– ರಾಹುಲ್ ದ್ರಾವಿಡ್ ಅಕಾಡೆಮಿಯಲ್ಲಿ ನಡೆದಿದ್ದ ಶಿಬಿರದಲ್ಲಿ ತರಬೇತಿ ಪಡೆದ ಮಹಿಳೆಯರು ಚಾರಿತ್ರಿಕ ಸಾಧನೆ ಮಾಡಿದ್ದಾರೆ. ಅವರು ಮೂಡಿಸಿರುವ ಆಶಾಕಿರಣವು ಭಾರತದ ಫುಟ್‌ಬಾಲ್ ಕ್ಷೇತ್ರವನ್ನು ಬೆಳಗುವುದೇ?

ವಾಚಕರ ವಾಣಿ

ಸರೋಜಾದೇವಿ ಹೆಸರಿನಲ್ಲಿ ಶಾಲೆ ಆಗಲಿ

ಕನ್ನಡ ಮಾತ್ರವಲ್ಲದೆ, ಇಡೀ ದಕ್ಷಿಣ ಭಾರತೀಯ ಚಲನಚಿತ್ರ ಕ್ಷೇತ್ರದ ಬೆಳವಣಿಗೆಗೆ ಬಿ. ಸರೋಜಾದೇವಿ ಅವರು ನೀಡಿರುವ ಕೊಡುಗೆ ಅಪಾರ. ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಚಿಂತನೆ ಮಾಡಬೇಕಿದೆ.

ಸರ್ಕಾರ ಪ್ರತಿ ವರ್ಷ ಕೊಡಮಾಡುವ ರಾಜ್ಯ ಚಲನಚಿತ್ರ ಪುರಸ್ಕಾರಗಳಲ್ಲಿನ 'ಅತ್ಯುತ್ತಮ ಶ್ರೇಷ್ಠ ನಟಿ' ವಾರ್ಷಿಕ ಪ್ರಶಸ್ತಿಯನ್ನು ಸರೋಜಾದೇವಿ ಅವರ ಹೆಸರಿನಿಂದ ಹೆಸರಿಸಬಹುದು. 'ಬಿ. ಸರೋಜಾದೇವಿ ಅಭಿನಯ ತರಬೇತಿ ಕೇಂದ್ರ' ಸ್ಥಾಪಿಸುವ ಬಗ್ಗೆಯೂ ಯೋಚಿಸಬಹುದು.

ಟಿ. ಸತೀಶ್ ಜವರೇಗೌಡ, ಮಂಡ್ಯ

ವ್ಯಾಕರಣದ ಸಾಂದರ್ಭಿಕ ಕಲಿಕೆ ಸೂಕ್ತ

'ವ್ಯಾಕರಣ ನಿರ್ಲಕ್ಷಿಸಿದರೆ ಭಾಷೆಗೆ ಹಿನ್ನಡೆ' ಲೇಖನದ ಕಳಕಳಿ, (ಪ್ರ.ವಾ., ಜುಲೈ 17) ಭಾಷೆಯಿಂದಲೇ ಬಾಳು ಕಂಡಿದ್ದ ನನ್ನನ್ನು ಚಿಂತನೆಗೆ ಹಚ್ಚಿತು. ಇಂತಹ ಭಾಷಾ ಗೊಂದಲ– ಆತಂಕ, ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಹಿರಿಯ ಕುತೂಹಲಿಗರನ್ನೂ ಕಾಡಿರುವುದುಂಟು.

ಮಿತ್ರರೊಬ್ಬರು, 'ವಣಿಗರಹಳ್ಳಿ' ಎಂಬ ಊರನ್ನು ಉಲ್ಲೇಖಿಸಿ, 'ವಣಿಗರು ಯಾರು?' ಎಂದು ಕೇಳಿದ್ದರು. 'ವಾಜರಹಳ್ಳಿ' ಎಂಬಲ್ಲಿ 'ವಾಜರು' ಯಾರು ಎಂದೂ ಕೇಳಿದ್ದರು. ಮೂರನೇ ಕ್ಲಾಸಿನ ನನ್ನ ಮೊಮ್ಮಗನ ಅನುಮಾನ ಇನ್ನೂ ವಿಚಿತ್ರ. 'ಹಸು ಉಚ್ಚೆ ಹತ್ರ ಪ್ರೋಟೀನ್ ಇರುತ್ತಾ? ಟೀಚರ್ ಹೇಳಿದರು!' ಇವೆಲ್ಲಾ ಭಾಷೆಗೆ ಸಂಬಂಧಿಸಿದ 'ಮಾತು'ಗಳು. ಇದಕ್ಕೆಲ್ಲಾ ನಾವು ವಿಧ್ಯುಕ್ತ ವ್ಯಾಕರಣ ಮತ್ತು ಸೂತ್ರಗಳನ್ನು ಅಳವಡಿಸಿ ತಿಳಿವಳಿಕೆ ನೀಡಲು ಸಾಧ್ಯವಿಲ್ಲ.

ಹಸು ಉಚ್ಚೆ ಎನ್ನುವುದಕ್ಕೆ 'ಗಂಜಲ' ಎಂಬೊಂದು ಶಿಷ್ಟ ಪದವಿದೆ ಎಂಬುದೇ ನಮ್ಮ ಪೋರನಿಗೆ ಗೊತ್ತಿಲ್ಲ. ಆದರೆ, 'ಗಂಜಲ' ಎನ್ನುವುದಾದರೂ ಒಂದು ಸ್ವತಂತ್ರ ಶಬ್ದವೇ? ಅದು 'ಗೋವಿನ ಜಲ'. 'ಗೊ' ಸಂಸ್ಕೃತ; 'ಜಲ' ಸಂಸ್ಕೃತ, 'ನ' ಎಂಬುದನ್ನು ಅನುಸ್ವಾರ ಮಾಡಿದಾಗ, 'ಗಂಜಲ' ಎನ್ನುವುದು ಕನ್ನಡ ಪದ ಆಗುತ್ತದೆ. ಹೀಗೆಯೇ, 'ವಣಿಜ' ವಣಿಕನಾಗಿ, ವಣಿಗನಾಗುತ್ತಾನೆ; 'ವಾಜ', ಓಜ > ಓವಜ > ಓದಿಸುವ ಅಜ್ಜ (ತಿಳಿವಳಿಕಸ್ಥ) ಆಗುತ್ತಾನೆ. ನಿಜಕ್ಕೆ ಅವನು ಪಾಠ ಓದಿಸುವವನಲ್ಲ; ಬಡಿಗೆ, ಕಮ್ಮಾರಿಕೆ, ಕುಂಬಾರಿಕೆ, ಚಿನಿವಾರಿಕೆ ಮೊದಲಾದ ಕುಶಲಕರ್ಮವನ್ನು, ಪ್ರಾತ್ಯಕ್ಷಿಕೆಯಿಂದ ಮಾಡಿ ತೋರಿಸುವ ಗುರು, ಆಚಾರ್ಯ. ಭಾಷೆ ಉಳಿಯಬೇಕಾದರೆ ವ್ಯಾಕರಣವನ್ನು ಶಾಸ್ತ್ರವಾಗಿ ಅಲ್ಲ, ಸಾಂದರ್ಭಿಕವಾಗಿ, ಸಮಂಜಸವಾಗಿ ಕಲಿಸುವುದು ಅಗತ್ಯ.

ಆರ್.ಕೆ. ದಿವಾಕರ, ಬೆಂಗಳೂರು

ಕನ್ನಡಿಗರು ಬ್ಯಾಂಕಿಂಗ್ ಕ್ಷೇತ್ರಕ್ಕೆ ಬರಲಿ

ಕಳೆದ ಎರಡು ದಶಕದಿಂದ ಕನ್ನಡದವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವ ಪ್ರಮಾಣ ಕಡಿಮೆಯಾಗಿದೆ. ಕನ್ನಡದ ನೆಲದಲ್ಲಿ ಉದಯವಾದ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್‌ಗೆ ಶ್ರೇಯಸ್ಸು ತಂದುಕೊಟ್ಟವರು ಕನ್ನಡಿಗರೇ. ಈ ಬ್ಯಾಂಕ್‌ಗಳಲ್ಲಿ ಹಿಂದೆ ಸಾವಿರಾರು ಕನ್ನಡಿಗರು ಕೆಲಸ ಮಾಡುತ್ತಿದ್ದರು. ಗ್ರಾಹಕ ಸೇವೆಯು ಕನ್ನಡದಲ್ಲೇ ನಡೆಯುತ್ತಿತ್ತು.

ಹಿಂದಿ, ತೆಲುಗು ಹಾಗೂ ಇತರ ಭಾಷೆಯ ಅಭ್ಯರ್ಥಿಗಳು ಬ್ಯಾಂಕಿಂಗ್ ವಲಯದಲ್ಲಿ ಹೆಚ್ಚಾಗಿ ಪ್ರವೇಶಿಸುತ್ತಿರುವುದರಿಂದ, ಕನ್ನಡಿಗ ಗ್ರಾಹಕರಿಗೆ ಭಾಷಾ ಅಡೆತಡೆಗಳು ಉಂಟಾಗುತ್ತಿವೆ. ನಮ್ಮ ಸ್ವಾಭಿಮಾನಕ್ಕೂ ಧಕ್ಕೆಯಾಗುತ್ತಿದೆ.

ಎಸ್.ಟಿ. ರಾಮಚಂದ್ರ, ಬೆಂಗಳೂರು

ನಾಯಿಗಳ ಫಾರ್ಮ್ ಸ್ಥಾಪಿಸಲಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೀದಿ ನಾಯಿಗಳಿಗೆ ಮಾಂಸಾಹಾರ ನೀಡಲು ಮುಂದಾಗಿರುವುದು ಸರಿಯಲ್ಲ. ವಿದೇಶಗಳಲ್ಲಿ ನಾನು ನೋಡಿರುವಂತೆ, ನಾಗರಿಕರ ಹಿತದೃಷ್ಟಿಯಿಂದ ಬೀದಿ ನಾಯಿಗಳು ಅಲ್ಲಿಲ್ಲ. ಆಸಕ್ತಿ ಇರುವವರು ತಮ್ಮ ಮನೆಯಲ್ಲಿ ನಾಯಿ ಸಾಕಿಕೊಳ್ಳುತ್ತಾರೆ. ಅವರು ವಾಯುವಿಹಾರಕ್ಕೆ ನಾಯಿಗಳನ್ನು ಜೊತೆಯಲ್ಲಿ ಕರೆತರುತ್ತಾರೆ. ಜೊತೆಗೆ, ಕೈಯಲ್ಲಿ ಕವರ್ ತರುತ್ತಾರೆ. ರಸ್ತೆಯಲ್ಲಿ ನಾಯಿಗಳು ಮಲ ವಿಸರ್ಜನೆ ಮಾಡಿದರೆ ಅದನ್ನು ಕವರ್‌ನಲ್ಲಿ ಸಂಗ್ರಹಿಸಿ ರಸ್ತೆಯ ಪಕ್ಕದಲ್ಲಿರುವ ಕಸದ ಡಬ್ಬಿಗೆ ಹಾಕಿ ಸ್ವಚ್ಛತೆ ಕಾಪಾಡುತ್ತಾರೆ. ಸರ್ಕಾರಕ್ಕೆ ಬೀದಿ ನಾಯಿಗಳ ಮೇಲೆ ಪ್ರೀತಿ ಇದ್ದರೆ 'ನಾಯಿಗಳ ಫಾರ್ಮ್' ಸ್ಥಾಪಿಸಿ ಅವುಗಳಿಗೆ ಮಾಂಸಾಹಾರ ಪೂರೈಸಲಿ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

'ಶಕ್ತಿ' ಯೋಜನೆ ಪರಾಮರ್ಶೆ ಅಗತ್ಯ

ಶಕ್ತಿ ಯೋಜನೆಯಡಿ ಪ್ರಯಾಣಿಸಿದವರು 500 ಕೋಟಿಗೆ ತಲುಪಿರುವುದಕ್ಕೆ ಸರ್ಕಾರ ಸಂತಸದಲ್ಲಿ ಬೀಗುತ್ತಿದೆ. ಆದರೆ, ಇದು ಜಾರಿಗೆ ಬಂದಾಗಿನಿಂದ ಜನಸಾಮಾನ್ಯರು, ವಿದ್ಯಾರ್ಥಿಗಳು, ಉದ್ಯೋಗಿಗಳು, ವಯೋವೃದ್ಧರು ಬಸ್‌ಗಳಲ್ಲಿ ಸಂಚಾರ ಮಾಡುವುದೇ ಕಷ್ಟಕರವಾಗಿದೆ. ಬಸ್‌ಗಳಲ್ಲಿ ಜಗಳ ಸಾಮಾನ್ಯವಾಗಿಬಿಟ್ಟಿದೆ. ಈ ಯೋಜನೆಗೂ ಕೆಲವೊಂದು ಷರತ್ತು ವಿಧಿಸಬೇಕು. ಇದರಿಂದ ಉಳಿದ ಪ್ರಯಾಣಿಕರಿಗೆ ಬಸ್‌ಗಳಲ್ಲಿ ಸಂಚರಿಸಲು ಅನುಕೂಲವಾಗಲಿದೆ.

ಗೋಪಿ ಕೃಷ್ಣ, ಬೆಂಗಳೂರು

ಲಂಚಾವತಾರಕ್ಕೆ ಕಡಿವಾಣ ಬೀಳಲಿ

ಕಂದಾಯ ಇಲಾಖೆಯಲ್ಲಿ ಲಂಚವಿಲ್ಲದೆ ಯಾವುದೇ ಕಡತಗಳು ಮುಂದಿನ ಹಂತಕ್ಕೆ ತಲುಪುವುದಿಲ್ಲ. ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪೌತಿ ಖಾತೆ, ಖಾತೆ ಬದಲಾವಣೆ ಸೇರಿ ಯಾವುದೇ ಸೇವೆಯನ್ನು ಸಕಾಲದಲ್ಲಿ ಪಡೆಯಬೇಕಾದರೂ ಲಂಚ ಕೊಡಲೇಬೇಕಾದ ಸ್ಥಿತಿಯಿದೆ. ಇದು ನಮ್ಮ ದೌರ್ಭಾಗ್ಯವೇ ಸರಿ. ಸರ್ಕಾರವು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಿದೆ.

ದರ್ಶನ್ ಚಂದ್ರ ಎಂ.ಪಿ., ಚಾಮರಾಜನಗರ

ಚುರುಮುರಿ



ಬಾಹ್ಯಾಕಾಶ ಪುರಾಣ!

• ಬಿ.ಎನ್. ಮಲ್ಲೇಶ್

'ಗುಡ್ಡೆ, ಈ ಬಾಹ್ಯಾಕಾಶ ನಿಲ್ದಾಣ ಅಂದ್ರೆ ಏನದು? ಹೆಂಗಿರ್ತತಿ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಏನೋಪ್ಪ, ನಂಗೂ ಸರಿಯಾಗಿ ಗೊತ್ತಿಲ್ಲ. ಅಲ್ಲಿ ದಿನಕ್ಕೆ 16 ಹಗಲು, 16 ರಾತ್ರಿಯಂತೆ. ಅಲ್ಲಿಂದ ಕೆಳಕ್ಕೆ ನೋಡಿದ್ರೆ ಭೂಮಿ ಕಾಣ್ಸುತ್ತಂತೆ...' ಗುಡ್ಡೆ ಹೇಳಿದ.

'ಹೌದಾ? ಹಂಗಾರೆ ಭೂಮಿ ಮೇಲೆ ನಡೆಯೋದೆಲ್ಲ ಕಾಣ್ಸುತ್ತೆ ಅನ್ನು. ಟ್ರಂಪ್ ಏನ್ಮಾಡ್ತದಾನೆ, ನಮ್ ನಮೋ ಸಾಹೇಬ್ರು ಎಲ್ಲಿ ಭಾಷಣ ಮಾಡ್ತದಾರೆ, ಬಂಡೆ ಸಾಹೇಬ್ರು ಯಾವ ಗುಡೀಲಿ ಗಂಟೆ ಹೊಡೀತಿದಾರೆ, ಎಲ್ಲ ಅಲ್ಲಿಂದ್ಲೇ ನೋಡಬೋದು ಅಲ್ವಾ?' ಕೊಟ್ರೇಶಿ ಕೇಳಿದ.

'ಅಲ್ಲಿ ನನ್ ಚಾದಂಗಡಿ ತರ ಹೋಟ್ಲೂ ಅದಾವ?' ಮಂಜಮ್ಮಗೂ ಕುತೂಹಲ.

'ಲೇಯ್, ಏನ್ ಮಬ್ಬದೀರಲೆ... ಅದೇನು ಸಿಟಿ ಬಸ್ ಸ್ಟ್ಯಾಂಡಾ? ಅಲ್ಲಿ ಶೇಂಗಾ, ಸೌತೀಕಾಯಿ ಮಾರ್ತಾರೆ ಅನ್ಕಂಡ್ರಾ? ಅದು ಆಕಾಶದಾಗೆ ತೇಲೋ ನೌಕೆ. ನಿಮಿಷಕ್ಕೆ 480 ಕಿ.ಮೀ. ಸ್ಪೀಡಲ್ಲಿ ಭೂಮಿನ ಸುತ್ತುತ್ತಂತೆ...' ತೆಪರೇಸಿ ಬಿಡಿಸಿ ಹೇಳಿದ.

'ಯಪ್ಪಾ... ಅಷ್ಟು ಸ್ಪೀಡಾ?' ಗುಡ್ಡೆಗೆ ಆಶ್ಚರ್ಯ.

'ಅಲ್ಲಿ ಗ್ರಾವಿಟೇಶನ್ ಇರಲ್ಲ, ಎಲ್ರೂ ತೇಲ್ತಾ ಇರ್ತಾರೆ. ಏನಾದ್ರು, ಯಾರನ್ನಾದ್ರು ಹಿಡ್ಕಂಡೇ ಇರ್ಬೇಕು...'

'ಕರೆಕ್ಟ್, ಈ ಎಂಎಲ್ಸಿ, ನಿಗಮ, ಮಂಡಳಿ, ಅಕಾಡೆಮಿ ಬೇಕಂದ್ರೆ ನಾವೂ ಯಾರನ್ನಾದ್ರು ಹಿಡ್ಕಳ್ತೀವಲ್ಲ, ಆ ತರ...' ದುಬ್ಬೀರ ನಕ್ಕ.

'ಥೋ... ಇವ್ನು ಎಲ್ಲಿಂದೆಲ್ಲಿಗೋ ಹೋದ' ಎಂದ ಮಂಜಮ್ಮ, 'ಅಲ್ಲ, ನಾವು ನಿಂತಿರೋ ಬಸ್ಸು, ರೈಲು ಹತ್ತೋದೇ ಕಷ್ಟ. ಅಂಥದ್ರಲ್ಲಿ 480 ಕಿ.ಮೀ. ಸ್ಪೀಡಲ್ಲಿ ಸುತ್ತೋ ಆ ನೌಕೇನ ಆಕಾಶದಲ್ಲಿ ಹೆಂಗೆ ಹಿಡೀತಾರೆ? ಒಳಕ್ಕೆ ಹೆಂಗೆ ಹತ್ಕಂತಾರೆ?' ಮಂಜಮ್ಮ ಕೇಳಿದಳು.

'ಅದೇ ಮಂಜಮ್ಮ, ನೌಕೆ ಆಗ್ಲೀ, ಮುಖ್ಯಮಂತ್ರಿ ಕುರ್ಚಿ ಆಗ್ಲೀ ಹಿಡಿಯೋದು, ಹತ್ತೋದು ಬಾಳ ಕಷ್ಟ. ಬೇಕಾದ್ರೆ ಪಟ್ ಅಂತ ಇಳಿದುಬಿಡಬಹುದು' ಎಂದ ದುಬ್ಬೀರ ನಗುತ್ತಾ. ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ವೈದ್ಯಕೀಯ ಪರೀಕ್ಷೆ: ನಿಖರತೆಯ ಸವಾಲು

ಪ್ರಯೋಗಾಲಯದ ವೈದ್ಯಕೀಯ ಪರೀಕ್ಷೆಯ ಫಲಿತಾಂಶ ನಿಖರವಾಗಿಲ್ಲದೆ ಹೋದರೆ, ರೋಗ ಪತ್ತೆ – ಚಿಕಿತ್ಸೆ ಮೇಲೆ ಗಂಭೀರ ಪರಿಣಾಮ ಬೀರಬಹುದು.


• ಸದಾಶಿವ ಸೊರಟೂರು

ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಾಗಿದ್ದ ಬಿಳಿ ರಕ್ತಕಣಗಳ ಕಾರಣದಿಂದಾಗಿ, ಒಂದೂವರೆ ವರ್ಷದ ಹಿಂದೆ ಒಂದು ವರ್ಷದ ನನ್ನ ಮಗಳಿಗೆ ಪ್ರತಿಷ್ಠಿತ ಮಕ್ಕಳ ಆಸ್ಪತ್ರೆಯಲ್ಲಿ ಅಸ್ಥಿಮಜ್ಜೆಯ ಬಯಾಪ್ಸಿ ಮಾಡಲಾಯಿತು. ಪ್ರಾಥಮಿಕ ವರದಿ ಮತ್ತು ಅಂತಿಮ ವರದಿ ಎರಡರಲ್ಲೂ ಮಗುವಿಗೆ ಲ್ಯುಕೇಮಿಯಾ (ರಕ್ತದ ಕ್ಯಾನ್ಸರ್) ಇರುವುದಾಗಿ ಹೇಳಲಾಗಿತ್ತು. ಆ ಪ್ರಯೋಗಾಲಯದ ವರದಿ ಇಂದಿಗೂ ನನ್ನ ಬಳಿ ಇದೆ.

ಬೇರೆ ಆಸ್ಪತ್ರೆಯಲ್ಲಿ ಮಗುವನ್ನು ಮತ್ತೊಮ್ಮೆ ಪರೀಕ್ಷೆಗೆ ಒಳಪಡಿಸಿದೆ. ಲ್ಯುಕೇಮಿಯಾ ಇಲ್ಲವೆಂದರು. ಮೂರನೇ ಅಭಿಪ್ರಾಯಕ್ಕೆಂದು ಕಿದ್ವಾಯಿ ಆಸ್ಪತ್ರೆಗೆ ಹೋಗಿ ಬಂದೆ. ಅಲ್ಲೂ ಮಗುವಿಗೆ ಆ ಕಾಯಿಲೆ ಇಲ್ಲವೆಂದರು. ಸಂಗ್ರಹಿಸಲಾದ ಯಾವ ಮಾದರಿಯಿಂದ ಲ್ಯುಕೇಮಿಯಾ ಎಂಬ ವರದಿ ಬಂದಿತ್ತೋ ಅದನ್ನು ಮತ್ತೊಂದು ಆಸ್ಪತ್ರೆಯಲ್ಲಿ ಪರೀಕ್ಷಿಸಲಾಯಿತು. ಅಲ್ಲೂ ಇಲ್ಲವೆಂದು ದೃಢವಾಯಿತು.

ಹಳೆಯ ಆಸ್ಪತ್ರೆಯವರು ತಮ್ಮ ವರದಿಯನ್ನು ಸಮರ್ಥಿಸಿಕೊಂಡರು. ದೊಡ್ಡ ದೊಡ್ಡ ಆಸ್ಪತ್ರೆಯ ಎದುರು ನಿಂತು ಸಾಮಾನ್ಯರು ಬಡಿದಾಡಲು ಸಾಧ್ಯವೇ? ಕೋರ್ಟ್, ಕಚೇರಿ ಅಂತ ಮತ್ತಷ್ಟು ಹಣ ಸುರಿಯಲು ಸಾಧ್ಯವೇ?

ನನ್ನ ಗೆಳೆಯರೊಬ್ಬರಿಗೆ ಹತ್ತು ವರ್ಷಗಳಿಂದ ಸಕ್ಕರೆ ಕಾಯಿಲೆ. ಯಾವಾಗಲೂ ತೋರಿಸಿಕೊಳ್ಳುತ್ತಿದ್ದ ಆಸ್ಪತ್ರೆಯ ಪ್ರಯೋಗಾಲಯದ ಬಗ್ಗೆ ಅನುಮಾನ ಮೂಡಿ, ಒಂದೇ ದಿನ ಎರಡು ಕಡೆ ರಕ್ತ ಪರೀಕ್ಷೆ ಮಾಡಿಸಿಕೊಂಡರು. ಫಲಿತಾಂಶದಲ್ಲಿ ಬಹಳ ವ್ಯತ್ಯಾಸ ಇತ್ತು. ಎಂದಿನ ಪ್ರಯೋಗಾಲಯದ ವರದಿಯಲ್ಲಿ ಸಕ್ಕರೆಯ ಪ್ರಮಾಣ ಹೆಚ್ಚಾಗಿತ್ತು. ಹದಿನೈದು ದಿನ ಬಿಟ್ಟು ಮತ್ತೆ ಎರಡೂ ಕಡೆ ಪರೀಕ್ಷೆ ಮಾಡಿಸಿಕೊಂಡರು. ಫಲಿತಾಂಶದಲ್ಲಿ ವ್ಯತ್ಯಾಸ ಮುಂದುವರಿದಿತ್ತು.



ತಾಲ್ಲೂಕು ಕೇಂದ್ರವೊಂದರ ಖಾಸಗಿ ಆಸ್ಪತ್ರೆಯ ಲ್ಯಾಬ್‌ಗೆ ಸಹೋದರನನ್ನು ರಕ್ತ ಪರೀಕ್ಷೆಗಾಗಿ ಕರೆದುಕೊಂಡು ಹೋಗಿದ್ದೆ. ಅಲ್ಲಿನ ಸಿಬ್ಬಂದಿ ನನಗೆ ಪರಿಚಯದವರು. 'ಸರ್, ಇಲ್ಲಿ ಯಂತ್ರಗಳು ತುಂಬಾ ಹಳೆಯವು. ಸರಿಯಾದ ರಿಪೋರ್ಟ್ ಬರಲ್ಲ. ಒಳ್ಳೆಯ ಕಡೆ ಹೋಗಿ' ಎಂದು ಸೂಚಿಸಿದರು. ಅದೇ ಪ್ರಯೋಗಾಲಯದಲ್ಲಿ ವರದಿ ಪಡೆದವರ ಗತಿಯೇನು ಎಂದು ಸಂಕಟವಾಯಿತು.

ಭಾರತದಲ್ಲಿ ವೈದ್ಯಕೀಯ ಪ್ರಯೋಗಾಲಯಗಳ ಸಂಖ್ಯೆ ಸುಮಾರು 1.1 ಲಕ್ಷ (2023ರ ಮಾಹಿತಿ). ಅವುಗಳಲ್ಲಿ 8,561 ಪ್ರಯೋಗಾಲಯಗಳು ಗುಣಮಟ್ಟ, ವಿಶ್ವಾಸಾರ್ಹತೆ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಖಚಿತಪಡಿಸುವ 'ಎನ್‌ಎಬಿಎಲ್' ಮಾನ್ಯತೆಯನ್ನು ಹೊಂದಿವೆ. ಹಾಗಾದರೆ, ಮಾನ್ಯತೆ ಪಡೆಯದ ಪ್ರಯೋಗಾಲಯಗಳಿಂದ ಬರುವ ವರದಿಗಳ ಗತಿಯೇನು?

ವಿಪರ್ಯಾಸವೆಂದರೆ, 'ಎನ್‌ಎಬಿಎಲ್' ಮಾನ್ಯತೆ ಪಡೆಯುವುದು ಪ್ರಯೋಗಾಲಯಗಳಿಗೆ ಕಡ್ಡಾಯವಾಗಿಲ್ಲ. ಗುಣಮಟ್ಟವುಳ್ಳ ಪ್ರಯೋಗಾಲಯಗಳ ಕೊರತೆಯು ವೈದ್ಯಕೀಯ ಕ್ಷೇತ್ರದ ಒಂದು ಪ್ರಮುಖ ಸಮಸ್ಯೆಯೆಂದು ಅಧ್ಯಯನಗಳು ಗುರುತಿಸಿವೆ.

'ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್– 2010', ಪ್ರಯೋಗಾಲಯಗಳ ಗುಣಮಟ್ಟ, ಅಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಯ ಅರ್ಹತೆ ಮತ್ತು ಶುಲ್ಕದ ಪಾರದರ್ಶಕತೆ ಖಾತರಿಪಡಿಸುವ ಗುರಿಯನ್ನು ಹೊಂದಿದೆ. ಆದರೆ, ಈ ಕಾಯ್ದೆಯನ್ನು ಕೆಲವು ರಾಜ್ಯಗಳಲ್ಲಿ ಮಾತ್ರ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. 'ಇಂಡಿಯನ್ ಮೆಡಿಕಲ್ ಕೌನ್ಸಿಲ್'ನ 2002ರ ನಿಯಮಗಳು ವೈದ್ಯರು ಕಮಿಷನ್ ಆಸೆಯಿಂದ ರೋಗಿಗಳನ್ನು ಅನಗತ್ಯ ಪರೀಕ್ಷೆಗಳಿಗೆ ಒಳಪಡಿಸುವುದನ್ನು ನಿಷೇಧಿಸುತ್ತವೆ. ಆದರೆ, ಈ ನಿಷೇಧ ಹಾಳೆಯಲ್ಲಿ ಮಾತ್ರ ಉಳಿದಿದೆ.


ಮಾದರಿಗಳನ್ನು ಸರಿಯಾಗಿ ಸಂಗ್ರಹಿಸದಿರುವುದು, ಲೇಬಲ್ ಮಾಡದಿರುವುದು ಹಾಗೂ ಸಂರಕ್ಷಿಸದಿರುವುದು ಪರೀಕ್ಷಾ ಫಲಿತಾಂಶಗಳ ನಿಖರತೆ ಮೇಲೆ ಪರಿಣಾಮ ಬೀರಬಹುದು. ಸಂಗ್ರಹಿಸಿದ ಮಾದರಿಯನ್ನು ಪರೀಕ್ಷೆಗೆ ಬೇರೆಡೆಗೆ ಕಳುಹಿಸುವ ಪ್ರಯೋಗಾಲಯಗಳೂ ಇವೆ. ಇಂಥ ಸಂದರ್ಭದಲ್ಲಿ, ವಿಳಂಬ ಮತ್ತು ಮಾದರಿ ಹಾನಿಯ ಸಾಧ್ಯತೆ ಹೆಚ್ಚಿದೆ. ಮಾದರಿಗಳ ಮಿಶ್ರಣ, ಅಸಮರ್ಪಕ ಉಪಕರಣಗಳು, ತರಬೇತಿ ಇಲ್ಲದ ಸಿಬ್ಬಂದಿಯಿಂದ ನಿಖರ ಫಲಿತಾಂಶ ಪಡೆಯಲು ಹೇಗೆ ಸಾಧ್ಯ? ಮಾದರಿಗಳನ್ನು ನಿಖರವಾಗಿ ಪರೀಕ್ಷಿಸದೆ, ಪೂರ್ವ ನಿರ್ಧರಿತ ಟೆಂಪ್ಲೇಟ್‌ಗಳಿಂದ ಪ್ರಯೋಗಾಲಯಗಳು ವರದಿಗಳನ್ನು ಸೃಷ್ಟಿಸುವ ದೂರುಗಳೂ ಇವೆ. ಇದು ರೋಗ ನಿರ್ಣಯ ಮತ್ತು ಚಿಕಿತ್ಸೆಯಲ್ಲಿ ಗಂಭೀರ ತಪ್ಪುಗಳಿಗೆ ಕಾರಣವಾಗಬಹುದು.

ಪ್ರಯೋಗಾಲಯಗಳ ಗುಣಮಟ್ಟವನ್ನು ಸುಧಾರಿಸಲು ಮತ್ತು ಅನಗತ್ಯ ಪರೀಕ್ಷೆಗಳನ್ನು ಕಡಿಮೆ ಮಾಡಲು ಸಮಗ್ರ ನಿಯಂತ್ರಣ ವ್ಯವಸ್ಥೆ ಮತ್ತು ಮಾನದಂಡಗಳ ಅಗತ್ಯವಿದೆ. ಪ್ರಯೋಗಾಲಯಗಳು 'ಎನ್‌ಎಬಿಎಲ್' ಮಾನ್ಯತೆ ಪಡೆಯುವುದನ್ನು ಕಡ್ಡಾಯಗೊಳಿಸಬೇಕಿದೆ. ವೈದ್ಯಕೀಯ ಪರೀಕ್ಷೆಗಳ ಅಗತ್ಯ ಮತ್ತು ಅವುಗಳ ಫಲಿತಾಂಶಗಳ ಬಗ್ಗೆ ಜನರಲ್ಲಿ ಅರಿವಿನ ಕೊರತೆ ಇರುವುದರಿಂದ, ವೈದ್ಯರು ನೀಡುವ ಎಲ್ಲಾ ಪರೀಕ್ಷೆಗಳನ್ನು, ಫಲಿತಾಂಶವನ್ನು ಸುಮ್ಮನೆ ಒಪ್ಪಿಕೊಳ್ಳಬೇಕಾಗುತ್ತದೆ. ಜನಸಾಮಾನ್ಯರ ಅಮಾಯಕತೆಯನ್ನು ವೈದ್ಯಕೀಯ ಕ್ಷೇತ್ರ ದುರುಪಯೋಗಪಡಿಸಿಕೊಳ್ಳಬಾರದು.

ನಿಖರವಿಲ್ಲದ ವರದಿಗಳು ಹಾಗೂ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಮಾಡುವ ಪ್ರವೃತ್ತಿ ರೋಗಿಗಳಲ್ಲಿ ವೈದ್ಯಕೀಯ ಕ್ಷೇತ್ರದ ಬಗ್ಗೆ ಅಪನಂಬಿಕೆ ಮೂಡಿಸುತ್ತದೆ. ಜನರ ಭಯವು ಯಾರಿಗೋ ದುಡ್ಡು ಮಾಡುವ ಬಂಡವಾಳ ಆಗಬಾರದು. ಬಿಗಿಯಾದ ಕಾನೂನು, ಸರಿಯಾದ ನಿಯಂತ್ರಣವಿಲ್ಲದೆ ಹೋದರೆ ಮುಂದಿನ ದಿನಗಳಲ್ಲಿ ಚಿಕಿತ್ಸೆಯ ಹೆಸರಿನಲ್ಲಿ ವ್ಯಾಪಾರ ಮಾಡುವವರಿಗೆ 'ಮನುಷ್ಯನ ಪ್ರಾಣ' ಆಟಿಕೆಯಂತಾಗಿ ಬಿಡಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಚ್‌ಐವಿ ಸೋಂಕು: ಸ್ಥೂಲ ನೋಟ



ಜಗತ್ತು	**4.08** ಕೋಟಿ 2024ರಲ್ಲಿ ಜಗತ್ತಿನಲ್ಲಿದ್ದ ಎಚ್‌ಐವಿ ಸೋಂಕಿತರು	**13** ಲಕ್ಷ ಕಳೆದ ವರ್ಷ ಎಚ್‌ಐವಿ ಸೋಂಕಿಗೆ ಒಳಗಾದವರು	**6.30** ಲಕ್ಷ 2024ರಲ್ಲಿ ಎಚ್‌ಐವಿ ಸೋಂಕಿನ ಕಾರಣಕ್ಕೆ ಮೃತಪಟ್ಟವರು	**14** ಲಕ್ಷ ಕಳೆದ ವರ್ಷ ಜಗತ್ತಿನಲ್ಲಿದ್ದ ಎಚ್‌ಐವಿ ಸೋಂಕಿತ ಮಕ್ಕಳು (15 ವರ್ಷಕ್ಕಿಂತ ಕಡಿಮೆ ವಯಸ್ಸಿನವರು)	**1.20** ಲಕ್ಷ ಕಳೆದ ವರ್ಷ ಸೋಂಕಿಗೆ ಒಳಗಾದ ಮಕ್ಕಳು	**70** ಸಾವಿರ ಕಳೆದ ವರ್ಷ ಏಡ್ಸ್‌ನಿಂದಾಗಿ ಮೃತಪಟ್ಟ ಮಕ್ಕಳು
ಭಾರತ	**26** ಲಕ್ಷ ಭಾರತದಲ್ಲಿರುವ ಎಚ್‌ಐವಿ ಸೋಂಕಿತರು (2024ರ ಅಂದಾಜು)	**70,000** 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸೋಂಕಿತರ ಸಂಖ್ಯೆ	**64,000** ವಾರ್ಷಿಕವಾಗಿ ಸೋಂಕಿಗೆ ಒಳಗಾಗುತ್ತಿರುವವರ ಸಂಖ್ಯೆ	**32,000** ಏಡ್ಸ್ ಕಾರಣದಿಂದ ಮೃತಪಟ್ಟವರ ಸಂಖ್ಯೆ (ಮಕ್ಕಳೂ ಸೇರಿ)	**0.2%** ದೇಶದಲ್ಲಿ ಎಚ್‌ಐವಿ ಸೋಂಕಿತರ ಪ್ರಮಾಣ	**44%** 2010ರಿಂದ 2023ರವರೆಗೆ ಎಚ್‌ಐವಿ ಸೋಂಕಿತರ ಪ್ರಮಾಣದಲ್ಲಿ ಆಗಿರುವ ಇಳಿಕೆ

ಏಡ್ಸ್ ನಿಯಂತ್ರಣಕ್ಕಾಗಿ ಭಾರತವೂ ಸೇರಿದಂತೆ 50ಕ್ಕೂ ಹೆಚ್ಚು ಬಡ ಮತ್ತು ಮಧ್ಯಮ ಆದಾಯದ ದೇಶಗಳಿಗೆ ಅಮೆರಿಕವು ನೀಡುತ್ತಿದ್ದ ನೆರವು ಸ್ಥಗಿತಗೊಂಡಿದೆ. ಇದರಿಂದ ಭಾರತದಲ್ಲಿ ಎಚ್‌ಐವಿ ಸೋಂಕು ಹರಡುವುದನ್ನು ತಡೆಯಲು ಮತ್ತು ಏಡ್ಸ್ ಪೀಡಿತರಿಗೆ ಚಿಕಿತ್ಸೆ ಒದಗಿಸಲು ಅಡ್ಡಿ ಉಂಟಾಗಿದೆ. ಅನೇಕ ಚಿಕಿತ್ಸಾ ಕೇಂದ್ರಗಳು ಬಾಗಿಲು ಮುಚ್ಚಿವೆ. ಸೋಂಕಿತರೊಂದಿಗೆ ಮತ್ತು ಸೋಂಕಿನ ಅಪಾಯ ಇರುವ ಜನವರ್ಗಗಳೊಂದಿಗೆ ಕೆಲಸ ಮಾಡುತ್ತಿದ್ದ ಸಿಬ್ಬಂದಿ ಕೆಲಸ ಕಳೆದುಕೊಂಡಿದ್ದಾರೆ. ಕಾಳಜಿ ಕೇಂದ್ರಗಳನ್ನು ಬಂದ್ ಮಾಡಲಾಗಿದೆ. ಇದರಿಂದ ಸೋಂಕಿತರು, ವಿಶೇಷವಾಗಿ ಮಕ್ಕಳು ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಅಮೆರಿಕದ ಕ್ರಮದಿಂದ ದೇಶದಲ್ಲಿ ಏಡ್ಸ್ ನಿಯಂತ್ರಣದ ಮೇಲೆ ಹಲವು ಪರಿಣಾಮಗಳು ಉಂಟಾಗಿವೆ

ಅಮೆರಿಕದ ನೆರವು ಸ್ಥಗಿತ; ಎಚ್‌ಐವಿ ನಿಯಂತ್ರಣಕ್ಕೆ ಹೊಡೆತ



ಆಫ್ರಿಕಾ ರಾಷ್ಟ್ರಗಳ ಮೇಲೆ ಪರಿಣಾಮ

ಪಿಇಪಿಎಫ್‌ಎಆರ್ ನೆರವನ್ನು ದಿಢೀರ್ ಸ್ಥಗಿತಗೊಳಿಸಿರುವುದು ಆಫ್ರಿಕಾ ಖಂಡದ ಹಲವು ರಾಷ್ಟ್ರಗಳಲ್ಲಿ ಎಚ್‌ಐವಿ ಸೋಂಕಿತರ ಚಿಕಿತ್ಸೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ. ಜಗತ್ತಿನಲ್ಲಿರುವ ಒಟ್ಟು ಎಚ್‌ಐವಿ ಸೋಂಕಿತರಲ್ಲಿ ಶೇ 60ರಷ್ಟು ಮಂದಿ ಈ ರಾಷ್ಟ್ರಗಳಲ್ಲಿದ್ದಾರೆ. ಆ್ಯಂಟಿರೆಟ್ರೊವೈರಲ್ (ಎಆರ್‌ವಿ) ಚಿಕಿತ್ಸೆ ಹಾಗೂ ಇನ್ನಿತರ ಔಷಧಗಳ ಕಾರಣದಿಂದ ಈ ರಾಷ್ಟ್ರಗಳಲ್ಲಿ ಎಚ್‌ಐವಿ ಸೋಂಕಿತರ ಜೀವಿತಾವಧಿ 62.3 ವರ್ಷಗಳಿಗೆ ಏರಿದೆ (2010ರಲ್ಲಿ ಇದು 56.5 ವರ್ಷಗಳಷ್ಟಿತ್ತು) ಎಂದು ವರದಿ ಹೇಳಿದೆ. ಆಫ್ರಿಕಾದ ಬಡ ರಾಷ್ಟ್ರಗಳಲ್ಲಿ ಎಚ್‌ಐವಿ ಚಿಕಿತ್ಸೆಗೆ ಪಿಇಪಿಎಫ್‌ಎಆರ್ ಮಹತ್ವದ ಕೊಡುಗೆ ನೀಡುತ್ತಿತ್ತು. ಉದಾಹರಣೆಗೆ, 2022ರಲ್ಲಿ ದಕ್ಷಿಣ ಆಫ್ರಿಕಾವು ಎಚ್‌ಐವಿ ನಿಯಂತ್ರಣಕ್ಕೆ ಮೀಸಲಿರಿಸಿದ್ದ 256 ಕೋಟಿ ಡಾಲರ್ (₹22 ಸಾವಿರ ಕೋಟಿ) ಬಜೆಟ್‌ನಲ್ಲಿ ಪಿಇಪಿಎಫ್‌ಆರ್‌ನ ಕೊಡುಗೆ ಶೇ 18ರಷ್ಟು ಅಂದರೆ, 46 ಕೋಟಿ ಡಾಲರ್‌ನಷ್ಟಿತ್ತು (₹3,957ಕೋಟಿ).

ಪ್ರಜಾವಾಣಿ ವಾರ್ತೆ

ಎಚ್‌ಐವಿ ಚಿಕಿತ್ಸೆಗಾಗಿ ನೀಡಲಾಗುತ್ತಿದ್ದ 'ಅಮೆರಿಕದ ಅಧ್ಯಕ್ಷರ ಏಡ್ಸ್ ತುರ್ತು ನೆರವಿನ ಯೋಜನೆ'ಯ (ಪಿಇಪಿಎಫ್‌ಎಆರ್) ಅನುದಾನವನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದಾಗಿ 2029ರ ವೇಳೆಗೆ ಜಗತ್ತಿನಾದ್ಯಂತ 40 ಲಕ್ಷ ಏಡ್ಸ್ ಸಂಬಂಧಿ ಸಾವುಗಳು ಹೆಚ್ಚುವರಿಯಾಗಿ ಸಂಭವಿಸಲಿದ್ದು, 60 ಲಕ್ಷ ಮಂದಿಗೆ ಎಚ್‌ಐವಿ ಸೋಂಕು ಹೆಚ್ಚುವರಿಯಾಗಿ ಹರಡಲಿದೆ ಎಂದು ವಿಶ್ವಸಂಸ್ಥೆಯ ವರದಿ (ಯುಎನ್‌ಏಡ್ಸ್) ತಿಳಿಸಿದೆ.

ಅಮೆರಿಕವು ಪಿಇಪಿಎಫ್‌ಎಆರ್ ಮೂಲಕ ಜಗತ್ತಿನ ಅನೇಕ ದೇಶಗಳಿಗೆ ಎಚ್‌ಐವಿ ಸೋಂಕು ನಿಯಂತ್ರಣ ಮತ್ತು ಏಡ್ಸ್ ಕಾಯಿಲೆಯ ಚಿಕಿತ್ಸೆಗಾಗಿ ನೆರವು ಒದಗಿಸುತ್ತಿತ್ತು (ಪಿಇಪಿಎಫ್‌ಎಆರ್‌ನ ನೇತೃತ್ವವನ್ನು ಅಮೆರಿಕದ ವಿದೇಶಾಂಗ ಇಲಾಖೆ ವಹಿಸಿಕೊಂಡಿದ್ದರೂ, ಯುಎಸ್‌ಏಡ್, ಆರೋಗ್ಯ ಇಲಾಖೆ ಇದರ ಅನುಷ್ಠಾನ ಜವಾಬ್ದಾರಿ ಹೊಂದಿವೆ). ಜಾಗತಿಕ ಮಟ್ಟದಲ್ಲಿ ಲಕ್ಷಾಂತರ ಮಂದಿಯ ಆರೋಗ್ಯ ಮತ್ತು ಪ್ರಾಣ ರಕ್ಷಣೆಯ ದೃಷ್ಟಿಯಿಂದ ಅಮೆರಿಕದ ನೆರವು ನಿರ್ಣಾಯಕವಾಗಿತ್ತು. 2003ರಲ್ಲಿ ಪಿಇಪಿಎಫ್‌ಎಆರ್ ಅನ್ನು ಅನುಷ್ಠಾನಕ್ಕೆ ತರಲಾಗಿತ್ತು. ಅಂದಿನಿಂದ 2023ರವರೆಗೆ ಈ ಉದ್ದೇಶಕ್ಕೆ ಅಮೆರಿಕ ಸರ್ಕಾರ 10,000 ಕೋಟಿ ಡಾಲರ್ (₹8.60 ಲಕ್ಷ ಕೋಟಿ) ವೆಚ್ಚ ಮಾಡಿದೆ. ಇದರಿಂದಾಗಿ 2.5 ಕೋಟಿ ಜನರ ಪ್ರಾಣ ಉಳಿಸಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ಕಳೆದ ವರ್ಷ ಡೊನಾಲ್ಡ್ ಟ್ರಂಪ್ ಅವರು ಅಧಿಕಾರಕ್ಕೆ ಏರಿದ ನಂತರ, ಪಿಇಪಿಎಫ್‌ಎಆರ್ ಅಡಿಯಲ್ಲಿ ನೀಡುತ್ತಿದ್ದ ನೆರವನ್ನು ದಿಢೀರ್ ಸ್ಥಗಿತಗೊಳಿಸಲಾಗಿದೆ. ಯುಎಸ್ ಏಡ್ ಅನ್ನೂ ಕಡಿತಗೊಳಿಸಲಾಗಿದೆ. ಅದು ಜಾಗತಿಕ ಮಟ್ಟದಲ್ಲಿ ಕಳವಳ ಮೂಡಿಸಿದೆ. ಇದರಿಂದ ಎಚ್‌ಐವಿ ವಿರುದ್ಧದ ಹೋರಾಟಕ್ಕೆ ಹಿನ್ನಡೆ ಉಂಟಾಗುವ ಸಾಧ್ಯತೆ ಇದೆ. ಭಾರತದ ಮೇಲೂ ಇದು ಹಲವು ಪರಿಣಾಮಗಳನ್ನು ಬೀರುತ್ತಿದೆ.

ಭಾರತದಲ್ಲಿ 2000ನೇ ಇಸವಿಯಲ್ಲಿ ಎಚ್‌ಐವಿ ಸೋಂಕು ಗರಿಷ್ಠ ಮಟ್ಟಕ್ಕೆ ಏರಿತ್ತು. ನಂತರ ಸರ್ಕಾರಗಳ ನಿರಂತರ ಪ್ರಯತ್ನದಿಂದ ಅದರ ಪ್ರಮಾಣ ಕಡಿಮೆಯಾಗಿತ್ತು. ಕಳೆದ ಎರಡು ದಶಕಗಳಿಂದಲೂ ಎಚ್‌ಐವಿ ಸೋಂಕಿತರ ಸಂಖ್ಯೆ ಕಡಿಮೆಯೇ ಇದೆ. 2000ದಲ್ಲಿ ಶೇ 0.55 ಇದ್ದ ಸೋಂಕಿತರ ಪ್ರಮಾಣವು, 2010ರ ವೇಳೆಗೆ ಶೇ 0.32ಗೆ ಇಳಿದಿತ್ತು. 2021ರಲ್ಲಿ ಈ ಪ್ರಮಾಣವು ಶೇ 0.21 ಇದ್ದರೆ, 2023ರಲ್ಲಿ ಶೇ 0.2ಕ್ಕೆ ಇಳಿದಿದೆ.

ಈಡೇರುವುದೇ ಭಾರತದ ಗುರಿ?: ಆಫ್ರಿಕಾ ಖಂಡದಲ್ಲಿ ಎಚ್‌ಐವಿ ಸೋಂಕು ಭಾರಿ ಪ್ರಮಾಣದಲ್ಲಿ ಹರಡಿದ್ದು, ಆ ದೇಶಗಳು ಅದರ ನಿಯಂತ್ರಣಕ್ಕಾಗಿ ವಿದೇಶಿ ಧನಸಹಾಯವನ್ನೇ ಅವಲಂಬಿಸಿವೆ. ಆದರೆ, ಭಾರತದಲ್ಲಿ ಏಡ್ಸ್ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರವೇ ಹೆಚ್ಚಿನ ಅನುದಾನ ಒದಗಿಸುತ್ತಿದೆ. ವಿದೇಶಿ ಧನಸಹಾಯದ ಮೇಲೆ ಹೆಚ್ಚು ಅವಲಂಬಿಸಿಲ್ಲ. ಆದರೂ ಯುಎಸ್‌ಏಡ್ ಮತ್ತು ಪಿಇಪಿಎಫ್‌ಎಆರ್ ನೆರವಿನಿಂದ ದೇಶದಲ್ಲಿ ಗಮನಾರ್ಹ ಕೆಲಸಗಳು ನಡೆಯುತ್ತಿದ್ದವು. 2030ರ ಹೊತ್ತಿಗೆ ದೇಶವನ್ನು ಏಡ್ಸ್‌ಮುಕ್ತ ರಾಷ್ಟ್ರವಾಗಿಸುವುದು ಕೇಂದ್ರದ ಯೋಜನೆಯಾಗಿತ್ತು.

ಭಾರತದಲ್ಲಿ ಸೋಂಕಿನ ಪ್ರಮಾಣ ಕಡಿಮೆ ಇದ್ದರೂ ಜಾಗತಿಕ ಮಟ್ಟದಲ್ಲಿ ಹೆಚ್ಚು ಸೋಂಕಿತರಿರುವ ಮೂರನೇ ದೊಡ್ಡ ರಾಷ್ಟ್ರವಾಗಿದೆ. ದೇಶದ ದಕ್ಷಿಣ ಮತ್ತು ಈಶಾನ್ಯ ರಾಜ್ಯಗಳಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಿದೆ. ಎಚ್‌ಐವಿ ನಿಯಂತ್ರಣಕ್ಕಾಗಿ ಮೂಲಸೌಕರ್ಯ ಕಲ್ಪಿಸಲು ಮತ್ತು ಮಾನವ ಸಂಪನ್ಮೂಲ ಒದಗಿಸಲು ಅಮೆರಿಕ ನೆರವು ಒದಗಿಸುತ್ತಿತ್ತು. ಸೋಂಕಿನ ಅಪಾಯ ಇರುವ ಜನವರ್ಗಗಳಲ್ಲಿ ಸೋಂಕಿನ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಚಿಕಿತ್ಸೆ ನೀಡಲು ಆ ನೆರವು ನಿರ್ಣಾಯಕವಾಗಿತ್ತು.

ಅಮೆರಿಕದ ನೆರವು ಬಹುತೇಕ ಸ್ಥಗಿತಗೊಂಡಿರುವುದರಿಂದ ದೇಶದಲ್ಲಿ ಏಡ್ಸ್ ನಿರ್ಮೂಲನೆಗಾಗಿ ಕೆಲಸ ಮಾಡುತ್ತಿದ್ದ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ (ಎನ್‌ಎಸಿಒ) ಮತ್ತು ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಗಳು (ಎಸ್‌ಎಸಿಎಸ್) ಸಂಪನ್ಮೂಲದ ಕೊರತೆಯನ್ನು ಎದುರಿಸುವಂತಾಗಿದೆ.

ಮಾನವ ಸಂಪನ್ಮೂಲದ ಕೊರತೆ: ಧನಸಹಾಯ ನಿಲ್ಲಿಸುವುದಾಗಿ ಅಮೆರಿಕದಿಂದ ಜನವರಿಯಲ್ಲಿ ಸಂದೇಶ ಬಂದ ನಂತರ ದೇಶದಲ್ಲಿ ಏಡ್ಸ್ ನಿಯಂತ್ರಣದ ವಿವಿಧ ಯೋಜನೆಗಳಲ್ಲಿ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದ 500ಕ್ಕೂ ಹೆಚ್ಚು ಮಂದಿಯನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಲಕ್ಷಾಂತರ ಸೋಂಕಿತರ ಜತೆ ಸಂವಹನ ನಡೆಸುತ್ತಿದ್ದವರನ್ನು ದಿಢೀರ್ ಮನೆಗೆ ಕಳುಹಿಸಲಾಗಿದೆ. ಇದರಿಂದ ಸೋಂಕಿತರನ್ನು ಆಸ್ಪತ್ರೆಗಳಿಗೆ ಕರೆತರುವುದು, ಔಷಧ ಪೂರೈಸುವುದು, ಜಾಗೃತಿ ಮೂಡಿಸುವಂಥ ಕೆಲಸಗಳಲ್ಲಿ ಹಿನ್ನಡೆ ಉಂಟಾಗಿದೆ. ವಿಶೇಷವಾಗಿ, ಸೋಂಕಿನ ಪ್ರಮಾಣ ಹೆಚ್ಚಿರುವ ಪ್ರದೇಶಗಳಲ್ಲಿ ಹೆಚ್ಚು ತೊಂದರೆ ಉಂಟಾಗಿದೆ. ಸೋಂಕಿತರ ಪರೀಕ್ಷೆ, ಮಕ್ಕಳ ಆರೈಕೆ, ತಳಮಟ್ಟದ ದತ್ತಾಂಶ ಸಂಗ್ರಹವೂ ಸೇರಿದಂತೆ ಇವರ ಕಾರ್ಯವು ಮಹತ್ವದ್ದಾಗಿತ್ತು.

ಲಿಂಗತ್ವ ಅಲ್ಪಸಂಖ್ಯಾತರು. ಮಾದಕ ವ್ಯಸನಿಗಳು, ಅನಾಥ ಮಕ್ಕಳು, ಲೈಂಗಿಕ ಕಾರ್ಯಕರ್ತರು ಸೋಂಕಿನ ಅಪಾಯ ಹೆಚ್ಚು ಇರುವ ಜನವರ್ಗಗಳಾಗಿವೆ. ಅವರನ್ನು ಎಚ್‌ಐವಿ, ಲೈಂಗಿಕ ಸಂಪರ್ಕದಿಂದ ಬರುವ ಸೋಂಕುಗಳ ಪರೀಕ್ಷೆಗೆ ಒಳಪಡಿಸುವುದು, ಚಿಕಿತ್ಸೆ ಕೊಡಿಸುವುದು ಏಡ್ಸ್ ನಿಯಂತ್ರಣದಲ್ಲಿ ಬಹುಮುಖ್ಯ ಹಂತವಾಗಿದೆ. ಪ್ರಸ್ತುತ ಈ ಕೆಲಸಕ್ಕೆ ಅಡ್ಡಿಯುಂಟಾಗಿದೆ ಎಂದು ವರದಿಗಳು ತಿಳಿಸಿವೆ. ಕೇಂದ್ರವು ಅನುದಾನಕ್ಕಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕು ಎನ್ನುವ ಒತ್ತಾಯ ಕೇಳಿಬಂದಿದೆ.

ಆಧಾರ: ಯುಎನ್‌ಏಡ್ಸ್ ವರದಿ, ಫಾರಿನ್‌ಅಸಿಸ್ಟೆನ್ಸ್, ಯುಎಸ್‌ಏಡ್ ವೆಬ್‌ಸೈಟ್, ವಿಶ್ವಬ್ಯಾಂಕ್, ನ್ಯಾಕೊ ವರದಿ, ಮಾಧ್ಯಮ ವರದಿಗಳು

ಭಾರತದಲ್ಲಿ ಏಡ್ಸ್ ನಿಯಂತ್ರಣಕ್ಕೆ ಸಿಕ್ಕ ಯುಎಸ್‌ಏಡ್ (ಕೋಟಿಗಳಲ್ಲಿ)

ವರ್ಷ	ಮೊತ್ತ
2020	₹41.29
2021	₹61.10
2022	₹94.62
2023	₹103.22
2024	₹85.15
2025*	₹27.52

*ಈ ವರೆಗೆ

ಕರ್ನಾಟಕಕ್ಕೆ ಮೂರನೇ ಸ್ಥಾನ

ದೇಶದಲ್ಲಿ ಅತಿ ಹೆಚ್ಚು ಎಚ್‌ಐವಿ ಸೋಂಕಿತರು ಇರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ (ನ್ಯಾಕೊ) ಪ್ರಕಾರ, 2023ರಲ್ಲಿ ಕರ್ನಾಟಕದಲ್ಲಿ 2.80 ಲಕ್ಷ ಸೋಂಕಿತರಿದ್ದರು. 3.90 ಲಕ್ಷ ಸೋಂಕಿತರನ್ನು ಹೊಂದಿದ್ದ ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದ್ದರೆ, ಆಂಧ್ರಪ್ರದೇಶ ಎರಡನೇ ಸ್ಥಾನದಲ್ಲಿದೆ. ಅಲ್ಲಿ 3.20 ಲಕ್ಷದಷ್ಟು ಮಂದಿ ಎಚ್‌ಐವಿ ಸೋಂಕಿತರಿದ್ದರು. ಉತ್ತರ ಪ್ರದೇಶ (1.97 ಲಕ್ಷ), ತಮಿಳುನಾಡು (1.69 ಲಕ್ಷ), ತೆಲಂಗಾಣ (1.58 ಲಕ್ಷ), ಬಿಹಾರ (1.56 ಲಕ್ಷ) ರಾಜ್ಯಗಳು ನಂತರದ ಸ್ಥಾನದಲ್ಲಿವೆ.

ಕರ್ನಾಟಕದಲ್ಲಿ ವಯಸ್ಕರಲ್ಲಿ (19ರಿಂದ 49 ವರ್ಷ ವಯಸ್ಸಿನವರೆಗೆ) ಸೋಂಕಿನ ಪ್ರಮಾಣ ಶೇ 0.42ರಷ್ಟಿದೆ. 2023ರಲ್ಲಿ 3,180 ಮಂದಿ ಸೋಂಕಿಗೆ ಒಳಗಾಗಿರುವುದು ದೃಢಪಟ್ಟಿತ್ತು. 2010ರ ಅಂಕಿ ಅಂಶಗಳಿಗೆ ಹೋಲಿಸಿದರೆ ಪ್ರತಿ ವರ್ಷ ಸೋಂಕಿನ ಪ್ರಮಾಣದಲ್ಲಿ ಶೇ 70ರಷ್ಟು ಇಳಿಕೆಯಾಗಿದೆ. 2023ರಲ್ಲಿ 5,599 ಮಂದಿ ಸೋಂಕಿನ ಕಾರಣಕ್ಕೆ ಮೃತಪಟ್ಟಿದ್ದು, 13 ವರ್ಷಗಳಲ್ಲಿ ಈ ಪ್ರಮಾಣ ಶೇ 81.68ರಷ್ಟು ಕುಸಿದಿದೆ.

ರಾಷ್ಟ್ರೀಯ

ಯೆಮನ್‌ನಲ್ಲಿ ನಿಮಿಷಾಗೆ ಗಲ್ಲುಶಿಕ್ಷೆ ಸ್ಥಳೀಯ ಅಧಿಕಾರಿಗಳ ಜೊತೆ ನಿರಂತರ ಸಂಪರ್ಕ: ಎಂಇಎ



ನಿಮಿಷ ಪ್ರಿಯಾ

ನವದೆಹಲಿ (ಪಿಟಿಐ): 'ಕೇರಳದ ನರ್ಸ್ ನಿಮಿಷ ಪ್ರಿಯಾ ಅವರಿಗೆ ವಿಧಿಸಿರುವ ಗಲ್ಲು ಶಿಕ್ಷೆಯಿಂದ ಪಾರು ಮಾಡಿ, ಪರಿಹಾರ ಹುಡುಕುವ ನಿಟ್ಟಿನಲ್ಲಿ ಯೆಮನ್‌ನ ಸ್ಥಳೀಯ ಅಧಿಕಾರಿಗಳು ಹಾಗೂ ಇತರೆ ದೇಶಗಳ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇವೆ' ಎಂದು ಭಾರತದ ವಿದೇಶಾಂಗ ಸಚಿವಾಲಯ (ಎಂಇಎ) ತಿಳಿಸಿದೆ.

'ಇದೊಂದು ಸೂಕ್ಷ್ಮವಾದ ವಿಚಾರವಾಗಿದ್ದು, ಈ ಪ್ರಕರಣದಲ್ಲಿ ಭಾರತ ಸರ್ಕಾರವು ಎಲ್ಲ ರೀತಿಯ ಸಹಕಾರ ಒದಗಿಸಲು ಬದ್ಧವಾಗಿದೆ' ಎಂದು ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ,

'ಕುಟುಂಬಕ್ಕೆ ನೆರವಾಗುವ ನಿಟ್ಟಿನಲ್ಲಿ ವಕೀಲರನ್ನು ನೇಮಿಸಿ, ಕಾನೂನು ನೆರವು ಒದಗಿಸಿದ್ದೇವೆ. ಭಾರತ ಸರ್ಕಾರದ ಅಧಿಕಾರಿಗಳು ಸರ್ಕಾರ, ಕುಟುಂಬ ಸದಸ್ಯರ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇವೆ' ಎಂದು ಹೇಳಿದ್ದಾರೆ.

'ಸಮಸ್ಯೆ ಬಗೆಹರಿಸಲು ಪ್ರಿಯಾ ಕುಟುಂಬಸ್ಥರಿಗೆ ಇನ್ನಷ್ಟು ಕಾಲಾವಕಾಶ ಒದಗಿಸುವಂತೆ ಕೋರಿ ಸಂಘಟಿತ ಪ್ರಯತ್ನ ನಡೆಸಿದ್ದು, ಎದುರಾಳಿ ಪಕ್ಷದೊಂದಿಗೆ ಸಂಧಾನಕ್ಕಾಗಿ ಪ್ರಯತ್ನ ಮುಂದುವರಿದಿದೆ. ಪ್ರಕರಣವನ್ನು ಹತ್ತಿರದಿಂದ ಗಮನಿಸುತ್ತಿದ್ದು, ಸಾಧ್ಯವಿರುವ ಎಲ್ಲ ಸಹಾಯ ನೀಡುತ್ತಿದ್ದೇವೆ. ಕೆಲವು ಮಿತ್ರ ದೇಶಗಳ ಜೊತೆಗೂ ಸಂಪರ್ಕದಲ್ಲಿದ್ದೇವೆ' ಎಂದು ವಿವರಿಸಿದ್ದಾರೆ.

2017ರಲ್ಲಿ ಯೆಮನ್‌ನ ನಾಗರಿಕ ತಲಾಲ್ ಅಬ್ದೋ ಮಹ್ದಿಯನ್ನು ಹತ್ಯೆ ಮಾಡಿದ ಆರೋಪದ ಮೇಲೆ ಕೇರಳದ ಪಾಲಕ್ಕಾಡ್ ಜಿಲ್ಲೆಯ ಕೊಲ್ಲಂಗೋಡ್‌ನ ನಿವಾಸಿ ನಿಮಿಷ ಪ್ರಿಯಾ ಅವರಿಗೆ ಗಲ್ಲುಶಿಕ್ಷೆ ವಿಧಿಸಲಾಗಿತ್ತು. ಜುಲೈ 16ಕ್ಕೆ ಗಲ್ಲು ಶಿಕ್ಷೆ ನಿಗದಿಯಾಗಿತ್ತು. ಆದರೆ, ಗಲ್ಲು ಶಿಕ್ಷೆಯನ್ನು ಯೆಮನ್ ಅಧಿಕಾರಿಗಳು ಮುಂದೂಡಿದ್ದರು.

ಶಾಲಾ ಆವರಣದಲ್ಲಿ 'ಖಾದ್ಯತೈಲ ಫಲಕ' ಅಳವಡಿಸಿ: ಸಿಬಿಎಸ್‌ಇ

ನವದೆಹಲಿ (ಪಿಟಿಐ): ಕೊಬ್ಬು ಹೆಚ್ಚಿನ ಪ್ರಮಾಣದಲ್ಲಿರುವ ಆಹಾರ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶಾಲಾ ಆವರಣದಲ್ಲಿ 'ಖಾದ್ಯ ತೈಲ ಫಲಕ'ಗಳನ್ನು ಅಳವಡಿಸಬೇಕು ಎಂದು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಎಲ್ಲ ಶಾಲೆಗಳಿಗೆ ನಿರ್ದೇಶನ ನೀಡಿದೆ.

ಆರೋಗ್ಯಕರ ಆಹಾರ ಪದ್ಧತಿ ಉತ್ತೇಜಿಸಲು ಸಿಬಿಎಸ್‌ಇ ಈ ಸೂಚನೆ ನೀಡಿದೆ. ಮಕ್ಕಳು ಸಕ್ಕರೆ ತಿನ್ನುವುದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಎರಡು ತಿಂಗಳ ಹಿಂದೆಯೇ ಶಾಲೆಗಳಲ್ಲಿ 'ಸಕ್ಕರೆ ಫಲಕ' ಅಳವಡಿಸುವಂತೆ ಅದು ಸೂಚಿಸಿತ್ತು.

'ಶಾಲೆಯ ಆವರಣದಲ್ಲಿರುವ ಕೆಫೆಟೇರಿಯಾ, ವಿಶ್ರಾಂತಿ ಕೊಠಡಿ, ಸಭೆ ನಡೆಸುವ ಕೊಠಡಿಗಳಲ್ಲಿ 'ಖಾದ್ಯ ತೈಲ ಫಲಕ' ಅಥವಾ 'ಡಿಜಿಟಲ್ ಫಲಕ' ಅಳವಡಿಸಲು ಕ್ರಮ ಕೈಗೊಳ್ಳಬೇಕು. ಇದರಿಂದ ಹೆಚ್ಚಿನ ಕೊಬ್ಬಿನಾಂಶ ಹೊಂದಿದ ಆಹಾರ ಪದಾರ್ಥಗಳ ಸೇವನೆಯಿಂದ ಉಂಟಾಗುವ ಹಾನಿಯ ಕುರಿತು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ನೆರವಾಗಲಿದೆ' ಎಂದು ತಿಳಿಸಿದ್ದಾರೆ.

'2019–21ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್–5) ಅಂಕಿ ಅಂಶಗಳ ಪ್ರಕಾರ, ವಯಸ್ಕರು ಹಾಗೂ ಮಕ್ಕಳಲ್ಲಿ ಸ್ಥೂಲಕಾಯವು ತೀವ್ರವಾಗಿ ಏರಿಕೆಯಾಗಿದೆ. ನಗರದ ಐದು ಮಂದಿ ವಯಸ್ಕರ ಪೈಕಿ ಒಬ್ಬರು ಅತಿಯಾದ ತೂಕ ಅಥವಾ ಬೊಜ್ಜು ಸಮಸ್ಯೆಯಿಂದ ಬಳಲುತ್ತಿದ್ದಾರೆ' ಎಂದು ಸಿಬಿಎಸ್‌ಇ ನಿರ್ದೇಶಕ (ಶೈಕ್ಷಣಿಕ) ಪ್ರಗ್ಯಾ ಎಂ.ಸಿಂಗ್ ತಿಳಿಸಿದ್ದಾರೆ.

ಪಂಜಾಬ್: ಭಿಕ್ಷೆ ಬೇಡುವ ಮಕ್ಕಳ ಡಿಎನ್‌ಎ ಪರೀಕ್ಷೆಗೆ ಸೂಚನೆ

ಚಂಡೀಗಢ (ಪಿಟಿಐ): ವಯಸ್ಕರೊಂದಿಗೆ ಭಿಕ್ಷೆ ಬೇಡುವ ಮಕ್ಕಳ ಡಿಎನ್‌ಎ ಪರೀಕ್ಷೆ ನಡೆಸಿ, ಅವರ ನಡುವಿನ ಸಂಬಂಧದ ಬಗ್ಗೆ ಪರಿಶೀಲನೆ ನಡೆಸುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಪಂಜಾಬ್ ಸರ್ಕಾರ ಸೂಚಿಸಿದೆ.

ಮಕ್ಕಳ ಕಳ್ಳಸಾಗಾಣಿಕೆ ಮತ್ತು ಶೋಷಣೆ ತಡೆಯುವ ಉದ್ದೇಶದಿಂದ ಈ ಕ್ರಮಕ್ಕೆ ಸರ್ಕಾರ ಮುಂದಾಗಿದೆ.

ಡಿಎನ್‌ಎ ಪರೀಕ್ಷೆ ಫಲಿತಾಂಶ ಲಭ್ಯವಾಗುವವರೆಗೆ ಮಗುವನ್ನು ಮಕ್ಕಳ ಕಾಳಜಿ ಕೇಂದ್ರದಲ್ಲಿ ಇರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ವಯಸ್ಕ ವ್ಯಕ್ತಿಗೂ ಮಗುವಿಗೂ ಯಾವುದೇ ಸಂಬಂಧ ಇಲ್ಲದಿರುವುದು ಪತ್ತೆಯಾದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕರಿ ಕೋಟು ತೊಟ್ಟಿರುವ ವ್ಯಕ್ತಿಯೊಬ್ಬರು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ರಕರಣವೊಂದರ ವಿಚಾರಣೆಗೆಂದು ಉತ್ತರ ಪ್ರದೇಶದ ಲಖನೌ ನ್ಯಾಯಾಲಯಕ್ಕೆ ಬಂದಿದ್ದ ಪ್ರತಿವಾದಿಯೊಂದಿಗೆ (ರಾಹುಲ್ ಗಾಂಧಿ) ನ್ಯಾಯಾಧೀಶರು ಸೆಲ್ಫಿ ತೆಗೆದುಕೊಂಡಿದ್ದಾರೆ ಎಂದು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಸೇರಿದಂತೆ ಪೋಸ್ಟ್ ಹಂಚಿಕೊಳ್ಳುತ್ತಿರುವ ಹಲವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಈ ಸಂಬಂಧ ಉತ್ತರ ಪ್ರದೇಶದ ಕಾಂಗ್ರೆಸ್ ಮುಖಂಡ, ವಕೀಲ ಪ್ರದೀಪ್ ಸಿಂಗ್ ಅವರು ಸ್ಪಷ್ಟೀಕರಣ ನೀಡಿದ್ದು, ಚಿತ್ರದಲ್ಲಿ ರಾಹುಲ್ ಗಾಂಧಿ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುತ್ತಿರುವವರು ನ್ಯಾಯಾಧೀಶರಲ್ಲ; ಅವರು ವಕೀಲ ಸೈಯದ್ ಮಹಮೂದ್ ಹಸನ್ ಎಂದಿದ್ದಾರೆ. ಕಾಂಗ್ರೆಸ್ ಮುಖಂಡರಾಗಿರುವ ಸುಪ್ರಿಯಾ ಶ್ರೀನೇತ್ ಅವರು ಪೋಸ್ಟ್ ಹಂಚಿಕೊಂಡಿರುವ ಅಮಿತ್ ಮಾಳವೀಯ ಅವರ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿದ್ದು, ಇದು ಸುಳ್ಳು ಸುದ್ದಿ ಎಂದಿದ್ದಾರೆ. ಈ ಬಗ್ಗೆ ವಕೀಲರಾದ ಸೈಯದ್ ಮಹಮೂದ್ ಹಸನ್ ಅವರೂ ಸ್ಪಷ್ಟೀಕರಣ ನೀಡಿದ್ದು, ತಾವು ನ್ಯಾಯಾಧೀಶ ಅಲ್ಲ ಎಂದು ತಿಳಿಸಿರುವುದಾಗಿ ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಬವಣೆಗಳಿಗೆ ಸಡ್ಡು...



ನುಡಿ ಬೆಳಗು

ದಯಾ ಗಂಗನಘಟ್ಟ

ಉಚ್ಚಮ್ಮ ಅಷ್ಟೇನೂ ಓದು ಬರಹ ಕಲಿತ ಹೆಣ್ಣಲ್ಲ. ಓದಲು ಆಸೆಯೇನೋ ಇತ್ತು. ಆದರೆ ಊರವರ ಅಂಗಿಗಳ ಅಷ್ಟೂ ಕೊಳೆಯನ್ನು ತೊಳೆಯುವ ಶುದ್ಧ ಕಾಯಕ ಮಾಡುತ್ತಿದ್ದ ನಿಂಗಣ್ಣನ ಜೇಬಿಗೆ ಇವಳನ್ನು ಓದಿಸುವ ಕಸುವಿರಲಿಲ್ಲ. ಆದಷ್ಟೂ ಬೇಗ ಅವಳ ಕೊರಳಿಗೊಂದು ತಾಳಿ ಬಿಗಿಸಿ ತನ್ನ ಹೆಗಲ ಮೇಲಿನ ಹೊರೆಯನ್ನು ಇಳಿಸಿಕೊಂಡರೆ ಸಾಕೆಂಬ ಯೋಚನೆಯ ಆಚೆಗೆ ಅವನಿಗೆ ಹೆಚ್ಚಿನದೇನೂ ಗೊತ್ತಿರಲಿಲ್ಲ. ಅವ್ವ ನಂಜವ್ವನಿಗೆ ಮಗಳು ತಾನು ಬೆಂದ ಬೆಂಕಿಯಲ್ಲಿ ಬೇಯಲೇಬಾರದೆಂಬ ಆಸೆಯಿದ್ದರೂ ಅವಳ ಯೋಚನೆಗಾಗಲೀ, ಎತ್ತುವ ಸ್ವರಕ್ಕಾಗಲಿ ಎಲ್ಲಿಯ ಬೆಲೆಯಿತ್ತು? ಮಗಳಿಗೆ ಚೆನ್ನಾಗಿ ಒಕ್ಕತನ ಕಲಿಸಿದ್ದಷ್ಟೇ ಅವಳ ಪಾಲಿನ ಕೆಲಸ. ನಿಂಗಣ್ಣ ಬಹಳ ಕಷ್ಟಪಟ್ಟು ಒಂದು ಸಂಬಂಧವನ್ನು ಉಚ್ಚಮ್ಮನಿಗೆ ಗೊತ್ತು ಮಾಡಿದ್ದ.

ಮದುವೆ ನಿಕ್ಕಿಯಾದ ಕ್ಷಣದಿಂದ ಉಚ್ಚಮ್ಮನ ಕಿವಿಯ ಮೇಲೆ ಗಂಡಿನ ಬಗ್ಗೆ ಬಹಳ ಯೋಗ್ಯ, ಒಳ್ಳೆಯ ಕೆಲಸಗಾರ, ಉಚ್ಚಮ್ಮ ಬಾಳ ಅದೃಷ್ಟವಂತೆ, ಸಿಕ್ಕಿದ್ದೇ ಇವಳ ಪುಣ್ಯ, ಗಂಡಿಗೆ ಅದು ಬೇಕಂತೆ, ವರೋಪಚಾರ ಇಷ್ಟಂತೆ, ಹೀಗಿರಬೇಕಂತೆ, ಹಾಗಿರಬೇಕಂತೆ, ಇಲ್ದಿದ್ರೆ ಅವ ಒಪ್ಪಲ್ವಂತೆ... ಇತ್ಯಾದಿ ಇತ್ಯಾದಿ ಮಾತುಗಳೇ ಬಿದ್ದೂ ಬಿದ್ದೂ ಅದೊಂಥರ ಭಯ, ಗೌರವ, ಹೆಮ್ಮೆ ಇತ್ಯಾದಿ ಮಿಶ್ರ ಭಾವಗಳು ಅವಳ ಮನಸ್ಸನ್ನು ತುಂಬಿ ಬಿಟ್ಟಿದ್ದವು. ಇದೇ ನಂಬುಗೆಯಲ್ಲಿ ಗಂಡನ ಮನೆ ಹೊಕ್ಕ ಉಚ್ಚಮ್ಮನ ಖುಷಿಯ ಬಲೂನು ಟುಸ್ಸೆಂದು ಉಸಿರು ಕಳೆದುಕೊಳ್ಳಲು ವರ್ಷವೂ ಬೇಕಾಗಲಿಲ್ಲ. ಮೊದಮೊದಲು ಹೊಸ ಗಂಡಿನ ಗತ್ತಿನಲ್ಲಿ ಕಂಡ ಗಂಡ ತಿಂಗಳು ಕಳೆದಂತೆ ಅದೆಂಥ ಸೋಮಾರಿ, ನಾಲಾಯಕ್, ದುಡಿಯಲಾರದವ ಕುಡುಕ, ಉರುಕ, ತಿಕ್ಕಲ, ಹೆಣ್ಣಿನ ಹುಚ್ಚಿನವ, ತಿನ್ನಲು ತಂದು ಹಾಕಲೂ ಒಲ್ಲದ ಭಂಡ ಅನ್ನುವುದು ಸ್ಪಷ್ಟವಾಗಿ ಅರ್ಥವಾಗಿ ಹೋಯಿತು. ಏಳೆಂಟು ಅಡಿಗೂ ಕಡಿಮೆ ಇರುವ ಮುರುಕಲು ಗುಡಿಸಲೊಂದನ್ನು ಬಿಟ್ಟು ಒಂದೇ ಒಂದು ಅಂಗುಲವೂ ನೆಲವಿಲ್ಲ, ವಿಷ ತರಲು ಸಾಕಾಗುವಷ್ಟೂ ಹಣವಿಲ್ಲ, ಉಡಲು ಬಟ್ಟೆ ಹೊಟ್ಟೆಗೆ ಹಿಟ್ಟು ಇವುಗಳಿಗಂತೂ ತತ್ವಾರವೇ. ತನ್ನಲ್ಲಿ ಓದು ಬರಹವಿಲ್ಲ, ಬೆನ್ನಿಗೆ ಹಣ ಆಸ್ತಿಯಿಲ್ಲ, ಬೆಂಬಲಿಸುವ ಜೀವವೂ ಇಲ್ಲ. ಮುಂದೆ ಉಚ್ಚಮ್ಮ ಏನು ಮಾಡಬೇಕು? ಇಲ್ಲಿಗೆ ಇದು ಈಕೆಯ ಬದುಕಿನ ಅಂತ್ಯವಾ?

ನಮ್ಮ ಹಳ್ಳಿಗಾಡಿನ ಬಹುತೇಕ ದಲಿತ ಹೆಣ್ಣುಮಕ್ಕಳ ಬದುಕು ಹೀಗೇ ಆರಂಭವಾಗುತ್ತದೆ. ಒಟ್ಟಾರೆ ಯಾವುದೇ ವಿಂಗಡಣೆಯೂ ಇಲ್ಲದೆ ನಗರ ಹಳ್ಳಿಯ ಇತರ ಸಮುದಾಯದ ಹೆಣ್ಣುಮಕ್ಕಳ ಬದುಕೂ ಹೆಚ್ಚುಕಮ್ಮಿ ಹೀಗೆಯೇ ಇರುವುದು. ಆದರೆ ಇತರೆ ಹೆಣ್ಣುಮಕ್ಕಳಿಗೆ ವಿದ್ಯೆ, ಹಣ, ಸಮಾಜ, ಜಾತಿ ಹೀಗೆ ಕೆಲವಾದರೂ ಸಹಾಯಗಳು ಒದಗುತ್ತವೆ. ಆದರೆ ಬಹುಮುಖ್ಯವಾಗಿ ಈ ಹೆಣ್ಣುಮಕ್ಕಳಿಗೆ ಅದಾವ ಬೆಂಬಲವೂ ದಕ್ಕದೇ ಹೋಗುವುದು ದುರಂತ. ಉಚ್ಚಮ್ಮ ಇಷ್ಟಕ್ಕೇ ಸೋತು ಬದುಕಿನ ಮುಂದೆ ಮಂಡಿಯೂರಿ ಕೂರಲಿಲ್ಲ. ಬದಲಿಗೆ ಬದುಕಿನ ಬವಣೆಗೇ ಸಡ್ಡು ಹೊಡೆದು ನಿಂತ ಗಟ್ಟಿಗಿತ್ತಿ. ಯಾರಿಗಾಗಿ ಅಲ್ಲದಿದ್ದರೂ ತನಗಾಗಿ ಒಂದು ಬದುಕಿದೆ, ನನ್ನ ಜೀವಕ್ಕೂ ಬೆಲೆಯಿದೆ ಎಂಬುದನ್ನು ಎದೆಯಲ್ಲಿ ಗಟ್ಟಿಯಾಗಿಸಿಕೊಂಡು ಬದುಕನ್ನು ತಬ್ಬಿದವಳು. ಮನೆಯನ್ನೂ ಮೀಸಿ, ಬದುಕನ್ನೂ ಈಸಿ ಇದೀಗ ತನ್ನ ಮಗಳನ್ನು ಕೆಎಎಸ್ ಓದಿಸುವ ತಯಾರಿಯಲ್ಲಿದ್ದಾಳೆ. ಇಂತಹ ಹಲವಾರು ಉಚ್ಚಮ್ಮಂದಿರು ನಮ್ಮ ಸುತ್ತಮುತ್ತ ಸವಾಲುಗಳಿಗೆ ಸಡ್ಡು ಹೊಡೆದು ಬದುಕುತ್ತಿದ್ದಾರೆ. ಬದುಕು ಹಲವಾರು ಸವಾಲುಗಳನ್ನು ಇದ್ದಕ್ಕಿದ್ದಂತೆ ತಂದು ಮುಂದೆ ಇಟ್ಟುಬಿಡುತ್ತದೆ. ಬದುಕೆಂದರೆ ಹೀಗೇ. ಅದೆಂತಾ ಕಷ್ಟವೇ ಆಗಲಿ ದುತ್ತೆಂದು ಎದುರುಬಂದು ನಿಂತಾಗ ನಾವು ಎದೆಗುಂದಬಾರದು. ದಿಟ್ಟವಾಗಿ ಎದುರಿಸಬೇಕು. ನೀಸಲಾಗದ ಕಷ್ಟ ಯಾವುದೂ ಇರುವುದಿಲ್ಲ. ಪರಿಹಾರದ ಕಡೆ ಸಮಾಧಾನ ಚಿತ್ತದಿಂದ ಯೋಚಿಸಿದರೆ ಒಂದಲ್ಲಾ ಒಂದು ದಾರಿ ಸಿಕ್ಕೇ ಸಿಗುತ್ತದೆ.

ಪದಬಂಧ 6107

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಮುಟ್ಟಿದರೆ ತಗಲಿಕೊಳ್ಳುವ ಸ್ವಭಾವ (2)
4.ಬೇರೆಯವರನ್ನು ಆಶ್ರಯಿಸಿರುವವನು (5)
5.ದುಃಖ ಹೀಗೆ ಬಂದಿದೆ (3)
6.ಮೂರು ಅಡಿ ಅಳತೆ (2)
7.ಹೂವಿನಲ್ಲಿರುವ ಹುಡಿಯಿದು (3)
9.ಮಂಕ ಹಿಡಿದಿರುವ ಕಪ್ಪೆ (3)
10.ಮನಸ್ಸಿಗೆ ತಾಗುವಂಥದ್ದು (5)
11.ತಡ ಎಂದು ಹೀಗೆನ್ನಿ (3)
12.ಕುದುರೆಯನ್ನೇರುವ ಬಳೆ (3)
14.ಮಾತು ಆಡುತ್ತಿರುವಾಗ ಕಾಣಿಸಿದ ರಂಧ್ರ! (2)
16.ಕ್ಷೇಮಕ್ಕೊಂದು ಪರ್ಯಾಯ ಪದ (3)
17.ಹಿತವನ್ನು ಕುರಿತು ಚಿಂತಿಸುವವ ತಿರುಗಿದ್ದಾನಲ್ಲಾ! (5)
18.ಚಕ್ಕಡಿ ಇಲ್ಲಿದೆ (2)

ಮೇಲಿಂದ ಕೆಳಕ್ಕೆ

1.ಅಪ್ಪನ ಈ ರೂಪ ಬಹಳ ವಿರಳ! (4)
2.ನಾವೆಯನ್ನು ನಡೆಸುವವನು (3)
3.ರುಚಿಕಟ್ಟಾದ ಅಡುಗೆ (4)
8.ಮನವನ್ನು ಸೆಳೆದ ಲಕ್ಷ್ಯ (3)
9.ಕರಿಯ ಹತ್ತಿರವಿರಿಸಿದ ಬುಟ್ಟಿ (3)
11.ಅಂಕುಶವಿದ್ದರೂ ಹತೋಟಿಯಿಲ್ಲದ್ದು! (4)
13.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
15.ಸೈನ್ಯದ ಒಂದು ದಳ (3)

6106ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಧಕ 3.ಪದರ 5.ಪತಿ
6.ವರ್ತಕ 7.ನೆಪ
9.ಯುವತಿ 10.ಯಳವೀ
11.ಕೆರ 13.ಹಣಿಗೆ
15.ಮಾನ 16.ಕಟಾವು
17.ಲುಬ್ಧಕ

ಮೇಲಿಂದ ಕೆಳಕ್ಕೆ :
1.ಬಾಣಂತಿ 2.ಕಕವ
3.ಪದಕ 4.ರವಾನೆ
5.ಪಳೆಯುಳಿಕೆ 8.ಪದವೀದಾನ
12.ರಕ್ಷಕ 13.ಹಗೇವು
14.ಗೆದ್ದಲು 15.ಮಾಸಿಕ

ಸುಡೊಕು 6491

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

6490 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಜುಲೈ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಅಷ್ಟಮಿ ಗಂ. 17-02 **ನಕ್ಷತ್ರ:** ಅಶ್ವಿನಿ ಗಂ. 26-14 **ಯೋಗ:** ಸುಕರ್ಮಾ ಗಂ 6-48 ನಂತರ ಧೃತಿ 27-56, ಕರ್ಕಾಟಕ ಮಾಸದ 02 ನೇ ದಿನ. **ಮಳೆ ನಕ್ಷತ್ರ :** ಪುನರ್ವಸು 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30– 12-00 , **ಸೂರ್ಯೋದಯ :** 06-16 **ಸೂರ್ಯಾಸ್ತ :** 06-58, **ಮುಸ್ಲಿಂ ದಿನಾಂಕ :** 22 ಮೊಹರಮ್ , **ದಿನ ವಿಶೇಷ :** ಆಷಾಢ ಶುಕ್ರವಾರ, ಅದೃಷ್ಟ ಸಂಖ್ಯೆ : 1, 6

ಮೇಷ: ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಓಡಾಡುವ ಸಂದರ್ಭ ಎದುರಾಗಲಿದೆ. ಮಗನ ಉದ್ಯೋಗ ನಿಮಿತ್ತ ಅಧಿಕಾರಿಯೊಬ್ಬರ ನೆರವು ಪಡೆಯುವಿರಿ.

ವೃಷಭ: ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ ಇರುವುದು. ಖರ್ಚು–ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸುವಿರಿ. ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಉಂಟಾಗುವುದು.

ಮಿಥುನ: ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಸಾಧ್ಯತೆ. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ಅಪೇಕ್ಷಿಸಬಹುದು. ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿ ಏಳಿಗೆಯನ್ನು ಹೊಂದುವಿರಿ.

ಕರ್ಕಾಟಕ: ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ. ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಪರಿಶ್ರಮ ಮತ್ತು ದೇವರ ಕೃಪಾ ಕಟಾಕ್ಷ ಪಡಬೇಕಾಗುವುದು. ಸರ್ಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ.

ಸಿಂಹ: ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವಿರಿ. ಜೀವನದ ಹಾದಿ ಬದಲಾಗುವುದು ಅನುಭವಕ್ಕೆ ಬರಲಿದೆ. ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಕನ್ಯಾ: ಸಣ್ಣ ವಿಷಯಗಳಿಗೆ ಕೋಪಿಸಿಕೊಳ್ಳುವ ಮನಸ್ಥಿತಿಯಿಂದಾಗಿ ಹಿರಿಯರ ಕೋಪಕ್ಕೆ ಗುರಿಯಾಗುವ ಸಾಧ್ಯತೆಗಳಿವೆ. ಅರ್ಥಶಾಸ್ತ್ರಜ್ಞರಿಗೆ ಹಿಂದಿನ ಸಾಧನೆಗಳನ್ನು ಗುರುತಿಸಿ ಗೌರವದ ಕರೆ ಬರಲಿದೆ.

ತುಲಾ: ಸಾಂಕ್ರಾಮಿಕ ರೋಗದಿಂದ ಬಳಲುತ್ತಿದ್ದವರ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಇತರರಿಗೆ ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳುವುದು ಉತ್ತಮ. ಮನೆಯ ಹೊರಗಿನ ಆಹಾರ ಸೇವನೆ ಬೇಡ.

ವೃಶ್ಚಿಕ: ಮೇಲಧಿಕಾರಿಗಳಿಗೆ ಸಲ್ಲಿಸಿದ ಅರ್ಜಿಯು ಮುಂದುವರಿಯದೆ ಇರುವುದು ಮನಸ್ಸಿಗೆ ಗಾಸಿಗೊಳಿಸಬಹುದು. ಬೆಂಕಿಯಿಂದ ಸಂಭವವಾಗುವಂಥ ತೊಂದರೆಗಳ ಬಗ್ಗೆ ಮುನ್ನೆಚ್ಚರಿಕೆಯನ್ನು ವಹಿಸಿ.

ಧನು: ಆಯ್ಕೆ, ತೀರ್ಮಾನ ಮಾಡುವ ವಿಚಾರಗಳಲ್ಲಿ ಮನಸ್ಸಿನ ಚಂಚಲ ಸ್ವಭಾವದಿಂದ ವಿಫಲರಾಗುವ ಸನ್ನಿವೇಶಗಳಿರುವುದು. ನಿಮ್ಮ ಒಳ್ಳೆಯ ಮಾತುಗಳು ಸ್ಫೂರ್ತಿದಾಯಕವಾಗಿರುತ್ತವೆ.

ಮಕರ: ಕಾರ್ಮಿಕರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿವೆ. ಭಾವನೆಗಳ ಮೇಲೆ ಹಿಡಿತವನ್ನು ಸಾಧಿಸುವ ಪ್ರಯತ್ನವನ್ನು ಮಾಡಿ. ಸಾಧನೆಗೆ ಅಪರಿಚಿತರೂ ಪ್ರಶಂಸಿಸುವಂತೆ ಆಗುವುದು.

ಕುಂಭ: ಸಂಘಟನಾ ಶಕ್ತಿಯನ್ನು ಹೊಂದಿರುವ ನಿಮಗೆ ಪಾಲುದಾರರಲ್ಲಿ ವ್ಯವಹರಿಸುವುದು ಸುಲಭ. ವಿದ್ಯಾಭ್ಯಾಸದಲ್ಲಿ ಆಲಸ್ಯ ತೋರಿ ಬರುವುದು. ಉದ್ಯೋಗ ನಿರೀಕ್ಷೆಯಲ್ಲಿರುವವರು ಉತ್ತಮ ಸಮಾಚಾರವನ್ನು ಕೇಳುವಿರಿ.


ಮೀನ: ತಲೆಬೇನೆ, ಮಾನಸಿಕ ಅಸ್ವಸ್ಥತೆಯಂಥ ತೊಂದರೆಗಳು ಕಾಡುವ ಸಂಭವವಿದೆ. ಅನಗತ್ಯ ವಿಚಾರಗಳ ಬಗ್ಗೆ ಚಿಂತಿಸುವುದನ್ನು ಬಿಡಿ. ಹಣಕಾಸಿಗೆ ಸಂಬಂಧಿಸಿದಂತೆ ಹೊಸದಾದ ತೀರ್ಮಾನವನ್ನು ಕೈಗೊಳ್ಳುವುದು ಸರಿಯಲ್ಲ.

ಗುಂಡಣ್ಣ



ವಿನಿಮಯ ದರ: ಡಾಲರ್ 86.12 | ಪೌಂಡ್ 115.29 | ಯುರೊ 99.74 | ಯೆನ್ (100¥) 58

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ: ಹಿಂದಿನ ಅಂತ್ಯ 25,212; ಇಂದಿನ ಅಂತ್ಯ 25,111; ದಿನದ ಇಳಿಕೆ 100

ಕೊಬ್ಬರಿ ಧಾರಣೆ: ಅರಸೀಕೆರೆ ₹23500-27000; ತುಮಕೂರು ₹24500-28500

ರಾಮನಗರ ರೇಷ್ಮೆಗೂಡು: ಮಿಶ್ರತಳಿ (ಪ್ರ.ಕೆ.ಜಿ) ₹280-562; ದ್ವಿತಳಿ (ಬಿ.ವಿ) ₹333-688

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ): ಆರ್‌ಎಸ್‌ಎಸ್-4 ₹206; ಆರ್‌ಎಸ್‌ಎಸ್-5 ₹200; ಗುಡ್ ಲಾಟ್ ₹184.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ): ಶೇಂಗಾ (ರಿಫೈನ್ಡ್) ₹1440 (1440); ಸೋಯಾ (ರಿಫೈನ್ಡ್) ₹1225 (1220); ಸೂರ್ಯಕಾಂತಿ (ರಿಫೈನ್ಡ್) ₹1355 (1355); ಪಾಮೊಲಿನ್ ₹1190 (1190)

ಪರ್ಯಾಯ ಮೂಲದಿಂದ ತೈಲ: ಕೇಂದ್ರ

ಹೊಸ ಮೂಲಗಳು ಹಾಗೂ ಹಾಲಿ ಪೂರೈಕೆದಾರರಿಂದ ಖರೀದಿ ಹೆಚ್ಚಿಸಲು ಅವಕಾಶ ಇದೆ ಎಂದ ಕೇಂದ್ರ ಸಚಿವ

ನವದೆಹಲಿ (ಪಿಟಿಐ): ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಸುಂಕ ವಿಧಿಸಲಾಗುತ್ತದೆ ಎಂದು ಅಮೆರಿಕವು ಎಚ್ಚರಿಕೆ ನೀಡಿರುವ ನಡುವೆಯೇ ಕೇಂದ್ರ ಸರ್ಕಾರವು 'ಪರ್ಯಾಯ ಮೂಲಗಳಿಂದ ತೈಲ ಖರೀದಿಸುವ ವಿಶ್ವಾಸ ತನಗೆ ಇದೆ' ಎಂದು ಹೇಳಿದೆ.

ಭಾರತವು ತನ್ನ ಅಗತ್ಯದ ಶೇಕಡ 85ರಷ್ಟು ಕಚ್ಚಾ ತೈಲವನ್ನು ವಿದೇಶಗಳಿಂದ ತರಿಸಿಕೊಳ್ಳುತ್ತದೆ. ಭಾರತವು ಮೊದಲಿನಿಂದಲೂ ಪಶ್ಚಿಮ ಏಷ್ಯಾದ ದೇಶಗಳಿಂದ ತೈಲ ಆಮದು ಮಾಡಿಕೊಳ್ಳುತ್ತಿದೆ. ಆದರೆ ಕಳೆದ ಮೂರು ವರ್ಷಗಳಿಂದ ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸಲಾಗುತ್ತಿದೆ.

ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿದ ನಂತರದಲ್ಲಿ ಯುರೋಪಿನ ಹಲವು ದೇಶಗಳು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ನಿಲ್ಲಿಸಿದವು.

ಬೆಲೆ ವ್ಯತ್ಯಾಸ ಆಗುತ್ತಿಲ್ಲ: ಪುರಿ



ಹರದೀಪ್ ಸಿಂಗ್ ಪುರಿ

ಜಾಗತಿಕ ಗೊಂದಲಗಳಿಗೆ ಕಚ್ಚಾ ತೈಲ ಮಾರುಕಟ್ಟೆಯು ಈಗ ಮೊದಲಿನಂತೆ ಪ್ರತಿಕ್ರಿಯಿಸುತ್ತಿಲ್ಲ ಎಂದು ಸಚಿವ ಪುರಿ ಅವರು ಸುದ್ದಿಗಾರರಿಗೆ ತಿಳಿಸಿದರು. ಅದರರ್ಥ ಮುಖ್ಯವಾಗಿ, ತೈಲದ ಲಭ್ಯತೆ ಹೆಚ್ಚು ಇರುವಾಗ ಗೊಂದಲಗಳಿಗೆ ಪ್ರತಿಕ್ರಿಯೆಯಾಗಿ ಬೆಲೆಯು ಮೊದಲಿನಂತೆ ವ್ಯತ್ಯಾಸ ಆಗುತ್ತಿಲ್ಲ ಎಂದರು.

ಕಚ್ಚಾ ತೈಲದ ಬೆಲೆಯು ಈಗ ಬ್ಯಾರೆಲ್‌ಗೆ 68.5 ಡಾಲರ್‌ನಷ್ಟು ಇದೆ. ಬೆಲೆಯು ಮುಂದಿನ ತಿಂಗಳುಗಳಲ್ಲಿಯೂ ಇದೇ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ. ಬೆಲೆಯು ಬ್ಯಾರೆಲ್‌ಗೆ 65 ಡಾಲರ್ ಆಗಬಹುದು ಎಂದು ಅವರು ಹೇಳಿದರು.

ಇಂಧನದಲ್ಲಿ ಎಥೆನಾಲ್ ಮಿಶ್ರಣವನ್ನು ಈಗಿನ ಶೇ 20ಕ್ಕಿಂತ ಹೆಚ್ಚು ಮಾಡುವ ಬಗ್ಗೆ ನೀತಿ ಆಯೋಗದ ನೇತೃತ್ವದಲ್ಲಿ ಚರ್ಚೆಗಳು ನಡೆಯುತ್ತಿವೆ ಎಂದರು.

ಆಗ ರಷ್ಯಾ ಹೊಸ ಗ್ರಾಹಕರನ್ನು ಹುಡುಕಿಕೊಳ್ಳುವ ಉದ್ದೇಶದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಪೂರೈಸಲು ಆರಂಭಿಸಿತು.

ಅವಕಾಶವನ್ನು ಬಳಸಿಕೊಂಡ ಭಾರತದ ಕಂಪನಿಗಳು ರಷ್ಯಾದಿಂದ ಹೆಚ್ಚು ಕಚ್ಚಾ ತೈಲ ಖರೀದಿಸಲು ಆರಂಭಿಸಿದವು. ಈಗ ಭಾರತ ಆಮದು ಮಾಡಿಕೊಳ್ಳುತ್ತಿರುವ ಒಟ್ಟು ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಶೇ 40ರಷ್ಟಿದೆ.

'ರಷ್ಯಾದಿಂದ ತೈಲ ಖರೀದಿ ಮುಂದುವರಿಯಲಿ'

ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಭಾರತ ಮುಂದುವರಿಸಬೇಕು ಮತ್ತು ಅಮೆರಿಕದ ಸುಂಕ ಹೇರಿಕೆ ಬೆದರಿಕೆಯನ್ನು ಎದುರಿಸಿ ನಿಲ್ಲಬೇಕು ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಹೇಳಿದೆ.

ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುವುದರಿಂದ ದೇಶದ ಹಣದುಬ್ಬರ ನಿರ್ವಹಿಸಲು ಮತ್ತು ಆರ್ಥಿಕ ಸ್ಥಿರತೆ ಕಾಪಾಡಿಕೊಳ್ಳಲು ಸಹಾಯವಾಗಿದೆ ಎಂದು ಜಿಟಿಆರ್‌ಐನ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಅವರು ಗುರುವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಗುರುವಾರ ಮಾತನಾಡಿದ ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರು, 'ಸಾಮಾನ್ಯವಾಗಿ ಹೊಸ ಪೂರೈಕೆದಾರ ದೇಶಗಳು ಕಚ್ಚಾ ತೈಲ ಮಾರುಕಟ್ಟೆಯನ್ನು ಪ್ರವೇಶಿಸುತ್ತಿವೆ. ಅಲ್ಲದೆ, ಬ್ರೆಜಿಲ್ ಹಾಗೂ ಕೆನಡಾದಂತಹ ಹಾಲಿ ಪೂರೈಕೆದಾರರಿಂದ ಖರೀದಿಯನ್ನು ಹೆಚ್ಚಿಸಬಹುದು' ಎಂದರು.

'ನಾನು ಯಾವುದೇ ಒತ್ತಡ ಎದುರಿಸುತ್ತಿಲ್ಲ. ಭಾರತವು ತೈಲ ಖರೀದಿಯ ಮೂಲಗಳನ್ನು ಹೆಚ್ಚು ಮಾಡಿಕೊಂಡಿದೆ. ಮೊದಲು 27 ದೇಶಗಳಿಂದ ಕಚ್ಚಾ ತೈಲ ಖರೀದಿಸಲಾಗುತ್ತಿತ್ತು, ಈಗ 40 ದೇಶಗಳಿಂದ ಖರೀದಿಸಲಾಗುತ್ತಿದೆ' ಎಂದು ಅವರು ಅಮೆರಿಕದ ಎಚ್ಚರಿಕೆ ಕುರಿತ ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಉಕ್ರೇನ್ ಜೊತೆ 50 ದಿನಗಳಲ್ಲಿ ಶಾಂತಿ ಒಪ್ಪಂದ ಮಾಡಿಕೊಳ್ಳಲು ರಷ್ಯಾ ವಿಫಲವಾದರೆ, ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಕೂಡ ಅಮೆರಿಕವು ನಿರ್ಬಂಧ ಹೇರಬಹುದು ಮತ್ತು ಆ ದೇಶಗಳ ಮೇಲೆ ಭಾರಿ ತೆರಿಗೆ ವಿಧಿಸಬಹುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಚೆಗೆ ಹೇಳಿದ್ದರು.

ಭಾರತದಲ್ಲಿಯೇ ತೈಲ ನಿಕ್ಷೇಪ ಇದೆಯೇ ಎಂಬುದರ ಹುಡುಕಾಟವನ್ನು ಹೆಚ್ಚು ಮಾಡಲಾಗಿದೆ ಎಂದು ಕೂಡ ಪುರಿ ತಿಳಿಸಿದರು.

ಚಿಟಿಕೆ ಸುದ್ದಿ

ವಿಪ್ರೊ: ಲಾಭ ಶೇ 9.8ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ನಾಲ್ಕನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ವಿಪ್ರೊ ಗುರುವಾರ ತನ್ನ ತ್ರೈಮಾಸಿಕ ಫಲಿತಾಂಶ ಪ್ರಕಟಿಸಿದ್ದು, ನಿವ್ವಳ ಲಾಭದ ಪ್ರಮಾಣವು ಶೇ 9.8ರಷ್ಟು ಹೆಚ್ಚಾಗಿದೆ.

ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹3,336 ಕೋಟಿ ಲಾಭ ಗಳಿಸಿದೆ. ಅಲ್ಲದೆ, ಕಂಪನಿಯ ಕಾರ್ಯಾಚರಣೆ ವರಮಾನ ಕೂಡ ತುಸು ಹೆಚ್ಚಾಗಿದ್ದು ₹22,134 ಕೋಟಿಗೆ ತಲುಪಿದೆ.

ಆದರೆ, ಮಾರ್ಚ್ ಕೊನೆಗೊಂಡ ತ್ರೈಮಾಸಿಕಕ್ಕೆ ಹೋಲಿಸಿದರೆ ಕಂಪನಿಯ ನಿವ್ವಳ ಲಾಭ ಮತ್ತು ವರಮಾನ ಕ್ರಮವಾಗಿ ಶೇ 7ರಷ್ಟು ಹಾಗೂ ಶೇ 1.6ರಷ್ಟು ಕಡಿಮೆ ಆಗಿದೆ.

ಕಂಪನಿಯು ತನ್ನ ಷೇರುದಾರರಿಗೆ ಮಧ್ಯಂತರ ಲಾಭಾಂಶದ ರೂಪದಲ್ಲಿ ಪ್ರತಿ ಷೇರಿಗೆ ₹5 ನೀಡಲಿದೆ. ಈ ಮೊತ್ತವು ಆಗಸ್ಟ್ 15ರಂದು ಅಥವಾ ಅದಕ್ಕೂ ಮೊದಲು ಪಾವತಿ ಆಗಲಿದೆ.

ಕಂಪನಿಯು ವರ್ಷಕ್ಕೆ ಎರಡು ಬಾರಿ ಲಾಭಾಂಶ ನೀಡಲು ಯತ್ನಿಸಲಿದೆ ಎಂದು ಮುಖ್ಯ ಹಣಕಾಸು ಅಧಿಕಾರಿ ಅಪರ್ಣಾ ಅಯ್ಯರ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 17-07-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಪಾಮ್ ವಾರದ ಡೆಲಿವರಿ	1188 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1275)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,900 (97,100)
ಬೆಳ್ಳಿ ಕೆ.ಜಿಗೆ	1,10,600 (1,11,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅದಾನಿ ವಿಲ್ಮರ್‌ನ ಶೇ 20ರಷ್ಟು ಷೇರು ಮಾರಾಟ

ನವದೆಹಲಿ (ಪಿಟಿಐ): ಅದಾನಿ ಸಮೂಹವು ತನ್ನ ಎಡಬ್ಲ್ಯುಎಲ್ ಅಗ್ರಿ ಬ್ಯುಸಿನೆಸ್ ಲಿಮಿಟೆಡ್‌ನಲ್ಲಿನ (ಅದಾನಿ ವಿಲ್ಮರ್ ಲಿಮಿಟೆಡ್) ಶೇ 20ರಷ್ಟು ಷೇರುಗಳನ್ನು ಸಿಂಗಪುರದ ವಿಲ್ಮರ್ ಇಂಟರ್‌ನ್ಯಾಷನಲ್‌ಗೆ ಮಾರಾಟ ಮಾಡಿದೆ.

ಅದಾನಿ ವಿಲ್ಮರ್‌ನಲ್ಲಿನ ತನ್ನ ಶೇ 44ರಷ್ಟು ಷೇರುಗಳನ್ನು ಮಾರಾಟ ಮಾಡಿ, ಮೂಲಸೌಕರ್ಯ ವ್ಯವಹಾರದತ್ತ ಗಮನ ನೀಡಲಾಗುವುದು ಎಂದು ಅದಾನಿ ಸಮೂಹವು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಘೋಷಿಸಿತ್ತು.

25.99 ಕೋಟಿ ಈಕ್ವಿಟಿ ಷೇರುಗಳನ್ನು ಪ್ರತಿ ಷೇರಿಗೆ ₹275ರಂತೆ ₹7,150 ಕೋಟಿಗೆ ಮಾರಾಟ ಮಾಡಲಾಗಿದೆ ಎಂದು ಅದಾನಿ ಸಮೂಹದ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಷೇರುಪೇಟೆಗೆ ತಿಳಿಸಿದೆ.

ಷೇರುಗಳನ್ನು ಮಾರಾಟ ಮಾಡುವ ಮೂಲಕ ಎಫ್‌ಎಂಸಿಜಿ ವ್ಯವಹಾರದಿಂದ ಹೊರಬರುವ ಆಲೋಚನೆಯನ್ನು ಅದಾನಿ ಸಮೂಹ ಹೊಂದಿದೆ. ಈ ಷೇರುಗಳ ಮಾರಾಟದಿಂದ ವಿಲ್ಮರ್ ಇಂಟರ್‌ನ್ಯಾಷನಲ್ ಷೇರಿನ ಪಾಲು ಶೇ 64ರಷ್ಟಾಗಿದೆ.


ಕರ್ನಾಟಕ ಕಾಫಿಗೆ ಬ್ರ್ಯಾಂಡ್ ಇನ್ನೂ ಚರ್ಚೆ ಹಂತದಲ್ಲಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕರ್ನಾಟಕದ ಕಾಫಿಯನ್ನು ಮೌಲ್ಯವರ್ಧನೆ ಮಾಡಿ ಬ್ರ್ಯಾಂಡ್ ರೂಪ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. 2023–24ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪವಾದ ಈ ವಿಷಯ ಚರ್ಚೆಯ ಹಂತದಲ್ಲಿದೆ.

ರಾಜ್ಯ ಸರ್ಕಾರ ಮೊದಲ ಬಾರಿಗೆ 2023–24ನೇ ಸಾಲಿನ ಬಜೆಟ್‌ನಲ್ಲಿ ಕಾಫಿ ಬ್ರ್ಯಾಂಡಿಂಗ್ ವಿಷಯ ಪ್ರಸ್ತಾಪಿಸಿತ್ತು. ಅನನ್ಯವಾದ ರುಚಿ ಮತ್ತು ಕಂಪನ್ನು ಹೊಂದಿರುವ ಚಿಕ್ಕಮಗಳೂರು, ಕೊಡಗು ಮತ್ತು ಬಾಬಾ ಬುಡನಗಿರಿಯ ಅರೇಬಿಕಾ ಕಾಫಿ ವೈವಿಧ್ಯವು ಜಿ.ಐ (ಜಿಯಾಗ್ರಫಿಕಲ್ ಇಂಡಿಕೇಷನ್) ಟ್ಯಾಗ್ ಹೊಂದಿವೆ. ರಾಜ್ಯದ ಕಾಫಿಯನ್ನು ಇನ್ನಷ್ಟು ಪ್ರಚಾರಪಡಿಸಿ ಜನಪ್ರಿಯಗೊಳಿಸಲು ಮತ್ತು ಕಾಫಿ ಎಕೊ ಟೂರಿಸಂ ಉತ್ತೇಜಿಸಲು ಕರ್ನಾಟಕದ ಕಾಫಿಗೆ ಬ್ರ್ಯಾಂಡಿಂಗ್ ಮಾಡಲಾಗುವುದು ಎಂದು ಹೇಳಿತ್ತು.

ಪಶ್ಚಿಮಘಟ್ಟ ಪ್ರದೇಶದಲ್ಲಿ ಬೆಳೆಯುವ ಕಾಫಿಗೆ ತನ್ನದೇ ಆದ ಸ್ವಾದವಿದೆ. ಯಂತ್ರಗಳ ಬಳಕೆ ಇಲ್ಲದೆ ಬಿಸಿಲಿನಲ್ಲೇ ಒಣಗಿಸಿ ಹದ ಮಾಡುವ ಪದ್ಧತಿಯನ್ನು ಬೆಳೆಗಾರರು ಇಂದಿಗೂ ಅನುಸರಿಸುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ಕರ್ನಾಟಕದ ಕಾಫಿಗೆ ಯುರೋಪಿಯನ್ ದೇಶಗಳಲ್ಲಿ ಬೇಡಿಕೆ ಇದೆ.



'ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ನೇತೃತ್ವದಲ್ಲಿ ಎರಡು ಸಭೆಗಳು ನಡೆದಿವೆ. ಕಾಫಿಗೆ ಯಾವ ರೀತಿಯ ಬ್ರ್ಯಾಂಡ್ ರೂಪ ನೀಡುವುದು ಎನ್ನುವದರ ಬಗ್ಗೆ ಇನಷ್ಟು ಚರ್ಚೆಗಳು ನಡೆಯಬೇಕಿದೆ. ಸರ್ಕಾರ ಕರೆದರೆ ಸಮಾಲೋಚನೆ ನಡೆಸಲು ಸಿದ್ಧರಿದ್ದೇವೆ' ಎಂದು ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವವೃಂದ ಹೇಳಿದರು.

'ಎರಡು ಸಭೆಗಳನ್ನು ಹಿರಿಯ ಅಧಿಕಾರಿಗಳು ನಡೆಸಿದ್ದಾರೆ. ವಿಯಟ್ನಾಂ ಕಾಫಿ, ಬ್ರೆಜಿಲ್ ಕಾಫಿ, ಕೊಲಂಬಿಯಾ ಕಾಫಿ ರೀತಿಯಲ್ಲಿ ಪ್ರಪಂಚದಲ್ಲಿ ಎಲ್ಲಿ ಹೋದರೂ ಸಿಗುವಂತೆ ಇಂಡಿಯಾ ಕಾಫಿ ಎಂಬ ಬ್ರ್ಯಾಂಡ್ ಮಾಡಬೇಕು ಎಂಬ ಆಲೋಚನೆ ಅಧಿಕಾರಿಗಳಲ್ಲಿ ಇದೆ. ಇನ್ನಷ್ಟು ಚರ್ಚೆಗಳು, ಸಮಾಲೋಚನೆಗಳು ನಡೆಯಬೇಕಿದೆ' ಎಂದು ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣ ಅಭಿಪ್ರಾಯಪಟ್ಟರು.



ಶೇಖ್ ಹಸೀನಾ ಅವರ ಬೆಂಬಲಿಗರು ಮತ್ತು ಪೊಲೀಸರ ನಡುವೆ ಘರ್ಷಣೆ ಸ್ಥಳ – ಎಪಿ ಚಿತ್ರ

ಹಸೀನಾ ಬೆಂಬಲಿಗರಿಂದ ಘರ್ಷಣೆ: 4 ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶದ ನ್ಯಾಷನಲ್ ಸಿಟಿಜನ್ ಪಾರ್ಟಿಯ (ಎಸಿಪಿ) ರ‍್ಯಾಲಿಯ ವೇಳೆ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಬೆಂಬಲಿಗರು ಪೊಲೀಸರೊಂದಿಗೆ ಘರ್ಷಣೆ ನಡೆಸಿದ್ದು, ನಾಲ್ವರು ಮೃತಪಟ್ಟಿದ್ದಾರೆ.

'ಗೋಪಾಲ್‌ಗಂಜ್‌ನಲ್ಲಿ ಬುಧವಾರ ಎನ್‌ಸಿಪಿ ರ‍್ಯಾಲಿ ನಡೆಸುತ್ತಿದ್ದಾಗ ಘರ್ಷಣೆ ನಡೆದಿದೆ. ಪ್ರಕರಣ ಸಂಬಂಧ 14 ಜನರನ್ನು ಬಂಧಿಸಲಾಗಿದೆ' ಎಂದು 'ಡೈಲಿ ಸ್ಟಾರ್' ಪತ್ರಿಕೆ ವರದಿ ಮಾಡಿದೆ. ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮುಜೀಬುರ್ ರೆಹಮಾನ್ ಅವರ ಊರಲ್ಲೇ ಈ ಘಟನೆ ನಡೆದಿದೆ.

ಬಾಂಗ್ಲಾದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಅವರ ಕಚೇರಿಯು, ಗೋಪಾಲ್‌ಗಂಜ್‌ನಲ್ಲಿ 22 ಗಂಟೆ ನಿಷೇಧಾಜ್ಞೆ ಜಾರಿಗೊಳಿಸಿದೆ.

ಭದ್ರತಾ ಪಡೆಗಳೊಂದಿಗಿನ ಘರ್ಷಣೆ ವೇಳೆ ಪ್ರತಿಭಟನಕಾರರು ಬಿದಿರಿನ ಕೋಲು ಮತ್ತು ಇಟ್ಟಿಗೆಗಳನ್ನು ಹಿಡಿದುಕೊಂಡಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ ಮತ್ತು ಮಾಧ್ಯಮಗಳು ವರದಿ ಮಾಡಿವೆ.

ಪೊಲೀಸರು ಮತ್ತು ಸ್ಥಳೀಯಾಡಳಿತದ ವಾಹನಗಳಿಗೆ ಪ್ರತಿಭಟನಕಾರರು ಹಾನಿ ಮಾಡಿದ್ದಾರೆ. ಎನ್‌ಸಿಪಿ ಬೆಂಗಾವಲು ಪಡೆಯ ಮೇಲೆ ದಾಳಿಗೆ ಯತ್ನಿಸಿದ್ದಾರೆ ಮತ್ತು ಭದ್ರತಾ ಪಡೆಗಳು ಗುಂಡಿನ ದಾಳಿ ನಡೆಸಲು ಪ್ರಚೋದಿಸಿದ್ದಾರೆ ಎಂದು ವರದಿ ತಿಳಿಸಿದೆ.

ಮುರಿದುಬಿದ್ದಿರುವ ವೇದಿಕೆ ಮತ್ತು ಹಾನಿಗೊಂಡಿರುವ ಧ್ವನಿವರ್ಧಕ ವ್ಯವಸ್ಥೆಯೊಂದಿಗೆ ಎನ್‌ಸಿಪಿ ರ‍್ಯಾಲಿಯನ್ನು ಮುಂದುವರಿಸಿತು.

ಜಾಫ್ನಾ: ಹೆಣ್ಣು ಮಗುವಿನ ಅಸ್ಥಿಪಂಜರ ಪತ್ತೆ

ಕೊಲಂಬೊ (ಪಿಟಿಐ): ಎಲ್‌ಟಿಟಿಇ ಮತ್ತು ಶ್ರೀಲಂಕಾ ಸೇನೆ ಮಧ್ಯೆ ನಡೆದ ಸುದೀರ್ಘ ಸಂಘರ್ಷದಲ್ಲಿ ಸಾವಿರಾರು ಮಂದಿ ಕಾಣೆಯಾಗಿದ್ದರು. ಚೆಮ್ಮಾನಿ ಎಂಬಲ್ಲಿ ಸಾಮೂಹಿಕವಾಗಿ ಹೆಣಗಳನ್ನು ಹೂತು ಹಾಕಲಾಗಿದೆ ಎಂದು 1998ರಲ್ಲಿ ಮೊದಲ ಬಾರಿಗೆ ಪತ್ತೆ ಮಾಡಲಾಗಿತ್ತು. ಈಗ ಇದೇ ಜಾಗದಲ್ಲಿ ನಾಲ್ಕು ಅಥವಾ ಐದು ವರ್ಷದ ಹೆಣ್ಣು ಮಗು ಸೇರಿ 65 ಮನುಷ್ಯರ ಅಸ್ಥಿಪಂಜರಗಳು ಪತ್ತೆಯಾಗಿವೆ.

ಚೆಮ್ಮಾನಿ ಎಂಬ ಜಾಗವು ಜಾಫ್ನಾ ಜಿಲ್ಲೆಯಲ್ಲಿದೆ. ಈ ಜಾಗದಲ್ಲಿ ಇತ್ತೀಚೆಗೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿತ್ತು. ಈ ವೇಳೆ ಕೆಲವು ಮನುಷ್ಯನ ಅಸ್ಥಿಪಂಜರಗಳು ಪತ್ತೆಯಾದವು. ಈ ಬಳಿಕ ನ್ಯಾಯಾಲಯವು, 'ಈ ಜಾಗದಲ್ಲಿ ಅಸ್ಥಿಪಂಜರಗಳನ್ನು ಹೊರತೆಗೆಯುವ ಕಾರ್ಯ ಆರಂಭಿಸಬೇಕು' ಎಂದು ಆದೇಶ ನೀಡಿತ್ತು.

'1999ರಲ್ಲಿ ಇಂಥದ್ದೆ ಕಾರ್ಯ ನಡೆಸಲಾಗಿತ್ತು. ಆ ವೇಳೆ 15 ಅಸ್ಥಿಪಂಜರಗಳು ದೊರೆತಿದ್ದವು. ಆ ಬಳಿಕ ಈ ಪ್ರಕರಣ ಸಂಬಂಧ ಯಾವುದೇ ಪ್ರಗತಿ ಆಗಿರಲಿಲ್ಲ. ಈಗ ಹೆಣ್ಣು ಮಗುವೊಂದರ ಅಸ್ಥಿಪಂಜರ ದೊರೆತಿದ್ದು, ಶಾಲಾ ಬ್ಯಾಗ್ ಮತ್ತು ಆಟಿಕೆಗಳೂ ದೊರೆತಿವೆ' ಎಂದು ವಕೀಲರೊಬ್ಬರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಭಾರತ–ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಮುಂದಿನ ವಾರ ಸಹಿ?

ನವದೆಹಲಿ (ಪಿಟಿಐ): ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಮುಂದಿನ ವಾರ ಸಹಿ ಬೀಳುವ ನಿರೀಕ್ಷೆ ಇದೆ ಎಂದು ಸರ್ಕಾರದ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಉಭಯ ರಾಷ್ಟ್ರಗಳ ನಡುವೆ ವ್ಯಾಪಾರ ಮತ್ತು ಹೂಡಿಕೆಯನ್ನು ಉತ್ತೇಜಿಸುವ ಗುರಿಯನ್ನು ಈ ಒಪ್ಪಂದ ಹೊಂದಿದೆ. ಮೇ 6ರಂದು ವ್ಯಾಪಾರ ಮಾತುಕತೆಗಳು ಪೂರ್ಣಗೊಂಡಿವೆ.

ಈ ಒಪ್ಪಂದದಿಂದ ಬ್ರಿಟನ್‌ನಲ್ಲಿ ಮಾರಾಟ ಆಗುವ ದೇಶದ ಚರ್ಮದ ಉತ್ಪನ್ನಗಳು, ಪಾದರಕ್ಷೆಗಳು ಮತ್ತು ಜವಳಿ ಉತ್ಪನ್ನಗಳ ಮೇಲಿನ ರಫ್ತು ಸುಂಕ ಕಡಿಮೆಯಾಗಲಿದೆ. ಬ್ರಿಟನ್‌ನಿಂದ ಆಮದು ಮಾಡಿಕೊಳ್ಳುವ ವಿಸ್ಕಿ, ಕಾರುಗಳು ಅಗ್ಗವಾಗಲಿವೆ.



ಈ ಒಪ್ಪಂದದಿಂದ ಉಭಯ ದೇಶಗಳ ನಡುವಿನ ವ್ಯಾಪಾರವು 2030ರ ವೇಳೆಗೆ ₹10.33 ಲಕ್ಷ ಕೋಟಿ (120 ಬಿಲಿಯನ್ ಡಾಲರ್) ಆಗಲಿದೆ ಎಂದು ಹೇಳಿದ್ದಾರೆ.

ಎಫ್‌ಟಿಎಗೆ ಸಹಿ ಬಿದ್ದರೆ, ಇದರ ಜಾರಿಗೆ ಬ್ರಿಟನ್ ಸಂಸತ್ತು ಮತ್ತು ಭಾರತದ ಸಚಿವ ಸಂಪುಟದ ಅನುಮೋದನೆ ಬೇಕಿರುತ್ತದೆ.

ಎಕ್ಸಿಸ್ ಬ್ಯಾಂಕ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಎಕ್ಸಿಸ್ ಬ್ಯಾಂಕ್‌ನ ಜೂನ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 4ರಷ್ಟು ಇಳಿಕೆ ಆಗಿದೆ. ಈ ತ್ರೈಮಾಸಿಕದಲ್ಲಿ ಬ್ಯಾಂಕ್ ₹5,806 ಕೋಟಿ ನಿವ್ವಳ ಲಾಭ ಗಳಿಸಿದೆ. ಎನ್‌ಪಿಎ ಪ್ರಮಾಣ ತುಸು ಹೆಚ್ಚಾಗಿದ್ದುದು ಲಾಭ ಇಳಿಕೆಗೆ ಕಾರಣ.

ಬ್ಯಾಂಕ್‌ನ ಒಟ್ಟು ವರಮಾನವು ಜೂನ್ ತ್ರೈಮಾಸಿಕದಲ್ಲಿ ₹38,322 ಕೋಟಿಗೆ ಏರಿಕೆ ಕಂಡಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ವರಮಾನವು ₹35,844 ಕೋಟಿ ಆಗಿತ್ತು.

ಬ್ಯಾಂಕ್ ನೀಡಿರುವ ಒಟ್ಟು ಸಾಲಕ್ಕೆ ಹೋಲಿಸಿದರೆ ಎನ್‌ಪಿಎ ಆಗಿರುವ ಸಾಲದ ಪ್ರಮಾಣವು ಶೇ 1.57ಕ್ಕೆ ಹೆಚ್ಚಳ ಕಂಡಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 1.54ರಷ್ಟು ಇತ್ತು. ನಿವ್ವಳ ಎನ್‌ಪಿಎ ಪ್ರಮಾಣವು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 0.34ರಷ್ಟು ಇದ್ದಿದ್ದು ಈ ಬಾರಿ ಶೇ 0.45ಕ್ಕೆ ಹೆಚ್ಚಳ ಆಗಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ			
ಚಾಲಿ	33699-42700	ಬೆಟ್ಟೆ	53069-57099	ಬೆಟ್ಟೆ	21000-37299
ಚಿಪ್ಪು	22509-32069	ಗೊರಬಲು	21599-30719	ಬಿಳಿಗೋಟು	19010-33599
ಕೋಕ	5811-25199	ರಾಶಿ	44009-57899	ಚಾಲಿ	35200-42513
ಹೊಸಚಾಲಿ	32510-42199	ಸರಕು	52000-90069	ಕೆಂಪುಗೋಟು	23599-24099
				ರಾಶಿ	43699-47099
ಸಾಗರ		**ಸಿದ್ದಾಪುರ**		**ಯಲ್ಲಾಪುರ**	
ಬಿಳಿಗೋಟು	8099-25399	ಬಿಳಿಗೋಟು	24809-32029	ಬಿಳಿಗೋಟು	20189-31231
ಚಾಲಿ	20999-36576	ಚಾಲಿ	34899-40599	ಚಾಲಿ	32709-41809
ಕೋಕ	6119-22666	ಕೋಕ	12800-17199	ಕೋಕ	8899-19499
ಕೆಂಪುಗೋಟು	11989-27500	ರಾಶಿ	42099-47099	ಕೆಂಪುಗೋಟು	18000-26099
ರಾಶಿ	26899-57009	ತಟ್ಟಿಬೆಟ್ಟೆ	26689-35099	ರಾಶಿ	41019-55299
ಸಿಪ್ಪೆಗೋಟು	6290-19069	**ಶಿರಸಿ**		ತಟ್ಟಿಬೆಟ್ಟೆ	31509-36965

ಜೊಹೊ: ಎಲ್‌ಎಲ್‌ಎಂ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ತಂತ್ರಜ್ಞಾನ ಕಂಪನಿ ಜೊಹೊ, ತನ್ನದೇ ಆದ ಭಾಷಾ ಮಾದರಿ ಜಿಯಾ ಎಲ್‌ಎಲ್‌ಎಂ ಬಿಡುಗಡೆ ಮಾಡಿದೆ.

ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುವ ಧ್ವನಿಯನ್ನು ಗುರುತಿಸಿ, ಅದನ್ನು ಅಕ್ಷರ ರೂಪಕ್ಕೆ ತರುವ ಸಾಮರ್ಥ್ಯವು ಈ ಮಾದರಿಗೆ ಇದೆ. ಇದು ಭಾರತ ಮತ್ತು ಯುರೋಪ್‌ನ ಇನ್ನಷ್ಟು ಭಾಷೆಗಳಲ್ಲಿ ಕೂಡ ಶೀಘ್ರದಲ್ಲೇ ಲಭ್ಯವಾಗಲಿದೆ ಎಂದು ಕಂಪನಿಯ ಸಿಇಒ ಮಣಿ ವೆಂಬು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಈ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಉದ್ಯೋಗ ಮತ್ತು ನೇಮಕಾತಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿದ್ದಾರೆ.

2024ರಲ್ಲಿ ಕಂಪನಿಯು ಶೇ 32ರಷ್ಟು ಬೆಳವಣಿಗೆ ಸಾಧಿಸಿದೆ. ಜಾಗತಿಕವಾಗಿ ಭಾರತವು ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. ಅಮೆರಿಕವು ಮೊದಲ ಸ್ಥಾನದಲ್ಲಿದೆ. ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು (ಐಟಿಇಎಸ್), ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳು, ವಿಮೆ, ತಯಾರಿಕೆ, ರಿಟೇಲ್ ಮತ್ತು ಶಿಕ್ಷಣ ಕ್ಷೇತ್ರದಿಂದ ಕಂಪನಿ ಹೆಚ್ಚಿನ ಪ್ರಗತಿ ದಾಖಲಿಸುತ್ತಿದೆ ಎಂದರು.

ಈ ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (ಎಲ್‌ಎಲ್‌ಎಂ) ಅನ್ನು ಕೆಲವು ನಿರ್ದಿಷ್ಟ ವ್ಯವಹಾರ ಉದ್ದೇಶಗಳಿಗೆ ಸಿದ್ಧಪಡಿಸಲಾಗಿದೆ. ಇದರ ವೆಚ್ಚವು ಕಡಿಮೆ ಎಂದು ಹೇಳಿದರು.

ಎನ್‌ವಿಡಿಯಾ ಕಂಪನಿಯ ಎ.ಐ ಕಂಪ್ಯೂಟಿಂಗ್ ಪ್ಲಾಟ್‌ಫಾರ್ಮ್ ಅನ್ನು ಬಳಸಿಕೊಳ್ಳುವ ಮೂಲಕ ತಮ್ಮದೇ ಆದ ಭಾಷಾ ಮಾದರಿಯನ್ನು ಸಂಪೂರ್ಣವಾಗಿ ಆಂತರಿಕವಾಗಿ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಪಾಕಿಸ್ತಾನ: ಭಾರಿ ಮಳೆಗೆ ಪಂಜಾಬ್‌ನಲ್ಲಿ 30 ಜನ ಸಾವು

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ 24 ಗಂಟೆಗಳಲ್ಲಿ 30 ಜನರು ಸಾವಿಗೀಡಾಗಿದ್ದಾರೆ. ಹೀಗಾಗಿ ಪ್ರಾಂತೀಯ ಸರ್ಕಾರವು ಹಲವೆಡೆ 'ಮಳೆ ತುರ್ತುಪರಿಸ್ಥಿತಿ'ಯನ್ನು ಘೋಷಿಸಿದೆ.

ದೇಶದಾದ್ಯಂತ ಮಳೆ ಸಂಬಂಧಿತ ಘಟನೆಗಳಲ್ಲಿ ಈವರೆಗೆ 170 ಜನರು ಮೃತಪಟ್ಟಿದ್ದಾರೆ. ಪಂಜಾಬ್‌ನ ಚಕ್ವಾಲ್ ಪ್ರದೇಶವು ಮಳೆಯಿಂದ ತೀವ್ರ ಹಾನಿಗೊಳಗಾಗಿದೆ. ಇಲ್ಲಿ 24 ಗಂಟೆಗಳಲ್ಲಿ 423 ಮಿ.ಮೀ. ಮಳೆಯಾಗಿದ್ದು, ಪ್ರವಾಹ ಉಂಟಾಗಿದೆ. 300ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಗುರುವಾರ ಮಾಹಿತಿ ನೀಡಿದರು.

ಚಕ್ವಾಲ್‌ನಲ್ಲಿ ಪ್ರವಾಹದಲ್ಲಿ ಸಿಲುಕಿರುವ ಜನರ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಪ್ರಾಂತೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಇನ್ನೂ ಹೆಚ್ಚಿನ ಪ್ರದೇಶಗಳಿಗೆ ಮಳೆ ಆವರಿಸುವ ಮುನ್ಸೂಚನೆ ಇದ್ದು, ಪಂಜಾಬ್ ಪ್ರಾಂತ್ಯದಾದ್ಯಂತ ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಇರಾಕ್ ಮಾಲ್‌ನಲ್ಲಿ ಬೆಂಕಿ ಅವಘಡ: 61 ಜನ ಸಾವು

ಬಾಗ್ದಾದ್ (ಎಪಿ): ಪೂರ್ವ ಇರಾಕ್‌ನ ವಸೀತ್ ಪ್ರಾಂತ್ಯದಲ್ಲಿ ನೂತನವಾಗಿ ತೆರೆದಿದ್ದ ಮಾಲ್ ಒಂದರದಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಘಟನೆಯಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ 61 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಬುಧವಾರ ಬೆಂಕಿ ಅಪಘಾತ ಸಂಭವಿಸಿದ್ದು, ಬಹುತೇಕ ಮಂದಿ ಹೊಗೆಯಿಂದ ಉಸಿರುಗಟ್ಟಿ ಮೃತಪಟ್ಟಿದ್ದಾರೆ. 14 ಮಂದಿಯ ಮೃತ ದೇಹ ಸಂಪೂರ್ಣ ಸುಟ್ಟು ಕರಕಲಾಗಿದ್ದು, ಅವರ ಗುರುತು ಪತ್ತೆಯಾಗಿಲ್ಲ ಎಂದು ಇರಾಕ್‌ನ ಆಂತರಿಕ ವ್ಯವಹಾರಗಳ ಸಚಿವಾಲಯ ಹೇಳಿದೆ.

5 ಅಂತಸ್ತಿನ ಮಾಲ್ ಕಟ್ಟಡ ಇದಾಗಿದ್ದು, ವಾರದ ಹಿಂದಷ್ಟೇ ಉದ್ಘಾಟನೆಗೊಂಡಿತ್ತು. ಮಾಲ್‌ನ ಒಳಗೆ ಸಿಲುಕಿದ್ದ 45 ಮಂದಿಯನ್ನು ರಕ್ಷಿಸಲಾಗಿದೆ. ಹಲವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿ ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ ಎಂದೂ ಹೇಳಿದ್ದಾರೆ.

ಬ್ರಿಟನ್: 16 ವರ್ಷಕ್ಕೆ ಮತದಾನದ ಹಕ್ಕು

ಲಂಡನ್ (ಎಪಿ): ಮುಂದಿನ ರಾಷ್ಟ್ರೀಯ ಚುನಾವಣೆಗೂ ಮುನ್ನ ಮತದಾನದ ವಯಸ್ಸನ್ನು 18ರಿಂದ 16ಕ್ಕೆ ಇಳಿಸಲಾಗುವುದು ಎಂದು ಬ್ರಿಟನ್ ಸರ್ಕಾರ ಗುರುವಾರ ಘೋಷಿಸಿದೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಭಾಗವಾಗಿ ಈ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅದು ಹೇಳಿದೆ.

2024ರಲ್ಲಿ ಬ್ರಿಟನ್ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸುವುದಕ್ಕೂ ಮುನ್ನ ಅಲ್ಲಿನ ಲೇಬರ್ ಪಕ್ಷವು ಮತದಾನದ ವಯಸ್ಸನ್ನು ಕಡಿಮೆಗೊಳಿಸುವುದಾಗಿ ಪ್ರತಿಜ್ಞೆ ಮಾಡಿತ್ತು.

ಈಗಾಗಲೇ ಸ್ಕಾಟ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಸ್ಥಳೀಯ ಮತ್ತು ಪ್ರಾದೇಶಿಕ ಚುನಾವಣೆಗಳಲ್ಲಿ 16 ಮತ್ತು 17 ವರ್ಷದವರಿಗೆ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಈಕ್ವೆಡಾರ್, ಆಸ್ಟ್ರಿಯಾ ಮತ್ತು ಬ್ರೆಜಿಲ್ ದೇಶಗಳಲ್ಲಿ 16 ವರ್ಷವಾದವರಿಗೆ ಮತದಾನದ ಹಕ್ಕು ನೀಡಲಾಗಿದೆ. ಈ ದೇಶಗಳ ಸಾಲಿಗೆ ಬ್ರಿಟನ್ ಸಹ ಸೇರಲಿದೆ.

ತ್ರಿಪಕ್ಷೀಯ ಸಹಕಾರ: ಚೀನಾ ಬೆಂಬಲ

ಬೀಜಿಂಗ್ (ಪಿಟಿಐ): 'ರಷ್ಯಾ – ಭಾರತ– ಚೀನಾ (ಆರ್‌ಐಸಿ) ತ್ರಿಪಕ್ಷೀಯ ಸಹಕಾರ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ರಷ್ಯಾ ಮುಂದಿಟ್ಟಿರುವ ಪ್ರಸ್ತಾವವನ್ನು ಚೀನಾ ಬೆಂಬಲಿಸಿದೆ' ಎಂದು ರಷ್ಯಾದ ನ್ಯೂಸ್ ಪೋರ್ಟಲ್ ಇಜ್ವೆಸ್ಟಿಯ ವರದಿ ಮಾಡಿದೆ.

'ಈ ತ್ರಿಪಕ್ಷೀಯ ಸಹಕಾರವು ಕೇವಲ ಮೂರು ದೇಶಗಳ ಹಿತಾಸಕ್ತಿ ಸಂರಕ್ಷಣೆಗೆ ಮಾತ್ರವಲ್ಲ, ಇದು ಇಡೀ ಜಗತ್ತಿನ ಮತ್ತು ಈ ವಲಯದ ಭದ್ರತೆ ಹಾಗೂ ಸ್ಥಿರತೆಯ ದೃಷ್ಟಿಯಿಂದಲೂ ಮಹತ್ವದ್ದು. ಈ ನಿಟ್ಟಿನಲ್ಲಿ ರಷ್ಯಾವು, ಚೀನಾ– ಭಾರತದೊಂದಿಗೆ ಮಾತುಕತೆ ನಡೆಸಲಿದ್ದು, 'ಆರ್‌ಐಸಿ' ಸಹಕಾರ ಪುನರಾರಂಭವನ್ನು ಎದುರು ನೋಡುತ್ತಿದೆ' ಎಂದು ರಷ್ಯಾದ ಸಹಾಯಕ ವಿದೇಶಾಂಗ ಸಚಿವ ಆ್ಯಂಡ್ರಿ ರುದೆನ್ಕೊ ಹೇಳಿದ್ದಾರೆ.

'ನಾವು ಭಾರತ ಮತ್ತು ಚೀನಾದ ನಿಯೋಗದೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ ಸಂದರ್ಭದಲ್ಲಿ 'ಆರ್‌ಐಸಿ' ನವೀಕರಣ ವಿಷಯ ಪ್ರಸ್ತಾಪವಾಗಿದೆ. ರಷ್ಯಾ ಕೂಡ ಈ ವಿಚಾರದಲ್ಲಿ ಪ್ರಾಮಾಣಿಕ ಆಸಕ್ತಿ ಹೊಂದಿದೆ. ನಾವು (ಆರ್‌ಐಸಿ) 'ಬ್ರಿಕ್ಸ್' ಸ್ಥಾಪಕ ದೇಶಗಳು ಎನ್ನುವುದರ ಜತೆಯಲ್ಲೇ, ಜಗತ್ತಿನ ಪ್ರಮುಖ ಪಾಲುದಾರ ದೇಶಗಳು ಎಂಬುದೂ ಗಮನೀಯ' ಎಂದು ಆ್ಯಂಡ್ರಿ ರುದೆನ್ಕೊ ಅಭಿಪ್ರಾಯಪಟ್ಟಿದ್ದಾರೆ.

'ಆರ್‌ಐಸಿ' ಸಹಕಾರವು ಒಂದು ಹಂತಕ್ಕೆ ಬಂದ ನಂತರ, ನಾವು 'ತ್ರಿಪಕ್ಷೀಯ ಸಹಕಾರ ವಿಧಾನ'ವೊಂದನ್ನು ರೂಪಿಸಲಿದ್ದೇವೆ' ಎಂದು ರುದೆನ್ಕೊ ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಚೀನಾದ ವಿದೇಶಾಂಗ ವ್ಯವಹಾರಗಳ ವಕ್ತಾರ ಲಿನ್ ಜಿಯಾನ್, 'ಭಾರತ–ಚೀನಾ– ರಷ್ಯಾ ಸಹಕಾರವು ಮೂರು ದೇಶಗಳ ಹಿತಾಸಕ್ತಿ ಸಂರಕ್ಷಣೆ ಮಾತ್ರವಲ್ಲ, 'ಈ ವಲಯದ ಮತ್ತು ಇಡೀ ವಿಶ್ವದ ಶಾಂತಿ, ಭದ್ರತೆ, ಸ್ಥಿರತೆ ಮತ್ತು ಪ್ರಗತಿಯನ್ನೂ ಎತ್ತಿ ಹಿಡಿಯಲಿದೆ' ಎಂದು ಹೇಳಿದ್ದಾರೆ.


ಇತ್ತೀಚೆಗೆ ಚೀನಾದಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಮತ್ತು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೋವ್ ತ್ರಿಪಕ್ಷೀಯ ಸಹಕಾರ ವೃದ್ಧಿಯ ಬಗ್ಗೆ ಚರ್ಚೆ ನಡೆಸಿದ್ದರು. ಇದರ ಬೆನ್ನಲ್ಲೇ ರಷ್ಯಾ 'ಆರ್‌ಐಸಿ' ಪುನಶ್ಚೇತನ ಪ್ರಸ್ತಾವದೊಂದಿಗೆ ಮುಂದೆ ಬಂದಿದೆ.

16 ವರ್ಷಗಳಿಂದ ಪ್ರತ್ಯೇಕ ವಾಸದಲ್ಲಿದ್ದ ದಂಪತಿ • ಜೀವನಾಂಶ ಹೆಚ್ಚಿಸಿದ ಕೋರ್ಟ್

ಸರಿಪಡಿಸಲಾಗದ ಬಿರುಕು: ವಿಚ್ಛೇದನ

ಪ್ರಜಾವಾಣಿ ವಾರ್ತೆ

ನವದೆಹಲಿ: 'ವೈವಾಹಿಕ ವ್ಯವಸ್ಥೆಯು ಘನತೆ, ಪರಸ್ಪರ ಗೌರವ ಮತ್ತು ಹಂಚಿಕೆಯ ಒಡನಾಟದಲ್ಲಿ ಬೇರೂರಿದೆ. ಆದರೆ ಈ ಮೂಲಭೂತ ಅಂಶಗಳು ಸರಿಪಡಿಸಲಾಗದಂತಹ ಸ್ಥಿತಿ ತಲುಪಿದಾಗ, ದಂಪತಿಯನ್ನು ಜೊತೆಯಲ್ಲಿರುವಂತೆ ಒತ್ತಾಯಿಸುವುದರಲ್ಲಿ ಯಾವುದೇ ಪ್ರಯೋಜನವಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಪತಿ– ಪತ್ನಿಯು 16 ವರ್ಷಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂಬುದನ್ನು ಗಮನಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, ಸಂವಿಧಾನದ 142ನೇ ವಿಧಿಯ ಅಡಿಯಲ್ಲಿನ ಅಧಿಕಾರ ಬಳಸಿ ಮೇಲ್ಮನವಿ ಅರ್ಜಿದಾರ ಪತಿಗೆ ವಿಚ್ಛೇದನ ಮಂಜೂರು ಮಾಡಿತು.

ದೀರ್ಘಕಾಲದಿಂದ ದೂರವಿರುವುದರ ಜತೆಗೆ ಈ ದಂಪತಿಯ ವೈವಾಹಿಕ ಜೀವನದಲ್ಲಿ ಸರಿಪಡಿಸಲಾಗದಷ್ಟು ಬಿರುಕು ಉಂಟಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

2023ರ ಅಮುತಾ ವರ್ಸಸ್ ಎ.ಆರ್. ಸುಬ್ರಮಣಿಯಂ ಪ್ರಕರಣವನ್ನು ಉಲ್ಲೇಖಿಸಿದ ಪೀಠ, 'ನಿರರ್ಥಕ ವಿವಾಹವನ್ನು ಮುಂದುವರಿಸಲು ಒತ್ತಾಯಿಸುವುದು ಮಾನಸಿಕ ಯಾತನೆ ಮತ್ತು ಸಾಮಾಜಿಕ ಹೊರೆಯನ್ನು ಶಾಶ್ವತಗೊಳಿಸುತ್ತದೆ' ಎಂದು ಹೇಳಿತು.

ಅರ್ಜಿದಾರರು ಮತ್ತು ಅವರ ಪತ್ನಿಗೆ ಹಿಂದೂ ವಿಧಿವಿಧಾನಗಳ ಪ್ರಕಾರ 2008ರ ಮೇ 7ರಂದು ವಿವಾಹವಾಗಿತ್ತು. 2009ರ ಮಾರ್ಚ್ 25ರಂದು ಮಗು ಜನಿಸಿತು. ಇಬ್ಬರ ನಡುವಿನ ವೈವಾಹಿಕ ಜೀವನದಲ್ಲಿ ಬಿರುಕು ಮೂಡಿದ ಪರಿಣಾಮ 2009ರಿಂದ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದರು. ಪತ್ನಿಯ ಆರೈಕೆಯಲ್ಲಿ ಮಗು ಉಳಿಯಿತು.

ವಿಚ್ಛೇದನ ಬಯಸಿ ಪತಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. 2017ರ ನವೆಂಬರ್ 23ರಂದು ನ್ಯಾಯಾಲಯವು ಪತಿಯ ಅರ್ಜಿಯನ್ನು ವಜಾಗೊಳಿಸಿತ್ತು. ಈ ಕುರಿತು ಪತಿ ದೆಹಲಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರು. ಆ ಅರ್ಜಿಯನ್ನು 2019ರ ಫೆಬ್ರುವರಿ 26ರಂದು ಹೈಕೋರ್ಟ್ ವಜಾಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಪತಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರು. ಪತಿ ಮತ್ತು ಅವರ ಕುಟುಂಬದ ವಿರುದ್ಧ ಕ್ರೌರ್ಯದ ಕುರಿತು ಸುಳ್ಳು ಪ್ರಕರಣ ದಾಖಲಿಸಿ ಹೋರಾಡಿದ ಸಂಗಾತಿಯ ಜತೆಗೆ ವೈವಾಹಿಕ ಜೀವನದ ಮುಂದುವರಿಸುವುದನ್ನು ನಿರೀಕ್ಷಿಸಲು ಆಗುವುದಿಲ್ಲ ಎಂದ ಪೀಠವು, ವಿಚ್ಛೇದನ ಮಂಜೂರು ಮಾಡಿತು.

ಜೀವನಾಂಶ ಹೆಚ್ಚಳ: ವಿಚ್ಛೇದನ ಪಡೆದ ವ್ಯಕ್ತಿ ಖಾಸಗಿ ಸಂಸ್ಥೆಯಲ್ಲಿ ಗುಮಾಸ್ತರಾಗಿದ್ದು, ಅವರ ಪ್ರತಿವಾದಿ ಗೃಹಿಣಿಯಾಗಿದ್ದಾರೆ. ಕೌಟುಂಬಿಕ ನ್ಯಾಯಾಲಯವು ಪತ್ನಿ ಮತ್ತು ಮಗುವಿಗೆ ಮಾಸಿಕ ಜೀವನಾಂಶವನ್ನು ₹ 7,500 ನಿಗದಿಪಡಿಸಿತ್ತು. ಸುಪ್ರೀಂ ಕೋರ್ಟ್ ಈ ಜೀವನಾಂಶವನ್ನು ತಿಂಗಳಿಗೆ ₹ 15,000ಕ್ಕೆ ಹೆಚ್ಚಿಸಿದೆ.

‘ಬಿಜೆಪಿಯ ಚುನಾವಣಾ ಕಳ್ಳತನ ವಿಭಾಗವೇ?’

ಚುನಾವಣಾ ಆಯೋಗದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ


ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ/ ಪಟ್ನಾ: ‘ಚುನಾವಣಾ ಆಯೋಗವು ಬಿಜೆಪಿಯ ‘ಚುನಾವಣೆ ಕಳ್ಳತನ ಮಾಡುವ ವಿಭಾಗ’ವಾಗಿ ಸಂಪೂರ್ಣವಾಗಿ ಬದಲಾಗಿದೆ’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಗುರುವಾರ ಪೋಸ್ಟ್ ಹಂಚಿಕೊಂಡಿದ್ದಾರೆ.

ಆಯೋಗವು ಬಿಹಾರದಲ್ಲಿ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಪತ್ರಕರ್ತ ಅಜಿತ್ ಅಂಜುಮ್ ಅವರು ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ವರದಿ ಪ್ರಸಾರ ಮಾಡಿದ್ದರು. ‘ಪರಿಷ್ಕರಣೆಗೆ ಜನರಿಗೆ ಮಾಹಿತಿ ದಾಖಲಿಸಿಕೊಳ್ಳಲು ಸಿದ್ಧಪಡಿಸಿದ್ದ ನಮೂನೆಗಳನ್ನು ಆಯೋಗದ ಬೂತ್ ಮಟ್ಟದ ಅಧಿಕಾರಿಗಳೇ ಭರ್ತಿ ಮಾಡುತ್ತಿದ್ದಾರೆ. ಮತದಾರರ ಪರವಾಗಿ ಈ ಅಧಿಕಾರಿಗಳೇ ಸಹಿ ಹಾಕುತ್ತಿದ್ದಾರೆ’ ಎಂದು ವರದಿ ಪ್ರಕಟಿಸಿದ್ದರು.

ಈ ವರದಿಗಾರಿಕೆಗಾಗಿ ಅಜಿತ್ ಅವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.


ರಾಹುಲ್

‘ಅಜಿತ್ ಅವರು ಕೋಮು ದ್ವೇಷ ಹರಡುತ್ತಿದ್ದಾರೆ’ ಎಂದೂ ಎಫ್‌ಐಆರ್ ನಲ್ಲಿ ಹೇಳಲಾಗಿದೆ. ಈ ಎಫ್‌ಐಆರ್ ಅನ್ನು ಹಂಚಿಕೊಂಡು, ರಾಹುಲ್ ಗಾಂಧಿ ಅವರು ಪೋಸ್ಟ್ ಮಾಡಿದ್ದಾರೆ.

‘ಪರಿಷ್ಕರಣೆ ಹೆಸರಿನಲ್ಲಿ ಬಿಹಾರದಲ್ಲಿ ಮತಗಳನ್ನು ಕಳ್ಳತನ ಮಾಡುವಾಗಲೇ ಚುನಾವಣಾ ಆಯೋಗವು ಸಿಕ್ಕಿಬಿದ್ದಿದೆ. ಮಾಡುತ್ತಿರುವುದು ಕಳ್ಳತನ; ಆದರೆ ಇದಕ್ಕೆ ಹೆಸರು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ. ಈ ಕಳ್ಳತನವನ್ನು ಬಯಲು ಮಾಡಿವರು ಪ್ರಕರಣ ಎದುರಿಸಬೇಕು! ಆಯೋಗವು ಈಗಲೂ ಚುನಾವಣಾ ಆಯೋಗವೇ ಆಗಿದೆಯೇ ಅಥವಾ ಅದು ಸಂಪೂರ್ಣವಾಗಿ ಬಿಜೆಪಿಯ ಚುನಾವಣೆ ಕಳ್ಳತನ ಮಾಡುವ ವಿಭಾಗವಾಗಿದೆಯೇ’ ಎಂದು ರಾಹುಲ್ ಪ್ರಶ್ನಿಸಿದ್ದಾರೆ.

ಅಜಿತ್ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಕ್ಕಾಗಿ ಪ್ರತಿರೋಧ ವ್ಯಕ್ತವಾಗುತ್ತಿದೆ. ದೆಹಲಿ ಪತ್ರಕರ್ತರ ಒಕ್ಕೂಟ, ಭಾರತೀಯ ಸಂಪಾದಕರ ಕೂಟ ಮತ್ತು ಭಾರತೀಯ ಪ್ರೆಸ್ ಕ್ಲಬ್ ಪ್ರಕರಣ ದಾಖಲು ಮಾಡಿರುವ ಕ್ರಮವನ್ನು ವಿರೋಧಿಸಿದ್ದಾವೆ.

ಬಿಹಾರ: 125 ಯೂನಿಟ್‌ವರೆಗೆ ಉಚಿತ ವಿದ್ಯುತ್

ಬಿಹಾರದಲ್ಲಿ ಪ್ರತಿ ತಿಂಗಳು 125 ಯೂನಿಟ್‌ವರೆಗೆ (ಗೃಹ ಬಳಕೆ) ಉಚಿತ ವಿದ್ಯುತ್ ಕೊಡುಗುವುದು ಮುಖ್ಯಮಂತ್ರಿ ನಿತೀಶ್ ಕುಮಾರ್ ಘೋಷಿಸಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ಜಾಲತಾಣದ ಮೂಲಕ ಈ ಜನಪ್ರಿಯ ಘೋಷಣೆ ಮಾಡಿರುವ ಅವರು, ‘ಆಗಸ್ಟ್ 1ರಿಂದಲೇ ಈ ಯೋಜನೆ ಜಾರಿಗೆ ಬರಲಿದೆ. ಅಂದರೆ, ಜುಲೈ ತಿಂಗಳ ಬಿಲ್‌ನಲ್ಲಿಯೂ 125 ಯೂನಿಟ್‌ವರೆಗಿನ ಗ್ರಾಹಕರು ವಿದ್ಯುತ್ ಶುಲ್ಕ ಪಾವತಿಸಬೇಕಾಗಿಲ್ಲ’ ಎಂದಿದ್ದಾರೆ.

ಈ ಯೋಜನೆಯಿಂದ ರಾಜ್ಯದ 1.67 ಕೋಟಿ ಕುಟುಂಬಗಳಿಗೆ ಪ್ರಯೋಜನವಾಗಲಿದೆ ಎಂದು ತಿಳಿಸಿದ್ದಾರೆ.


ನಿತೀಶ್

‘ಅಧಿಕಾರಕ್ಕೆ ಬಂದರೆ ರಾಜ್ಯದ ಜನರಿಗೆ ತಿಂಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುವುದು ಎಂದು ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಅವರ ಚುನಾವಣಾ ಭರವಸೆಯ ಬೆನ್ನಲ್ಲೇ, ನಿತೀಶ್ ಕುಮಾರ್ ಅವರ ಘೋಷಣೆ ಹೊರಬಿದ್ದಿದೆ.

ಉಚಿತ ವಿದ್ಯುತ್ ಘೋಷಣೆಯ ಬೆನ್ನಲ್ಲೇ, ‘ಬಿಹಾರದಲ್ಲಿ ಸೌರಶಕ್ತಿ ಸೇರಿದಂತೆ ಪರ್ಯಾಯ ಇಂಧನದ ಮೂಲಕ ಮುಂದಿನ ಮೂರು ವರ್ಷಗಳಲ್ಲಿ 10 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುವುದು’ ಎಂದು ಅವರು ಹೇಳಿದ್ದಾರೆ.

ಹದಗೆಟ್ಟ ಕಾನೂನು ಸುವ್ಯವಸ್ಥೆ: ಚಿರಾಗ್

ಕೇಂದ್ರ ಸಚಿವ, ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಅವರು ಗುರುವಾರ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿದರು.


ಚಿರಾಗ್

ಬಳಿಕ, ಬಿಹಾರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಎಕ್ಸ್‌ನಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿರುವ ಪಾಸ್ವಾನ್, ‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ತೀವ್ರ ಹದಗೆಟ್ಟಿದ್ದು, ಪ್ರತಿದಿನ ಕೊಲೆಗಳು ನಡೆಯುತ್ತಿವೆ. ಅಪರಾಧಿಗಳು ಕಾನೂನಿಗೆ ಸವಾಲೊಡ್ಡುತ್ತಿದ್ದಾರೆ’ ಎಂದಿದ್ದಾರೆ.

‘ಅಪರಾಧಿಗಳ ನೈತಿಕ ಸ್ಥೈರ್ಯ ಹೆಚ್ಚಿದೆ. ವಿಧಾನಸಭೆ ಚುನಾವಣೆಗೆ ಮುನ್ನ ಅಪರಾಧ ಕೃತ್ಯಗಳು ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಸಹಜ ಸ್ಥಿತಿಗೆ ತರಲು ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ’ ಎಂದು ಹೇಳಿದ್ದಾರೆ.

ಆಯೋಗದ ಹೇಳಿಕೆ ತಳ್ಳಿಹಾಕಿದ ತೇಜಸ್ವಿ

ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ ವೇಳೆ 35 ಲಕ್ಷ ಮತದಾರರು ನೋಂದಾಯಿತ ವಿಳಾಸದಲ್ಲಿ ಕಂಡುಬಂದಿಲ್ಲ ಎಂಬ ಚುನಾವಣಾ ಆಯೋಗದ ವಾದವನ್ನು ಆರ್‌ಜೆಡಿ ಪಕ್ಷದ ಮುಖಂಡ ತೇಜಸ್ವಿ ಯಾದವ್ ತಳ್ಳಿ ಹಾಕಿದ್ದಾರೆ.

‘ಆಯೋಗವು ಆಡಳಿತಾರೂಢ ಬಿಜೆಪಿ ಸರ್ಕಾರದ (ಪ್ರಕೋಷ್ಠ) ಅಂಗವಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ನಿರ್ದೇಶನದಂತೆ ಇಂತಹ ಪ್ರಚಾರಗಳನ್ನು ಮಾಡುತ್ತಿದೆ’ ಎಂದು ಆರೋಪಿಸಿದ್ದಾರೆ.

‘ಆಯೋಗವು ನಡೆಸುತ್ತಿರುವ ಇಂತಹ ಪ್ರಚಾರವು ಅತ್ಯಂತ ಅಪಾಯಕಾರಿಯಾಗಿದೆ ಎಂದರು.

ಹಲವು ಸ್ಥಳಗಳಲ್ಲಿ 5.76 ಲಕ್ಷ ಮತದಾರರ ನೋಂದಣಿ

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂದರ್ಭದಲ್ಲಿ ಇದುವರೆಗೆ, ಒಂದಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ಹೆಸರು ನೋಂದಣಿ ಮಾಡಿಕೊಂಡಿರುವ 5.76 ಲಕ್ಷ ಮತದಾರರನ್ನು ಗುರುತಿಸಲಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

‘ಪಟ್ಟಿಯಲ್ಲಿ ಇದ್ದ 7.90 ಕೋಟಿ ಮತದಾರರಲ್ಲಿ 12.55 ಲಕ್ಷ ಜನರು ಮೃತಪಟ್ಟಿರಬಹುದು. ಮತಗಟ್ಟೆ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸುಮಾರು 35.69 ಲಕ್ಷ ಮಂದಿ, ಅವರ ವಿಳಾಸದಲ್ಲಿ ಸಿಕ್ಕಿಲ್ಲ. 17.37 ಲಕ್ಷ ಮತದಾರರು ಬೇರೆಡೆಗೆ ಶಾಶ್ವತವಾಗಿ ಸ್ಥಳಾಂತರಗೊಂಡಿರಬಹುದು ಎಂದು ಆಯೋಗ ಅಂದಾಜಿಸಿದೆ.

‘ಎಸ್‌ಐಆರ್’ ಮುಂದುವರಿದಿರುವುದರಿಂದ ಈ ಅಂಕಿ ಅಂಶ ಬದಲಾಗಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. 6.60 ಕೋಟಿ ಮತದಾರರನ್ನು (ಶೇ 83.66) ಈಗಾಗಲೇ ಕರಡು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ಎಂದು ಆಯೋಗ ಇತ್ತೀಚೆಗೆ ಹೇಳಿತ್ತು. ರಾಜ್ಯದಿಂದ ತಾತ್ಕಾಲಿಕವಾಗಿ ಸ್ಥಳಾಂತರಗೊಂಡ ಮತದಾರರಿಗೆ, ಹೆಸರು ಸೇರ್ಪಡೆ ಮಾಡಲು ನಿಗದಿತ ನಮೂನೆ ಭರ್ತಿ ಮಾಡಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಆಯೋಗ ಹೇಳಿದೆ.

ಒಡಿಶಾ ಬಂದ್: ಜನಜೀವನ ಅಸ್ತವ್ಯಸ್ತ

ಭುವನೇಶ್ವರ (ಪಿಟಿಐ): ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನ್ಯಾಯ ಸಿಕ್ಕಿಲ್ಲ ಎಂದು ಆರೋಪಿಸಿ ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಒಡಿಶಾದಲ್ಲಿ ಕಾಂಗ್ರೆಸ್ ಮತ್ತು ಇತರ ಏಳು ವಿರೋಧ ಪಕ್ಷಗಳು ಗುರುವಾರ ಕರೆ ನೀಡಿದ್ದ ರಾಜ್ಯ ಬಂದ್‌ನಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಕಾಂಗ್ರೆಸ್, ಸಿಪಿಐ, ಸಿಪಿಎಂ, ಆರ್‌ಜೆಡಿ, ಎಸ್‌ಪಿ, ಸಿಪಿಐಎಂಎಲ್, ಫಾರ್ವರ್ಡ್ ಬ್ಲಾಕ್, ಎನ್‌ಸಿಪಿ ಸೇರಿ ಏಳು ಪಕ್ಷಗಳು ಬಂದ್‌ಗೆ ಕರೆ ನೀಡಿದ್ದವು.


ರಾಜಧಾನಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನಗಳನ್ನು ತಡೆಯಲಾಯಿತು. ಇದರಿಂದ ಸಾರ್ವಜನಿಕ ಸಾರಿಗೆ ಬಸ್ ಸೇರಿದಂತೆ ವಾಹನಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತು. ರೈಲು ಹಳಿಗಳ ಮೇಲೆ ಕುಳಿತು ಕಾರ್ಯಕರ್ತರು ಪ್ರತಿಭಟಿಸಿದರು. ಬಹುತೇಕ ಸ್ಥಳಗಳಲ್ಲಿ ಮಧ್ಯಾಹ್ನದವರೆಗೆ ರೈಲು ಸಂಚಾರ ವ್ಯತ್ಯಯವಾಗಿತ್ತು ಎಂದು ಪೂರ್ವ ಕರಾವಳಿ ರೈಲ್ವೆ ಅಧಿಕಾರಿಗಳು ತಿಳಿಸಿದರು.


ಭುವನೇಶ್ವರದಲ್ಲಿ ಗುರುವಾರ ಬಸ್‌ಗಳ ಸಂಚಾರ ಸ್ಥಗಿತಗೊಂಡಿತು ಪಿಟಿಐ ಚಿತ್ರ

8ನೇ ಬಾರಿಯೂ ಇಂದೋರ್ ಸ್ವಚ್ಛ ನಗರ

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಇಂದೋರ್ ನಗರವು ಸತತ ಎಂಟನೇ ವರ್ಷ ದೇಶದ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಗಳಿಸಿಕೊಂಡಿದೆ. ಕೇಂದ್ರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನಡೆಸಿದ 2024–25ನೇ ಸಾಲಿನ ‘ಸ್ವಚ್ಛ ಸರ್ವೇಕ್ಷಣಾ’ ಸಮೀಕ್ಷೆಯ ಫಲಿತಾಂಶವು ಗುರುವಾರ ಬಿಡುಗಡೆಯಾಗಿದೆ.

9ನೇ ಆವೃತ್ತಿಯಲ್ಲಿ ಸೂಪರ್ ಸ್ವಚ್ಛ ನಗರ ಲೀಗ್ ಎನ್ನುವ ಹೊಸ ಪರಿಕಲ್ಪನೆಯನ್ನು ಆರಂಭಿಸಲಾಗಿದೆ. ಇದರ ಅಡಿಯಲ್ಲಿಯೇ ಸ್ವಚ್ಛ ನಗರಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿವಿಧ ವಿಭಾಗಗಳಲ್ಲಿ ಒಟ್ಟು 78 ಪ್ರಶಸ್ತಿಗಳನ್ನು ವಿತರಿಸಿದರು.



14 ಕೋಟಿ
ಸಮೀಕ್ಷೆಯಲ್ಲಿ ಪಾಲ್ಗೊಂಡವರ ಸಂಖ್ಯೆ

4,500
ಸಮೀಕ್ಷೆ ನಡೆಸಿದ ನಗರಗಳ ಸಂಖ್ಯೆ

- ಇದೇ ಮೊದಲ ಬಾರಿಗೆ ಕಡಿಮೆ ಜನಸಂಖ್ಯೆಯ ನಗರಗಳನ್ನೂ ಪ್ರಶಸ್ತಿಗೆ ಪರಿಗಣಿಸಲಾಗಿದೆ
- ಪ್ಲಾಸ್ಟಿಕ್ ಬಳಕೆ ಕಡಿತ, ಪ್ಲಾಸ್ಟಿಕ್‌ನ ಮರುಬಳಕೆ, ಪ್ಲಾಸ್ಟಿಕ್ ಪುನರುತ್ಪತ್ತಿ: ಈ ವರ್ಷದ ಪರಿಕಲ್ಪನೆ (45 ದಿನಗಳವರೆಗೆ ನಗರಗಳ ಪ್ರತೀ ವಾರ್ಡ್ ಪರಿಶೀಲನೆ)

ಸೂಪರ್ ಸ್ವಚ್ಛ ನಗರ ಲೀಗ್

ಈ ಬಾರಿ ಸೂಪರ್ ಸ್ವಚ್ಛ ನಗರ ಲೀಗ್ ಅನ್ನು ಆರಂಭಿಸಲಾಗಿದೆ. ಈಗಾಗಲೇ ಸ್ವಚ್ಛ ನಗರಗಳ ಪಟ್ಟಿಯಲ್ಲಿರುವ ವಿವಿಧ ನಗರಗಳು ಮತ್ತೊಂದು ಹಂತದ ಸ್ವಚ್ಛತೆಯನ್ನು ತಲುಪುವುದಕ್ಕೆ ಉತ್ತೇಜಿಸಲು ಮತ್ತು ಇತರೆ ನಗರಗಳು ಈ ಲೀಗ್‌ನಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲು ಈ ಲೀಗ್ ಅನ್ನು ಆರಂಭಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿವಿಧ ಜನಸಂಖ್ಯಾ ವಿಭಾಗಗಳಲ್ಲಿನ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಕನಿಷ್ಠ ಒಮ್ಮೆಯಾದರೂ ಸ್ಥಾನಗಳಿಸಿದ್ದರೆ ಲೀಗ್‌ನಲ್ಲಿ ಭಾಗವಹಿಸಬಹುದಾಗಿದೆ.

‘ಅದು ರೇ ಪೂರ್ವಜರ ಬಂಗಲೆಯಲ್ಲ’

ಢಾಕಾ (ಪಿಟಿಐ): ‘ನೆಲಸಮ ಮಾಡಲಾಗುತ್ತಿರುವ ಮೈಮೆನ್‌ಶಿಂಘೋ ಜಿಲ್ಲೆಯಲ್ಲಿರುವ ಬಂಗಲೆಗೂ ಚಿತ್ರ ನಿರ್ದೇಶಕ ಸತ್ಯಜಿತ್ ರೇ ಅವರ ಪೂರ್ವಜರ ಬಂಗಲೆಗೂ ಸಂಬಂಧವಿಲ್ಲ. ಈ ಬಗ್ಗೆ ಪುರಾತತ್ವ ಇಲಾಖೆಯಲ್ಲಿಯೂ ವಿಚಾರಿಸಲಾಗಿದೆ’ ಎಂದು ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯ ಹೇಳಿದೆ.

‘ಹರಿಕಿಶೋರ್ ರೇ ರಸ್ತೆ’ಯಲ್ಲಿ ಸತ್ಯಜಿತ್ ರೇ ಅವರ ಪೂರ್ವಜರ ಬಂಗಲೆ ಇತ್ತು. ಆದರೆ, ಅವರು ಇದನ್ನು ಬಹಳ ಹಿಂದೆಯೇ ಮಾರಾಟ ಮಾಡಿದ್ದಾರೆ. ಈ ಬಂಗಲೆ ಖರೀದಿಸಿದ ವ್ಯಕ್ತಿಯು ಇಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿದ್ದರು. ಈಗ ಈ ಕಟ್ಟಡವನ್ನೇ ನೆಲಸಮ ಮಾಡಲಾಗುತ್ತಿದೆ’ ಎಂದಿದೆ.

ವಾದ್ರಾ ವಿರುದ್ಧ ಆರೋಪಪಟ್ಟಿ

ಒಂದನೇ ಪುಟದಿಂದ...

‘ಸ್ಕೈಲೈಟ್ ಹಾಸ್ಪಿಟಾಲಿಟಿ ಲಿಮಿಟೆಡ್’, ಸತ್ಯಾನಂದ ಯಾಜೀ ಮತ್ತು ಕೇವಲ್ ಸಿಂಗ್ ವಿರ್ಕ್ ಅವರ ಕಂಪನಿಯಾದ ‘ಓಂಕಾರೇಶ್ವರ ಪ್ರಾಪರ್ಟೀಸ್ ಲಿಮಿಟೆಡ್’ ಸೇರಿ 11 ಸಂಸ್ಥೆಗಳನ್ನು ಆರೋಪಿಗಳೆಂದು ಹೆಸರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ತನಿಖೆಯ ಭಾಗವಾಗಿ ಇ.ಡಿ ಏಪ್ರಿಲ್‌ನಲ್ಲಿ ಸತತ ಮೂರು ದಿನ ವಾದ್ರಾ ಅವರನ್ನು ವಿಚಾರಣೆಗೆ ಒಳಪಡಿಸಿತ್ತು. ಜಾರಿ ನಿರ್ದೇಶನಾಲಯದ ಆರೋಪಗಳನ್ನು ವಾದ್ರಾ ಅವರು ಹಿಂದಿನಿಂದಲೂ ‘ರಾಜಕೀಯಪ್ರೇರಿತ’ ಕ್ರಮ ಎಂದು ನಿರಾಕರಿಸಿಕೊಂಡು ಬಂದಿದ್ದಾರೆ.

ಪ್ರಕರಣದ ವಿವರ: ರಾಬರ್ಟ್ ವಾದ್ರಾ ಅವರು ತಮ್ಮ ‘ಸ್ಕೈಲೈಟ್ ಹಾಸ್ಪಿಟಾಲಿಟಿ ಲಿಮಿಟೆಡ್’ ಮೂಲಕ ‘ಓಂಕಾರೇಶ್ವರ ಪ್ರಾಪರ್ಟೀಸ್ ಲಿಮಿಟೆಡ್’ನಿಂದ 2008ರ ಫೆಬ್ರುವರಿ 12ರಂದು ಗುರುಗ್ರಾಮ ಬಳಿಯ ಶಿಕೋಹಪುರದಲ್ಲಿ 3.53 ಎಕರೆ ಜಮೀನನ್ನು ನಕಲಿ ಘೋಷಣಾ ಪ್ರಮಾಣ ಪತ್ರದ ಮೂಲಕ ₹7.5 ಕೋಟಿಗೆ ಖರೀದಿಸಿದ್ದರು. ವಾದ್ರಾ ಅವರು ತಮ್ಮ ವೈಯಕ್ತಿಕ ಪ್ರಭಾವ ಬಳಸಿ ಈ ಜಮೀನಿಗೆ ವಾಣಿಜ್ಯ ಪರವಾನಗಿಯನ್ನೂ ಪಡೆದುಕೊಂಡಿದ್ದರು. ಆ ಬಳಿಕ 2012ರಲ್ಲಿ ಈ ಜಮೀನನ್ನು ಡಿಎಲ್‌ಎಫ್ ರಿಯಾಲಿಟಿ ಸಂಸ್ಥೆಗೆ ₹58 ಕೋಟಿಗೆ ಮಾರಾಟ ಮಾಡಿದ್ದರು ಎಂಬ ಆರೋಪವಿದೆ. ಈ ಸಂಬಂಧ ಗುರುಗ್ರಾಮ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಲ್ಲದೆ ಬ್ರಿಟನ್ ಮೂಲದ ಶಸ್ತ್ರಾಸ್ತ್ರ ಸಲಹೆಗಾರ ಸಂಜಯ್ ಭಂಡಾರಿಗೆ ಸಂಬಂಧಿಸಿದ ಎರಡು ಹಣ ಅಕ್ರಮ ವರ್ಗಾವಣೆ ಪ್ರಕರಣಗಳು ಮತ್ತು ರಾಜಸ್ಥಾನದ ಬಿಕಾನೇರ್ ಭೂ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿಯೂ ವಾದ್ರಾ ವಿರುದ್ಧ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ.

ನ್ಯಾಟೊ ಮುಖ್ಯಸ್ಥರಿಗೆ ಕೇಂದ್ರದ ತಿರುಗೇಟು

ನವದೆಹಲಿ (ಪಿಟಿಐ): ಭಾರತವು ರಷ್ಯಾದ ಜೊತೆ ವಾಣಿಜ್ಯ ಸಂಬಂಧವನ್ನು ಮುಂದುವರಿಸಿದರೆ, ಆರ್ಥಿಕ ನಿರ್ಬಂಧ ಹೇರಬೇಕಾದೀತು ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರು ಹೇಳಿರುವುದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸರ್ಕಾರವು, ‘ಇಬ್ಬಂದಿತನ ಹೊಂದಿರಬಾರದು’ ಎಂದು ಎಚ್ಚರಿಸಿದೆ.

‘ನಾವು ಈ ವಿಚಾರವಾಗಿ ಬಂದಿರುವ ವರದಿಗಳನ್ನು ಗಮನಿಸಿದ್ದೇವೆ. ಬೆಳವಣಿಗೆಗಳನ್ನು ಅವಲೋಕಿಸುತ್ತಿದ್ದೇವೆ. ನಮ್ಮ ದೇಶದವರ ಇಂಧನ ಅಗತ್ಯಗಳನ್ನು ಪೂರೈಸುವುದು ನಮ್ಮ ಪಾಲಿಗೆ ಹೆಚ್ಚಿನ ಆದ್ಯತೆಯ ಸಂಗತಿ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

‘ಈ ಪ್ರಯತ್ನದಲ್ಲಿ ನಾವು ಮಾರುಕಟ್ಟೆಯಲ್ಲಿ ಲಭ್ಯವಿರುವ ಆಧಾರದಲ್ಲಿ ಹಾಗೂ ಜಾಗತಿಕ ಸನ್ನಿವೇಶಗಳ ಆಧಾರದಲ್ಲಿ ಮುನ್ನಡೆಯುತ್ತೇವೆ. ಈ ವಿಚಾರದಲ್ಲಿ ಇಬ್ಬಂದಿತನ ಪ್ರದರ್ಶಿಸಬಾರದು ಎಂದು ಎಚ್ಚರಿಸುತ್ತೇವೆ’ ಎಂದಿದ್ದಾರೆ.

‘ದೇಶಿ ಬಾಹ್ಯಾಕಾಶ ನೌಕೆಯಲ್ಲಿ ಮುಂದಿನ ಗಗನಯಾನಿಯ ಪಯಣ’

ನವದೆಹಲಿ (ಪಿಟಿಐ): ‘ಭಾರತದ ಮುಂದಿನ ಗಗನಯಾನಿ ದೇಶಿಯವಾಗಿ ನಿರ್ಮಿಸಿದ ಬಾಹ್ಯಾಕಾಶ ನೌಕೆಯಲ್ಲೇ ಪ್ರಯಾಣಿಸಲಿದ್ದಾರೆ’ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

‘ಆ್ಯಕ್ಸಿಯಂ–4ನ ಭಾಗವಾಗಿ ಶುಭಾಂಶು ಶುಕ್ಲಾ ಅವರು ಮೂರು ವಾರಗಳ ಕಾಲ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಪಡೆದ ಅನುಭವಗಳು ಭಾರತದ ಭವಿಷ್ಯದ ಯೋಜನೆಗೆ ಮಾರ್ಗದರ್ಶನ ಒದಗಿಸಲಿದೆ’ ಎಂದು ತಿಳಿಸಿದ್ದಾರೆ.

‘ಶುಕ್ಲಾ ಅವರು ಕೈಗೊಂಡಿದ್ದ ಬಾಹ್ಯಾಕಾಶಯಾನ ವಾಣಿಜ್ಯ ಉದ್ದೇಶವಾಗಿದ್ದು, ವೈಜ್ಞಾನಿಕ ಕೊಡುಗೆ ಕಡಿಮೆ ಎಂದು ಕೆಲವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಆದರೆ, ಆ್ಯಕ್ಸಿಯಂ –4 ಯೋಜನೆಗಾಗಿ ಇಸ್ರೊ ₹550 ಕೋಟಿ ಪಾವತಿಸಿದೆ. ಇದು ಶುಕ್ಲಾ ಅವರಿಗೆ ಕೆಲವು ತಿಂಗಳವರೆಗೆ ನೀಡಿದ ತರಬೇತಿಯನ್ನೂ ಒಳಗೊಂಡಿದೆ’ ಎಂದೂ ಸಚಿವರು ಸ್ಪಷ್ಟನೆ ನೀಡಿದ್ದಾರೆ. ‘ಭವಿಷ್ಯದಲ್ಲಿ ಭಾರತ ಕೈಗೊಳ್ಳಲಿರುವ ಬಾಹ್ಯಾಕಾಶ ಯೋಜನೆಯು ಸಂಪೂರ್ಣ ದೇಶಿಮಯವಾಗಿರಲಿದೆ’ ಎಂದಿದ್ದಾರೆ.

‘2035ರ ವೇಳೆಗೆ ಭಾರತ ತನ್ನದೇ ಸ್ವಂತ ಬಾಹ್ಯಾಕಾಶ ನಿಲ್ದಾಣ ಹೊಂದಲು ಸಾಧ್ಯವಾಗಲಿದೆ. ಅದಕ್ಕೆ ‘ಭಾರತ್ ಸ್ಪೇಸ್ ಸ್ಟೇಷನ್’ ಎಂದು ಹೆಸರಿಡಲು ನಿರ್ಧರಿಸಿದ್ದೇವೆ. ಕಾರ್ಯಾಚರಣೆ ಆರಂಭವಾದ ಬಳಿಕ ವಿದೇಶಿ ಪ್ರಯೋಗಗಳಿಗೂ ಅವಕಾಶ ನೀಡಲಾಗುವುದು’ ಎಂದು ಮಾಹಿತಿ ನೀಡಿದ್ದಾರೆ.


ಶುಭಾಂಶು ಶುಕ್ಲಾ ಅವರು ಅಮೆರಿಕದ ಹ್ಯೂಸ್ಟನ್‌ನಲ್ಲಿ ಪತ್ನಿ ಕಾಮ್ನಾ ಅವರನ್ನು ಆಲಂಗಿಸಿ ಸಂತಸ ಹಂಚಿಕೊಂಡರು

ಅಲ್ಲದೇ, ‘ಚಂದ್ರಯಾನ–3ರ ಯಶಸ್ಸು, ಶುಕ್ಲಾ ಅವರ ಬಾಹ್ಯಾಕಾಶ ಪಯಣ ಮತ್ತು ಭಾರತ ದೇಶಿಯವಾಗಿ ಕೈಗೊಳ್ಳುತ್ತಿರುವ ಪ್ರಯೋಗಗಳು ಸವಾಲುಗಳನ್ನು ಎದುರಿಸಲು ಭಾರತ ಸಜ್ಜಾಗಿದೆ ಎಂಬ ಸ್ಪಷ್ಟ ಸಂದೇಶವನ್ನು ಇಡೀ ಜಗತ್ತಿಗೆ ನೀಡಿದೆ’ ಎಂದೂ ಜಿತೇಂದ್ರ ಸಿಂಗ್ ಪ್ರತಿಪಾದಿಸಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ರಸೆಲ್ ನಿವೃತ್ತಿ ಘೋಷಣೆ

ಕಿಂಗ್‌ಸ್ಟನ್ (ಪಿಟಿಐ): ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಹಿರಿಯ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ 15 ವರ್ಷಗಳ ವೃತ್ತಿ ಜೀವನಕ್ಕೆ ವಿದಾಯ ಘೋಷಿಸಿದ್ದಾರೆ.

ಇದೇ 22ರಂದು ಆಸ್ಟ್ರೇಲಿಯಾ ವಿರುದ್ಧ ನಡೆಯಲಿರುವ ಎರಡನೇ ಟಿ20 ಪಂದ್ಯದ ಮೂಲಕ 37 ವರ್ಷದ ರಸೆಲ್ ಅಂತರರಾಷ್ಟ್ರೀಯ ಕ್ರಿಕೆಟ್ ಬದುಕಿಗೆ ತೆರೆ ಎಳೆಯಲಿದ್ದಾರೆ.

ಟಿ20 ಮಾದರಿಯಲ್ಲೇ ಹೆಚ್ಚು ಯಶಸ್ಸು ಗಳಿಸಿರುವ ರಸೆಲ್, ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ 2026ರಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಕೇವಲ ಏಳು ತಿಂಗಳು ಇರುವಂತೆ ಈ ನಿರ್ಧಾರ ಪ್ರಕಟಿಸಿದ್ದಾರೆ.

2012 ಮತ್ತು 2016ರಲ್ಲಿ ಟಿ20 ವಿಶ್ವಕಪ್ ಗೆದ್ದ ವೆಸ್ಟ್ ಇಂಡೀಸ್ ತಂಡದ ಭಾಗವಾಗಿದ್ದ ಅವರು ಮೂರು ಮಾದರಿಗಳಲ್ಲಿ ಒಟ್ಟು 141 ಪಂದ್ಯಗಳನ್ನು ಆಡಿದ್ದಾರೆ. 2019ರ ಬಳಿಕ ಕೇವಲ ಟಿ20 ಮಾದರಿಯಲ್ಲಿ ವಿಂಡೀಸ್ ತಂಡವನ್ನು ಪ್ರತಿನಿಧಿಸಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆ್ಯಂಡ್ರೆ ರಸೆಲ್ ಸಾಧನೆ

ಮಾದರಿ	ಪಂದ್ಯ	ರನ್	ಗರಿಷ್ಠ	ಅರ್ಧಶತಕ	ವಿಕೆಟ್	ಶ್ರೇಷ್ಠ
ಟಿ20	84	1078	71	3	61	19ಕ್ಕೆ 3
ಏಕದಿನ	56	1034	92	4	70	35ಕ್ಕೆ4
ಟೆಸ್ಟ್	1	2	2	0	1	73ಕ್ಕೆ1


ಆ್ಯಂಡ್ರೆ ರಸೆಲ್

ರಸೆಲ್ ಅವರನ್ನು ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಸರಣಿಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ತಮ್ಮ ತವರು ಜಮೈಕಾದ ಸಬೀನಾ ಪಾರ್ಕ್‌ನ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಎರಡು ಪಂದ್ಯಗಳ ಬಳಿಕ ಅವರು ವಿದಾಯ ಹೇಳಲಿದ್ದಾರೆ.

‘ನಿವೃತ್ತಿಯ ಅರ್ಥವನ್ನು ಪದಗಳಲ್ಲಿ ವಿವರಿಸಲು ಅಸಾಧ್ಯ. ವೆಸ್ಟ್ ಇಂಡೀಸ್ ತಂಡವನ್ನು ಪ್ರತಿನಿಧಿಸಿದ್ದು ಜೀವನದ ಹೆಮ್ಮೆಯ ಕ್ಷಣಗಳು’ ಎಂದು ರಸೆಲ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

17 ವರ್ಷಗಳ ಫುಟ್‌ಬಾಲ್ ವೃತ್ತಿಬದುಕಿಗೆ ಅದಿತಿ ವಿದಾಯ

ನವದೆಹಲಿ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡದ ಅನುಭವಿ ಗೋಲ್‌ಕೀಪರ್ ಅದಿತಿ ಚೌಹಾಣ್ ಅವರು 17 ವರ್ಷಗಳ ಅಂತರರಾಷ್ಟ್ರೀಯ ವೃತ್ತಿಬದುಕಿಗೆ ನಿವೃತ್ತಿ ಘೋಷಿಸಿದ್ದಾರೆ.

ಯುರೋಪ್‌ನಲ್ಲಿ ವೃತ್ತಿಪರ ಫುಟ್‌ಬಾಲ್ ಆಡಿದ ಭಾರತದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ 32 ವರ್ಷದ ಚೌಹಾಣ್, ಈಗ ಮೈದಾನದಿಂದ ಹೊರಗೆ ಕೆಲಸ ಮಾಡಲು ಮತ್ತು ತಂಡದಲ್ಲಿ ಮುಂದಿನ ಪೀಳಿಗೆಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಂಡಿದ್ದಾರೆ.

ತಮಿಳುನಾಡಿನ ಈ ಆಟಗಾರ್ತಿ 2011ರಿಂದ 2023ರವರೆಗೆ 57 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. 2008ರಿಂದ 2012ರವರೆಗೆ 19 ವರ್ಷದೊಳಗಿನ ಭಾರತ ತಂಡದಲ್ಲಿ ನಾಲ್ಕು ಪಂದ್ಯಗಳನ್ನು ಆಡಿದ್ದಾರೆ.


ಅದಿತಿ ಚೌಹಾಣ್ –ಎಕ್ಸ್ ಚಿತ್ರ

ಅವರು 2012, 2016 ಮತ್ತು 2019ರಲ್ಲಿ ಸ್ಯಾಫ್ ಮಹಿಳಾ ಚಾಂಪಿಯನ್‌ಷಿಪ್ ಗೆದ್ದ ಭಾರತ ತಂಡದ ಭಾಗವಾಗಿದ್ದರು. ಇಂಗ್ಲೆಂಡ್‌ನಲ್ಲಿ ನಡೆದ ಮಹಿಳಾ ಸೂಪರ್ ಲೀಗ್‌ಗಾಗಿ ವೆಸ್ಟ್ ಹ್ಯಾಮ್ ಯುನೈಟೆಡ್ ತಂಡಕ್ಕೆ ಎರಡು ಋತುವಿನಲ್ಲಿ ಆಡಿದ್ದರು.

ಅರ್ಜುನ್ –ವಿಜಯ ಜೋಡಿ ಸೆಮಿಗೆ

ನವದೆಹಲಿ (ಪಿಟಿಐ): ಭಾರತದ ಅರ್ಜುನ್ ಕಾಡೆ ಮತ್ತು ವಿಜಯ ಸುಂದರ್ ಪ್ರಶಾಂತ್ ಜೋಡಿ ನೇರ ಸೆಟ್‌ಗಳಿಂದ ಎರಡನೇ ಶ್ರೇಯಾಂಕದ ಜರ್ಮನಿಯ ಜೋಡಿಯನ್ನು ಹೊರದೂಡಿ, ಸ್ವಿಜರ್ಲೆಂಡ್‌ನ ಸ್ಟಾದ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಟೂರ್ನಿಯ ಸೆಮಿಫೈನಲ್‌ಗೆ ಮುನ್ನಡೆದರು.

ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 6-3, 7-6 (5) ರಿಂದ ಜಾಕೊಬ್ ಸ್ಲೇಟರ್– ಮಾರ್ಕ್ ವಾಲ್ನರ್ ಜೋಡಿಯನ್ನು ಸೋಲಿಸಿತು. ಈ ಎಟಿಪಿ 250 ಮಟ್ಟದ ಟೂರ್ನಿ ಒಟ್ಟು ₹6 ಕೋಟಿ ಬಹುಮಾನ ಹೊಂದಿದೆ.

ಅರ್ಜುನ್ ಈ ಹಿಂದೆ ಒಂದು ಎಟಿಪಿ ಪ್ರಶಸ್ತಿ ಗೆದ್ದಿದ್ದಾರೆ. ರಿತ್ವಿಕ್ ಬೊಲ್ಲಿಪಳ್ಳೀ ಜೊತೆಗೂಡಿ ಅಲ್ಮಾಟಿ ಎಟಿಪಿ 250 ಟೂರ್ನಿಯಲ್ಲಿ ವಿಜೇತರಾಗಿದ್ದರು.

ತಾಯಿ ಹಾಲು ವಂಚಿತ ಮಕ್ಕಳಿಗೆ 'ಆಸರೆ'

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಎದೆಹಾಲು ಸಂಸ್ಕರಣಾ ಕೇಂದ್ರ

• ವರುಣ ಹೆಗಡೆ

ಬೆಂಗಳೂರು: ಅಗತ್ಯ ಪ್ರಮಾಣದಲ್ಲಿ ಎದೆ ಹಾಲು ಸಿಗದ, ಅಸ್ವಸ್ಥಗೊಂಡ ರೋಗ ಪೀಡಿತ ಮಕ್ಕಳಿಗೆ ಇಲ್ಲಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 'ಆಸರೆ' ಎದೆಹಾಲು ಸಂಸ್ಕರಣಾ ಕೇಂದ್ರ ನೆರವಾಗುತ್ತಿದ್ದು, ಈ ಕೇಂದ್ರದಲ್ಲಿ ಎದೆ ಹಾಲಿಗೆ ಭಾರಿ ಬೇಡಿಕೆ ಉಂಟಾಗಿದೆ.

ಈ ಸ್ವಾಯತ್ತ ಸಂಸ್ಥೆಯು ಮಕ್ಕಳ ಚಿಕಿತ್ಸೆಗೆ ಹೆಸರಾಗಿದ್ದು, ರಾಜ್ಯದ ವಿವಿಧೆಡೆಯಿಂದ ಚಿಕಿತ್ಸೆಗೆ ಇಲ್ಲಿಗೆ ಬರುತ್ತಾರೆ.ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸಂಸ್ಥೆಯಲ್ಲಿ ಎದೆಹಾಲು ಸಂಸ್ಕರಣಾ ಕೇಂದ್ರವನ್ನು ನಿರ್ಮಿಸಲಾಗಿದೆ. ಚಿಕಿತ್ಸೆಗಾಗಿ ಮಕ್ಕಳನ್ನು ಕರೆತರುವ ತಾಯಂದಿರಿಂದಲೇ ಹೆಚ್ಚುವರಿ ಎದೆ ಹಾಲನ್ನು ದಾನವಾಗಿ ಪಡೆದು, ಸಂಸ್ಥೆಯಲ್ಲಿ ಅಗತ್ಯವಿರುವ ಮಕ್ಕಳಿಗೆ ವೈದ್ಯರ ಶಿಫಾರಸು ಅನುಸಾರ ಒದಗಿಸಲಾಗುತ್ತಿದೆ. ಈ ಕೇಂದ್ರ ಒಂದೂವರೆ ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದು, ಈವರೆಗೆ 54 ಲೀ. ಎದೆ ಹಾಲು ಸಂಗ್ರಹಿಸಿ, ವಿತರಿಸಲಾಗಿದೆ. ನೂರಕ್ಕೂ ಅಧಿಕ ಮಕ್ಕಳು ಈ ಕೇಂದ್ರದ ನೆರವಿನಿಂದ ನಿಯಮಿತವಾಗಿ ಎದೆಹಾಲು ಪಡೆದು, ಚೇತರಿಸಿಕೊಂಡಿದ್ದಾರೆ.

ಮಕ್ಕಳ ಚಿಕಿತ್ಸೆಗಾಗಿ ಸಂಸ್ಥೆಗೆ ಭೇಟಿ ನೀಡುವ ತಾಯಂದಿರಲ್ಲಿ ಪ್ರತಿನಿತ್ಯ ಸರಾಸರಿ 10ರಿಂದ 15 ತಾಯಂದಿರು ಈ ಕೇಂದ್ರಕ್ಕೆ ಭೇಟಿ ನೀಡುತ್ತಾರೆ.

ಅಂಕಿ ಅಂಶ

500
ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿರುವ ಹಾಸಿಗೆಗಳು

500ರಿಂದ 600
ಸಂಸ್ಥೆಗೆ ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು

ಎದೆಹಾಲು ಪಂಪ್ ಮಾಡುವ ಐದು ಯಂತ್ರಗಳು ಇಲ್ಲಿದ್ದು, ಇದರ ಸಹಾಯದಿಂದ ಎದೆ ಹಾಲನ್ನು ಪಡೆಯಲಾಗುತ್ತದೆ. ಪ್ರತಿ ನಿತ್ಯ ಸರಾಸರಿ ನಾಲ್ಕರಿಂದ ಐದು ತಾಯಂದಿರು ಮಾತ್ರ ಹೆಚ್ಚುವರಿ ಎದೆ ಹಾಲನ್ನು ದಾನವಾಗಿ ನೀಡಿದರೆ, ಉಳಿದ ತಾಯಂದಿರು ಯಂತ್ರದ ಸಹಾಯದಿಂದ ಸಂಗ್ರಹಿಸಿದ ಹಾಲನ್ನು ತಮ್ಮ ಮಗುವಿಗೆ ಕೊಂಡೊಯ್ಯುತ್ತಿದ್ದಾರೆ.

ತಾಯಂದಿರಿಗೆ ಸಮಾಲೋಚನೆ: ಕೇಂದ್ರಕ್ಕೆ ಭೇಟಿ ನೀಡುವ ತಾಯಂದಿರಿಗೆ ಮೊದಲು ಸಮಾಲೋಚನೆ ನಡೆಸಲಾಗುತ್ತದೆ. ಎದೆಹಾಲು ದಾನದ ಪ್ರಕ್ರಿಯೆ, ಮಹತ್ವ ಹಾಗೂ ವಿಧಾನದ ಬಗ್ಗೆ ತಿಳಿಸಿಕೊಡಲು ಟಿ.ವಿ. ಪರದೆಯಲ್ಲಿ ವಿಡಿಯೊಗಳನ್ನೂ ಪ್ರಸಾರ ಮಾಡಲಾಗುತ್ತದೆ. ಎದೆ ಹಾಲು ಸಂಗ್ರಹ ಹಾಗೂ ಶೇಖರಣೆಗೆ ಪ್ರತ್ಯೇಕ ಕೊಠಡಿಗಳಿವೆ. ಹಾಲನ್ನು ದಾನವಾಗಿ ಪಡೆದ ಬಳಿಕ ಅಗತ್ಯ ಪರೀಕ್ಷೆಗಳನ್ನೂ ನಡೆಸಿ, ಶೇಖರಿಸಿ ಇಡಲಾಗುತ್ತದೆ. ವೈದ್ಯರಿಂದ ಶಿಫಾರಸು ಪತ್ರ ತಂದವರಿಗೆ ಎದೆ ಹಾಲು ಒದಗಿಸಲಾಗುತ್ತದೆ. ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ಬಹುತೇಕ ಮಕ್ಕಳು ಅಸ್ವಸ್ಥರಾಗಿರುವುದು, ವಿವಿಧ ರೋಗಗಳಿಂದ ಬಳಲುತ್ತಿರುವ ಕಾರಣ, ತಾಯಂದಿರಿಂದ ಅಧಿಕ ಹಾಲನ್ನು ದಾನವಾಗಿ ಪಡೆಯಲು ಸಾಧ್ಯವಾಗುತ್ತಿಲ್ಲ. ಬದಲಾಗಿ, ಪ್ರತಿನಿತ್ಯ ಹಾಲಿಗೆ ಸಲ್ಲಿಸುತ್ತಿರುವ ಬೇಡಿಕೆ ಪತ್ರ ಹೆಚ್ಚುತ್ತಿದೆ. ಸದ್ಯ 2 ಲೀ. ಹಾಲನ್ನು ಶೇಖರಿಸಿಟ್ಟುಕೊಳ್ಳಲಾಗಿದೆ.

'ಎದೆ ಹಾಲಿನಿಂದ ವಂಚಿತರಾಗಿರುವ ಶಿಶುಗಳಿಗೆ ಈ ಕೇಂದ್ರದ ಮೂಲಕ ಎದೆ ಹಾಲು ಪೂರೈಸಲಾಗುತ್ತದೆ. ಎದೆ ಹಾಲನ್ನು ಪಡೆಯುವಾಗ ಅಗತ್ಯ ಪರೀಕ್ಷೆ ಮಾಡಲಾಗುತ್ತದೆ. ಆರೋಗ್ಯವಂತ ತಾಯಿಯಿಂದ ಮಾತ್ರ ಎದೆ ಹಾಲನ್ನು ಪಡೆಯಲಾಗುತ್ತದೆ' ಎಂದು ಕೇಂದ್ರದ ನಿರ್ವಾಹಕಿ ಡೈಸಿ ತಿಳಿಸಿದರು.



ಸಂಸ್ಥೆಯಲ್ಲಿರುವ 'ಆಸರೆ' ಎದೆ ಹಾಲು ಸಂಸ್ಕರಣಾ ಕೇಂದ್ರದಲ್ಲಿ ಸಂಗ್ರಹಿಸಲಾದ ಎದೆ ಹಾಲನ್ನು ಪಾಶ್ಚರೀಕರಣ ಮಾಡಿದರು ಚಿತ್ರ: ರಂಜು ಪಿ.

'6 ತಿಂಗಳು ಶೇಖರಣೆ ಸಾಧ್ಯ'

'ಕೇಂದ್ರದಲ್ಲಿ ಸಂಗ್ರಹಿಸಿದ ಹಾಲನ್ನು ಪಾಶ್ಚರೀಕರಿಸಿದ ಬಳಿಕ ಪ್ಯಾಕ್ ಮಾಡಿ, 120 ಡಿಗ್ರಿ ಸೆಲ್ಸಿಯಸ್‌ನಲ್ಲಿ ಸಂರಕ್ಷಿಸಿ ಇಡಲಾಗುತ್ತದೆ. ಮಗುವಿಗೆ ಕುಡಿಸುವಾಗ ಅದನ್ನು ಸಾಮಾನ್ಯ ಉಷ್ಣಾಂಶಕ್ಕೆ ತರಲಾಗುತ್ತದೆ. ಇದನ್ನು ಆರು ತಿಂಗಳವರೆಗೂ ಶೇಖರಿಸಿಡಲು ಸಾಧ್ಯ. ಕೇಂದ್ರಕ್ಕೆ ಭಾನುವಾರ ಮಾತ್ರ ರಜೆ ಇರಲಿದ್ದು, ಉಳಿದ ದಿನಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ' ಎಂದು ಕೇಂದ್ರದ ಶುಶ್ರೂಷಕರು ತಿಳಿಸಿದರು.

'ಅವಧಿ ಪೂರ್ವ ಜನಿಸಿದ ಶಿಶುಗಳು, ಅಸ್ವಸ್ಥ ಶಿಶುಗಳು, ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವ ಶಿಶುಗಳು, ಎದೆ ಹಾಲು ಉತ್ಪಾದನೆ ಆಗದಿರುವ ತಾಯಂದಿರ ಶಿಶುಗಳಿಗೆ ಈ ಕೇಂದ್ರದಿಂದ ಎದೆ ಹಾಲನ್ನು ನೀಡಲಾಗುತ್ತಿದೆ' ಎಂದು ಹೇಳಿದರು.



ಎದೆ ಹಾಲು ದಾನದ ಬಗ್ಗೆ ಜಾಗೃತಿ ಕೊರತೆಯಿಂದ ಕೆಲ ತಾಯಂದಿರು ಹಿಂದೇಟು ಹಾಕುತ್ತಾರೆ. ಹೆಚ್ಚುವರಿ ಹಾಲನ್ನು ಮಾತ್ರ ದಾನ ಪಡೆದು, ಮಕ್ಕಳಿಗೆ ಒದಗಿಸಲಾಗುತ್ತದೆ

ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಸ್ವಯಂಪ್ರೇರಿತ ದಾನಕ್ಕೆ ಅವಕಾಶ



ಸ್ವಯಂಪ್ರೇರಿತವಾಗಿ ಎದೆ ಹಾಲು ದಾನ ಮಾಡಲು ಕೇಂದ್ರದಲ್ಲಿ ತಾಯಂದಿರಿಗೆ ಅವಕಾಶ ನೀಡಲಾಗಿದೆ. ಹೊರ ರೋಗಿ ವಿಭಾಗಕ್ಕೆ ಭೇಟಿ ನೀಡುವ ಕೆಲ ತಾಯಂದಿರು ಹೆಚ್ಚುವರಿ ಎದೆ ಹಾಲನ್ನು ದಾನವಾಗಿ ನೀಡುತ್ತಿದ್ದಾರೆ. ಈ ರೀತಿ ದಾನ ನೀಡಲು ಇಚ್ಛಿಸುವವರು ನೇರವಾಗಿ ಕೇಂದ್ರಕ್ಕೆ ಭೇಟಿ ನೀಡಬಹುದಾಗಿದೆ. ಸಂಸ್ಥೆಯಲ್ಲಿನ ಮಕ್ಕಳಿಗೆ ಪ್ರತಿನಿತ್ಯ ಸರಾಸರಿ 1,500 ಎಂ.ಎಲ್. ಎದೆ ಹಾಲಿಗೆ ಬೇಡಿಕೆ ಸಲ್ಲಿಕೆಯಾಗುತ್ತಿದ್ದು, ಲಭ್ಯತೆ ಆಧಾರದಲ್ಲಿ 600ರಿಂದ 700 ಎಂ.ಎಲ್. ಒದಗಿಸಲಾಗುತ್ತಿದೆ.


ವಿಧಾನ ಪರಿಷತ್ತಿನ ಇತಿಹಾಸ ಕುರಿತ ಕಿರುಚಿತ್ರವನ್ನು ಎಚ್‌.ಕೆ. ಪಾಟೀಲ ಬಿಡುಗಡೆ ಮಾಡಿದರು. ಕೆ.ಟಿ. ಶ್ರೀಕಂಠೇಗೌಡ, ಬಸವರಾಜ ಹೊರಟ್ಟಿ, ಎನ್‌.ಎಸ್‌. ಬೋಸರಾಜು, ಯು.ಬಿ. ವೆಂಕಟೇಶ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಮಹಿಳೆ ಸಭಾಪತಿಯಾಗಲಿ ಬಸವರಾಜ ಹೊರಟ್ಟಿ ಆಶಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸದಸ್ಯೆ ಸಭಾಪತಿಯಾಗಿ ಆಯ್ಕೆಯಾಗಬೇಕು. ಆಗ ಸದನದ ಇತಿಹಾಸ ಪರಿಪೂರ್ಣವಾಗುತ್ತದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ವಿಧಾನಪರಿಷತ್ತಿನ ಉಗಮ, ನಡೆದು ಬಂದ ಹಾದಿ ಹಾಗೂ ಐತಿಹಾಸಿಕ ನಡೆಯ ಕುರಿತು ಕಿರುಚಿತ್ರ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಧಾನಪರಿಷತ್ ಒಂದು ಕಾಲದಲ್ಲಿ ಜ್ಞಾನಿಗಳ ತಾಣವಾಗಿತ್ತು. ಅತ್ಯುತ್ತಮ, ಸ್ವಾರಸ್ಯಕರ ಚರ್ಚೆಗಳು ನಡೆಯುತ್ತಿದ್ದವು. ವಿಧಾನಸಭೆಯ ಸದಸ್ಯರೂ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಕಲಾಪ ವೀಕ್ಷಿಸುತ್ತಿದ್ದರು. ಪರಿಷತ್ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗದೆ ಇಬ್ಬರು ಸಚಿವರು ಹಿಂದೆ ರಾಜೀನಾಮೆ ನೀಡಿದ್ದರು. ಈಗ ಅಂತಹ ವಾತಾವರಣ ಇಲ್ಲವಾಗಿದೆ ಎಂದರು.

ಪರಿಷತ್ ಇತಿಹಾಸದ ಕಿರುಚಿತ್ರ ಬಿಡುಗಡೆ ಮಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, ಸಂಶೋಧಕರಿಗೆ ಬೇಕಾಗಿರುವ ವಿಧಾನ ಪರಿಷತ್ತಿನ ಸಮಗ್ರ ಮಾಹಿತಿ ಈ ಸಾಕ್ಷ್ಯಚಿತ್ರದಲ್ಲಿದೆ. ಇದು ಅರ್ಥಪೂರ್ಣವಾದ ಕೆಲಸ. ಗಡಿ, ನೆಲ–ಜಲ ಸಂರಕ್ಷಣೆಗೆ, ಪ್ರಾದೇಶಿಕ ಅಸಮತೋಲನ ನಿವಾರಣೆಗೆ ದೊಡ್ಡ ಧ್ವನಿಯಾಗಿರುವ ವಿಧಾನ ಪರಿಷತ್ ಚಿಂತಕರ ಚಾವಡಿಯಾಗಿ ಸದಾ ಮುಂದುವರಿಯಬೇಕು ಎಂದು ಆಶಿಸಿದರು.

ವಿಧಾನಪರಿಷತ್‌ನ ಸಭಾ ನಾಯಕರಾದ ಸಚಿವ ಎನ್‌.ಎಸ್‌. ಬೋಸರಾಜು, ಮಾಜಿ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ, ಯುಬಿ. ವೆಂಕಟೇಶ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಪರಿಷತ್ ಇತಿಹಾಸದ ಕಿರುಚಿತ್ರ ಬಿಡುಗಡೆ
- ಸಂಶೋಧಕರಿಗೆ ಬೇಕಾದ ಮಾಹಿತಿ
- ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಭಾಗಿ

ಕೊಮ್ಮಸಂದ್ರದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಇಂದು ಬೈಕ್ ರ‍್ಯಾಲಿ

ಭೂಸ್ವಾಧೀನ ಹೋರಾಟಗಳಿಗೆ ಕಸುವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ/ಆನೇಕಲ್: ರೈತರ ನಿರಂತರ ಹೋರಾಟಕ್ಕೆ ಮಣಿದ ಸರ್ಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನರಾಯಪಟ್ಟಣ ಭೂಸ್ವಾಧೀನದಿಂದ ಹಿಂದೆ ಸರಿದ ಬಳಿಕ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಮತ್ತು ಆನೇಕಲ್ ತಾಲ್ಲೂಕಿನ ಸರ್ಜಾಪುರ ರೈತ ಹೋರಾಟಗಳಿಗೆ ಮತ್ತೇ ಹೊಸ ಹುಮ್ಮಸ್ಸು ಬಂದಿದೆ.

ಭೂಸ್ವಾಧೀನ ವಿರುದ್ಧ ಸಾವಿರಕ್ಕೂ ಹೆಚ್ಚು ದಿನ ಹೋರಾಟ ನಡೆಸಿ ಗೆದ್ದ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ರೈತರಿಂದ ಸ್ಫೂರ್ತಿ ಪಡೆದ ಉಳಿದ ರೈತ ಹೋರಾಟಗಾರರು ಹೋರಾಟವನ್ನು ತೀವ್ರಗೊಳಿಸಲು ಮುಂದಾಗಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಜಂಗಕೋಟೆ ಹೋಬಳಿಯ 13 ಗ್ರಾಮಗಳ 2,823 ಎಕರೆ ಜಮೀನನ್ನು 'ಡೀಪ್ ಟೆಕ್ ಪಾರ್ಕ್' ಸ್ಥಾಪನೆಗೆ ನೀಡಲು ಸರ್ಕಾರ ಮುಂದಾಗಿತ್ತು. ಇದರ ವಿರುದ್ಧ ರೈತರು 13 ತಿಂಗಳ ಹಿಂದೆ ಹೋರಾಟಕ್ಕೆ ಧುಮುಕಿದ್ದರು. ಇದುವರೆಗೂ ಹೋರಾಟ ಕಾವು ಪಡೆದಿರಲಿಲ್ಲ. ಈಗ ದೊಡ್ಡಮಟ್ಟದ ಹೋರಾಟಕ್ಕೆ ರೈತರು ವೇದಿಕೆ ಸಿದ್ಧಪಡಿಸಿದ್ದಾರೆ.

ಮತ್ತೊಂದೆಡೆ ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿ 12 ಗ್ರಾಮಗಳ 1,900 ಎಕರೆ ಕೃಷಿ ಭೂಮಿ ಸ್ವಾಧೀನಕ್ಕೆ ಕೆಐಎಡಿಬಿ ಹೊರಡಿಸಿರುವ ಅಧಿಸೂಚನೆ ವಿರೋಧಿಸಿ 462 ದಿನಗಳಿಂದ ರೈತರು ನಡೆಸುತ್ತಿರುವ ಹೋರಾಟ ಕಾವು ಪಡೆದುಕೊಂಡಿದೆ.

ಪ್ರತಿಭಟನೆ, ಸಮಾವೇಶ, ಜಾಥಾ ಮತ್ತು ರ‍್ಯಾಲಿ ನಡೆಸುತ್ತಿದ್ದ ರೈತರು ಆರು ತಿಂಗಳ ಹಿಂದೆ ಸರ್ವೆಗೆ ಬಂದಿದ್ದ ಕೆಐಎಡಿಬಿ ಅಧಿಕಾರಿಗಳ ಲ್ಯಾಪ್‌ಟಾಪ್ ಮತ್ತು ಡ್ರೋನ್ ಸುಟ್ಟು ಹಾಕಿದ್ದರು.

ಬೆಂಗಳೂರಿಗೆ ಹೊಂದಿಕೊಂಡಿದ್ದರೂ ಸರ್ಜಾಪುರ ವ್ಯಾಪ್ತಿಯ ರೈತರು ಕೃಷಿ ಮೇಲೆಯೇ ಅವಲಂಬಿತರಾಗಿದ್ದಾರೆ. ಅರ್ಧ ಬೆಂಗಳೂರಿಗೆ ತರಕಾರಿ, ಹಣ್ಣು, ಹೂವು ಪೂರೈಸುತ್ತಾರೆ.

ಭೂಮಿಯನ್ನು ಉಳಿಸಿಕೊಳ್ಳಲು ರೈತರು 'ನಮ್ಮ ಭೂಮಿ ನಮ್ಮ ಹಕ್ಕು' ಘೋಷಣೆಯೊಂದಿಗೆ ಹೋರಾಟ ಚುರುಕುಗೊಳಿಸಿದ್ದಾರೆ. ಹತ್ತು ದಿನಗಳಿಂದ ಮುತ್ತನಲ್ಲೂರು ಗ್ರಾಮದಲ್ಲಿ ಅಹೋರಾತ್ರಿ ಹೋರಾಟ ಆರಂಭಿಸಿದ್ದಾರೆ.

ಜುಲೈ 18ರಂದು ತಾಲ್ಲೂಕಿನ ಕೊಮ್ಮಸಂದ್ರದಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದವರೆಗೂ ಬೈಕ್ ರ‍್ಯಾಲಿ ನಡೆಸಲಿದ್ದಾರೆ.

ರ‍್ಯಾಗಿಂಗ್: ವಿದ್ಯಾರ್ಥಿಗೆ ಗಾಯ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ವಯನಾಡ್‌ನ ಕಲ್ಪೆಟ್ಟ ಸಮೀಪದ ಪ್ರೌಢ ಶಾಲೆಯಲ್ಲಿ ರ‍್ಯಾಗಿಂಗ್‌ನಿಂದಾಗಿ ವಿದ್ಯಾರ್ಥಿಯೊಬ್ಬ ಗಾಯಗೊಂಡಿದ್ದಾನೆ.

ಷಯಾಜ್ (16) ಗಾಯಗೊಂಡ ವಿದ್ಯಾರ್ಥಿ.

ವಿದ್ಯಾರ್ಥಿ ಹೇಳಿಕೆಯ ಆಧಾರದಲ್ಲಿ ಕಂಬಲಕ್ಕಾಡ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಹಿರಿಯ ಸಹಪಾಠಿಗಳ ಗುಂಪು, ಮೀಸೆ ಏಕೆ ತೆಗೆದಿಲ್ಲ ಎಂದು ನಿಂದಿಸಿತು. ನಂತರ ಹಿರಿಯ ವಿದ್ಯಾರ್ಥಿಯೊಬ್ಬ ಗಡ್ಡ ಮತ್ತು ಮೀಸೆಯನ್ನು ತೆಗೆಯುವಂತೆ ಸೂಚಿಸಿದ. ಆದರೆ ಗಡ್ಡವನ್ನು ಮಾತ್ರ ತೆಗೆದ ಕಾರಣಕ್ಕಾಗಿ ಗುಂಪು ಮನಬಂದಂತೆ ಥಳಿಸಿತು' ಎಂದು ಷಯಾಜ್ ತಿಳಿಸಿದ್ದಾನೆ.

ತಂಬೂರಿ... ಏಕತಾರಿ...

ಪ್ರಜಾವಾಣಿ ಚಿತ್ರ: ರಂಜು ಪಿ.


ತಂಬೂರಿ ತಯಾರು ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿರುವ ಕಾಲಘಟ್ಟದಲ್ಲಿ ಬೆಂಗಳೂರಿನ ಕೆಂಗೇರಿ ಹೋಬಳಿಯ ಕೆಂಚನಪಾಳ್ಯದಲ್ಲಿ ಶ್ರುತಿ ಶಿಲ್ಪಿ ಏಕತಾರಿ ರಾಮಯ್ಯ ಅವರು ತಂಬೂರಿ ತಯಾರಿಸುತ್ತಿದ್ದು, ಅವರೇ ತಯಾರಿಸಿದ ಪುಂಗಿಯನ್ನು ಊದಿ ಗಮನ ಸೆಳೆದರು

ಎಚ್‌ಡಿಕೆ ವಿರುದ್ಧದ ನ್ಯಾಯಾಂಗ ನಿಂದನೆಗೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಡದಿ ಬಳಿ ಕೇತಗಾನಹಳ್ಳಿಯಲ್ಲಿ ಒತ್ತುವರಿಗೆ ಸಂಬಂಧಿಸಿ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ಗುರುವಾರ ತಡೆಯಾಜ್ಞೆ ನೀಡಿದೆ.

ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಕುಮಾರಸ್ವಾಮಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಹಾಗೂ ಪ್ರಸನ್ನ ಬಿ. ವರಾಳೆ ಅವರಿದ್ದ ನ್ಯಾಯಪೀಠವು ಮುಂದಿನ ಆದೇಶದವರೆಗೂ ಪ್ರಕರಣದ ವಿಚಾರಣೆಗೆ ತಡೆ ನೀಡಿದೆ. ಪೀಠವು ಸಮಾಜ ಪರಿವರ್ತನ ಸಮುದಾಯ ಸಂಸ್ಥೆಗೆ ನೋಟಿಸ್ ಜಾರಿ ಮಾಡಿದೆ.



ಲೋಕಾಯುಕ್ತ ತನಿಖೆ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ನ್ಯಾಯಾಂಗ ನಿಂದನೆ ವಿಚಾರಣೆ ಮುಂದುವರಿಸುವುದರ ಹಿಂದಿನ ತಾರ್ಕಿಕತೆಯನ್ನು ನ್ಯಾಯಪೀಠ ಮೌಖಿಕವಾಗಿ ಪ್ರಶ್ನಿಸಿದೆ.

'ಎಚ್‌.ಡಿ.ಕುಮಾರಸ್ವಾಮಿ ಮತ್ತು ಅವರ ಸಂಬಂಧಿಕರು ಕೇತಗಾನಹಳ್ಳಿಯ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಆದರೆ, ಇದನ್ನು ಜಾರಿಗೊಳಿಸಿಲ್ಲ' ಎಂದು ಸಮಾಜ ಪರಿವರ್ತನಾ ಸಮುದಾಯ, ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಅರ್ಜಿ ವಿಚಾರಣೆಯಲ್ಲಿ ಭಾಗಿಯಾಗಲು ಕುಮಾರಸ್ವಾಮಿ ಅವರಿಗೆ ಅನುಮತಿ ನೀಡಿತ್ತು. ಇದೇ ವೇಳೆ, ಹೈಕೋರ್ಟ್‌ನ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ಆದೇಶ ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು.

ನ್ಯಾಯಾಂಗ ನಿಂದನೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿ ವಿಚಾರಣೆ ಬಾಕಿ ಇರುವುದರಿಂದ ತಮ್ಮ ವಿರುದ್ಧದ ಕಾನೂನು ಪ್ರಕ್ರಿಯೆಗೆ ತಡೆ ನೀಡುವಂತೆ ಕುಮಾರಸ್ವಾಮಿ ಅವರು ಹೈಕೋರ್ಟ್‌ಗೆ ಮನವಿ ಮಾಡಿದ್ದರು.

ಮಾರ್ಚ್ 27ರವರೆಗೂ ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಹೈಕೋರ್ಟ್ ಆದೇಶಿಸಿತ್ತು.

ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಒಂದು ಕೋಟಿಗೂ ಅಧಿಕ ಪ್ರಕರಣಗಳಲ್ಲಿ ಚಿಕಿತ್ಸೆ

'ಆಯುಷ್ಮಾನ್' ಚಿಕಿತ್ಸೆಗೆ ಹೆಚ್ಚಿದ ಬೇಡಿಕೆ

• ವರುಣ ಹೆಗಡೆ

ಬೆಂಗಳೂರು: ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ಚಿಕಿತ್ಸೆಗಳು ದುಬಾರಿಯಾಗಿರುವ ಕಾರಣ, 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' (ಎಬಿಎಆರ್‌ಕೆ) ಯೋಜನೆಯಡಿ ಚಿಕಿತ್ಸೆಗೆ ಸರ್ಕಾರಿ ಸಂಸ್ಥೆಗಳತ್ತ ರೋಗಿಗಳು ಮುಖ ಮಾಡುತ್ತಿದ್ದು, ಕಳೆದ ಐದು ವರ್ಷಗಳಲ್ಲಿ ಒಂದು ಕೋಟಿಗೂ ಅಧಿಕ ಪ್ರಕರಣಗಳಲ್ಲಿ ಚಿಕಿತ್ಸೆ ಒದಗಿಸಲಾಗಿದೆ.

ಸರ್ಕಾರಿ ಆಸ್ಪತ್ರೆಗಳ ಬಲವರ್ಧನೆಯ ಜತೆಗೆ ದುಬಾರಿ ಚಿಕಿತ್ಸೆಗಳು ಅಗ್ಗ ಹಾಗೂ ಉಚಿತವಾಗಿ ಒದಗಿಸುವುದು ಯೋಜನೆಯ ಆಶಯವಾಗಿದೆ. ಮಂಡಿ ಚಿಪ್ಪು, ಹೃದಯದ ಕವಾಟ ಬದಲಾವಣೆ-ಯಂತಹ ಶಸ್ತ್ರಚಿಕಿತ್ಸೆಗಳು ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ದುಬಾರಿಯಾಗಿರುವುದರಿಂದ, ಸರ್ಕಾರಿ ಆರೋಗ್ಯ ವಿಮೆಯಡಿ ಈ ಚಿಕಿತ್ಸೆ ಪಡೆಯಲು ರೋಗಿಗಳು ಒಲವು ತೋರುತ್ತಿದ್ದಾರೆ. ಎಬಿಎಆರ್‌ಕೆ ಯೋಜನೆಯಡಿ ಚಿಕಿತ್ಸೆ ಪಡೆಯುವವರ ಸಂಖ್ಯೆ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. 2020ರಲ್ಲಿ ಯೋಜನೆಯಡಿ ಚಿಕಿತ್ಸೆ ಪಡೆಯುವವರ ವಾರ್ಷಿಕ ಸಂಖ್ಯೆ 8 ಲಕ್ಷದ ಆಸುಪಾಸಿನಲ್ಲಿದ್ದರೆ, ಆ ಸಂಖ್ಯೆ 2024ರಲ್ಲಿ 35 ಲಕ್ಷ ದಾಟಿದೆ.

ಈ ಯೋಜನೆಯಡಿ ವಿತರಿಸಲಾಗುವ ಕಾರ್ಡ್‌ಗಳನ್ನು 'ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ' ನ್ಯಾಷನಲ್ ಪೋರ್ಟಲ್‌ಗೆ ಸಂಯೋಜಿಸಲಾಗಿದೆ. ಇದರಿಂದಾಗಿ ಈ ಆರೋಗ್ಯ ಕಾರ್ಡ್‌ನ ನೆರವಿನಿಂದ ಯೋಜನೆಯಡಿ ದೇಶದ ಯಾವುದೇ ಭಾಗದಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರರ ನೇಮಕ, ಕಿಯೋಸ್ಕ್ ಸ್ಥಾಪನೆ ಸೇರಿ ವಿವಿಧ ಕ್ರಮಗಳು ಯೋಜನೆಯಡಿ ಚಿಕಿತ್ಸೆ ಪಡೆಯುವವರ ಸಂಖ್ಯೆ ಹೆಚ್ಚಳವಾಗಲು ಸಹಕಾರಿಯಾಗಿದೆ.

ಆಸ್ಪತ್ರೆಗಳಿಗೆ ಪ್ರೋತ್ಸಾಹ: 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯೋಜನೆಯಡಿ ವಿವಿಧ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ. ಯೋಜನೆಯಡಿ ಅಪಘಾತದಂತಹ ತುರ್ತು ಸಂದರ್ಭದಲ್ಲಿ ಮಾತ್ರ ನೇರವಾಗಿ ನೋಂದಾಯಿತ ಖಾಸಗಿ ಆಸ್ಪತ್ರೆಗೆ ದಾಖಲಾಗಲು ಅವಕಾಶವಿದೆ. ಅದೇ ರೀತಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯವಿರದಿದ್ದರೆ ಶಿಫಾರಸು ಆಧಾರದಲ್ಲಿ ಖಾಸಗಿ ಆಸ್ಪತ್ರೆಗೆ ತೆರಳಬಹುದಾಗಿದೆ.

'ಯೋಜನೆ ಬಗ್ಗೆ ಜನರಿಗೆ ಜಾಗೃತಿ ಮೂಡುತ್ತಿದೆ. ಯೋಜನೆಯಡಿ ಉಚಿತವಾಗಿ ನೀಡುವ ಕಾರ್ಡ್ ಹೊಂದಿರದಿದ್ದರೂ, ಪಡಿತರ ಚೀಟಿ ಇದ್ದಲ್ಲಿ ಯೋಜನೆಯಡಿ ಚಿಕಿತ್ಸೆ ನೀಡಲಾಗುತ್ತಿದೆ. ಯೋಜನೆಯಡಿ ಚಿಕಿತ್ಸೆ ಅನುಸಾರ ಆಸ್ಪತ್ರೆಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಇದು ಆಸ್ಪತ್ರೆಯ ಅಭಿವೃದ್ಧಿಗೂ ಸಹಕಾರಿಯಾಗಿದೆ' ಎಂದು ರಾಜ್ಯದಲ್ಲಿ ಯೋಜನೆ ಅನುಷ್ಠಾನ ಮಾಡುತ್ತಿರುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ ಅಂಶಗಳು

2,965
ಯೋಜನೆಯಡಿ ನೋಂದಾಯಿತ ಸರ್ಕಾರಿ ಆಸ್ಪತ್ರೆಗಳು

588
ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳು

ಯೋಜನೆಯಡಿ ಶಿಫಾರಸಿನಂತಹ ಕೆಲ ಗೊಂದಲಗಳನ್ನು ನಿವಾರಿಸಿ, ಗುಣಮಟ್ಟದ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ದುಬಾರಿ ಚಿಕಿತ್ಸೆಗಳೂ ಯೋಜನೆಯಡಿ ಬಹುತೇಕ ಉಚಿತವಾಗಿ ದೊರೆಯುತ್ತಿವೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

1,650 ಚಿಕಿತ್ಸಾ ಪ್ಯಾಕೇಜ್

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ 2018ರಲ್ಲಿ ಆರಂಭವಾಗಿದ್ದು, ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು 'ಆಯುಷ್ಮಾನ್ ಭಾರತ್' ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು 'ಆರೋಗ್ಯ ಕರ್ನಾಟಕ' ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ. ಈ ಯೋಜನೆಯು 1,650 ಚಿಕಿತ್ಸಾ ಪ್ಯಾಕೇಜ್‌ಗಳನ್ನು ಒಳಗೊಂಡಿದೆ. ಬೆನ್ನುಹುರಿ ವಿರೂಪಕ್ಕೆ ಸಂಬಂಧಿಸಿದ ಚಿಕಿತ್ಸೆ, ಗಿಲ್ಲೈನ್-ಬರ್ರೆ ಸಿಂಡ್ರೋಮ್ (ಜಿಬಿಎಸ್) ಕಾಯಿಲೆಗೆ ನೀಡುವ 'ಇಂಟ್ರಾವೀನಸ್ ಇಮ್ಯುನೋಗ್ಲೋಬಿನ್' (ಐವಿಐಜಿ) ಥೆರಪಿಯಂತಹ ಚಿಕಿತ್ಸೆಗಳನ್ನು ಯೋಜನೆಯಡಿ ಇತ್ತೀಚೆಗೆ ಸೇರ್ಪಡೆ ಮಾಡಲಾಗಿದೆ.

ವರ್ಷವಾರು ಚಿಕಿತ್ಸೆ ಪಡೆದವರು

ವರ್ಷ	ಚಿಕಿತ್ಸೆ ಪಡೆದವರು
2020-21	7.94 ಲಕ್ಷ
2021-22	12.41 ಲಕ್ಷ
2022-23	21.14 ಲಕ್ಷ
2023-24	32.14 ಲಕ್ಷ
2024-25	35.59 ಲಕ್ಷ

|| ಶ್ರೀ ಗುರು ಬಸವಲಿಂಗಾಯ ನಮಃ || || ಶ್ರೀ ಗುರು ಸಿದ್ದರಾಮೇಶ್ವರಾಯ ನಮಃ ||



ಶ್ರೀ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ

ಭೋವಿ ಗುರುಪೀಠ, ಬಾಗಲಕೋಟೆ-ಚಿತ್ರದುರ್ಗ

ಭೋವಿ ಜನೋತ್ಸವ

ದಿನಾಂಕ: 18.07.2025, ಶುಕ್ರವಾರ

ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ

- 16ನೇ ಪಟ್ಟಾಭಿಷೇಕ ಮಹೋತ್ಸವ
- 27ನೇ ಲಾಂಛನ ದೀಕ್ಷಾ ಮಹೋತ್ಸವ
- 40ನೇ ಜನ್ಮ ವರ್ಧಂತ್ಯೋತ್ಸವ

ನಿಮಿತ್ತ

- ಪ್ರತಿಭಾ ಪುರಸ್ಕಾರ
- ವಧು-ವರರ ಸಮಾವೇಶ
- ರಕ್ತದಾನ ಶಿಬಿರ



ಸ್ವಾಭಿಮಾನದ ಪ್ರತೀಕ

ಯಾರೂ ತಾನು ಇಂತಹ ಜಾತಿಯಲ್ಲೇ ಹುಟ್ಟಬೇಕು ಎಂದು ಅರ್ಜಿ ಹಾಕಿ ಹುಟ್ಟಿಲ್ಲ.'ಹುಟ್ಟುವಾಗ ಎಲ್ಲರೂ ವಿಶ್ವಮಾನವರೇ ಆಗಿರುತ್ತಾರೆ, ಆದರೆ ಬೆಳೆಬೆಳೆಯುತ್ತಾ ಅಲ್ಪಮಾನವರಾಗುತ್ತಾರೆ' ಎಂದು ಕುವೆಂಪು ಹೇಳಿರುವಂತೆ ಬೇಕೋ ಬೇಡವೋ ಜಾತಿ ನಮ್ಮ ಜನ್ಮಜಾತವಾಗಿಯೇ ಇರುತ್ತದೆ. ಸಮಾಜದಲ್ಲಿ ವಿವಿಧ ಸಮುದಾಯಗಳ ಜನರು ಜೀವಿಸುತ್ತಾರೆ. ಕೆಲವರು ತಾನು ಇಂತಹ ಜಾತಿಯಿಂದ ಹುಟ್ಟಿದ್ದೇನೆ ಎಂದು ತಲೆ ಎತ್ತಿ ಹೇಳುತ್ತಾರೆ. ಆದರೆ ಹಲವರು ತನ್ನ ಜಾತಿಯ ಹೆಸರು ಹೇಳಲು ಹಿಂದೇಟು ಹಾಕುತ್ತಾರೆ. ಸುಳ್ಳು ಜಾತಿಯ ಹೆಸರು ಹೇಳಿಕೊಂಡು ಓಡಾಡುವವರೂ ಇದ್ದಾರೆ.

ಯಾವುದೇ ಜಾತಿ ಇರಲಿ, ಒಬ್ಬ ವ್ಯಕ್ತಿ ತನ್ನ ಜಾತಿಯ ಹೆಸರನ್ನು ಧೈರ್ಯದಿಂದ ಹೇಳಿಕೊಳ್ಳಬೇಕಾದರೆ ಆ ಜಾತಿಯ ಮುಖಂಡರು, ಧರ್ಮ ಗುರುಗಳು ತಮ್ಮ ಸಮುದಾಯದ ಜನರಿಗೆ ಸ್ವಾಭಿಮಾನದ ಪಾಠ ಹೇಳಿಕೊಡಬೇಕಾದ ಅವಶ್ಯಕತೆ ಇದೆ. ಬಹಳ ಹಿಂದಿನ ಕಾಲದಿಂದಲೂ ಭೋವಿ ಸಮುದಾಯದ ಜನರು ತಮ್ಮ ಜಾತಿಯ ಹೆಸರು ಹೇಳಲು ಹಿಂಜರಿಯುವ ಕಾಲವೂ ಇತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. 'ನಾನು ಭೋವಿ ಜಾತಿಯಲ್ಲಿ ಹುಟ್ಟಿದ್ದೇನೆ' ಎಂದು ಧೈರ್ಯದಿಂದ ಹೇಳಿಕೊಳ್ಳುತ್ತಾರೆ. ಸಮುದಾಯದಲ್ಲಿ ಮೂಡಿರುವ ಜಾಗೃತಿ ಈ ಬದಲಾವಣೆಗೆ ಕಾರಣವಾಗಿದೆ. ಭೋವಿ ಗುರುಪೀಠದ ಪೀಠಾಧ್ಯಕ್ಷರಾಗಿರುವ ಯುವ ಧರ್ಮಗುರು ಪೂಜ್ಯಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸಮುದಾಯದಲ್ಲಿ ಮೂಡಿಸಿರುವ ಜಾಗೃತಿಯಿಂದಾಗಿ ಭೋವಿ ಸಮುದಾಯದ ಜನರು ಈಗ ತಮ್ಮ ಜಾತಿಯ ಹೆಸರು ಹೇಳಿಕೊಳ್ಳಲು ಹಿಂಜರಿಗೆ ವ್ಯಕ್ತಪಡಿಸುವುದಿಲ್ಲ. ಶ್ರೀಗಳು ಈಗ ಸಮುದಾಯದಲ್ಲಿ ಸ್ವಾಭಿಮಾನದ ಪ್ರತೀಕವಾಗಿ ಮೂಡಿಬಂದಿರುವುದು ಈ ಪರಿವರ್ತನೆಗೆ ಮುಖ್ಯ ಕಾರಣವಾಗಿದೆ.

ಶ್ರೀ ಸಿದ್ದರಾಮೇಶ್ವರರ ವಿಚಾರಗಳನ್ನೇ ಮನದಲ್ಲಿ ತುಂಬಿಕೊಂಡಿರುವ ಯುವ ಗುರು ಸಮಾಜಕ್ಕೆ ಒಂದು ಸ್ಪಷ್ಟ ಗುರಿ ತೋರಿಸುವ ಕೆಲಸ ಮಾಡುತ್ತಿದ್ದಾರೆ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಸಮುದಾಯದ ಜನರು ವಾಸಿಸುವ ಊರುಗಳಲ್ಲಿ ಸುತ್ತಾಡಿ ಜ್ಞಾನದ ಬೆಳಕು ಹರಿಸುತ್ತಿದ್ದಾರೆ. ದೇಹ ದಂಡಿಸಿ, ರಟ್ಟೆಯಲ್ಲಿರುವ ಬಲವನ್ನೇ ನಂಬಿ ಬದುಕುವ ಶ್ರಮಜೀವಿಗಳ ಮನಸ್ಸುಗಳಿಗೆ ಅಧ್ಯಾತ್ಮದ ಉಳಿಪೆಟ್ಟು ನೀಡಿ ಸೇವೆಯ ಮೂರುತಿ ಕೆತ್ತುವ ಕೆಲಸ ಮಾಡುತ್ತಿದ್ದಾರೆ. ಮೂಢನಂಬಿಕೆ, ಕಂದಾಚಾರ, ದುಶ್ಚಟಗಳಿಂದ ಬಳಲಿದ್ದ ಭಾವನೆಗಳಿಗೆ ಗುರು ಕರುಣೆಯ ದೃಷ್ಟಿ ಬೀರಿ ಹೊಸ ದಾರಿ ತೋರಿಸಿದ್ದಾರೆ. ಕರುಣೆಯ ಕಡಲಾಗಿ ಎಲ್ಲರನ್ನೂ, ಎಲ್ಲವನ್ನೂ ತಮ್ಮತ್ತ ಸೆಳೆದುಕೊಳ್ಳುತ್ತಾ ಸಮಾಜದಲ್ಲಿ ತಮ್ಮವರ ಗೌರವ, ಘನತೆಯ ಬದುಕಿಗಾಗಿ ಮುಂದಡಿ ಇಡುತ್ತಿದ್ದಾರೆ.

ಭೋವಿ ಶ್ರೀ... ವಿಶ್ವ ಸಂಚಾರಿ...

ನಿಜಗುಣ ಶಿವಯೋಗಿ, ಸಿದ್ಧರಾಮೇಶ್ವರ ಜೀವನ ಚರಿತೆ, ಸ್ವಾಮಿ ವಿವೇಕಾನಂದ, ಜ್ಞಾನಸಿಂಧು ಜ್ಞಾನಾಮೃತಗಳನ್ನು ಓದಿಕೊಂಡಿರುವ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ವಿಶ್ವದ ಹಲವು ದೇಶಗಳನ್ನು ಸುತ್ತಿ ಅಲ್ಲಿಯ ಸಂಸ್ಕೃತಿ, ಸಂಸ್ಕಾರಗಳನ್ನು ಒರೆಗೆ ಹಚ್ಚಿ ನೋಡಿದ್ದಾರೆ. ಸಾಂಪ್ರದಾಯಿಕ ಕುಲವೃತ್ತಿ ಮಾಡುವ ಶ್ರಮಿಕರು ಔದ್ಯೋಗಿಕ ವಲಯದತ್ತ ಸ್ಥಿತ್ಯಂತರಗೊಳ್ಳಲು ಪ್ರೇರಣೆಯಾಗುವ ಉದ್ದೇಶದಿಂದ ಹಲವು ದೇಶಗಳ ಸಂಚಾರ ಮಾಡಿ ಸಮುದಾಯದ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. 'ದೇಶ ಸುತ್ತು ಕೋಶ ಓದು' ಎನ್ನುವ ನಾಣ್ಣುಡಿಯಂತೆ ಬೇರೆ ಬೇರೆ ದೇಶಗಳಲ್ಲಿರುವ ಉದ್ಯೋಗ, ಉದ್ದಿಮೆ, ಕೃಷಿ, ಕುಶಲಗಾರಿಕೆ, ಕಲೆ, ಸಾಹಿತ್ಯಗಳನ್ನು ಕಂಡು ಅವುಗಳ ಬಗ್ಗೆ ತಮ್ಮದೇ ರೀತಿಯಲ್ಲಿ ಪ್ರೇರಣಾದಾಯಕವಾಗಿ ಆಶೀರ್ವಚನ ನೀಡುತ್ತಾರೆ. ಭಾರತೀಯ ಸಂಸ್ಕೃತಿಗೂ ಸಾಗರದಾಚೆಯ ಸಂಸ್ಕೃತಿ ನಡುವಿನ ಕೊಡು-ಕೊಳ್ಳುವಿಕೆಯ ಬಗ್ಗೆ ಸಾಕಷ್ಟು ಜ್ಞಾನ ಸಂಪಾದಿಸಿಕೊಂಡಿದ್ದಾರೆ. ಪ್ರವಾಸವೆಂದರೆ ಅದು ಬರೀ ವೀಕ್ಷಣೆಯಲ್ಲ, ಅಲ್ಲಿಯ ಜನಜೀವನವನ್ನು ಅಧ್ಯಯನ ಮಾಡಿ ಅಲ್ಲಿಯ ಪ್ರಗತಿಶೀಲತೆಯನ್ನು ಅರ್ಥ ಮಾಡಿಕೊಂಡು ದೇಶೀಯ ಸಮುದಾಯದಲ್ಲಿ ಅದರ ಜಾಗೃತಿ ಮೂಡಿಸುವ ಕೆಲಸವನ್ನು ಹಲವು ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದ್ದಾರೆ.



ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಗಳ ಪ್ರವಚನ ಆಲಿಸುತ್ತಿದ್ದರೆ 'ವಿಶ್ವವೇ ಒಂದು ಹಳ್ಳಿ' ಎಂಬ ತತ್ವ ಸತ್ಯವೆನಿಸುತ್ತದೆ. ಅವರ ಮಾತುಗಳಲ್ಲಿ ಬಹುರಾಷ್ಟ್ರೀಯ ಸಂಸ್ಕೃತಿಯ ಝರಿ ಹರಿಯುತ್ತದೆ. ರಟ್ಟೆ, ಬಾಹುಬಲವನ್ನೇ ನಂಬಿ ಬದುಕುವ ಭೋವಿ ಸಮುದಾಯದ ಸದಸ್ಯರಿಗೆ ಕುಶಲಗಾರಿಕೆ, ಕೃಷಿ, ಉದ್ದಿಮೆಗಳ ಮಹತ್ವವನ್ನು ಸಾರುತ್ತಾರೆ. ಆ ಮೂಲಕ ಯುವ ಸಮುದಾಯಕ್ಕೆ ಪ್ರೇರಣಾ ಶಕ್ತಿಯಾಗಿ ನಿಲ್ಲುತ್ತಾರೆ.

ಅವರೊಳಗಿನ ಜ್ಞಾನ ಭಂಡಾರ ವಿವಿಧ ದೇಶಗಳ ಸಂಸ್ಕೃತಿಯನ್ನೂ ಅರಿಯುವಂತೆ ಪ್ರೇರಣೆ ನೀಡಿತು. ಇದರಿಂದಾಗಿ ಅವರು ವಿಶ್ವದ ಹತ್ತಾರು ದೇಶಗಳಲ್ಲಿ ಪ್ರವಾಸ ಮಾಡಿ ತಮ್ಮ ಅನುಭವಧಾರೆಯನ್ನು ವಿಸ್ತಾರ ಮಾಡಿಕೊಂಡಿದ್ದಾರೆ. ಸ್ವಾಮೀಜಿ ಯಾವುದೇ ದೇಶಕ್ಕೆ ಹೋದರೂ ಅಲ್ಲಿಯ ಕೃಷಿಕರನ್ನು, ಕಾರ್ಮಿಕರನ್ನು ಭೇಟಿ ಮಾಡದೇ ಬರುವುದಿಲ್ಲ. ಕೃಷಿಕರು, ಕಾರ್ಮಿಕರ ಜೀವನ ಮಟ್ಟವನ್ನು ಕಾಣದೇ ಹಿಂದಿರುಗಿ ಬರುವುದಿಲ್ಲ.

ಪ್ರತಿ ವಿದೇಶ ಪ್ರವಾಸದಲ್ಲೂ ಅವರು ಕಾರ್ಮಿಕರ ಜೀವನ ಮಟ್ಟ ಸುಧಾರಣೆಗೆ ಆ ಸರ್ಕಾರಗಳು ಕೈಗೊಂಡಿರುವ ಯೋಜನೆಗಳ ಬಗ್ಗೆ ಮಾಹಿತಿ ಪಡೆಯುತ್ತಾರೆ. ನಮ್ಮ ದೇಶದಲ್ಲಿರುವ ನೀತಿಗಳು ಹಾಗೂ ಬೇರೆ ಬೇರೆ ಅಭಿವೃದ್ಧಿ ಹೊಂದಿರುವ ದೇಶಗಳ ಕೃಷಿ, ಕಾರ್ಮಿಕ ನೀತಿಗಳ ಹೋಲಿಕೆ ಮಾಡಿ ನೋಡುತ್ತಾರೆ. ನಮ್ಮ ದೇಶದ ನೀತಿಗಳ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಅವರು ಮಾತನಾಡುತ್ತಾರೆ.

'ವಡ್ಡರೆಂದರೆ ಗುಡ್ಡರು, ಶಾಪಗ್ರಸ್ತರು, ಗುರುವನ್ನು ಗುಂಡಿಯಲ್ಲಿ ಮುಚ್ಚಿದವರು' ಎಂಬೆಲ್ಲ ಹಸಿ ಸುಳ್ಳುಗಳನ್ನು ಸಮುದಾಯದಿಂದ ಹೋಗಲಾಡಿಸಲು ಸ್ವಾಮೀಜಿ ಜ್ಞಾನದ ಬೆಳಕು ಹರಿಸಿದ್ದಾರೆ. ಗುಡ್ಡಗಾಡುಗಳಲ್ಲಿ ಕೆಲಸ ಮಾಡುವವರು, ಬಂಡೆ ಕೆಲಸಗಾರರು, ರಸ್ತೆ, ಚರಂಡಿಗಳಲ್ಲಿ ಕೆಲಸ ಮಾಡುವವರು ಇಂದಿಗೂ ಅತ್ಯಂತ ತಳಮಟ್ಟದಲ್ಲಿ ಬದುಕುತ್ತಿದ್ದಾರೆ, ಮಕ್ಕಳಿಗೆ ಶಿಕ್ಷಣ ಕೊಡಿಸಲು ವಿಫಲರಾಗುತ್ತಿದ್ದಾರೆ. ಅವರಿಗೆ ಸರಿಯಾದ ದಾರಿ ತೋರಿಸುವ ಕೆಲಸ ಮಾಡುತ್ತಿರುವ ಸ್ವಾಮೀಜಿ ಬೇರೆ ಬೇರೆ ದೇಶಗಳಲ್ಲಿ ಕಂಡಿರುವ ಕಾರ್ಮಿಕರ ಉನ್ನತ ಜೀವನ ಮಟ್ಟವನ್ನು ಭೋವಿ ಸಮುದಾಯದ ಸದಸ್ಯರ ಮುಂದೆ ತೆರೆದಿಡುತ್ತಿದ್ದಾರೆ. ಅವರಂತೆ ನಾವೂ ನಮ್ಮ ಜೀವನಮಟ್ಟವನ್ನು ಸುಧಾರಣಾ ಹಾದಿಯಲ್ಲಿ ಕೊಂಡೊಯ್ಯಬಹುದು ಎಂಬ ಪ್ರೇರಣೆ ಮೂಡಿಸುತ್ತಿದ್ದಾರೆ.

ಜಪಾನ್‌ನ ಹಲವು ನಗರಗಳನ್ನು ಕಂಡಿರುವ ಸ್ವಾಮೀಜಿ ಅಲ್ಲಿಯ ತಂತ್ರಜ್ಞಾನ, ಜನರು ಸಮಯಕ್ಕೆ ನೀಡುವ ಮಹತ್ವದ ಬಗ್ಗೆ ಮನಸಾರೆ ಮೆಚ್ಚಿಕೊಂಡಿದ್ದಾರೆ. ವಿಶ್ವದ 2ನೇ ಮಹಾಯುದ್ಧದಲ್ಲಿ ಅಮೇರಿಕದ ಅಣು ಬಾಂಬ್ ದಾಳಿಯಿಂದ ಕ್ಯೋಟೊ ನಗರ ತಪ್ಪಿಸಿಕೊಂಡ ಬಗೆಯನ್ನು ಸ್ವಾಮೀಜಿ ತಮ್ಮದೇ ಧಾಟಿಯಲ್ಲಿ ವಿವರಿಸುತ್ತಾರೆ. ಅಣು ಯುದ್ಧದಲ್ಲಿ ಹಿರೋಶಿಮಾ, ನಾಗಸಾಕಿ ನಾಶವಾಗಿದ್ದರೂ, ಅಲ್ಲಿಯ ಜನರು ಇಂದಿಗೂ ಅದರ ಪರಿಣಾಮ ಎದುರಿಸುತ್ತಿದ್ದರೂ ಜಪಾನ್ ಜನರು ದೇಶ ಕಟ್ಟಿದ ಸಾಹಸಗಾಥೆ ವಿಶ್ವಕ್ಕೆ ಪ್ರೇರಣಾ ಶಕ್ತಿಯಾಗಿ ನಿಲ್ಲುತ್ತದೆ. ಈ ಸಾಹಸಗಾಥೆಯನ್ನು ಸಿದ್ದರಾಮೇಶ್ವರ ಸ್ವಾಮೀಜಿ ತಮ್ಮ ಪ್ರವಚನಗಳಲ್ಲಿ ಯುವಜನರಿಗೆ ತಿಳಿಸುತ್ತಾರೆ.

'ಕ್ಯೋಟೊ ನಗರ ಬಹಳ ಹಿಂದಿನಿಂತಲೂ ಶಾಂತತೆಯನ್ನು ಉಳಿಸಿಕೊಂಡು ಬಂದಿದೆ. ಒಂದು ರೀತಿಯ ಧ್ಯಾನಸ್ಥ ಸ್ಥಿತಿ ಆ ನಗರದಲ್ಲಿದೆ. ಅಲ್ಲಿಯ ಶಾಂತತೆ, ಪ್ರಕೃತಿ ಸೌಂದರ್ಯ ಮನಸೂರೆಗೊಳ್ಳುತ್ತದೆ. ಅಲ್ಲಿಯ ಆಹಾರ ಶೈಲಿ ಕೂಡ ಗಮನ ಸೆಳೆಯುತ್ತದೆ. ಆರಂಭದಲ್ಲಿ ಅಮೆರಿಕಾ ನಾಗಾಸಾಕಿ ಬದಲಿಗೆ ಕ್ಯೋಟೊ ನಗರದ ಮೇಲೆ ದಾಳಿ ಮಾಡಲು ಯೋಜನೆ ರೂಪಿಸಿತ್ತು. ಆದರೆ ಅಂತಿಮ ಹಂತದಲ್ಲಿ ಕ್ಯೋಟೊ ಹೆಸರು ಬದಲಾಯಿತು. ಅಂದು ಅಮೆರಿಕಾ ಕ್ಯೋಟೊಗೂ ಅಣು ಬಾಂಬ್ ಹಾಕಿದ್ದರೆ ಇಂತಹ ಶಾಂತ ಸ್ಥಿತಿಯನ್ನು ನಮಗೆ ನೋಡಲು ಸಿಗುತ್ತಿರಲಿಲ್ಲ. ಇಲ್ಲಿಯ ಜನರ ಸಮಯ ನಿರ್ವಹಣೆ, ಆತ್ಮವಿಶ್ವಾಸ ನಮ್ಮ ಜನರಿಗೂ ಬಂದರೆ ನಾವು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಬಹುದು' ಎನ್ನುತ್ತಾರೆ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ.

'ಅತಿಥಿ ದೇವೋಭವ, ಮಾತೃದೇವೋಭವ' ಎಂಬ ನಾಣ್ನುಡಿಯನ್ನು ಭಾರತೀಯರು ನಂಬಿದರೂ ಜಪಾನಿಯರು ಅದನ್ನು ಅಕ್ಷರಶಃ ಪಾಲಿಸುತ್ತಿದ್ದಾರೆ. ಅವರ ಜೀವನ ಶೈಲಿ,ದೀರ್ಘಾಯುಷ್ಯ ಎಲ್ಲವೂ ಅವರಿಗೆ ಹೆಚ್ಚು ವಿಶ್ವಾಸವನ್ನು ತಂದು ಕೊಟ್ಟಿದೆ. ದೇಶದ ಪ್ರತಿ ಹಳ್ಳಿಗಳಿಂದಲೂ ಅನಾರೋಗ್ಯ ಸಂದರ್ಭದಲ್ಲಿ ವಿಮಾನ ಆಂಬುಲೆನ್ಸ್ ಸೇವೆಗಳ ಅವರು ದೇಶದಲ್ಲಿವೆ. ನಯ, ವಿನಯವೇ ಆ ದೇಶದ ಶಕ್ತಿಯಾಗಿದೆ. ಇಂಗ್ಲಿಷ್ ಭಾಷೆ ಬಾರದಿದ್ದರೂ ಯಾವುದೇ ದೇಶದ ಜನರ ಭಾವನೆಗಳನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಶೂನ್ಯ ಭ್ರಷ್ಟಾಚಾರ ಆ ದೇಶದ ಮತ್ತೊಂದು ಶಕ್ತಿಯಾಗಿದೆ. ಕಾನೂನುಗಳನ್ನು ಬಹಳ ಗೌರವದಿಂದ ಕಾಣುವ ಪ್ರವೃತ್ತಿ ಅಲ್ಲಿಯ ಜನರಿಗೆ ರಕ್ತಗತವಾಗಿದೆ. ಅಂತಹ ಗುಣಗಳನ್ನು ನಾವೂ ಬೆಳಸಿಕೊಂಡರೆ ದೇಶ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲು ಸಾಧ್ಯವಾಗುತ್ತದೆ ಎಂದು ಶ್ರೀಗಳು ಹೇಳುತ್ತಾರೆ.



ಜಪಾನ್ ದೇಶದಲ್ಲಿ ಜನರು ಕಾಯ್ದುಕೊಂಡಿರುವ ಶಿಸ್ತು ಗಮನ ಸೆಳೆಯುತ್ತದೆ. ರೆಸ್ಟೋರೆಂಟ್, ರೈಲು ನಿಲ್ದಾಣ, ಬಸ್ ನಿಲ್ದಾಣ, ವಿಮಾನ ನಿಲ್ದಾಣದಲ್ಲಿ ಜನರು ಸದಾ ಸಾವಧಾನದಿಂದ ಸಾಲಿನಲ್ಲಿ ನಿಂತು ಶಿಸ್ತು ಕಾಪಾಡಿಕೊಳ್ಳುತ್ತಾರೆ. ನಮ್ಮ ದೇಶದ ಜನರೂ ಈ ರೀತಿಯ ಪಾಠ ಕಲಿಯಬೇಕಾದ ಅವಶ್ಯಕತೆ ಇದೆ. ಬೇಕಾಬಿಟ್ಟಿಯಾಗಿ ನುಗ್ಗುವ ಗುಣದಿಂದ ಹೊರಗೆ ಬರಬೇಕಾಗಿದೆ. ಶೌಚಾಲಯಕ್ಕೆ ತೆರಳುವುದಕ್ಕೂ ಅಲ್ಲಿಯ ಜನರು ಸಾಲಿನಲ್ಲಿ ನಿಲ್ಲುತ್ತಾರೆ. ಒಬ್ಬರು ಶೌಚ ಮುಗಿಸಿಕೊಂಡು ಹೊರಬಂದ ನಂತರವೇ ಮತ್ತೊಬ್ಬರು ತೆರಳುತ್ತಾರೆ. ಅಲ್ಲಿಯ ಜನರು ನಿಯಮಗಳನ್ನು ಮುರಿಯುವ ಕೆಲಸ ಮಾಡುವುದಿಲ್ಲ. ರಸ್ತೆಗಳಲ್ಲಿ ಪೊಲೀಸ್ ಸಿಬ್ಬಂದಿ ಇರಲಿ, ಇಲ್ಲದಿರಲಿ. ಪ್ರತಿಯೊಬ್ಬ ಜಪಾನ್ ವ್ಯಕ್ತಿ ರಸ್ತೆ ನಿಯಮ ಪಾಲನೆ ಮಾಡುತ್ತಾರೆ. ಯಾರೂ ರಸ್ತೆ ನಿಯಮಗಳನ್ನು ಮುರಿಯುವುದಿಲ್ಲ. ಅಂಥದ್ದೇ ಮನವೋಭಾವವನ್ನು ನಾವೂ ರೂಢಿಸಿಕೊಳ್ಳಬೇಕಿದೆ ಎನ್ನುವುದು ಶ್ರೀಗಳ ಸದಾಶಯ.

ಜಪಾನ್ ಟ್ಯಾಕ್ಸಿ ಚಾಲಕರು ಕೂಡ ನ್ಯಾಯಯುತವಾಗಿ ನಡೆದುಕೊಳ್ಳುತ್ತಾರೆ. ತಪ್ಪು ದಾರಿಗಳನ್ನು ಪ್ರವಾಸಿಗರನ್ನು ಕರೆದೊಯ್ಯುವುದಿಲ್ಲ. ನಾವು ಅಂದಕೊಂಡದ್ದಕ್ಕಿಂತಲೂ ಸುಲಭ ಮಾರ್ಗವನ್ನು ಪ್ರವಾಸಿಗರಿಗೆ ತೋರಿಸುತ್ತಾರೆ. ಯಾವುದೇ ವಸ್ತು ಕಳೆದುಕೊಂಡರೂ ಅದನ್ನು ತಪ್ಪದೇ ಅವರದೇ ಖರ್ಚಿನಲ್ಲಿ ಅದರ ಮಾಲೀಕರಿಗೆ ತಲುಪಿಸುತ್ತಾರೆ. ಅಷ್ಟೊಂದು ನ್ಯಾಯಪರವಾಗಿ ಅವರು ನಡೆದುಕೊಳ್ಳುತ್ತಾರೆ. ಸ್ವಚ್ಛತೆಯಲ್ಲಿ ಜಪಾನೀಯರನ್ನು ಮೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಯಾರೇ ಒಂದು ವಸ್ತುವನ್ನು ಎಸದರೂ ಜಪಾನೀಯರೇ ಅದನ್ನು ತೆಗೆದು ಡಸ್ಟ್‌ಬಿನ್‌ಗೆ ಹಾಕುತ್ತಾರೆ. ದೇಶದ ಬಗ್ಗೆ ಅವರಿಗೆ ಅಪಾರ ಅಭಿಮಾನವಿದೆ. ನಮ್ಮಲ್ಲೂ ಅಂಥದ್ದೇ ಅಭಿಮಾನ ಬರಬೇಕು. ಭಾರತೀಯರನ್ನು ಕಂಡರೆ ಜಪಾನೀಯರಿಗೆ ಅಪಾರ ಗೌರವವಿದೆ.

ಜಪಾನ್‌ನಲ್ಲಿರುವ ಗುರುಭಕ್ತಿ ಇಡೀ ವಿಶ್ವಕ್ಕೆ ಪ್ರೇರಣೆಯಾಗಿದೆ. ನಮ್ಮ ದೇಶದಲ್ಲಿ ಶಿಷ್ಯರನ್ನು ದಂಡಿಸಿದರೆ ಶಿಕ್ಷಕರಿಗೆ ಶಿಕ್ಷೆ ನೀಡುತ್ತಾರೆ. ಆದರೆ ಜಪಾನ್‌ನಲ್ಲಿ ಎಲ್ಲಾ ಕೆಲಸಗಳನ್ನು ವಿದ್ಯಾರ್ಥಿಗಳಿಂದಲೇ ಮಾಡಿಸುತ್ತಾರೆ. ಮಕ್ಕಳು ಸೋಮಾರಿಯಾಗದಂತೆ ಆ ಮೂಲಕ ನೋಡಿಕೊಳ್ಳುತ್ತಾರೆ. ಸೈಕಲ್ ನಡೆಸುವ ವಯಸ್ಸಿನಲ್ಲಿ ಇಡೀ ಸೈಕಲ್ ರಿಪೇರಿ ಮಾಡುವ ಕುಶಲಕಲೆಗಾರಿಕೆಯನ್ನು ಮಕ್ಕಳಿಗೆ ಕಲಿಸುತ್ತಾರೆ. ಸ್ಕೂಟರ್, ಬೈಕ್‌ಗಳನ್ನು ರಿಪೇರಿ ಮಾಡುವ ಕಲೆ ಆ ಜನರಿಗೆ ಗೊತ್ತಿದೆ. ಶಿಕ್ಷಕರಿಗೆ ಅಪಾರ ಗೌರವ ಕೊಡುತ್ತಾರೆ. ಸರ್ಕಾರವೇ ಅವರಿಗೆ ವಿವಿಧ ಉಚಿತ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಶಿಕ್ಷಕರನ್ನು ದೇವರ ಸಮನಾಗಿ ನೋಡುತ್ತಾರೆ.


ಪ್ರಾಕೃತಿಕವಾಗಿ ಜಪಾನೀಯರು ಹಲವು ಅಪಾಯ ಎದುರಿಸುತ್ತಾರೆ. ಹೀಗಾಗಿ ಪ್ರತಿ ಮನೆಯಲ್ಲೀ ಭೂಕಂಪ ಮುನ್ಸೂಚನಾ ಆ?ಯಂಟೆನಾಗಳನ್ನು ಅಳವಡಿಸಿಕೊಳ್ಳುತ್ತಾರೆ. ಪ್ರತಿ ಮನೆ ಕೂಡ ಧ್ವನಿಗ್ರಹಣ ವ್ಯವಸ್ಥೆಯನ್ನು ಹೊಂದಿದೆ. ಯಾವುದೇ ಶಬ್ದಗಳು ಮನೆಗೊಳಗೆ ಬಾರದಂತೆ ಕಟ್ಟಡ ಕಟ್ಟಿದ್ದಾರೆ. ಅವರ ಕುಶಲಗಾರಿಕೆ, ತಂತ್ರಜ್ಞಾನದ ಬಗ್ಗೆ ನಾವು ಸ್ಫೂರ್ತಿ ಪಡೆಯುವ ಅವಶ್ಯಕತೆ ಇದೆ ಎಂದರು.

ದುಬೈ ಪ್ರವಾಸ ಮಾಡಿರುವ ಸ್ವಾಮೀಜಿ ಅಲ್ಲಿಯ ಉದ್ದಿದಾರರು, ಉದ್ಯೋಗ ಮಾರುಕಟ್ಟೆ ಬಗ್ಗೆ ತಿಳಿವಳಿಕೆ ಪಡೆದಿದ್ದಾರೆ. ಬುರ್ಜ್ ಖಲೀಫಾ ಸೇರಿದಂತೆ ಅಲ್ಲಿಯ ಪ್ರಮುಖ ಕಟ್ಟಡಗಳನ್ನು ನೋಡಿ ಅಲ್ಲಿಯ ಕಟ್ಟಡಗಳ ಎಂಜನಿಯರಿಂಗ್ ಶ್ರೇಷ್ಠತೆ ಬಗ್ಗೆ ಶ್ರೀಗಳು ತಮ್ಮದೇ ಆದ ರೀತಿಯಲ್ಲಿ ಹೇಳುತ್ತಾರೆ. ದುಬೈನಲ್ಲಿ ನಾಗರಿಕರು ಯಾವುದೇ ವ್ಯವಹಾರ ನಡೆಸಿದರೂ ಸರ್ಕಾರ ಶೇ 15ರಷ್ಟು ಲಾಭಾಂಶದ ಗ್ಯಾರಂಟಿ ನೀಡುತ್ತದೆ. ಉದ್ದಿಮೆದಾರರಿಗೆ ಸರ್ಕಾರವೇ ರಕ್ಷಣೆ ನೀಡುತ್ತದೆ. ಇದರಿಂದ ಯಾರಿಗೂ ನಷ್ಟವಾಗುವ ಸಾಧ್ಯತೆಯೇ ಇರುವುದಿಲ್ಲ ಎನ್ನುತ್ತಾರೆ ಸ್ವಾಮೀಜಿ.

ರಷ್ಯಾ ಎಂದರೆ ಸಾಂಪ್ರದಾಯಿಕ ಹಾಗೂ ಆಧುನಿಕ ಸಂಸ್ಕೃತಿಗಳ ಸಂಗಮವಾಗಿದೆ. ಅಲವು ಭಾಷೆ, ಧರ್ಮಗಳನ್ನು ಅವರು ಅಪಾರ ಗೌರವದಿಂದ ಕಾಣುತ್ತಾರೆ. ನೆರೆಹೊರೆಯ ದೇಶಗಳನ್ನು ಬಹಳ ಪ್ರೀತಿಯಿಂದ ಕಾಣುತ್ತಾರೆ. ಇನ್ನು ಮಾಲ್ಡೀವ್ಸ್ ಬಗ್ಗೆ ಹೇಳಲೇಬೇಕು. ಮಾಲ್ಡೀವ್ಸ್ ಎಂದ ಕೂಡಲೇ ಮದುವೆಯಾದ ದಂಪತಿಗಳು ಹೋಗಬೇಕು ಎಂಬ ತಪ್ಪು ತಿಳಿವಳಿಕೆ ಇದೆ. ಮಾಲ್ಡೀವ್ಸ್ ಎಂದರೆ ಅದನ್ನು ಒಂದು ತಪೋಭೂಮಿ ಎಂದರೂ ತಪ್ಪಲ್ಲ. ಹಿಂದೆ ಋಷಿಮುನಿಗಳು ತಪಸ್ಸು ಮಾಡಲು ದ್ವೀಪಗಳಿಗೆ ತೆರಳುತ್ತಿದ್ದರು. ಅಂತಹ ತಪೋಭೂಮಿ ಮಾಲ್ಡೀವ್ಸ್. ಪ್ರಕೃತಿಯ ನಡುವಿನ ಪುಣ್ಯಕ್ಷೇತ್ರ ಎನ್ನಬಹುದು. ಮಾನಸಿಕ ನೆಮ್ಮದಿಯನ್ನು ಪಡೆಯಲು ಮಾಲ್ಡೀವ್ಸ್ ನೋಡಬೇಕು ಎನ್ನುತ್ತಾರೆ ಸ್ವಾಮೀಜಿ .


ಪತ್ರಕರ್ತ ವಿಶ್ವೇಶ್ವರ ಭಟ್ಟರ ಜೊತೆ ಸ್ವಾಮೀಜಿ ವಿಶ್ವಕೋಶದ ಅಧ್ಯಯನಕ್ಕಾಗಿ ವಿಶ್ವಪರ್ಯಟನೆ ಕೈಗೊಂಡಿದ್ದಾರೆ. ಎಲೆಮರೆ ಕಾಯಿಯಂತಿರುವ ಸಾಧಕರ ಜೊತೆ ಪ್ರವಾಸ ಮಾಡುವುದೇ ಒಂದು ಪ್ರೇರಣಾದಾಯಕ ಕ್ರಿಯೆ. ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ಇದು ಸಹಾಯಕವಾಗುತ್ತದೆ. ಅವರ ಜೊತೆ ಒಡನಾಡುವಾಗ ಅವರ ಸಾಧನೆಗಳ ಮೆಲುಕು ಹಾಕಲು ಸಾಧ್ಯವಾಗುತ್ತದೆ. ಎಲೆಮರೆ ಕಾಯಿ ಸಾಧಕರು ಭವಿಷ್ಯದ ಧ್ರುವತಾರೆಗಳು. ಹೀಗಾಗಿ ಅವರೊಂದಿಗೆ ಮಾಡಿರುವ ಪ್ರವಾಸಗಳನ್ನು ಮರೆಯಲು ಸಾಧ್ಯವಿಲ್ಲ ಎನ್ನುತ್ತಾರೆ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು.

























ಕರುಣ್ ಬದಲಿಗೆ ಸಾಯಿಗೆ ಅವಕಾಶ?

ಮ್ಯಾಂಚೆಸ್ಟರ್‌ನಲ್ಲಿ 23ರಿಂದ ನಾಲ್ಕನೇ ಟೆಸ್ಟ್ ಪಂದ್ಯ
‘ಎರಡನೇ ಅವಕಾಶ’ದಲ್ಲಿ ಯಶಸ್ಸು ಕಾಣದ ಕನ್ನಡಿಗ

ಬೆಕೆನ್‌ಹ್ಯಾಮ್ (ಪಿಟಿಐ): ಕರುಣ್ ನಾಯರ್ ಅವರಿಗೆ ಕ್ರಿಕೆಟ್ ‘ಎರಡನೇ ಅವಕಾಶ’ ನೀಡಿದೆ. ಆದರೆ ಈ ಅವಕಾಶವನ್ನು ಅವರು ಫಲಪ್ರದಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ.

ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಮುಗಿದಿರುವ ಮೂರು ಪಂದ್ಯಗಳಲ್ಲಿಯೂ ಅವರಿಗೆ ಕಣಕ್ಕಿಳಿಯುವ ಅವಕಾಶ ಲಭಿಸಿತ್ತು. ಆದರೆ ನಿರೀಕ್ಷೆಯ ಮಟ್ಟಕ್ಕೆ ಅವರು ಆಟವಾಡಿಲ್ಲ. ಅದರಿಂದಾಗಿ ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿರುವ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಅವರಿಗೆ ಕಣಕ್ಕಿಳಿಯುವ 11ರ ಬಳಗದಲ್ಲಿ ಸ್ಥಾನ ಸಿಗುವುದು ಅನುಮಾನವಾಗಿದೆ. ಈ ಸರಣಿಯಲ್ಲಿ ಅವರು ಆಡಿರುವ ಆರು ಇನಿಂಗ್ಸ್‌ಗಳಲ್ಲಿಯೂ ದೊಡ್ಡ ಮೊತ್ತ ಪೇರಿಸುವಲ್ಲಿ ಯಶಸ್ವಿಯಾಗಿಲ್ಲ. ಆದರೆ ಕೆಲ ಇನಿಂಗ್ಸ್‌ಗಳಲ್ಲಿ ಉತ್ತಮ ಡ್ರೈವ್‌ಗಳನ್ನು ಪ್ರದರ್ಶಿಸಿದ್ದರು. ಆದರೂ ಲೆಂಗ್ತ್ ಎಸೆತಗಳನ್ನು ಆಡುವಲ್ಲಿ ತಡಬಡಾಯಿಸಿದ್ದರು.

ಲಾರ್ಡ್ಸ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅವರು ಬ್ರೈಡನ್ ಕಾರ್ಸ್ ಹಾಕಿದ ಎಸೆತದ ಲೈನ್ ಮತ್ತು ಲೆಂಗ್ತ್‌ಗಳನ್ನು ಅಂದಾಜು ಮಾಡುವಲ್ಲಿ ಎಡವಿದರು. ಹೊಡೆತ ಆಡುವ ಪ್ರಯತ್ನ ಮಾಡುವ ಮುನ್ನವೇ ಅವರು ಎಲ್‌ಬಿಡಬ್ಲ್ಯು ಬಲೆಗೆ ಬಿದ್ದಿದ್ದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡುವ ಅವರಿಂದ ತಂಡವು ದೊಡ್ಡ ಇನಿಂಗ್ಸ್ ನಿರೀಕ್ಷೆ ಮಾಡುವುದು ಸಹಜ. ದೇಶಿ ಕ್ರಿಕೆಟ್‌ನಲ್ಲಿ ಅವರು ರನ್‌ಗಳ ರಾಶಿಯನ್ನು ಪೇರಿಸುವ ಮೂಲಕ ಭಾರತ ತಂಡದ ಆಯ್ಕೆಗಾರರ ಗಮನ ಸೆಳೆದಿದ್ದರು. ಆದರೆ ಟೆಸ್ಟ್ ಕ್ರಿಕೆಟ್ ನಲ್ಲಿ ತಮ್ಮ ಲಯಕ್ಕೆ ಮರಳಲು ಅವರಿಗೆ ಸಾಧ್ಯವಾಗಿಲ್ಲ.



ಗುರುವಾರ ಬೆಕೆನ್‌ಹ್ಯಾಮ್‌ನಲ್ಲಿ ಅಭ್ಯಾಸ ನಡೆಸಿದ ಕರುಣ್ ನಾಯರ್ ಪಿಟಿಐ ಚಿತ್ರಗಳು

ಕರುಣ್ ಅವರಿಗೆ ವಿಶ್ರಾಂತಿ ನೀಡಿದರೆ ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಅವರು ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ. ಸರಣಿಯ ಮೊದಲ ಪಂದ್ಯದಲ್ಲಿ ಅವರು ಪದಾರ್ಪಣೆ ಮಾಡಿದ್ದರು. ಆದರೆ ವೈಫಲ್ಯ ಅನುಭವಿಸಿದ್ದ ಅವರಿಗೆ ಉಳಿದ ಎರಡೂ ಪಂದ್ಯಗಳಿಗೆ ವಿಶ್ರಾಂತಿ ನೀಡಲಾಗಿತ್ತು.

ಇದೇ 23ರಿಂದ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನಡೆಯಲಿರುವ ನಾಲ್ಕನೇ ಪಂದ್ಯದಲ್ಲಿ ಕರುಣ್ ಬದಲು ಸಾಯಿ ಕಣಕ್ಕಿಳಿಯಬಹುದು. ಉಳಿದಂತೆ ತಂಡದಲ್ಲಿ ಹೆಚ್ಚಿನ ಬದಲಾವಣೆಯ ಸಾಧ್ಯತೆಗಳು ಕಡಿಮೆ.

‘ಕರುಣ್ ತಮಗೆ ಸಿಗಬೇಕಿದ್ದ ಅವಕಾಶಗಳನ್ನು ಪಡೆದುಕೊಂಡಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವವರು ಗಟ್ಟಿಯಾದ ಇನಿಂಗ್ಸ್ ಕಟ್ಟಬೇಕು. ಆದರೆ ನಾಯರ್ ಅವರ ಇನಿಂಗ್ಸ್‌ನಲ್ಲಿ ಅಂತಹ ದೃಢತೆ ಕಂಡುಬರಲಿಲ್ಲ’ ಎಂದು ವೀಕ್ಷಕ ವಿವರಣೆಗಾರ ದೀಪ್‌ದಾಸ್ ಗುಪ್ತಾ ಅಭಿಪ್ರಾಯಪಟ್ಟಿದ್ದಾರೆ.

ಬೂಮ್ರಾ ಕಣಕ್ಕಿಳಿಸುವತ್ತ ತಂಡದ ಒಲವು: ರಿಯಾನ್

ಬೆಕೆನ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಇನ್ನೆರಡು ಪಂದ್ಯಗಳು ಬಾಕಿ ಇವೆ. ಭಾರತ ತಂಡಕ್ಕೆ ಸರಣಿ ಜಯಿಸಬೇಕೆಂದರೆ ಈ ಎರಡೂ ಪಂದ್ಯಗಳಲ್ಲಿ ಗೆಲ್ಲಬೇಕಿದೆ. ಅದರಿಂದಾಗಿ ಇದೇ 23ರಿಂದ ಆರಂಭವಾಗುವ ನಾಲ್ಕನೇ ಟೆಸ್ಟ್‌ನಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ ಅವರನ್ನು ಕಣಕ್ಕಿಳಿಸುವತ್ತ ಭಾರತ ತಂಡವು ಹೆಚ್ಚು ‘ಒಲವು’ ತೋರುತ್ತಿದೆ.

ಐದು ಪಂದ್ಯಗಳ ಸರಣಿಯಲ್ಲಿ ಅವರು ಎರಡರಲ್ಲಿ ವಿಶ್ರಾಂತಿ (ವರ್ಕಲೋಡ್ ಮ್ಯಾನೇಜ್‌ಮೆಂಟ್) ತೆಗೆದುಕೊಳ್ಳುವುದಾಗಿ ಹೇಳಿದ್ದರು. ಆ ಪ್ರಕಾರ ಎರಡನೇ ಟೆಸ್ಟ್‌ನಲ್ಲಿ ಅವರು ಕಣಕ್ಕಿಳಿದಿರಲಿಲ್ಲ. ಇದೀಗ ಉಳಿದಿರುವ ಎರಡರಲ್ಲಿ ಒಂದು ಪಂದ್ಯದಲ್ಲಿ ವಿಶ್ರಾಂತಿ ಪಡೆಯಲಿದ್ದಾರೆಂಬ ಮಾತುಗಳು ಕೇಳಿಬಂದಿವೆ.

ಈ ಕುರಿತು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಭಾರತ ತಂಡದ ಸಹಾಯಕ ಕೋಚ್ ರಿಯಾನ್ ಟೆನ್ ಡೊಶೆಟ್, ‘ನಾವು ಮ್ಯಾಂಚೆಸ್ಟರ್‌ನಲ್ಲಿ ಬೂಮ್ರಾ ಕುರಿತು ನಿರ್ಧಾರ ಕೈಗೊಳ್ಳುತ್ತೇವೆ. ಅವರು ಮುಂದಿನ ಎರಡು ಪಂದ್ಯಗಳ ಪೈಕಿ ಒಂದರಲ್ಲಿ ವಿಶ್ರಾಂತಿ ಪಡೆಯುವ ಕುರಿತು ನಮಗೆ ತಿಳಿದಿದೆ. ಸರಣಿಯು ಮಹತ್ವದ ಹಾದಿಯಲ್ಲಿದೆ. ಆದ್ದರಿಂದ ಮ್ಯಾಂಚೆಸ್ಟರ್ ಪಂದ್ಯದಲ್ಲಿ ಅವರನ್ನು ಆಡಿಸುವ ಕುರಿತು ತಂಡದ ಒಲವು ಇದೆ’ ಎಂದರು.



ಜಸ್‌ಪ್ರೀತ್ ಬೂಮ್ರಾ

‘ಪಂದ್ಯಕ್ಕೂ ಮುನ್ನ ನಾವು ಕೆಲವು ಸಂಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತೇವೆ. ಮ್ಯಾಂಚೆಸ್ಟರ್‌ನಲ್ಲಿ ಪಂದ್ಯವು ಎಷ್ಟು ದಿನಗಳಲ್ಲಿ ಮುಗಿಯುವ ಸಾಧ್ಯತೆ ಇದೆ? ನಾವು ಜಯಿಸುವ ಉತ್ತಮ ಅವಕಾಶಗಳು ಎಷ್ಟು ಇವೆ? ಎಂದು ಅಂದಾಜಿಸಲಾಗುವುದು. ನಂತರವಷ್ಟೇ ತಂಡದ ಸಂಯೋಜನೆ ಕುರಿತು ಯೋಜಿಸುತ್ತೇವೆ’ ಎಂದರು.

ತಂಡವು ಬೆಕೆನ್‌ಹ್ಯಾಮ್‌ನಲ್ಲಿ ಅಭ್ಯಾಸ ನಡೆಸಿತು. 19ರಂದು ತಂಡವು ಮ್ಯಾಂಚೆಸ್ಟರ್‌ಗೆ ತೆರಳಲಿದೆ.

ಲಾಸ್‌ವೇಗಸ್ ಫ್ರೀಸ್ಟೈಲ್ ಚೆಸ್: ಕಾರ್ಲ್‌ಸನ್ ನಿರ್ಗಮನ
ಎಂಟರ ಘಟ್ಟಕ್ಕೆ ಪ್ರಜ್ಞಾನಂದ, ಅರ್ಜುನ್

ಲಾಸ್ ವೇಗಸ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ, ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್ ಟೂರ್ ಕ್ವಾರ್ಟರ್‌ಫೈನಲ್ ತಲುಪುವ ಹಾದಿಯಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದರು.

ನಾರ್ವೆಯ ಆಟಗಾರ ಇತ್ತೀಚಿನ ದಿನಗಳಲ್ಲಿ ಭಾರತದ ಆಟಗಾರರೆದುರು ಮಣಿಯುತ್ತಿದ್ದಾರೆ. ಕೆಲವು ದಿನಗಳ ಹಿಂದೆ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಕಾರ್ಲ್‌ಸನ್ ಅವರನ್ನು ಮಣಿಸಿದ್ದರು. ಗುಕೇಶ್ ಇಲ್ಲಿ ಆಡುತ್ತಿಲ್ಲ.

ಇದು ಎಷ್ಟು ಪರಿಣಾಮ ಬೀರಿತೆಂದರೆ ಕಾರ್ಲ್‌ಸನ್ ಮುಂದಿನ ಪಂದ್ಯದಲ್ಲಿ ಅಮೆರಿಕದ ವೆಸ್ಲಿ ಸೊ ಅವರಿಗೆ ಮತ್ತು ಕೊನೆಯಲ್ಲಿ ಲೆವೊನ್ ಅರೋನಿಯನ್ ಅವರಿಗೂ (ಟೈಬ್ರೇಕರ್‌ನಲ್ಲಿ 2–0ಯಿಂದ) ಸೋತು ಟೂರ್ನಿಯಿಂದ ಹೊರಬಿದ್ದರು.

16 ಆಟಗಾರರು ಭಾಗವಹಿಸಿರುವ ಈ ಟೂರ್ನಿಯ ₹6.50 ಕೋಟಿ ಬಹುಮಾನ ಮೊತ್ತ ಹೊಂದಿದೆ.

ಈ ಆಟಗಾರರನ್ನು ತಲಾ ಎಂಟರಂತೆ ಎರಡು ಗುಂಪುಗಳಲ್ಲಿ (ವೈಟ್ ಮತ್ತು ಬ್ಲ್ಯಾಕ್ ಹೆಸರಿನಲ್ಲಿ) ವಿಂಗಡಿಸಲಾಗಿದೆ. ಗುಂಪುಗಳಲ್ಲಿ ಒಂದು ಬಾರಿ ಪರಸ್ಪರ ಮುಖಾಮುಖಿಯ ನಂತರ ಮೊದಲ ನಾಲ್ಕು ಸ್ಥಾನ ಗಳಿಸಿದವರು ಕ್ವಾರ್ಟರ್‌ಫೈನಲ್‌ಗೆ ಮುನ್ನಡೆಯುತ್ತಾರೆ.

ಅರ್ಜುನ್ ಇರಿಗೇಶಿ ಅವರು ಇನ್ನೊಂದು ಗುಂಪಿನಿಂದ ಎಂಟರ ಘಟ್ಟ ತಲುಪಿದರು. ಆರಂಭದಲ್ಲಿ ಅವರು ಸ್ವಲ್ಪ ಪರದಾಡಿದರು. ‘ವೈಟ್’ ಗುಂಪಿನಲ್ಲಿದ್ದ ಪ್ರಜ್ಞಾನಂದ ಮತ್ತು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಅವರು ತಲಾ 4.5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಪಡೆದರು. ಜಾವೊಕಿರ್ ಸಿಂಧರೋವ್ ಮತ್ತು ಅರೋನಿಯನ್ ತಲಾ ನಾಲ್ಕು ಪಾಯಿಂಟ್ಸ್ ಪಡೆದರು. ಕಾರ್ಲ್‌ಸನ್ ಮತ್ತು ಜರ್ಮನಿಯ ವಿನ್ಸೆಂಟ್ ಕೀಮರ್ ಐದನೇ ಸ್ಥಾನ ಗಳಿಸಿದರು.



ಆರ್. ಪ್ರಜ್ಞಾನಂದ



ಅರ್ಜುನ್ ಇರಿಗೇಶಿ

ಬ್ಲ್ಯಾಕ್ ಗುಂಪಿನಲ್ಲಿ ಹಿಕಾರು ನಕಾಮುರ ಅಮೋಘ ಆಟವಾಡಿ 7ರಲ್ಲಿ 6 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದರು. ಅಮೆರಿಕದ ಹ್ಯಾನ್ಸ್ ನೀಮನ್ (4.5) ಎರಡನೇ ಸ್ಥಾನ ಪಡೆದರು. ಇರಿಗೇಶಿ ಮತ್ತು ಸ್ಥಳೀಯ ಆಟಗಾರ ಫ್ಯಾಬಿಯಾನೊ ಕರುವಾನ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದರು.

ಪ್ರಜ್ಞಾನಂದ ಕ್ವಾರ್ಟರ್‌ಫೈನಲ್‌ನಲ್ಲಿ ಕರುವಾನ ಅವರನ್ನು ಎದುರಿಸಲಿದ್ದಾರೆ. ಇರಿಗೇಶಿ ಅವರು ಅಬ್ದುಸತ್ತಾರೋವ್ ವಿರುದ್ಧ ಆಡಲಿದ್ದಾರೆ. ಅರೋನಿಯನ್ ಅವರಿಗೆ ನಕಾಮುರ ಮತ್ತು ನೀಮನ್ ಅವರಿಗೆ ಸಿಂಧರೋವ್ ಎದುರಾಳಿಗಳಾಗಿದ್ದಾರೆ.

ಚೀನಾದ ಬಾಲೆ ಮೇಲೆ ಕುತೂಹಲದ ಕಣ್ಣು

ಸಿಂಗಪುರ (ಎಪಿ): ಚೀನಾದ ಈ ಪುಟ್ಟ ಈಜುಗಾರ್ತಿಯ ವಯಸ್ಸು 12. ಆದರೆ ಈಗಾಗಲೇ ಈಜುಗೊಳದಲ್ಲಿ ದೊಡ್ಡ ಅಲೆಗಳನ್ನೆಬ್ಬಿಸಿರುವ ಯು ಝಿದಿ ಈ ತಿಂಗಳ ಕೊನೆಯಲ್ಲಿ ಸಿಂಗಪುರದಲ್ಲಿ ನಡೆಯಲಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾಳೆ. ಎಲ್ಲರ ಕುತೂಹಲದ ಕಣ್ಣು ಈಕೆಯ ಮೇಲಿದೆ.

ಇದಕ್ಕೆ ಕಾರಣ ಪುಟ್ಟ ವಯಸ್ಸು ಮಾತ್ರವಲ್ಲ, ಮೂರು ಸ್ಪರ್ಧೆಗಳನ್ನು ಯು ಝಿದಿ ಈ ವರ್ಷ ವಿಶ್ವದ ಉತ್ತಮ ಕಾಲಾವಧಿಯಲ್ಲಿ ಈಜಿದ್ದಾಳೆ. ಈಕೆ ತೆಗೆದುಕೊಂಡ ಅವಧಿ, ಕಳೆದ ವರ್ಷದ ಪ್ಯಾರಿಸ್ ಒಲಿಂಪಿಕ್ಸ್ ಪದಕಕ್ಕೆ ಅತಿ ಸನಿಹವಿದೆ. ಹದಿಹರೆಯಕ್ಕೆ ಕಾಲಿಡುವ ಮೊದಲೇ ಯು ಝಿದಿ ಭರವಸೆ ಮೂಡಿಸಿದ್ದಾಳೆ.

ಪ್ರತಿ ಸಲ ಕೊಳಕ್ಕೆ ಇಳಿಯುವಾಗ ಯು ತನ್ನ ವೈಯಕ್ತಿಕ ಅವಧಿಯನ್ನು ಉತ್ತಮಪಡಿಸುತ್ತ ಬಂದಿದ್ದಾಳೆ. ವೈಯಕ್ತಿಕ ಶ್ರೇಷ್ಠ ಅವಧಿ ಉತ್ತಮಪಡಿಸುತ್ತಿರುವುದು ಆಕೆಗೆ ವಿಶ್ವಾಸ ಮಾತ್ರವಲ್ಲ, ದಾಖಲೆ, ಪದಕ ಮತ್ತು ತಾರಾಪಟ್ಟದ ಸಮೀಪ ತಲುಪಿಸುತ್ತಿವೆ.



ಚೀನಾದ ಯು ಝಿದಿ

ವಿಶ್ವ ಚಾಂಪಿಯನ್‌ಷಿಪ್‌ನ 200 ಮೀ. ಮೆಡ್ಲೆ, 400 ಮೀ. ಮೆಡ್ಲೆ ಮತ್ತು 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಗೆ ಯು ಝಿದಿ ಅರ್ಹತೆಗಳಿಸಿದ್ದಾಳೆ.

ಮೇ ತಿಂಗಳಲ್ಲಿ ನಡೆದ ಚೀನಾ ಚಾಂಪಿಯನ್‌ಷಿಪ್‌ನ 200 ಮೀ. ಮೆಡ್ಲೆಯಲ್ಲಿ ಈಕೆ ತೆಗೆದುಕೊಂಡ 10.63 ಸೆ.ಗಳ ಅವಧಿ ಈ ವಯಸ್ಸಿನ (ಬಾಲಕ ಅಥವಾ ಬಾಲಕಿ) ಈಜುಪಟುವಿನ ಶ್ರೇಷ್ಠ ಸಾಧನೆ ಎಂದು ವಿಶ್ವ ಅಕ್ವೆಟಿಕ್ಸ್ ಹೇಳಿದೆ.

ಇದೇ ಕೂಟದ 200 ಮೀ. ಬಟರ್‌ಫ್ಲೈ ಸ್ಪರ್ಧೆ ಪೂರೈಸಲು ತೆಗೆದುಕೊಂಡ 2:06.83 ಅವಧಿಯು ಈ ವರ್ಷ ವಿಶ್ವದ ಐದನೇ ಅತಿ ವೇಗದ್ದು ಎನಿಸಿದೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ 400 ಮೀ. ಮೆಡ್ಲೆಯನ್ನು 4ನಿ.35.53 ಸೆ.ಗಳಲ್ಲಿ ಕ್ರಮಿಸಿದ್ದಾಳೆ. ಇದೂ ವಿಶ್ವದ ಐದನೇ ಅತಿ ವೇಗದ ಅವಧಿ. ಜೊತೆಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಅಮೆರಿಕದ ಎಮ್ಮಾ ವೇಯಾಂಟ್ ಅವರಿಗಿಂತ ಬರೇ 0.6 ಸೆ.ಗಳಷ್ಟೇ ಹಿಂದೆ.

ಸಮ್ಮರ್‌ಗೆ ಪೈಪೋಟಿ?: 400 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಕೆನಡಾದ 18 ವರ್ಷ ವಯಸ್ಸಿನ ತಾರೆ ಸಮ್ಮರ್ ಮೆಕಿಂಟೋಷ್ ಅವರು ವಿಶ್ವದಾಖಲೆ (4:23.65) ಹೊಂದಿದ್ದಾರೆ. 200 ಮೀ. ಮೆಡ್ಲೆಯನ್ನು ಸಮ್ಮರ್ 2ನಿ.05.70 ಸೆ.ಗಳಲ್ಲಿ ಈಜಿದ ದಾಖಲೆ ಹೊಂದಿದ್ದಾರೆ.

ಅವರಿಗೆ ಹೋಲಿಸಿದರೆ, 12ನೇ ವಯಸ್ಸಿನಲ್ಲಿ ಯು, ಸಮ್ಮರ್ ಅವರಿಗಿಂತ 400 ಮೀ. ವೈಯಕ್ತಿಕ ಮೆಡ್ಲೆಯನ್ನು 15 ಸೆ. ವೇಗವಾಗಿ ಈಜಿದ್ದಾರೆ. 200 ಮೀ. ಮೆಡ್ಲೆಯನ್ನು 12 ಸೆ. ವೇಗವಾಗಿ ಮುಗಿಸಿದ್ದಾರೆ.

ವಿಶ್ವ ಕಾಂಟಿನೆಂಟಲ್ ಟೂರ್ ಅರ್ಹತಾ ಮಟ್ಟ ನಿಗದಿ

ಭುವನೇಶ್ವರ (ಪಿಟಿಐ): ಇದೇ ಆಗಸ್ಟ್ 10ರಂದು ಇಲ್ಲಿನ ಕಳಿಂಗ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಕೂಟಕ್ಕೆ ಭಾರತ ಅಥ್ಲೆಟಿಕ್ ಫೆಡರೇಷನ್ ಗುರುವಾರ ಅರ್ಹತಾ ಮಟ್ಟ ಪ್ರಕಟಿಸಿದೆ.

ಕಾಂಟಿನೆಂಟರ್ ಟೂರ್ ಕೂಟವು ವಿಶ್ವ ಅಥ್ಲೆಟಿಕ್ಸ್ ವತಿಯಿಂದ ನಡೆಯುತ್ತಿದೆ. ಪ್ರತಿಷ್ಠಿತ ಡೈಮಂಡ್ ಲೀಗ್ ನಂತರ ಎರಡನೇ ಸ್ತರದ ಒಂದು ದಿನ ಕೂಟ ಇದಾಗಿದೆ. 10 ರಾಷ್ಟ್ರಗಳ 150ಕ್ಕೂ ಹೆಚ್ಚು ಅಥ್ಲೀಟುಗಳು 20 ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಭಾರತದ ಪ್ರಮುಖ ಅಥ್ಲೀಟುಗಳು ಕಣಕ್ಕಿಳಿಯಲಿದ್ದಾರೆ. ಆದರೆ ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ತಾರೆ ನೀರಜ್ ಚೋಪ್ರಾ ಭಾಗವಹಿಸುತ್ತಿಲ್ಲ.

ತುರ್ಕಮೆನಿಸ್ತಾನ, ಭೂತಾನ್, ಫಿಲಿಪ್ಪೀನ್ಸ್, ದಕ್ಷಿಣ ಕೊರಿಯಾ, ಮಲೇಷ್ಯಾ, ಕ್ಯಾಮರೂನ್, ಶ್ರೀಲಂಕಾ, ಇರಾನ್, ಮಾಲ್ಡೀವ್ಸ್‌ನ ಅಥ್ಲೀಟುಗಳೂ ಕೂಟದಲ್ಲಿ ಭಾಗವಹಿಸುತ್ತಿದ್ದಾರೆ.

ಪುರುಷರ ಮತ್ತು ಮಹಿಳೆಯರ 100 ಮೀ. ಸ್ಪರ್ಧೆಗೆ ಕ್ರಮವಾಗಿ 10.60 ಸೆ. ಮತ್ತು 11.80 ಸೆ.ಗಳನ್ನು ನಿಗದಿಗೊಳಿಸಲಾಗಿದೆ.

ಪುರುಷರ ವಿಭಾಗದಲ್ಲಿ 100 ಮೀ. ಜೊತೆ 200 ಮೀ. ಓಟ (ನಿಗದಿಪಡಿಸಿರುವ ಅರ್ಹತಾ ಮಾನದಂಡ: 21.30 ಸೆ.), 400 ಮೀ. ಓಟ (46.20 ಸೆ.), 800 ಮೀ. (1:48.50), 5000 ಮೀ. (14:10.00), ಲಾಂಗ್‌ಜಂಪ್ (7.80 ಮೀ.), ಟ್ರಿಪಲ್ ಜಂಪ್ (16.30 ಮೀ.), ಜಾವೆಲಿನ್ (75 ಮೀ.) ಸ್ಪರ್ಧೆಗಳು ನಡೆಯಲಿವೆ.

ಮಹಿಳೆಯರ ವಿಭಾಗದಲ್ಲಿ 200 ಮೀ. (ಅರ್ಹತಾ ಮಟ್ಟ 23.50 ಸೆ.), 400 ಮೀ. (23.50 ಸೆ.), 400 ಮೀ. (53.00) ಸೆ), 800 ಮೀ. (2:05.00), 1500 ಮೀ. (4:18.00), ಲಾಂಗ್‌ಜಂಪ್ (6.00 ಮೀ.), 100 ಮೀ. ಹರ್ಡಲ್ಸ್ (13.55 ಸೆ.) ಮತ್ತು ಜಾವೆಲಿನ್ (52 ಮಿ.) ಸ್ಪರ್ಧೆಗಳು ನಡೆಯಲಿವೆ.

ಸಂಕ್ಷಿಪ್ತ ಸುದ್ದಿ

ರುತ್ ಅಮಾನತು

ಪ್ಯಾರಿಸ್ (ಎಎಫ್‌ಪಿ): ಹೋದ ವರ್ಷ ಮಹಿಳೆಯರ ಮ್ಯಾರಥಾನ್‌ನಲ್ಲಿ ವಿಶ್ವ ದಾಖಲೆ ಮುರಿದ ಕೆನ್ಯಾದ ರುತ್ ಚೆಪ್ನಾಟಿಚ್ ಅವರನ್ನು ಉದ್ದೀಪನ ಮದ್ದು ಸೇವನೆ ಸಂಶಯದ ಮೇಲೆ ಅಮಾನತು ಮಾಡಲಾಗಿದೆ ಎಂದು ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್ ಗುರುವಾರ ತಿಳಿಸಿದೆ.

2024ರ ಅಕ್ಟೋಬರ್‌ನಲ್ಲಿ ಷಿಕಾಗೊ ಮ್ಯಾರಥಾನ್‌ನಲ್ಲಿ ಚೆಪ್ನಾಟಿಚ್ ಅವರು 2 ಗಂ.09 ನಿ.56 ಸೆ.ಗಳಲ್ಲಿ ಆ ದಾಖಲೆ ಸ್ಥಾಪಿಸಿದ್ದರು.

ಟಿಟಿ ಟೂರ್ನಿ 24ರಿಂದ

ಬೆಂಗಳೂರು: ಮೈಸೂರು ಜಿಲ್ಲೆ ಟೇಬಲ್ ಟೆನಿಸ್ ಸಂಸ್ಥೆಯ ವತಿಯಿಂದ 4ನೇ ಆವೃತ್ತಿಯ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯನ್ನು ಇದೇ 24ರಿಂದ 27ರವರೆಗೆ ಆಯೋಜಿಸಲಾಗಿದೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿರುವ ಮೈಸೂರು ವಿಶ್ವವಿದ್ಯಾಲಯ ವ್ಯಾಯಾಮ ಶಾಲೆಯಲ್ಲಿ ಪಂದ್ಯಗಳು ನಡೆಯಲಿವೆ. 11, 13, 15, 17 ಮತ್ತು 19 ವರ್ಷದೊಳಗಿನ ಬಾಲಕ–ಬಾಲಕಿಯರಿಗೆ ಹಾಗೂ ಪುರುಷ, ಮಹಿಳೆಯರ ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧಿಗಳು ಹೆಸರು ನೋಂದಣಿಗೆ ಜುಲೈ 20 (ಭಾನುವಾರ) ಅಂತಿಮ ದಿನವಾಗಿದ್ದು, https://karnatakatabletennis.web.app/auth/loginಗೆ ಭೇಟಿ ನೀಡಬಹುದು.

ಟೈಬ್ರೇಕರ್‌ಗೆ ಜುನೇರ್–ದಿವ್ಯಾ ಪಂದ್ಯ


ಬಟುಮಿ (ಜಾರ್ಜಿಯಾ) (ಪಿಟಿಐ): ಇಂಟರ್‌ನ್ಯಾಷನಲ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ಗುರುವಾರ ಇಲ್ಲಿ ನಡೆದ ಫಿಡೆ ವಿಶ್ವ ಮಹಿಳಾ ಚೆಸ್ ಕಪ್ ಟೂರ್ನಿಯ ಪ್ರಿಕ್ವಾರ್ಟರ್ ಫೈನಲ್‌ನ ಮರು ಪಂದ್ಯದಲ್ಲಿ ಚೀನಾದ ಜುನೇರ್ ಝು ಅವರಿಗೆ ಸೋತರು. ಮೊದಲ ಪಂದ್ಯ ಗೆದ್ದಿದ್ದ ದಿವ್ಯಾ ಇದೀಗ ಜುನೇರ್ ವಿರುದ್ಧ ಟೈಬ್ರೇಕರ್ ಆಡಬೇಕಾಗಿದೆ.

ಪ್ರತಿಷ್ಠಿತ ಟೂರ್ನಿಯಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆಯುವ ಗುರಿ ಹೊಂದಿರುವ ಭಾರತದ ಆಟಗಾರ್ತಿಗೆ ಈ ಸೋಲು ಕೊಂಚ ಹಿನ್ನಡೆಯಾಯಿತು.

ಭಾರತದ ಉಳಿದ ಮೂವರು ಆಟಗಾರ್ತಿಯರೂ ತಮ್ಮ ತಮ್ಮ ಎದುರಾಳಿಗಳೊಂದಿಗೆ ಡ್ರಾ ಸಾಧಿಸಿದ್ದು, ಫಲಿತಾಂಶಕ್ಕಾಗಿ ಟೈಬ್ರೇಕರ್ ಆಡಲಿದ್ದಾರೆ.

ಕೋನೇರು ಹಂಪಿ ಅವರು ಅಲೆಕ್ಸಾಂಡ್ರಾ ಕೊಸ್ಟೆನಿಯುಕ್ (ಸ್ವಿಟ್ಜರ್ಲೆಂಡ್) ವಿರುದ್ಧ ಮತ್ತೊಂದು ಡ್ರಾ ಸಾಧಿಸಿದರು. ಡಿ. ಹಾರಿಕಾ ಅವರು ರಷ್ಯನ್ ಆಟಗಾರ್ತಿ ಕ್ಯಾಥರಿನಾ ಲಾಗ್ನೊ ಜೊತೆ ಮತ್ತೆ ಅಂಕ ಹಂಚಿಕೊಂಡರು. ಆರ್. ವೈಶಾಲಿ ಅವರು ಕಜಕಸ್ತಾನದ ಮೆರಯುರ್ಟ್ ಕಮಲಿದೆನೋವಾ ಜೊತೆ ಡ್ರಾ ಮಾಡಿಕೊಂಡರು.

ಜಪಾನ್ ಓಪನ್: ಭಾರತದ ಸವಾಲು ಅಂತ್ಯ



ಲಕ್ಷ್ಯ ಸೇನ್

ಟೋಕಿಯೊ (ಪಿಟಿಐ): ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಬ್ಯಾಡ್ಮಿಂಟನ್ ತಾರೆಗಳ ನೀರಸ ನಿರ್ವಹಣೆ ಗುರುವಾರವೂ ಮುಂದುವರಿಯಿತು. ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಹೊರಬಿದ್ದರೆ, ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ ಎರಡನೇ ಸುತ್ತಿನಲ್ಲೇ ಹೊರಬಿತ್ತು.

ಲಕ್ಷ್ಯ ಸೇನ್ ಎರಡನೇ ಸುತ್ತಿನ ಪಂದ್ಯದಲ್ಲಿ 19–21, 11–21ರಲ್ಲಿ ಜಪಾನ್‌ನ ಕೊಡೈ ನರವೊಕಾ ಅವರಿಗೆ ಮಣಿದರು. 23 ವರ್ಷದ ಲಕ್ಷ್ಯ ಮೊದಲ ಸುತ್ತಿನಲ್ಲಿ ಚೀನಾದ ವಾಂಗ್ ಝೆಂಗ್ ಷಿಂಗ್ ವಿರುದ್ಧ ಜಯಗಳಿಸಿದ ರೀತಿ ಭರವಸೆ ಮೂಡಿಸಿತ್ತು. ಆದರೆ ಅದೇ ರೀತಿಯ ಆಟ ಅವರಿಂದ ಬರಲಿಲ್ಲ. ಡಬಲ್ಸ್‌ನಲ್ಲಿ ಸಾತ್ವಿಕ್– ಚಿರಾಗ್ ಜೋಡಿ 22–24, 14–21ರಲ್ಲಿ ಲಿಯಾಂಗ್ ವೀ ಕೆಂಗ್– ವಾಂಗ್ ಚಾಂಗ್ ಜೋಡಿಯೆದುರು ಸೋಲನುಭವಿಸಿತು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅನುಪಮಾ ಉಪಾಧ್ಯಾಯ ಅವರೂ ಸೋಲುವುದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು. ಅನುಪಮಾ 21–13, 21–11 ರಿಂದ ವಾಂಗ್ ಝಿ ಹಿ (ಚೀನಾ) ಅವರಿಗೆ ಸೋತರು.